ಹಸೆ ಚಿತ್ತಾರ ವಿನ್ಯಾಸ ವೈವಿಧ್ಯತೆ ನೀವು ಕಾಣಿರೇ.?





ವಸೀ ನೋಡೀ ಹಸೆ ಚಿತ್ತಾರ ವಿನ್ಯಾಸ ವೈವಿಧ್ಯತೆ

ಎಳೆಗಳ (ಗೆರೆಗಳು) ಮೂಲಕವೇ ಎಲ್ಲ ಹೇಳುವ ಕುರಿತೋದದೆಯೂ ಚಿತ್ತಾರ ಕಲಾ ಪರಿಣತಿಮತಿಗಳಾಗಿದ್ದ ನಮ್ಮ ಜನಪದರ ಚಿತ್ತಾರಗಿತ್ತಿಯರ ಅಭಿವ್ಯಕ್ತಿ ಕೌಶಲದಿಂದ ವಿನ್ಯಾಸಗೊಂಡ ಹಸೆಚಿತ್ತಾರವು ಮದುವೆ ,ಹಬ್ಬಗಳ ಸಂಪ್ರದಾಯ, ಮದುವೆ ಸಂಭ್ರಮದ ಗಂಡು ಹೆಣ್ಣಿನ ಮೌನ ಸಂಭಾಷಣೆಯನ್ನು ತಳಕ,ಪುಳಕಗಳನ್ನು,ತುಮುಲಗಳನ್ನು, ಫಲವಂತಿಕೆಯ ಆಚರಣೆಗಳನ್ನು ಸಾರುವ ವಿಶ್ವ ಭಾಷೆ ಹಸೆಚಿತ್ತಾರದ ವೈವಿಧ್ಯಮಯ ವಿನ್ಯಾಸಗಳನ್ನು ಮೊದಲು ಕಣ್ತುಂಬಿಕೊಳ್ಳಿ. ಬಹುತೇಕ ಬುಡಕಟ್ಟು ಜನ ಸಂಸ್ಕೃತಿ ಪರಂಪರೆಯ ನೆಲಮೂಲದ ಸಮುದಾಯಗಳ ಮನೆಯಲ್ಲಿ,ಬಾಗಿಲು,ಕಿಟಕಿಗಳಲ್ಲಿ, ಬುಟ್ಟಿ,ಮಡಿಕೆಗಳಲ್ಲಿ ಕಂಡುಬರುವ ಹಸೆಚಿತ್ತಾರ ಆಧುನಿಕ ಕಲಾವಿದರ ಆಸಕ್ತಿಗೆ ಕಾರಣವಾದದ್ದು ತೀರಾ ಇತ್ತೀಚೆಗೆ. ಕರ್ನಾಟಕ ನೆಲಮೂಲದ ಹಸೆಚಿತ್ತಾರ ಕುರಿತಾದ ಪೂರ್ಣಪ್ರಮಾಣದ ಅಧ್ಯಯನ ಕೃತಿಗಳು ಈವರೆಗೆ ಪ್ರಕಟವಾಗಿಲ್ಲ..ಹಸೆಚಿತ್ತಾರದ ಹುಟ್ಟು,ಸ್ವರೂಪ ,ವಿನ್ಯಾಸ ,ವಿಧಾನ,ಧಾರ್ಮಿಕ ಆಚರಣೆಗಳ ಮೂಲದ ಕಲೆಯಾದ ಅದರ ಸೌಂದರ್ಯವನ್ನು, ಅಂತಃಸತ್ವ ವಿವರಗಳನ್ನು ಅರಿಯಲು ವೈವಿಧ್ಯಮಯ ಹಸೆಚಿತ್ತಾರಗಳನ್ನು ಮೊದಲು ನೋಡಿ .



ಹಳ್ಳಿ ಗುಡಿಸಲು ಮನೆಯ
ಕಿಟಕಿ ಚಿತ್ತಾರ

ಚಿತ್ರ : ಚಂದ್ರಶೇಖರ ಸಿರಿವಂತೆ


ವಿವಿಧ ವಿನ್ಯಾಸದ ಹಸೆ ಚಿತ್ತಾರಗಳು

ಮದುವೆಗಾಗಿ ಬರೆಯುವ ಹಸೆ ಗೋಡೆಚಿತ್ತಾರಗಳು




ಚಿತ್ರ : ಲಕ್ಷ್ಮಮ್ಮ ಗಡೇಮನೆ. ಸಾಗರ








ಚಿತ್ರ : ಚಂದ್ರಶೇಖರ ಚಿತ್ರಸಿರಿ. ಸಿರವಂತೆ. ಸಾಗರ.



ಹಸೆಚಿತ್ತಾರ–ಚಿತ್ರ : ಗೌರಮ್ಮ ಹುಚ್ಚಪ್ಪ ಮಾಸ್ತರ್.ಸಾಗರ (ಬಲ ಚಿತ್ರ: ಆರತಿ ಚಿತ್ತಾರ)





ಹಸೆಚಿತ್ತಾರ–ಚಿತ್ರ : ಲಕ್ಷ್ಮಮ್ಮ ಗಡೇಮನೆ ,ಗೌರಮ್ಮ ಚಂದ್ರಶೇಖರ ,ಸಿರವಂತೆ





ಹಸೆಚಿತ್ತಾರ–ಚಿತ್ರ : ಕುಸುಮಾ ಅಣ್ಣಪ್ಪ ದಿಗಟೆಕೊಪ್ಪ ,ವಿನುತಾ ಮಾಗಡಿ.ಸೊರಬ

ಹಸೆಚಿತ್ತಾರ–ಚಿತ್ರ : ಈಶ್ವರ ನಾಯ್ಕ.ಹಸುವಂತೆ. (ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಚಿತ್ತಾರಗಳು)



ಆರತಿ ಚಿತ್ತಾರ ಮತ್ತು ಜಮಖಾನ ಚಿತ್ತಾರ : ಗೌರಮ್ಮ ಹುಚ್ಚಪ್ಪ ಮಾಸ್ತರ್ .

ಭೂಮಣ್ಣಿ (ಭೂಮಿ ಹುಣ್ಣಿಮೆ)ಹಬ್ಬಕ್ಕಾಗಿ ಬರೆಯುವ ಬುಟ್ಟಿ ಚಿತ್ತಾರಗಳು





ಭೂಮಣ್ಣಿ ಬುಟ್ಟಿ ಚಿತ್ತಾರ :ರೇಣುಕ ಮತ್ತು ಉಷಾ. ಜಿ.ಎ.ಮಂಡಗಳಲೆ.ಸಾಗರ ತಾ







ಭೂಮಣ್ಣಿ ಬುಟ್ಟಿ ಚಿತ್ತಾರ : ರವಿಚಂದ್ರ ಮತ್ತು ಉಷಾ. ಜಿ.ಎ. ಮಂಡಗಳಲೆ.(ದೀವರು ಸಮುದಾಯದಲ್ಲಿ ಕಂಡುಬರುವ ಬುಟ್ಟಿ ಚಿತ್ತಾರಗಳು)





ಭೂಮಣ್ಣಿ ಬುಟ್ಟಿ ಚಿತ್ತಾರ : ರವಿರಾಜ್ ಸಾಗರ್ ಮಂಡಗಳಲೆ (ರವಿಚಂದ್ರ)ಮತ್ತು ಉಷಾ. ಜಿ.ಎ. ಮಂಡಗಳಲೆ.






ಮಡಿಕೆ ಚಿತ್ತಾರ-ಚಿತ್ರ : ಗೌರಮ್ಮ ಚಂದ್ರಶೇಖರ ,ಸಿರವಂತೆ


ಬಾಗಿಲು ಮತ್ತು ಕಿಟಕಿ ಚಿತ್ತಾರಗಳು






ಚಿತ್ರ : ಲಕ್ಷ್ಮಮ್ಮ ಗಡೇಮನೆ , ಎಂ ಎಲ್ ಸೋಮವರದ.


ತಿರುಗೆ ಮಣಿ , ದೀಪಾವಳಿ ಎತ್ತಿನ ಅಲಂಕಾರಿಕ ಚಿತ್ತಾರಗಳು







ಚಿತ್ರ ಸಂಗ್ರಹ : ಚಂದ್ರಶೇಖರ ಸಿರಿವಂತೆ. 416 ಮೂಲೆ ಆರತಿ ಚಿತ್ತಾರ,ಪಳತ ಚಿತ್ತಾರ









ಚಿತ್ರದಲ್ಲಿ : ಚಿತ್ತಾರ ಬಿಡಿಸುತ್ತಿರುವ ಯುವ ಕಲಾವಿದರು ಮತ್ತು ಹಿರಿಯ ಕಲಾವಿದರು ಗೌರಮ್ಮ ಹುಚ್ಚಪ್ಪ ಮಾಸ್ತರ್ , ,ಲಕ್ಷ್ಮಮ್ಮ ಗಡೇಮನೆ, ಕುಸುಮ ಅಣ್ಣಪ್ಪ ಉಷಾ ಜಿ.ಎ. ಮಂಡಗಳಲೆ. ಮತ್ತಿತರರು









ಧೀದ ಧೀವರ ಬಳಗ, ಆಯೋಜಿಸಿದ್ದ ರಾಜ್ಯಮಟ್ಟದ ಬುಟ್ಟಿಚಿತ್ತಾರ ಸ್ಪರ್ಧಾ ಕಾರ್ಯಕ್ರಮ ಶಿವಮೊಗ್ಗ-೨೦೨೦






ವಸ್ತ್ರ ಚಿತ್ತಾರ : ಈಶ್ವರ ನಾಯ್ಕ ಹಸುವಂತೆ. ರಾಧಾ ಸುಳ್ಳೂರು







ಗೋಪುರ ಹಸೆಚಿತ್ತಾರ



ಕಿಟಕಿ ಚಿತ್ತಾರ



ದೀವರು ಸಮುದಾಯದ ಮದುವೆಯ ಹಸೆ ಶಾಸ್ತ್ರದ ಚಿತ್ರಗಳು





ಚಕ್ಕಳ್ ಮುಕ್ಕಳಿ ಚಿನ್ನಾಣಿ ಚಿತ್ತಾರ : ಕುಸುಮಾ ಅಣ್ಣಪ್ಪ , ರಾಧಾ ಸುಳ್ಳೂರು ಚಿತ್ರಗಳು

ದೀವರ ಮದುವೆ ಸಂಪ್ರದಾಯದ ಹಸೆಗೋಡೆ ಚಿತ್ತಾರ ಶಾಸ್ತ್ರ

ಕರಾವಳಿ ಮತ್ತು ಉತ್ತರಕನ್ನಡ ಜಿಲ್ಲೆಯ   ಹಲಿ ಮತ್ತು ಹಸಗರ ಚಿತ್ತಗಳು





ಉತ್ತರ ಕನ್ನಡ ಜಿಲ್ಲೆಯ ಗಾಮೊಕ್ಕಲ ಹನುಮಕ್ಕ ಬಿಡಿಸಿದ ಶೇಡಿ/ ಹಲಿ ಚಿತ್ತಾರ

ಉತ್ತರ ಕನ್ನಡ ಜಿಲ್ಲೆ ಹಾಗೂ ಕರಾವಳಿ ಭಾಗದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ಹಸಗರ ಹಾಗೂ ಹಲಿಚಿತ್ರ ಮತ್ತು ದೇವಾಲಯಗಳ ಕಾವಿ ಚಿತ್ರಕಲೆ
















ದೇವಾಲಯಗಳ ಕಾವಿ ಚಿತ್ರಕಲೆ ಶೇಡಿ ಕಲೆ

ಕರ್ನಾಟಕದಲ್ಲಿ ಹಸೆಚಿತ್ತಾರ ಕಂಡುಬರುವ ಪ್ರಮುಖ ಪ್ರದೇಶಗಳು



ಹಸೆ ಚಿತ್ತಾರದಂತೆ ಇತರೆ ಬುಡಕಟ್ಟು ದೇಶೀ ಚಿತ್ತಾರ ಕಲೆಗಳಿರುವ ರಾಜ್ಯಗಳು





ಚಿತ್ರ : ಹಸೆ ಚಿತ್ತಾರದಲ್ಲಿನ ಕೆಲವು ವಿನ್ಯಾಸ ಕಾಣಸಿಗುವ ಆದಿಮ ಬಂಡೆ ಚಿತ್ರಕಲೆ.ಮಾನ್ವಿ ತಾ..ರಾಯಚೂರು

ಹಸೆಚಿತ್ತಾರದ ಹೋಲಿಕೆಗಳಿರುವ ಇತರೆ ದೇಶಿ ಚಿತ್ತಾರ ಕಲೆಗಳು


ಮಹಾರಾಷ್ಟ್ರದ ವರ್ಲಿ ಚಿತ್ರಗಳು ,ಬಿಹಾರದ ಮಧುಬನಿ, ಒರಿಸ್ಸಾದ ಸೊರಾ , ಮಂಡಲ ಕಲೆ

ಚಿತ್ರ ಕೃಪೆ : ವರ್ಲಿ ಕಲಾವಿದೆ ರಾಖಿ ಸಾಳಂಕಿ. ಮಹಾರಾಷ್ಟ್ರ












ಮಂಡಲ ಕಲೆ



ಬಿಹಾರದ ದೇಶೀ ಚಿತ್ರಕಲೆ ಮಧುಬನಿ

ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಹಸೆಚಿತ್ತಾರ ಕಲಾವಿದರ ಸಂದರ್ಶನಗಳು





ʼ ಜಪಾನ್ ನಲ್ಲಿ ಹಸೆ ಚಿತ್ತಾರ ಪ್ರದರ್ಶನ .ಹಸೆಚಿತ್ತಾರದಲ್ಲಿ ಹಲವು ನಾವಿನ್ಯತೆ ಸೃಜಿಸಿದ ಚಿತ್ರಸಿರಿ ಚಂದ್ರಶೇಖರ ,ಸಿರವಂತೆ ಅವರ ಸಂದರ್ಶನ



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಸೆ ಚಿತ್ತಾರ ಕಲಾವಿದೆ ಲಕ್ಷ್ಮಿಮ್ಮ ಗಡೇಮನೆ ಅವರ ಸಂದರ್ಶನ



ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಸೆ ಚಿತ್ತಾರ ಕಲಾವಿದ ಈಶ್ವರನಾಯ್ಕ ಹಸುವಂತೆ ಅವರ ಸಂದರ್ಶನ

ಅಧ್ಯಾಯ –1

ಹಸೆ ಚಿತ್ತಾರದತ್ತ ಚಿತ್ತ ಪ್ರವೇಶ

ಉದ್ದೇಶ – ಸ್ವರೂಪ – ವ್ಯಾಪ್ತಿ

ಸಹಸ್ರಾರು ಭಾಷೆ,ನೂರಾರು ದೇಶ, ಧರ್ಮಗಳು,ಕಲೆ ಸಂಸ್ಕೃತಿಗಳನ್ನು ಸೃಷ್ಟಿಸಿಕೊಂಡ ಮಾನವ ನಾಗರೀಕತೆಯ ನಾಗಲೋಟದಲ್ಲಿ ಸಂಘಜೀವಿಯಾಗಿ ಪರಂಪರೆಯೊಂದಿಗೆ



ಬದುಕನ್ನು ಸಂಭ್ರಮಿಸುತ್ತಾ ಸಹಬಾಳ್ವೆಯತ್ತ ಸಾಗಬೇಕೆನ್ನುವ ಆಶಯಗಳೊಂದಿಗೆ ಸಾಗುತ್ತಿದ್ದರೂ ಬಹುತೇಕ ದೇಶಗಳಲ್ಲಿ ಕಂಡುಬರುವ ಸಾಮಾನ್ಯ ಸಂಗತಿಯೆಂದರೆ ಪಟ್ಟಭದ್ರ ಹಿತಾಶಕ್ತಿಗಳು ಸದಾ ತಮ್ಮದೇ ಸೈದ್ಧಾಂತಿಕ ನಿಲವು ,ರಾಜಕೀಯ ,ಸಾಂಸ್ಕೃತಿಕ ,ಧಾರ್ಮಿಕ ಯಜಮಾನಿಕೆಯನ್ನು ಇತರರ ಮೇಲೆ ಹೇರಲು ಸಕ್ರಿಯರಾಗುತ್ತಲೇ ಇರುತ್ತಾರೆ.ಬಹುತೇಕ ಎಲ್ಲಾ ದೇಶಗಳಲ್ಲೂ ಮಾನವ ತನ್ನ ಸುತ್ತಲೂ ಅನ್ಯರನ್ನೂ ಅನನ್ಯರನ್ನೂ ಸೃಷ್ಟಿಸಿಕೊಳ್ಳುತ್ತಲೇ ಇರುವುದು ಕಂಡುಬರುತ್ತದೆ.

ನಮ್ಮದೇ ಶ್ರೇಷ್ಠ ಧರ್ಮ, ನಮ್ಮ ನಂಬಿಕೆಗಳೇ ಮೇಲು, ನಮ್ಮದೇ ನಂಬಿಕೆ ,ಧರ್ಮ ಸಂಸ್ಕೃತಿಯನ್ನು ಅನುಸರಿಸುವವರ ಸಂಖ್ಯೆ ಹೆಚ್ಚಿಸಬೇಕೆನ್ನುವ ಹಪಾಹಪಿ, ಪ್ರಧಾನ ಸಂಸ್ಕೃತಿ ,ಅದೀನ ಸಂಸ್ಕೃತಿ,ಪ್ರಧಾನ ದೇವರು, ಅದೀನ ದೇವರುಗಳೆಂದೆಲ್ಲಾ ಬಿಂಬಿಸುವಿಕೆ, ವಾದಿಸುವಿಕೆಗಳು ಸಾಂಸ್ಕೃತಿಕ

ಯಜಮಾನಿಕೆ ಸ್ಥಾಪಿಸುವ ಪಟ್ಟಭದ್ರರ ಹುನ್ನಾರಗಳ ವಿವಿಧ ಆಯಾಮಗಳೆ ಆಗಿದ್ದು ಜಗತ್ತಿನ ಹಲವೆಡೆ ಕಂಡುಬರುವ ಸಂಗತಿಗಳೇ ಆಗಿವೆ.ಆದರೆ ಯಾವುದೇ ಸಂಸ್ಕೃತಿ , ಕಲೆಗಳು ಮಾನವ ಸಮುದಾಯ ತನ್ನದೇ ನೆಲಮೂಲದ ಅನುಭವ ಜನ್ಯ ಜ್ಞಾನದಿಂದ ಕಂಡುಕೊಂಡ ಸಂಸ್ಕೃತಿ ಕಲೆಗಳಷ್ಟೇ ಆಗಿದ್ದು ಅವುಗಳಲ್ಲಿ ಅದೀನ ,ಪ್ರಧಾನ ಎನ್ನುವುದೆಲ್ಲ ಪಟ್ಟಭದ್ರರ ವ್ಯಾಖ್ಯಾನಗಳು. ಯಾವುದೇ ಸಂಸ್ಕೃತಿ ,ಕಲೆಯ ನಡುವೆ ಕೆಲವು ವ್ಯತ್ಯಾಸ ಹೋಲಿಕೆಗಳು ಸಹಜವಾಗಿಯೇ ಇರುತ್ತವೆಯಾದರೂ ಅಲ್ಲಿ ಶ್ರೇಷ್ಠ ಕನಿಷ್ಠ ಎನ್ನುವ ವ್ಯಾಖ್ಯಾನದಡಿ ಬಿಂಬಿಸದೆ ಅವುಗಳ ಅಪೂರ್ವತೆಯನ್ನು, ಅನನ್ಯತೆಯನ್ನು ವಿವೇಚಿಸಿ ಮಾನವ ಸಮುದಾಯದ ಸರ್ವಾಂಗೀಣ ವಿಕಾಸಕ್ಕೆ ಪೂರಕವಾಗಿ ಪ್ರೋತ್ಸಾಹಿಸಬೇಕು.

ದುರ್ಬಲರ ಮೇಲೆ ಪ್ರಬಲರು ಎಲ್ಲಾ ರೀತಿಯಲ್ಲೂ ದಾಳಿ ಮಾಡುವಿಕೆ ಇಡೀ ಮಾನವ ಕುಲದುದ್ದಕ್ಕೂ ಕಂಡುಬರುತ್ತದೆ. ಕಲೆ ಸಂಸ್ಕೃತಿಗಳ ಮೂಲಕ ವ್ಯಾಪಕವಾಗಿ ಜನರ ನಿಲುವು, ಗ್ರಹಿಕೆಯನ್ನು ಬದಲಿಸಲು ,ಜನರ ಬೌದ್ಧಿಕ ವಿಕಾಸವನ್ನು ವಿಸ್ತರಿಸಲು ಪ್ರಬಲ ಮಾಧ್ಯಮವಾಗಿ ಹಿಂದಿನಿಂದಲೂ ಬಳಸುತ್ತ ಬಂದಿರುವುದರಿಂದ ಕಲೆ ಸಂಸ್ಕೃತಿ ಯಜಮಾನಿಕೆಯಲ್ಲೂ ಸಹ ಪ್ರಬಲರ ಸಂಸ್ಕೃತಿ ಕಲೆಗಳು ದುರ್ಬಲರಾಗಿ ಉಳಿದವರ ಸಂಸ್ಕೃತಿ ಕಲೆಗಳನ್ನು ಅದೀನದಲ್ಲಿಟ್ಟು ಆಳುತ್ತ ಬಂದಿವೆ.ನಮ್ಮ ದೇಶದ ನೆಲಮೂಲದ ದೇಶೀ ಚಿತ್ರಕಲೆಗಳ ಮೇಲೆ ಸಹ ಇಂತಹ ಯಜಮಾನಿಕೆ,ಅದೀನದಲ್ಲಿಡುವಿಕೆ ನಡೆಯುತ್ತಾ ಬಂದಿದೆ.ನಮ್ಮ ಕರ್ನಾಟಕ ದೇಶೀ ಚಿತ್ತಾರ ಕಲೆ ಹಸೆಚಿತ್ತಾರ ಸಹ ಅಂತಹ ಹಲವು ಸವಾಲುಗಳನ್ನು ಎದುರಿಸುತ್ತಲೇ ಇಂದಿಗೂ ತನ್ನ ವಿಶಿಷ್ಟತೆಯನ್ನು, ಸಾಂಪ್ರದಾಯಿಕತೆ ಉಳಿಸಿಕೊಂಡು ಒಂದಿಷ್ಟು ಭಾಗದಲ್ಲಿ ಮಾತ್ರ ಉಳಿದಿದ್ದು ಅಳಿವಿನ ಅಂಚಿಗೆ ಬಂದು ಉಸಿರಾಡುತ್ತಿದೆ. ಹಾಗಾಗಿ ನಮ್ಮ ಹಸೆ ಚಿತ್ತಾರ ಕಲಾಪರಂಪರೆಯ ವಿಶಿಷ್ಟತೆ ,ವಿನ್ಯಾಸ ಕುರಿತು ವಿವರ ಮಾಹಿತಿ ನೀಡಲು, ಇಂದಿನ ಕಲಾರಸಿಕರ ಗಮನ ಸೆಳೆಯಲು ,ಹಸೆಚಿತ್ತಾರವನ್ನು ಇಂದಿನ ಕಾಂಕ್ರೇಟು ಮನೆಗಳಿಂದ ಡಿಜಿಟಲ್ ಲೋಕದವರೆಗೂ ತಲುಪಲು ಹೊಸಮಾರ್ಗಗಳನ್ನು ಶೋಧಿಸಿಕೊಂಡು ಸಾಗಲು ಬೇಕಾದ ತಿಳಿವು ನೀಡಲು

ಬೇಕಾದ ಬೆಳಕಿನ ಮಾರ್ಗ ಹುಡುಕುತ್ತಿರುವ ನಾನು ನನ್ನದೇ ಮಾರ್ಗದಲ್ಲಿ ಈ ಸಂಶೋಧನಾ ಅಧ್ಯಯನ ಕೃತಿ ರಚನೆಗೆ ತೊಡಗಿದ್ದು ,ನಿಮ್ಮ ಮುಂದೆ ಪ್ರಸ್ತುತಪಡಿಸುತ್ತಿದ್ದೇನೆ.

ಮನುಷ್ಯ ಪ್ರಾಣಿಯು ಇತರೆ ಪ್ರಾಣಿಗಳಿಗಿಂತ ವಿಭಿನ್ನವಾಗಿ ತನ್ನ ಗ್ರಹಿಕೆಯನ್ನು ವಿಸ್ತರಿಸಿಕೊಳ್ಳುತ್ತಾ ಬುದ್ಧಿಮತ್ತೆಯಲ್ಲಿ ,ವಿವೇಚನೆಯಲ್ಲಿ ವಿಕಾಸವಾಗುತ್ತಾ ಸಾಗಿದಂತೆ ನಿಸರ್ಗದ ಇತರೆ ಜೀವಿಗಳನ್ನು ನೋಡುತ್ತಾ ಅನುಸರಿಸುತ್ತಾ ಅನುಕರಿಸುತ್ತಲೇ ಅವುಗಳಂತೆ ಜಿಗಿಯುವುದು,ಏರುವುದು,ಕುಣಿಯುವುದು,ಕೂಗುವುದನ್ನು ಕಲಿತುಕೊಂಡು ಭಾಷೆಯನ್ನು ಕಂಡುಕೊಳ್ಳುವ ಮೊದಲು ಬಿಡುವಿನ ವೇಳೆಯಲ್ಲಿ ಚಿತ್ರ ಬಿಡಿಸುವ ಕಲೆಯನ್ನು ಕಂಡುಕೊಂಡಿದ್ದಾನೆ ಎನ್ನಲು ಈಗಲೂ ದೇಶ ವಿದೇಶದ ಹಲವಾರು ಕಡೆ ಬಂಡೆ ಚಿತ್ರಗಳು ಲಭ್ಯ ಇವೆ. ಜಗತ್ತಿನ ಬಹುತೇಕ ಪ್ರಾಚೀನ ಮಾನವ ನೆಲೆಗಳ ಬಂಡೆಗಳ ಮೇಲೆ ಆದಿಮ ಚಿತ್ರಕಲೆಗಳ ಕುರುಹುಗಳನ್ನು ಇತಿಹಾಸಕಾರರು ಪತ್ತೆಹಚ್ಚಿದ್ದಾರೆ. ಅವು ಈಗಲೂ ನಮಗೆ ಕಾಣಸಿಗುತ್ತವೆ.

ಮುಖ್ಯವಾಗಿ ಹೆಣ್ಣಿನ ಸೌಂದರ್ಯ ಪ್ರಜ್ಞೆ ಮಾನವನಲ್ಲಿ ಚಿತ್ರಕಲಾಪರಂಪರೆ ಹುಟ್ಟಲು,ಬೆಳೆಯಲು ಕಾರಣವಾಗಿದೆ ಎನ್ನಲು ಸಾಕಷ್ಟು ಆಧಾರಗಳು ಲಭ್ಯವಾಗುತ್ತವೆ.ಮಾನವ ವೈವಿಧ್ಯಮಯ ಪರಿಸರದಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾ ಬೆಳೆದುಬಂದಿದ್ದಾನೆ. ಸುತ್ತಮುತ್ತಲಿನ ಪರಿಸರದ ಅಂದಚೆಂದಗಳನ್ನು ಕುತೂಹಲದಿಂದ ವೀಕ್ಷಿಸುತ್ತಾ ಸುಂದರ ಪ್ರಕೃತಿಯೊಡನೆ ಅನುಸಂಧಾನಕ್ಕಿಳಿದು ಗ್ರಹಿಸಿದ ಪರಿಣಾಮವೇ ಪ್ರಾಣಿಗಳಿಗಿಂತ ವಿಭಿನ್ನ ಬದುಕನ್ನು ಅರಸಿ ಹೊರಟುದುದು ಹಾಗೂ ಕಲಾಸೃಷ್ಟಿಗೆ ಕಾರಣವಾದುದು. ಅವರು ತಮ್ಮ ಕುತೂಹಲ,ಭಯ,ಕಲ್ಪನೆ, ಗ್ರಹಿಕೆಗೆ ನಿಲುಕಿದ್ದನ್ನು, ಅಭಿವ್ಯಕ್ತಿಯನ್ನು ಗೆರೆಗಳಲ್ಲಿ ಮೂಡಿಸಲು ಆರಂಭಿಸಿದಾಗ ಸೃಷ್ಟಿಯಾದದ್ದು ಚಿತ್ತಾರ ಕಲೆ ಅಥವಾ ನಾವೀಗ ಕರೆಯುವ ಚಿತ್ರಕಲೆ ಎನ್ನಬಹದು. ಕಲೆ ಎಂದರೆ ಎಲ್ಲವೂ ಮಾನವನ ಸೃಜನಶೀಲ ಸೃಷ್ಟಿಯೇ ಆಗಿದೆ. ಇಡೀ ನಿಸರ್ಗ ಸೃಷ್ಟಿಯೇ ಒಂದು ಕಲೆಯೆನ್ನಬಹುದು. ಅವುಗಳಲ್ಲಿ ಮೇಲು ಕೀಳಿಲ್ಲ.ಕಲೆ ನಲಿವಿನಲೂ ನೋವಿನಲೂ

ಮಾನವ ಕಂಡುಕೊಂಡ ನೆಲಮೂಲದ ಅನುಭವದ ಜ್ಞಾನ ಪರಂಪರೆಯಾಗಿದ್ದು, ಅದೂ ಸಹ ಮಾನವ ವಿಕಾಸದ ಜೊತೆಜೊತೆಗೆ ಆದ ಅನ್ವೇಷಣೆಯೇ ಆಗಿದೆ. ಆದರೆ ಇಂದಿನ ಕಲಾಸಾಂಸ್ಕೃತಿಕ ಯಜಮಾನಿಕೆಯ ರಾಜಕಾರಣದ ಜೊತೆಗೆ ಹಲವಾರು ಸಣ್ಣ ಸಣ್ಣ ಜನ ಸಮುದಾಯಗಳು ಕಂಡುಕೊಂಡ ವಿಶಿಷ್ಟ ಕಲೆಗಳು ಮುನ್ನೆಲೆಗೆ ಬಾರದೆ ಆಧುನಿಕತೆ, ಜಾಗತೀಕರಣ, ಸಾಂಸ್ಕೃತಿಕ ರಾಜಕಾರಣದ ಭರಾಟೆಯಲ್ಲಿ ಹಲವಾರು ಜನಪದರ ಕಲೆಗಳು ಅಳಿವಿನ ಅಂಚಿನಲ್ಲಿವೆ.

ರಾಜಪ್ರಭುತ್ವದ ಕಾಲದಿಂದ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲೂ ನಿರ್ಲಕ್ಷೆಗೆ ಒಳಗಾದ ಹಲವಾರು ಜನಪದರ ಕಲೆಗಳಿವೆ. ಅವುಗಳಲ್ಲಿ ಅತಿ ವಿಶಿಷ್ಟ ವಿನ್ಯಾಸದ ಬುಡಕಟ್ಟು ಪರಂಪರೆಯು ಹಸೆಚಿತ್ತಾರ ಕಲೆ ಪ್ರಮುಖವಾದುದು.ಶಿಷ್ಟ ಚಿತ್ರಕಲೆ,ನಾಟಕ, ಯಕ್ಷಗಾನ,ಬಯಲಾಟ,ಶಾಸ್ತ್ರೀಯ ಸಂಗೀತ,ಭರತನಾಟ್ಯ,ಜಾನಪದ ನೃತ್ಯ ಮತ್ತಿತರ ಜಾನಪದ ಕಲೆಗಳಿಗೆ ಸಿಕ್ಕ ಪ್ರಧಾನ್ಯತೆ ಕರ್ನಾಟಕ ದೇಶೀ ಚಿತ್ತಾರ ಕಲೆಯಾದ ಹಸೆಚಿತ್ತಾರಕ್ಕೆ ಸಿಕ್ಕಿಲ್ಲ. ಆದರೂ ಕರ್ನಾಟಕದ ನೆಲಮೂಲದ ಬುಡಕಟ್ಟು ಜನಸಂಸ್ಕೃತಿಯ ಸಮುದಾಯಗಳು ಕಡ್ಡಾಯವಾಗಿ ಮದುವೆ, ದೀಪಾವಳಿ,ಭೂಮಿ ಹುಣ್ಣಿಮೆ ಮತ್ತಿತರ ಹಬ್ಬಗಳ ಸಾಂಪ್ರದಾಯದ ಭಾಗವಾಗಿ ಉಳಿಸಿಕೊಂಡು ಬಂದಿರುವುದರಿಂದ ಇಂದಿಗೂ ನಾವು ಮಲೆನಾಡಿನ ಸಾಗರ,ಸೊರಬ, ಹೊಸನಗರ,ತೀರ್ಥಹಳ್ಳಿ ಭಾಗದಲ್ಲಿ ಲಕ್ಷಾಂತರ ದೀವರು ಸಮುದಾಯದ ಪ್ರತಿ ಕುಟುಂಬಗಳಲ್ಲಿ ಸಂಪ್ರದಾಯಿಕ ಆಚರಣೆಗಳಲ್ಲಿ ಹೆಚ್ಚಾಗಿ ಇಂದಿಗೂ ಕಾಣಬಹುದು.ಅಲ್ಲಲ್ಲಿ ಚದುರಿದಂತೆ ಶಿವಮೊಗ್ಗದ ವಿವಿಧ ಸಮುದಾಯಗಳಲ್ಲಿ ಬೇರೆ ಬೇರೆ ವಿನ್ಯಾಸದಲ್ಲಿ ,ವಿರಳವಾಗಿ ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಂಗಳೂರು ಮತ್ತಿತರ ಮಲೆನಾಡು ಭಾಗದಲ್ಲಿ ,ಕರಾವಳಿ ತೀರದಲ್ಲೂ ಹಲಿ,ಹಸಗರ ,ಶೇಡಿ ,ಕಾವಿ, ಎನ್ನುವ ಹೆಸರಿನಲ್ಲಿ ಕರೆಯುವ ಬೇರೆ ಬೇರೆ ವಿನ್ಯಾಸಗಳ ಸಾಂಪ್ರದಾಯಿಕ ರೇಖಾ ಚಿತ್ರ ಮಾದರಿಗಳನ್ನು ಕಾಣಬಹುದಾಗಿದೆ. ಹೆಚ್ಚಾಗಿ ದೀವರ ಸಮುದಾಯದ ಜೊತೆಗೆ ವಿರಳವಾಗಿ ಹಳೆಪೈಕ ದೀವರು,ನಾಮದಾರಿ ದೀವರು,ಹಾಲಕ್ಕಿಗಳು,ಕರೆಒಕ್ಕಲಿಗರು,ನಾಮಧಾರಿಗಳು,

ಗೊಂಡ,ಕುಣಬಿ,ಮೊಘೇರ,ಬಿಲ್ಲವ, ಹವ್ಯಕ,ಮಡಿವಾಳ ಮತ್ತಿತರ ಸಮುದಾಯದ ಕೆಲವು ಕುಟುಂಬಗಳಲ್ಲಿ ಬೇರೆ ಬೇರೆ ವಿನ್ಯಾಸದಲ್ಲಿ ಕಾಣಸಿಗುತ್ತವೆ. ಹಸೆಚಿತ್ತಾರ ಇಂದು ಕರ್ನಾಟಕದ ಎಲ್ಲೆಡೆ ವ್ಯಾಪಕವಾಗಿಯೇನೂ ಸಾಂಪ್ರದಾಯಿಕವಾಗಿ ಕಂಡುಬರುವುದಿಲ್ಲ. ಮಲೆನಾಡಿನಲ್ಲಿ ವಾಸವಾಗಿರುವ ಎಲ್ಲಾ ರೈತಾಪಿಗಳ ಕುಟುಂಬಗಳಲ್ಲೂ ಕಡ್ಡಾಯವಾಗಿಯೇನೂ ಹಸೆಚಿತ್ತಾರ,ಬುಟ್ಟಿಚಿತ್ತಾರ ಪರಂಪರೆ ಇಲ್ಲದಿರುವುದು ಗಮನಿಸಬೇಕಾದ ಸಂಗತಿ.

ಮಹಾರಾಷ್ಟ್ರದಲ್ಲಿ ವಾರ್ಲಿ ಜನ ಸಮುದಾಯ ಮಾತ್ರ ವರ್ಲಿ ಚಿತ್ರ ಪರಂಪರೆಯನ್ನು ಸಾಂಪ್ರದಾಯಿಕ ಆಚರಣೆಗಳಿಗಾಗಿ ಉಳಿಸಿಕೊಂಡಿರುವಂತೆ , ದೇಶದ ಬಹುಭಾಗದಲ್ಲಿ ಕೆಲವು ದೇಶೀ ರೇಖಾ ಚಿತ್ರಕಲೆಗಳು ಸಂಪ್ರದಾಯಿಕ ಆಚರಣೆಯ ಭಾಗವಾಗಿ ಕೆಲವು ಸಮುದಾಯಗಳಲ್ಲಿ ಮಾತ್ರ ಪ್ರಧಾನವಾಗಿ ಕಂಡುಬರುತ್ತದೆ. ಅಂತೆಯೇ ಕರ್ನಾಟಕದಲ್ಲಿ ಇಂದಿಗೂ ಹಸೆಚಿತ್ತಾರ ರಕ್ತಗತ ಕಲೆಯಂತೆ ವೈವಿಧ್ಯಮಯ ವಿನ್ಯಾಸಗಳಲ್ಲಿ ಪ್ರತಿ ಕುಟುಂಬದಲ್ಲಿ ಕಂಡುಬರುವುದು ಮಲೆನಾಡಿನ ಪಶ್ಚಿಮಘಟ್ಟಗಳಲ್ಲಿ ಮಾತ್ರವೇ ವಾಸಿಸುವ ದೀವರು ಜನಸಮುದಾಯದಲ್ಲಿ ಸಾಂಪ್ರದಾಯಿಕ ಆಚರಣೆಯ ಭಾಗವಾಗಿ ಇಂದಿಗೂ ಹೆಚ್ಚಾಗಿ ಕಂಡುಬರುತ್ತದೆ.

ಲಕ್ಷಾಂತರ ದೀವರ ಅನಕ್ಷರಸ್ಥ ಸ್ತ್ರೀಯರು ತಮ್ಮ ರಕ್ತಗತ ಕಲೆಯಂತೆ ಹಸೆಚಿತ್ತಾರ ಸಾಂಪ್ರದಾಯಿಕ ಚಿತ್ತಾರ ಕಲೆ ಬಿಡಿಸುವರು. ಮಲೆನಾಡಿನ ಕೆಲವು ಸಮುದಾಯದ ಸ್ತ್ರೀಯರು ಸಹ ವಿವಿಧ ವಿನ್ಯಾಸದಲ್ಲಿ ಸಾಂಪ್ರದಾಯಿಕ ಚಿತ್ತಾರ ಬಿಡಿಸುವರು. ದೇಶೀ ಚಿತ್ತಾರ ಕಲೆಯನ್ನು ನಿರ್ಲಕ್ಷಿಸಲ್ಪಡುತ್ತಿರುವ ಈ ದಿನಗಳಲ್ಲಿ ನಮ್ಮ ಕರ್ನಾಟಕದ ಹಸೆಚಿತ್ತಾರದ ಹುಟ್ಟು ಬೆಳವಣಿಗೆ, ವಿಧಾನ,ಸ್ವರೂಪ, ಸಾಂಪ್ರದಾಯಿಕ ಮಹತ್ವ, ಅಂತಃಸತ್ವದ ತಳಸ್ಪರ್ಶಿ ಅಧ್ಯಯನ,ನಾವೀನ್ಯ ಸಾಧ್ಯತೆಗಳ ಬಗ್ಗೆ ಅಧ್ಯಯನ ,ಎದುರಿಸುತ್ತಿರುವ ಸವಾಲುಗಳ ಅಧ್ಯಯನ ಅಗತ್ಯವಿದ್ದು ರಾಜ್ಯವ್ಯಾಪಿ ಹಸೆಚಿತ್ತಾರ ಮಾದರಿಯ ಇನ್ನಿತರೆ ಹಲಿಚಿತ್ತಾರ, ಹಸಗರ ಚಿತ್ತಾರ, ಶೇಡಿ,ರಂಗೋಲಿ,ಹಚ್ಚೆ ,ಮಂಡಲ,ಕಾವಿಕಲೆಯನ್ನೂ

ಒಳಗೊಂಡಂತೆ ತೌಲನಿಕ ವಿಶ್ಲೇಷಣೆಯೊಂದಿಗೆ ಸ್ಪಷ್ಟ ಉದ್ದೇಶಗಳೊಂದಿಗೆ ಈ ಅಧ್ಯಯನ ಕೈಗೊಳ್ಳಲಾಗಿದೆ.

ಕಲೆ ಎಂಬುದು ಕೇವಲ ಸಮಯ ಕಳೆಯುವ ಪರಿಪಾಠವಾಗಿ ರೂಪುಗೊಳ್ಳದೆ ನೆಲಮೂಲದಿಂದ ಅನುಭವಜನ್ಯವಾದ ನಂಬಿಕೆ, ಅಭಿವ್ಯಕ್ತಿ, ಜೀವನ ಪಾಠವಾಗಿ ಪರಿವರ್ತನೆಯಾಗಿರುವುದನ್ನು ಕಾಣುತ್ತೇವೆ. ಆರಂಭದಲ್ಲಿ ಸರಳ ರೇಖೆ ,ವೃತ್ತ, ತ್ರಿಭುಜಗಳ ಮೂಲಕವೇ ತಮ್ಮ ಅಭಿವ್ಯಕ್ತಿಯನ್ನು ಚಿತ್ರಿಸಲು ಆರಂಭಿಸಿದ ಮಾನವ ಇಂದಿಗೂ ಅದೇ ಮಾದರಿ ಉಳಿಸಿಕೊಂಡು ವಿನ್ಯಾಸದಲ್ಲಿ ಬದಲಾವಣೆ ಮಾಡಿಕೊಳ್ಳುತ್ತ ವಿಶಿಷ್ಟಗೊಳಿಸುತ್ತಾ ಸಾಗಿಬಂದ ಕಲಾ ಪರಂಪರೆಯೇ ವಿಶಾಲವಾದದ್ದು ,ವಿಶಿಷ್ಟವಾದದ್ದು. ಆಧುನಿಕತೆಯ ಇಂದಿನ ದಿನಗಳಲ್ಲಿ ಶಿಷ್ಟ ಚಿತ್ರಕಲೆಯೆಂದು ಕರೆಸಿಕೊಳ್ಳುತ್ತಿರುವ ಹತ್ತಾರು ಚಿತ್ರಕಲಾ ಮಾದರಿಗಳ ನಡುವೆಯೂ ಅಂದಿನ ಸಾಂಪ್ರದಾಯಿಕ ದೇಶೀ ರೇಖಾ ಚಿತ್ತಾರ ಮಾದರಿ ಇಂದಿಗೂ ದೇಶೀ ಚಿತ್ತಾರ ಕಲೆಯಾಗಿ ಕೆಲವು ಸಮುದಾಯಗಳ ಬದುಕಿನೊಳಗೆ ಹಾಸುಹೊಕ್ಕಾಗಿದ್ದು,ರಕ್ತಗತ ಕಲೆಯಂತೆ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಪರಂಪರೆಯೇ ರೋಚಕ. ಅದರಲ್ಲೂ ಕರ್ನಾಟಕದ ದೀವರ ಸಮುದಾಯ ಪ್ರಧಾನವಾಗಿ ಪರಂಪರೆಯಿಂದ ಉಳಿಸಿಕೊಂಡು ಬಂದ ಹಸೆ ಚಿತ್ತಾರ ಕಲೆ ಉಳಿದೆಲ್ಲ ಚಿತ್ರಕಲಾ ಮಾದರಿಗಳಿಗಿಂತ ತನ್ನದೇ ಆದ ಸೂಕ್ಷ್ಮವಾದ ಸಂಕೀರ್ಣ ವಿಶಿಷ್ಟ ವಿನ್ಯಾಸ, ಅಂತಃಸತ್ವ ಹೊಂದಿದೆ.ಅದನ್ನು ವಿವರವಾಗಿ ದಾಖಲಿಸುವ ಮಹತ್ವದ ಉದ್ದೇಶ ಈ ಸಂಶೋಧನಾ ಕೃತಿಯದ್ದಾಗಿದೆ.


ವಿಶಿಷ್ಟ ವಿನ್ಯಾಸದ ಕರಕುಶಲ ಕಲೆಯಾದ ಚಿತ್ತಾರ ಕಲಾ ಪರಂಪರೆಯ ಹುಟ್ಟು ಬೆಳವಣಿಗೆ ಮೂಲವನ್ನು ಶೋಧಿಸುವುದು ಹಾಗೂ ಸ್ತ್ರೀ ಸೌಂದರ್ಯ ಪ್ರಜ್ಞೆ, ಧಾರ್ಮಿಕ ಆಚರಣೆಗಳ ಮೂಲ ಕಲೆಯಾದ ಚಿತ್ತಾರ ಕಲೆಯ ವಿಶಿಷ್ಟತೆ, ವಿನ್ಯಾಸ ,ಲಕ್ಷಣ,ಸಾಂಕೇತಿಕ ಅರ್ಥವ್ಯಾಪ್ತಿ ಅಂತ:ಸತ್ವಗಳ ವಿಶ್ಲೇಷಣೆ ಮಾಡುವುದು,ನಾವಿನ್ಯತೆ, ಹೊಸ ಸಾಧ್ಯತೆ ಮತ್ತು ಸವಾಲುಗಳು, ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದವರೆಗೂ ಹಸೆ ಚಿತ್ತಾರವನ್ನು ಗಮನಸೆಳೆಯುವಂತೆ

ಮಾಡಿದ ಹಳ್ಳಿಯ ಅನಕ್ಷರಸ್ಥ ಮಹಿಳಾ ಕಲಾವಿದರ ಸಾಧನೆ, ಸವಾಲುಗಳು, ಹೊಸ ತಲೆಮಾರಿನ ಕಲಾವಿದರು, ಸರ್ಕಾರದಿಂದ ದೊರಕಬೇಕಾದ ಪ್ರೋತ್ಸಾಹಕ ಯೋಜನೆಗಳು, ಚಿತ್ತಾರಕ್ಕಿರುವ ಉದ್ಯಮಶೀಲತೆಯ ಅವಕಾಶಗಳನ್ನು ವಿವರಿಸುವ ವಿಶಾಲ ವ್ಯಾಪ್ತಿ ಹೊಂದಿದ್ದೇನೆ.

ಇಂದಿನ ಜಾಗತಿಕ ಯುಗದ ಬದುಕಿನಂಚಿಗೆ ಬಂದು ನಿಂತಿರುವ ನಾವು ಜಗತ್ತೇ ಒಂದು ಪುಟ್ಟ ವಿಶ್ವವೆನ್ನುವ ಪರಿಕಲ್ಪನೆಯತ್ತ ಕೊಂಡೊಯ್ಯುತ್ತಿರುವ ಡಿಜಿಟಲ್ ಯುಗದಲ್ಲಿ ಬದುಕುತ್ತಿದ್ದೇವೆ. ಸಾಕಷ್ಟು ಪಡೆದುಕೊಳ್ಳುವ ಜೊತೆಗೆ ಪರಂಪರೆಯಿಂದ ಬಂದ ಜನಪದರ ಸಾಕಷ್ಟು ಕಲಾ ಜ್ಞಾನವನ್ನು ಕಳೆದುಕೊಳ್ಳುತ್ತಿದ್ದೇವೆ. ಅತಿ ಮುಖ್ಯವಾಗಿ ಹಿಂದುಳಿದ ಸಮುದಾಯಗಳು,ಬುಡಕಟ್ಟು ಜನಸಂಸ್ಕೃತಿಗಳು ಇಂದಿನ ಸಾಂಸ್ಕೃತಿಕ ,ರಾಜಕೀಯ ಯಜಮಾನಿಕೆಯಲ್ಲಿ ಸಿಗಬುದಾದ ಸಣ್ಣ ಅವಕಾಶಗಳಿಗೂ ಹೋರಾಡಿಯೇ ಪಡೆಯಬೇಕಾದ ಸನ್ನಿವೇಶಗಳ ನಡುವೆ ಮತ್ತಷ್ಟು ನಲುಗುತ್ತಿವೆ. ಮದುವೆ,ಹಬ್ಬಗಳ ಆಚರಣೆಯ ವಿಧಿವಿಧಾನಗಳಾಗಿ ಕಡ್ಡಾಯವಾಗಿ ರೂಢಿಸಿಕೊಂಡು ಬಂದಿರುವ ಕಾರಣದಿಂದಾಗಿ ಉಳಿದಿರುವ ಕರಕುಶಲ ಕಲೆಯಾದ ಹಸೆಚಿತ್ತಾರ ಪರಂಪರೆ ಇಂದಿಗೂ ಯಾವ ಪ್ರೋತ್ಸಾಹವಾಗಲಿ,ಪ್ರಚಾರವಾಗಲಿ ,ಹೊಸ ಸಾಧ್ಯತೆಯ ಶೋಧಗಳತ್ತ ಬೆಳಕು ಕಾಣದೆ ಅಳಿವಿನ ಅಂಚಿನಲ್ಲಿದೆ. ಕೆಲವು ಪ್ರೋತ್ಸಾಹಕ ಯೋಜನೆಗಳಿದ್ದರೂ ಸೂಕ್ತ ಮಾರ್ಗದರ್ಶನ ಕೊರತೆಯಿಂದ ಬೆರಳೆಣಿಕೆಯ ಕಲಾವಿದರನ್ನೂ ತಲುಪಿಲ್ಲ.

ಹಸೆಚಿತ್ತಾರ ಸಾಂಪ್ರದಾಯಿಕ ಆಚರಣೆಯ ಭಾಗವಾಗಿದ್ದ ಮಾತ್ರಕ್ಕೆ ಈವರೆಗೆ ದೀವರು ಸಮುದಾಯ ತನ್ನದೇ ವಿನ್ಯಾಸ ವೈವಿಧ್ಯತೆಗಳನ್ನು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಉಳಿಸಿಕೊಂಡು ಬಂದಿದೆ. ಆದರೆ ವಿಶಿಷ್ಟ ವಿನ್ಯಾಸದ ಈ ಕಲೆಯನ್ನು ಅಂದಿನ ಯಾವ ರಾಜಪ್ರಭುತ್ವವಾಗಲೀ ,ಬ್ರಿಟೀಷ್ ಆಡಳಿತವಾಗಲೀ ಅದನ್ನು ಗುರುತಿಸಿರುವ ದಾಖಲೆಗಳಿಲ್ಲ. ಇಂದಿನ ಪ್ರಜಾಪ್ರಭುತ್ವ ಸರ್ಕಾರದ ಕೆಲವು

ಇಲಾಖೆಗಳು ,ಅಕಾಡೆಮಿಗಳು ಆಗೀಗ ಒಂದಿಷ್ಟು ಪ್ರೋತ್ಸಾಹ ನೀಡಿದ್ದರೂ ಇತರೆ ಜಾನಪದ ಕಲೆಗಳಿಗೆ ನೀಡಿದಷ್ಟು ಮಾನ್ಯತೆ, ಪ್ರೋತ್ಸಾಹಕ ಯೋಜನೆಗಳನ್ನು ನೀಡಿಲ್ಲ. ಹಾಗಾಗಿ ಸರ್ಕಾರಗಳ ಗಮನ ಸೆಳೆದು ಹಸೆಚಿತ್ತಾರ ಕಲೆಯ ವಿಶಿಷ್ಟತೆ, ಹಸೆಚಿತ್ತಾರ ಕಲೆಯ ಧಾರ್ಮಿಕ ,ಸಾಂಪ್ರದಾಯಿಕ, ಜನಪದೀಯ ಅಂತಃಸತ್ವವನ್ನು ವಿವರಿಸುವುದಕ್ಕೆ ,ಜನಪದರ ಕಲಾಜ್ಞಾನಪರಂಪರೆಯನ್ನೂ ಮುಂದಿನ ಪೀಳಿಗೆಗೂ ಹಸ್ತಾಂತರಿಸಲು ಹಾಗೂ ಹಸೆಚಿತ್ತಾರ ಕರಕುಶಲ ಕಲೆಗಿರುವ ಉದ್ಯಮಶೀಲ ಗುಣವ್ಯಾಪ್ತಿಯನ್ನು ಮನದಟ್ಟುಮಾಡಲು ಇತರೆ ಜನಪದರ ಕಲೆಗಳಗೆ ನೀಡಿದ ಮಾನ್ಯತೆ, ಪ್ರೋತ್ಸಾಹವನ್ನು ಹಸೆ ಚಿತ್ತಾರ ಕಲೆಗೂ ನೀಡುವಂತೆ ಕರ್ನಾಟಕ ದೇಶೀ ಹಸೆಚಿತ್ತಾರ ಕಲೆಗಳತ್ತ ಬೆಳಕು ಚೆಲ್ಲುವ ಮಹತ್ವದ ಕಾರ್ಯ ಆಗಬೇಕಿದೆ. ಆ ನಿಟ್ಟಿನಲ್ಲಿ ಗಮನಸೆಳೆಯಲು ಈ ಸಂಶೋದನಾ ಕೃತಿ ಉಪಯುಕ್ತವಾಗಬಹುದೆಂದು ನಂಬಿದ್ದೇನೆ.




ಅಧ್ಯಾಯ – 2

ದೇಶೀ ಚಿತ್ರಕಲೆಯ ಪರಂಪರೆ

ಚಿತ್ರಕಲೆಯ ಪ್ರಾಚೀನತೆ

ಕಲೆಯೇ ಸೌಂದರ್ಯ.ಸೌಂದರ್ಯವೇ ಕಲೆ . ಆನಂದದಿಂದ ಹುಟ್ಟಿದ ಕಲೆ ಆನಂದವನ್ನೇ ನೀಡುತ್ತದೆ. ಕಲೆ ಮಾನವನ ಸುಖಕ್ಕೂ ದುಃಖಕ್ಕೂ ಚಿಕಿತ್ಸೆ ನೀಡುತ್ತದೆ. ಭಾವನೆಗಳು, ಅರಿವಿನ ಮೇಲೆ ಪರಿಣಾಮ ಬೀರುವ ಬುದ್ಧಿಪೂರ್ವಕವಾಗಿ ಜೋಡಿಸಲಾದ ಅಂಶಗಳ ರೂಪವಾಗಿರುವ ಕಲೆಗಳಲ್ಲಿ ಚಿತ್ರಕಲೆ ಪ್ರಮುಖವಾದ ಕಲೆಯೇ ಆಗಿದ್ದು ಸೌಂದರ್ಯಪ್ರಜ್ಞೆಯಿಂದ ಹುಟ್ಟುವುದಾಗಿದೆ. ಕಲೆಗಳಲ್ಲಿ ಚಿತ್ರಕಲೆ ಅತಿ ಮಹತ್ವದ್ದಾಗಿದ್ದು ನಾಗರೀಕತೆ ಬೆಳೆದಂತೆ ಚಿತ್ರಕಲೆಯೂ ಅತೀ ವಿಶಿಷ್ಟವಾಗಿ ವೈವಿಧ್ಯಮಯವಾಗಿ ಬೆಳೆಯುತ್ತಾ ಬಂದಿದೆ. ವಿಶ್ವಭಾಷೆಯೆಂದೇ ಚಿತ್ರಕಲೆಯನ್ನು ಕರೆಯತ್ತಾರೆ. ಚಿತ್ರಕಲೆಯು ದೇಶ,ಕಾಲ, ಭಾಷೆಯ ಎಲ್ಲೆ ಮೀರಿ ಸಂವಹನ ನಡೆಸುತ್ತದೆ. ರೇಖೆ,ವರ್ಣ,ಕುಂಚಗಳನ್ನು ಬಳಸಿ ಭಾವಗಳಿಗೆ ರೂಪನೀಡುವುದು ಚಿತ್ರಕಲೆಯಾಗಿದೆ.



ವಾತ್ಸಾಯನನು ರೂಪಭೇದ,ಪ್ರಮಾಣ,ಭಾವ,ಲಾವಣ್ಯ ಯೋಜನೆ,ಸಾದೃಶ್ಯ,ವರ್ಣಿಕಾ ಭಂಗ ಎಂಬ ಆರು ವಿಭಾಗಗಳಲ್ಲಿ ಚಿತ್ರಕಾರನ ಕಾರ್ಯವಿಧಾನಗಳನ್ನು ವಿವರಿಸಿದ್ದಾನೆ. ಭಾರತೀಯ ಚಿತ್ರಶಾಸ್ತ್ರದ ಕುರಿತು ಚಿತ್ರಸೂತ್ರ ಮತ್ತು ವಿಷ್ಣುಧರ್ಮೋತ್ತರ ಪುರಾಣಗಳಲ್ಲಿ ಚಿತ್ರದ ವಿಷಯ ವಿಸ್ತಾರವಾಗಿ

ಹೇಳಲ್ಪಟ್ಟಿದೆ. ಭಾರತೀಯ ಚಿತ್ರ ಶಾಸ್ತ್ರದ ಉಗಮ ಕುರಿತಾಗಿ ಎರಡು ಕಥೆಗಳಿವೆ. ಈ ಕುರಿತು ಜಿ.ಎಸ್ ಶಿವರುದ್ರಪ್ಪ ಅವರ ಸೌಂದರ್ಯ ಸಮೀಕ್ಷೆ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಚಿತ್ರಸೂತ್ರದ ಪ್ರಕಾರ ಭಯಾಜಿತ್ ಎನ್ನುವ ರಾಜನೊಬ್ಬ ತನ್ನ ರಾಜ್ಯದಲ್ಲಿ ಅಕಾಲ ಮೃತ್ಯುವಿಗೆ ತುತ್ತಾದ ಬ್ರಾಹ್ಮಣ ಕುಮಾರನನ್ನು ಯಮನಿಂದ ಹಿಂದಕ್ಕೆ ತರುವ ಹೋರಾಟದಲ್ಲಿ ಯಮನನ್ನು ಸೋಲಿಸುತ್ತಾನೆ. ಆಗ ಬ್ರಹ್ಮನೇ ಬಂದು ಮೃತ್ಯುಗೀಡಾದ ಬ್ರಾಹ್ಮಣ ಕುಮಾರನನ್ನು ಯಮನು ಒಯ್ದದ್ದು ಸರಿ ಎಂದೂ, ಅದರ ಬದಲು ನೀನು ಈ ಬ್ರಾಹ್ಮಣ ಕುಮಾರನ ಚಿತ್ರವನ್ನು ಬರೆದರೆ ನಾನು ಅದಕ್ಕೆ ಜೀವ ಬರಿಸುತ್ತೇನೆ ಎಂದು ಹೇಳಿದಾಗ ಆ ರಾಜ ಹಾಗೆಯೇ ಮಾಡಲಾಗಿ, ಬ್ರಹ್ಮನು ಆ ಚಿತ್ರಕ್ಕೆ ಜೀವ ಬರಿಸಿ "ನೀನು ಯಮನ ನಗ್ನ ಪ್ರೇತಗಳನ್ನು ಗೆದ್ದುದರಿಂದ ನಿನಗೆ ನಗ್ನಜಿತ್ ಎಂದು ಹೆಸರಾಗಲಿ, ಇದು ಜಗತ್ತಿನ ಪ್ರಥಮ ಚಿತ್ರವಾಗಲಿ ಎಂದು ಹರಸುತ್ತಾನೆ ಎಂಬ ಪುರಾಣದ ಒಂದು ಸನ್ನಿವೇಶವಿದೆ. ಈ ಸನ್ನಿವೇಶವನ್ನೇ ಉದಾಹರಣೆಯಾಗಿ ಇಟ್ಟುಕೊಂಡು ಇದು ಜಗತ್ತಿನ ಮೊದಲ ಚಿತ್ರ ಎಂದು ನಿರ್ಣಯಿಸಲಾಗದು. ಇದು ಚಿತ್ರಕಲಾ ಸೃಷ್ಟಿಯ ಕುರಿತಾಗಿ ನಮಗೆ ಉಪಲಬ್ಧ ಇರುವ ಪುರಾಣ ಕಥೆಗಳ ಒಂದು ಆಧಾರ ಅಷ್ಟೇ. ಪುರಾತನ ಕಾಲದಲ್ಲಿ ಮಾನವರು ಬಿಡಿಸಿದ ಬಂಡೆ ಚಿತ್ರಗಳು ಸಾಕಷ್ಟು ದೊರೆತಿದ್ದು ಲಿಖಿತ ರೂಪದ ಭಾಷೆಗಳು ವಿಕಾಸವಾಗುತ್ತಕ್ಕಿಂತ ಪೂರ್ವದಲ್ಲಿಯೇ ಮಾನವ ತನ್ನ ರಸಾಭಿವ್ಯಕ್ತಿಯನ್ನು ಬಂಡೆಗಳ ಮೇಲೆ,ನೆಲದ ಚಿತ್ರಿಸಿದ್ದಾನೆ. ವಿಶ್ವದ ಹಲವೆಡೆ ಸರಳ ರೇಖೆಗಳಲ್ಲಿ ಚಿತ್ರಿಸಿದ ಬಂಡೆ ಚಿತ್ರಗಳು , ಕುಟ್ಟು ಚಿತ್ರಗಳು ಕಂಡುಬಂದಿವೆ.

ಇನ್ನು ವಿಷ್ಣುಧರ್ಮೋತ್ತರದಲ್ಲಿ ನಾರಾಯಣನೆಂಬ ಋಷಿ ತನ್ನ ತಪೋಭಂಗ ಮಾಡಲು ಬಂದ ಅಪ್ಸರೆಯರನ್ನು ನಾಚಿಸಲು ಮಾವಿನ ಎಲೆಯ ರಸದಿಂದ ಊರ್ವಶಿಯ ಚಿತ್ರವನ್ನು ಬರೆದು ಅದಕ್ಕೆ ಜೀವ ಬರಿಸಿದಾಗ ಅಪ್ಸರೆಯರು ನಾಚಿ ಓಡಿ ಹೋದರೆಂದೂ, ಆನಂತರ ಈ ಋಷಿ ಚಿತ್ರ ವಿದ್ಯೆಯನ್ನು ವಿಶ್ವಕರ್ಮನಗೆ ಬೋಧಿಸಿದನೆಂದು ಹೇಳಲಾಗಿದೆ. ಈ ಎರಡು ಉದಾಹರಣೆಗಳನ್ನು ಜಿ.ಎಸ್ ಶಿವರುದ್ರಪ್ಪ ಅವರು ತಮ್ಮ ಸೌಂದರ್ಯ

ಸಮೀಕ್ಷೆಯಲ್ಲಿ ಉಲ್ಲೇಖಿಸುತ್ತಾ ಚಿತ್ರ ಎನ್ನುವುದು ಬ್ರಹ್ಮ ಸೃಷ್ಟಿಗೆ ಸಮಾನವಾದ ಸೃಷ್ಟಿ, ಅದು ಮೃತ್ಯುವನ್ನು ಗೆಲ್ಲತಕ್ಕದ್ದು, ಅದು ಅಪೂರ್ವ ಸೌಂದರ್ಯ ನಿರ್ಮಾಣ ಶಕ್ತಿ ಎಂದಿದ್ದಾರೆ. ನಾಗರೀಕತೆ ಬೆಳೆದಂತೆಲ್ಲ, ಚಿತ್ರಕಲೆಗೆ ಸಂಬಂಧಿಸಿದಂತೆ ಹಲವಾರು ಶಾಸ್ತ್ರ ಗ್ರಂಥಗಳು ಬೆಳೆದ ಮೇಲೆ ಹಲವಾರು ಪರಿಕಲ್ಪನೆಗಳು , ವ್ಯಾಖ್ಯಾನಗಳು ಚಿತ್ರಕಲಾ ಶಾಸ್ತ್ರ ನಿಯಮಗಳು ಕಾಲದಿಂದ ಕಾಲಕ್ಕೆ ವಿಕಾಸವಾಗುತ್ತ ಸಾಗಿದಂತೆ ಭಾರತದಲ್ಲಿ ನಾಗರಿಕತೆಯ ಬೆಳವಣಿಗೆ ಜೊತೆಜೊತೆಗೆ ಚಿತ್ರಕಲೆ ವೈವಿಧ್ಯಮಯವಾಗಿ ಬೆಳೆಯಿತು. ಆದರೂ ಸಹ ರಾಜಪ್ರಭುತ್ವದೊಂದಿಗೆ ಬೆಳೆದು ಬಂದ ಚಿತ್ರಕಲೆಗೂ, ಜನಸಾಮಾನ್ಯರ ಮನೆಯಲ್ಲಿ, ಬುಡಕಟ್ಟು ಜನಜೀವನ ಸಂಸ್ಕೃತಿಯಲ್ಲಿ ಬೆಳೆದು ಬಂದ ಸಾಂಪ್ರದಾಯಿಕ ರೇಖಾಚಿತ್ರಗಳಿಗೂ ಅಜಗಜಾಂತರ ವ್ಯತ್ಯಾಸಗಳು ಹಾಗೆ ಉಳಿದುಕೊಂಡವು. ರಾಜಪ್ರಭುತ್ವದ ಪೋಷಣೆಯಲ್ಲಿ ಬೆಳೆದ ಚಿತ್ರಶಾಸ್ತ್ರಗಳು ಜನಸಾಮಾನ್ಯರ ಮನೆಯ ಸಾಂಪ್ರದಾಯಿಕ ರೇಖಾಚಿತ್ರ ಕಲಾವಿದೆಯರ ಮೇಲೆ ಬೀರಿದ ಪ್ರಭಾವ ಕಡಿಮೆ. ಜನಸಾಮಾನ್ಯರು ತಮ್ಮ ಮನೆಗಳಲ್ಲಿ ಆಚರಣೆಯ ಭಾಗವಾಗಿ ತಮ್ಮದೇ ಆದ ಸರಳ ರೇಖೆಗಳ ಚಿತ್ರ ಬರೆಯುವ ಸಂಪ್ರದಾಯವನ್ನು ತಮ್ಮದೇ ಆದ ನೆಲಮೂಲದ ತಾತ್ವಿಕ ನೆಲೆಗಟ್ಟಿನಲ್ಲಿ , ತಮ್ಮದೇ ಆದ ರಸಾಭಿವ್ಯಕ್ತಿಯನ್ನು , ನಾವಿನ್ಯತೆಯನ್ನು ಸಂಯೋಜಿಸುತ್ತ ತಮ್ಮದೇ ಆದ ಪರಿಕಲ್ಪನೆಯಲ್ಲಿ ರಚಿಸುತ್ತಾ ಇಂದಿನವರೆಗೂ ಅದನ್ನೇ ಮುಂದುವರಿಸಿಕೊಂಡು ಬಂದಿರುವ ಕರ್ನಾಟಕದ ಹಸೆಚಿತ್ತಾರ,ಹಲಿ,ಹಸಗರ,ಶೇಡಿ,ಮಹಾರಾಷ್ಟ್ರದಲ್ಲಿ ವರ್ಲಿಚಿತ್ರಕಲೆ, ಬಿಹಾರದಲ್ಲಿ ಮಧುಬನಿ, ರಾಜಸ್ತಾನದಲ್ಲಿ ಮಾಂಡಲ ಚಿತ್ರಕಲೆ, ಗೋವಾದಲ್ಲಿ ಕಾವಿಕಲೆ ,ಒರಿಸ್ಸಾದಲ್ಲಿ ಸೊರಾ,ಹಲವು ರಾಜ್ಯಗಳಲ್ಲಿ ಕಂಡುಬರುವ ಮಂಡಲ ಕಲೆ ಮತ್ತಿತರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಸಾಂಪ್ರದಾಯಿಕ ದೇಶಿ ಚಿತ್ರಕಲೆಗಳು ದೇಶಾದ್ಯಾಂತ ಕಂಡುಬರುತ್ತದೆ.

ಚಿತ್ರಕಲಾಶಾಸ್ತ್ರ ನಿಯಮಗಳೇನೇ ಇದ್ದರೂ ಅವು ಬಹಿರಂಗ ರಚನೆಗೆ ಹೊರತು ಆಂತರಂಗಿಕವಾದ ಸೌಂದರ್ಯ ಲಾವಣ್ಯಗಳನ್ನು ತರಲು ಕಲಾವಿದ ತನಗಾದ ರಸಾನುಭವವನ್ನು ತನ್ನದೇ ಆದ ವಿಧಾನದಲ್ಲಿ ರಸಾಭಿವ್ಯಕ್ತಿಯನ್ನು

ಮಾಡಬಹುದು. ರಸಾಭಿವ್ಯಕ್ತಿಯನ್ನು ರೇಖೆಗಳಲ್ಲಿ ಚಿತ್ರಿಸಿದರೆ ಅದು ಚಿತ್ರಕಲೆ ಎನಿಸುತ್ತದೆ. ಅದರಲ್ಲಿ ಮೇಲು–ಕೀಳು, ಅಧೀನ – ಪ್ರಧಾನ ಎನ್ನುವುದು ಇಲ್ಲ. ನಮ್ಮ ಜನಪದರ ಸಾಂಪ್ರದಾಯಿಕ ರೇಖಾಚಿತ್ರಗಳ ಮಾದರಿಗಳು ಶಾಸ್ತ್ರಗಳ ಪರಿಧಿಯ ಹಂಗಿಲ್ಲದೆ ಬೆಳೆದವು. ಭಾರತದ ನೆಲಮೂಲದ ಜನಜೀವನ ವಿಧಾನ, ಸಂಸ್ಕೃತಿ ಆಚರಣೆಗಳ ಜೊತೆಜೊತೆಗೆ ಅಭಿವ್ಯಕ್ತಗೊಳ್ಳುತ್ತ ಷಡಂಗಗಳ ಹಂಗಿಲ್ಲದೆ ಬೆಳೆದ ಹಸೆ ಚಿತ್ತಾರ, ವರ್ಲಿ ಚಿತ್ತಾರದಂತಹ ಚಿತ್ತಾರ ಕಲೆಗಳು ಸಹ ನಮ್ಮದೆ ನೆಲಮೂಲದ ಪ್ರಧಾನ ದೇಶೀ ಚಿತ್ರಕಲೆಗಳು. ಆದರೆ ಭಾರತದ ಚಿತ್ರಕಲೆಯ ಕುರಿತಾಗಿ ರಚಿತವಾದ ಬಹಳಷ್ಟು ಕೃತಿಗಳಲ್ಲಿ , ವಿಮರ್ಶೆಗಳಲ್ಲಿ ಸಂಪ್ರದಾಯ ಪ್ರಧಾನವಾದ ಜನಸಂಸ್ಕೃತಿಯ ರೇಖಾಚಿತ್ರಗಳ ಕುರಿತಾಗಿ ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಲಾಗಿದೆ.

ಉತ್ತಮ ಚಿತ್ರಗಳು ಹೊಂದಿರಬೇಕಾದ ಲಕ್ಷಣಗಳೆಂದು ಹೇಳಲಾಗಿರುವ ಷಡಂಗಗಳಾದ ರೂಪ ಬೇದ, ಪ್ರಮಾಣಬದ್ಧತೆ, ಭಾವ ಲಾವಣ್ಯ ಯೋಜನೆ, ಸಾದೃಶ್ಯ, ವರ್ಣಿಕಾ ಭಂಗಗಳ ಕ್ರಮಬದ್ಧತೆಯನ್ನು ಅಷ್ಟಾಗಿ ಒಳಗೊಳ್ಳದೆ ತಮ್ಮದೇ ಆದ ಸಂಪ್ರದಾಯಗಳ ಹೊಳಹುಗಳನ್ನು , ತಮ್ಮದೇ ಆದ ಅನುಭವಜನ್ಯ ತಾತ್ವಿಕ ನೆಲೆಗಟ್ಟಿನಲ್ಲಿ ಚಿತ್ರಿಸುವ ಜನಪದರ ಅನಕ್ಷರಸ್ಥ ಚಿತ್ತಾರಗಿತ್ತಿಯರ ಸಾಂಪ್ರದಾಯಿಕ ಚಿತ್ತಾರಗಳನ್ನು , ಅವರ ಕಲೆಯನ್ನು ಗೌರವಿಸುತ್ತಾ ನಮ್ಮದೇ ನೆಲಮೂಲದ ದೇಶೀ ಚಿತ್ರಕಲೆ ಎಂದು ಹೆಮ್ಮೆಯಿಂದ ಹೇಳಬೇಕೆ ಹೊರತು ನಿರ್ಲಕ್ಷಿಸಬಾರದು. ಯಾವುದು ನೆಲಮೂಲದ್ದು ,ಯಾವುದು ವಿದೇಶೀ ಪ್ರಭಾವಿತವಾದದ್ದು ,ಯಾವುದು ಶ್ರೇಷ್ಠ ಚಿತ್ರಕಲೆ ,ಯಾವುದು ಕನಿಷ್ಟ ಎಂದೆಲ್ಲ ವಿಭಾಗಿಸಿ ,ವಿವೇಚಿಸಿ ನೋಡುವ ವಿಮರ್ಶಕರುಗಳ ನಡುವೆ ಚಿತ್ರಕಲೆಯ ಮೊದಲ ಹುಟ್ಟು, ಮೂಲ ,ಬೆಳವಣಿಗೆ ಕುರಿತಾಗಿ ಒಮ್ಮತದ ನಿರ್ಧಾರವಿಲ್ಲ. ಒಮ್ಮತದ ನಿರ್ಧಾರಕ್ಕೆ ಬರುವಂತಹ ಸಾಕಷ್ಟು ಆಧಾರಗಳಾಗಿ ಬೇರೆ ಬೇರೆ ದೇಶಗಳಲ್ಲಿ ಕಂಡುಬರುವ ಬಂಡೆ ಚಿತ್ರಕಲೆಗಳ ಆಧಾರದಲ್ಲೇ ವಿವೇಚಿಸಬಹುದಾಗಿದೆ.

ಆದಿಯಲ್ಲಿ ನಿಸರ್ಗದ ವೀಕ್ಷಣೆ, ಅನುಕರಣೆಯಿಂದ ಹುಟ್ಟಿದ ಕಲೆ ಸೌಂದರ್ಯ ಪ್ರಜ್ಞೆ ಜಾಗೃತವಾದಂತೆ ಬೇರೆ ಬೇರೆ ಆಯಾಮ ಪಡೆಯುತ್ತ ಬೆಳೆದಿದೆ.ನಂತರ ಅದು ಬೇರೆ ಬೇರೆ ಸಮಯದಲ್ಲಿ ಎದುರಿಸಿದ ಭಯ ,ಕುತೂಹಲ ,ನಿಗೂಢ ಸನ್ನಿವೇಶಗಳ ಹಿನ್ನಲೆಯಲ್ಲಿ ನೆಲಮೂಲದಿಂದ ಕಂಡುಕೊಂಡ ಅನುಭವದಲ್ಲಿ ಕೆಲವು ಚಿತ್ರ ಸಂಕೇತಗಳು ನಂಬಿಕೆಗಳನ್ನು ಹುಟ್ಟುಹಾಕಿದವು. ಮಾನವನು ಆರಂಭದಲ್ಲಿ ಕೇವಲ ಅಲಂಕಾರಕ್ಕಾಗಿ ಅಥವಾ ಮನೋರಂಜನೆಗಾಗಿ ಚಿತ್ರಗಳನ್ನು ಬಿಡಿಸಲಿಲ್ಲ .ಅವನು ತನ್ನ ಬದುಕಿನ ಭಾಗವಾಗಿದ್ದ ಬೇಟೆಯ ಕಸುಬಿಗೆ ಮನೋಬಲ ವೃದ್ದಿಸಿಕೊಳ್ಳಲು, ಹಾಗೂ ಗುಹೆಗಳಲ್ಲಿ ವಾಸಿಸುವಾಗ ರಕ್ಷಣೆಯ ತಂತ್ರಗಾರಿಕೆ ಭಾಗವಾಗಿ ಬಂಡೆಗಳ ಮೇಲೆ ಚಿತ್ರ ಬರೆಯುವುದನ್ನು ಅಭ್ಯಾಸ ಮಾಡಿಕೊಂಡಿರಬಹುದು ಎಂದು ಈವರೆಗೆ ಸಿಕ್ಕಿರುವ ಬಂಡೆಚಿತ್ರಗಳ ಆಧಾರದ ಮೇಲೆ ಅಂದಾಜಿಸಲಾಗಿದೆ. ಕಾಲಾನಂತರ ಆ ನಂಬಿಕೆಗಳೇ ಆಚರಣೆಗಳ ಮೂಲಕ ಸಂಪ್ರದಾಯಗಳಾಗಿ ಪರಂಪರಾಗತವಾಗಿ ತಲೆಮಾರಿನಿಂದ ತಲೆಮಾರಿಗೆ ಚಿತ್ರಕಲಾಜ್ಞಾನ ಹಸ್ತಾಂತರವಾಗುತ್ತಾ ಬಂದಿದೆ.

ಆದಿಮ ಬಂಡೆ ಚಿತ್ರಕಲೆಗಳು



ಹಳೇ ಶಿಲಾಯುಗ ಕಾಲದಲ್ಲಿ ರಚಿಸಿದ್ದೆನ್ನಲಾದ ಸುಮಾರು 35000 ವರ್ಷಗಳ ಹಿಂದಿನ ಚಿತ್ರ ರಚನೆಗಳು ಸಿಕ್ಕಿವೆ. ಇದಕ್ಕಿಂತಲೂ ಹಿಂದೆಯೂ ಸಹ ಮಾನವ ಚಿತ್ರಕಲೆ ರಚಿಸಿರಬಹುದು. ಅವು ನಮಗೆ ಈವರೆಗೂ ಸಿಗದೇ ಇರಬಹುದು. 19ನೇ ಶತಮಾನದ ಕೊನೆಯಲ್ಲಿ ಯೂರೋಪಿನ ಪಶ್ಚಿಮ ಭಾಗದಲ್ಲಿ ಹಲವು ಗುಹಾಂತರ ಚಿತ್ರಗಳನ್ನು


ಶೋಧಿಸಲಾಗಿದೆ. ಅತ್ಯಂತ ಪ್ರಾಚೀನ ಚಿತ್ರಗಳು ಸ್ಪೇನಿನ ಅಲ್ತಾಮಿನ ಗುಹೆಗಳಲ್ಲಿ ಮೊದಲಿಗೆ ಗುರುತಿಸಲಾಗಿದೆ. ಆಗ್ನೇಯ ಪ್ರಾನ್ಸಿನ ಪೆಕ್‌ಮರ್ಲ ಎಂಬಲ್ಲಿ 30000 ವರ್ಷಗಳ ಹಿಂದಿನ ಚಿತ್ರಗಳು ದೊರೆತಿವೆ. ಕಾಡುಕೋಣ, ಕುದುರೆ, ಕರಡಿ ಚಿತ್ರಗಳು, ಹಸಿರಕ್ತವನ್ನು ಕೈಗೆ ಮೆತ್ತಿಕೊಂಡು ಬಂಡೆಗಳಿಗೆ ಹಚ್ಚಿದ ಚಿತ್ರಗಳು ಸೇರಿದಂತೆ ಕೊಂಬು, ತೊಗಟೆ, ಚರ್ಮ, ಎಲುಬು ಹಾಗೂ ಬಂಡೆಗಳ ಮೇಲೆ ಹೆಚ್ಚಿನ ಚಿತ್ರಣವನ್ನು ಕೊರೆಯಲಾಗಿದೆ. ಇವೆಲ್ಲ ಸುಮಾರು 27,000 ವರ್ಷಗಳಿಂದ ಕ್ರಿಸ್ತಪೂರ್ವ 1000 ವರ್ಷಗಳ ಪೂರ್ವದವು ಎಂದು ಗುರುತಿಸಲಾಗಿದೆ. ಭಾರತದಲ್ಲಿ ಮೊಟ್ಟಮೊದಲ ಬಾರಿಗೆ 1856ರಲ್ಲಿ ಉತ್ತರಖಂಡದ ಅಲ್ಮೋರ್ ನೆಲೆಯಲ್ಲಿ ಗೀರುಚಿತ್ರಗಳನ್ನು ಹೆನ್‌ವುಡ್ ರವರು ಬೆಳಕಿಗೆ ತಂದರು.(ವಿವರಗಳಿಗೆ ಕರ್ನಾಟಕ ಜಾನಪದ ಚಿತ್ರಕಲೆ, ಪುಟ–27, ಮೋಹನ್ ಆರ್ ಅವರ ಕರ್ನಾಟಕದ ಆದಿಮ ಚಿತ್ರಕಲೆ ಕೃತಿ ನೋಡಿ)

ಭಾರತದಲ್ಲಿ ಗುಹೆಗಳ ಮೇಲಿನ ಚಿತ್ರಕ್ಕೆ 10,000 ವರ್ಷಗಳಿಗಿಂತ ಹಿಂದಿನ ಚರಿತ್ರೆ ಇದೆ. ಮಧ್ಯಪ್ರದೇಶದ ಬಿಂಬೆಡ್ಕಾ ಗುಹೆಗಳಲ್ಲಿ ,ರಾಯಘಾಟ್‌ನ ಸಿಂಗಪುರದಲ್ಲಿ ಕಂಡುಬರುವ ಚಿತ್ರಗಳನ್ನು ಪರ್ಷಿಬ್ರೌನ್ ವಿವರಿಸುತ್ತಾರೆ. (Indian painting the heritage of Indian ciriz,ಪುಟ-15) ಇಲ್ಲಿ ಬೊಗಳುವ ನಾಯಿಯೊಂದು ಅತ್ಯಂತ ವೇಗದಿಂದ ಮುನ್ನುಗ್ಗುವ ಚಿತ್ರ ಮನೋಹರವಾಗಿದೆ. ಮಿರ್ಜಾಪುರದ ಭಾಲದುರಯಾದಲ್ಲಿ, ಮೋನ್‌ಕಣಿವೆಯಲಿ ಖನಿಯಾದಲ್ಲಿ, ಹರಿನ್ ಹರನ್ ಗುಹೆಯಲ್ಲಿ, ವಿಂಧ್ಯಪರ್ವತ ಪ್ರದೇಶದ ಸರಹತ್ ಕುರಿಯಾಕುಂದ್‌ಗಳಲ್ಲಿ,ಹೋಷಾಂಗಬಾದ್, ಪಬ್‌ಮ್ಹಾರಿಗಳಲ್ಲಿ ಆಕರ್ಷಕ ಚಿತ್ರಗಳಿವೆ. (ವಿವರಗಳಿಗೆ ಭಾರತೀಯ ಚಿತ್ರಕಲೆ, ಸಿ.ಶಿವರಾಮಮೂರ್ತಿ, 1998, ಪುಟ–23) ಕೇರಳ ,ತಮಿಳುನಾಡು, ಆಂದ್ರಪ್ರದೇಶದಲ್ಲಿಯೂ ಕಂಡುಬಂದಿವೆ.

ನಮ್ಮ ಕರ್ನಾಟಕದಲ್ಲಿ ಹೆಚ್ಚಾಗಿ ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬಿಜಾಪುರ,ಬೆಳಗಾವಿ, ಚಿತ್ರದುರ್ಗ, ಉತ್ತರಕನ್ನಡ ಶಿವಮೊಗ್ಗ,ಮುಂತಾದ ಜಿಲ್ಲೆಗಳ ಹಳ್ಳಿಗಳಲ್ಲಿ ಬಂಡೆಗಳ ಮೇಲೆ, ಗುಹೆಗಳ ಒಳಗೆ ಬರೆದ ಹಾಗೂ ಕೊರೆದ ಚಿತ್ರಗಳು ಲಭಿಸುತ್ತವೆ. ಮಾನ್ವಿಯ ಅಮರೇಶ್ವರ ಬೆಟ್ಟದ ರಂಗೋಲಿ

ಗವಿಯಲ್ಲಿ ಹಸೆಚಿತ್ತಾರದ ಮೋಟಿಫ್ಗಳು ಕಂಡುಬರುತ್ತವೆ. (ವಿವರಗಳಿಗೆ ಸಂಶೋದಕರಾದ ಮೋಹನ್ ಆರ್ ಅವರ ಕರ್ನಾಟಕದ ಆದಿಮ ಚಿತ್ರಕಲೆ ಕೃತಿ ನೋಡಿ)

ಆದಿಮ ಬಂಡೆ ಚಿತ್ರದ ಬಗೆಗಳು



ಮಾನವ ಕಂಡುಕೊಂಡ ಆರಂಭಿಕ ಹಂತದ ಚಿತ್ರಕಲೆಯಾದ ಬಂಡೆಚಿತ್ರಕಲೆಯನ್ನು ಅಧ್ಯಯನದ ದೃಷ್ಟಿಯಿಂದ ಸಂಶೋಧಕ ಮೋಹನ್ ಆರ್ ಅವರ ಕೃತಿ ಕರ್ನಾಟಕ ಆದಿಮ ಚಿತ್ರಕಲೆಯಲ್ಲಿ ಅವುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

(ಚಿತ್ರ:ರಾಯಚೂರಿನ ಮಾನವಿಯ ಮಲ್ಲಿಖಾರ್ಜುನ ಬೆಟ್ಟದ ಆದಿಮ ಬಂಡೆಚಿತ್ರ –ರವಿರಾಜ್ ಸಾಗರ್)

ವರ್ಣಚಿತ್ರಗಳು

ನೈಸರ್ಗಿಕವಾಗಿ ದೊರಕುವ ಗಿಡಮೂಲಿಕೆ ,ಖನಿಜಾಂಶ ಹಾಗೂ ಪ್ರಾಣಿಗಳ ಕೊಬ್ಬಿನ ಅಂಶಗಳ ಮಿಶ್ರಣದಿಂದ ಬಣ್ಣ ತಯಾರಿಸುತ್ತಿದ್ದರು. ಸಾಮಾನ್ಯವಾಗಿ ಗವಿಗಳಲ್ಲಿ,ಕಡುಬಂಡೆ,ಕಲ್ಲಾಸರೆಗಳಲ್ಲಿ ಕೆಮ್ಮಣ್ಣು,ಉರುಮಂಜು,ಬಿಳಿ,ಹಳದಿ,ಹಸಿರು ಬಣ್ಣಗಳಲ್ಲಿ ಚಿತ್ರಗಳು ಕಂಡುಬಂದಿವೆ.ಮಧ್ಯಪ್ರದೇಶ,ಛತ್ತೀಸ್ಗಡದಲ್ಲಿ ಹೆಚ್ಚು ಕಂಡುಬಂದಿವೆ. ತುಂಗಾಭದ್ರ ನದಿ ತೀರದ ರಾಯಚೂರು, ಕೊಪ್ಪಳ ಶಿವಮೊಗ್ಗದಲ್ಲೂ ಕಂಡುಬಂದಿವೆ. ಭಾರತದಲ್ಲಿ ಕಂಡುಬರುವ ಬಂಡೆ ಚಿತ್ರಗಳಲ್ಲಿ ಶೇಕಡ 90ರಷ್ಟು ಉರುಮಂಜು ವರ್ಣದಲ್ಲಿದೆ.ಈಗಲೂ ಅವು ಬಹುತೇಕ ಈಗಲು ಲಭ್ಯವಿರುವುದು ವಿಶಿಷ್ಟತೆಯಾಗಿದೆ.

ಬಯಲು ಬಂಡೆ ಚಿತ್ರಗಳು

ಇವು ವರ್ಣಚಿತ್ರಗಳಿಗೆ ಹೊರತಾದ ಶಿಲಾ ಚಿತ್ರಗಳಾಗಿದ್ದು ಬಯಲು ಬಂಡೆ ಚಿತ್ರಗಳು ವರ್ಣ ಚಿತ್ರಗಳಿಗಿಂತ ಸಹಜವಾಗಿ ಭಿನ್ನವಾಗಿದೆ.ಬೃಹದಾಕಾರದ ಬಂಡೆಗಳ ರಾಶಿಯಿಂದ ನಿರ್ಮಿತವಾಗಿರುವ ಬೆಟ್ಟಗಳ ಸಾಲಿನ ಮಧ್ಯದಲ್ಲಿ ಬಂಡೆಗಳ ಸಮತಟ್ಟಾದ ಮೇಲ್ಮೈ ಮೇಲೆ ಚಿತ್ರವನ್ನು ಮೂಡಿಸಲಾಗಿದೆ.ಇವು ಬಹುತೇಕ ಕುಟ್ಟು ಚಿತ್ರಗಳು. ಗೀರು ಚಿತ್ರಗಳು. ಕಲ್ಗುಳಿ ಚಿತ್ರಗಳು ಆಗಿರುತ್ತವೆ.

ಬೃಹದಾಕೃತಿಯ ಚಿತ್ರಗಳು

ಇವು ಸಹ ಗೀರು ಚಿತ್ರಗಳಾಗಿದ್ದು 4 ಮೀಟರ್‌ಗಿಂತ ದೊಡ್ಡ ಪ್ರಮಾಣದಲ್ಲಿ ಇರುತ್ತವೆ ಹಾಗಾಗಿ ಇವನ್ನು ಬೃಹದಾಕೃತಿಯ ಚಿತ್ರಗಳೆಂದು ಕರೆಯಲಾಗಿದೆ ಇಂತಹ ಚಿತ್ರಗಳು ಗವಿ ಅಥವಾ ಕಲ್ಲಾಸರೆಯಲ್ಲಿ ಕಂಡು ಬರುವುದಿಲ್ಲ. ಬದಲಾಗಿ ಹಾಸು ಬಂಡೆಗಳಲ್ಲಿ ಮಾತ್ರ ಕಾಣಬಹುದು.ಇವು ಕರ್ನಾಟಕದ ಕೊಂಕಣ ತೀರ ಹಾಗೂ ಗೋವಾದ ಕೆಲವು ನೆಲೆಗಳಲ್ಲಿ ಬೆಳಕಿಗೆ ಬಂದಿದ್ದು ಗಮನಿಸಬೇಕಾದ ವಿಷಯ. ಇನ್ನಷ್ಟು ಭಾಗದಲ್ಲಿ ಸಂಶೋಧನೆಯಿಂದ ಬೆಳಕಿಗೆ ಬರಬೇಕಾಗಿದೆ.

ಮಾನವ ನಾಗರೀಕನಾಗುತ್ತಾ ಸಾಗಿದಂತೆ ಆತನ ಜೀವನ ಶೈಲಿ,ರೂಢಿಗಳು ಬದಲಾದಂತೆ ಚಿತ್ರಕಲೆಯೂ ಬದಲಾಗಿದೆ. ಸಿಂಧೂ ನಾಗರೀಕತೆಯ ಕಾಲಘಟ್ಟದ ಚಿತ್ರಗಳಲ್ಲಿ ಬಣ್ಣಗಳ ಬಳಕೆ ಕಾಣಬಹುದು.ಭಾರತೀಯ ಸಂಪ್ರದಾಯಿಕ ಸಮಾಜದಲ್ಲಿ ಚಿತ್ರಕಲೆ ನಾಗರೀಕತೆಯ ಲಕ್ಷಣಗಳಲ್ಲಿ ಒಂದಾಗಿದೆ. 64 ರಾಜವಿದ್ಯೆಯ್ಲಲಿ ಚಿತ್ರಕಲೆಯೂ ಒಂದು. ಆನಂತರ ರಾಜಪ್ರಭುತ್ವ ಬೆಳೆದಂತೆ ಚಿತ್ರಕಲೆ ಪ್ರಮುಖ ವಿದ್ಯೆಯಾಗಿ ಗಣನೆಗೆ ಬಂದಿರುವುದು ಕಾಣುತ್ತೇವೆ. ಆದರೆ ರಾಜಪ್ರಭುತ್ವ ಆದಿಮ ಚಿತ್ರಕಲಾ ಮಾದರಿಗಳಿಂದ ವಿಕಾಸವಾದ ಬುಡಕಟ್ಟುಗಳ ಸಂಪ್ರದಾಯವಾಗಿ ಉಳಿದ ಚಿತ್ರಕಲಾ ಮಾದರಿಗಿಂತ ಹೊಸ ಮಾದರಿಯ ಶಿಷ್ಟ ಚಿತ್ರಕಲಾ ಮಾದರಿ ಎನ್ನಲಾಗುತ್ತಿರುವ ಹೊಸ ಬಗೆಯ ಚಿತ್ರಮಾದರಿಗಳನ್ನು ಹೆಚ್ಚಾಗಿ ಪ್ರೋತ್ಸಾಹಿಸಿದರು. ಸರಳ ರೇಖೆಗಳಲ್ಲೇ ಹೊಸ

ಹೊಸ ವಿನ್ಯಾಸಗಳನ್ನು ಸೃಷ್ಟಿಸಿಕೊಂಡು ಬೆಳೆದ ಬುಡಕಟ್ಟು ವರ್ಗಗಳು ಮಾತ್ರ ಹೆಚ್ಚಾಗಿ ಪೋಷಿಸಿಕೊಂಡು ಬಂದ ಹಸೆಚಿತ್ತಾರ ಕಲೆಯಂತಹ ಮಾದರಿಗಳು ಬುಡಕಟ್ಟು ಸಮುದಾಯಗಳ ಸಾಂಪ್ರದಾಯಿಕ ಕಲೆಯಾಗಿಯೇ ಉಳಿದದ್ದನ್ನು ನಾವೀಗಲೂ ನೋಡುತ್ತಿದ್ದೇವೆ. ನಮ್ಮ ಕರ್ನಾಟಕದ ಮಲೆನಾಡಿನಲ್ಲಿ ಇಂದಿನ ದೇಶೀ ಚಿತ್ತಾರವಾಗಿ ಉಳಿದಿರುವ ಹಸೆಚಿತ್ತಾರ ಆದಿಮ ಬುಡಕಟ್ಟುಗಳ ನೆಲಮೂಲಜ್ಞಾನದಿಂದ ತಲೆಮಾರಿನಿಂದ ತಲೆಮಾರಿಗೆ ವಿಕಾಸವಾದದ್ದೇ ಆಗಿದೆ. ಬುಡಕಟ್ಟು ಚಿತ್ತಾರ ಕಲೆಯಲ್ಲಿ ಮಹಿಳೆಯರೇ ಪ್ರಧಾನವಾಗಿ ತೊಡಗಿಕೊಂಡಿರುವುದು ಗಮನಾರ್ಹ ಸಂಗತಿ.ಮಹಿಳೆಯರ ಸೌಂದರ್ಯ ಪ್ರಜ್ಞೆ ಹೆಚ್ಚಾದಂತೆಲ್ಲಾ ಹಬ್ಬ ಆಚರಣೆಗಳ ಸಂಪ್ರದಾಯದ ಭಾಗವಾಗಿಯೂ, ಗೃಹಾಲಂಕಾರದ ಭಾಗವಾಗಿಯೂ ಚಿತ್ರಕಲೆಯೂ ಬೆಳೆಯುತ್ತಾ ಸಾಗಿಬಂದಿದೆ ಎನ್ನಬಹುದು.ಹಾಗಾಗಿ ಸಾಂಪ್ರದಾಯಿಕ ದೇಶೀ ಹಸೆಚಿತ್ತಾರ ಕಲೆಯಂತಹ ಚಿತ್ರಕಲೆಗಳಲ್ಲಿ ಮಹಿಳಾ ಪ್ರಧಾನ ಅಭಿವ್ಯಕ್ತಿ ಕಾಣಬಹದು.

ಅಂದು ದೇಶ ಭಾಷೆಗಳ ಗಡಿಗಳ ಹಂಗಿಲ್ಲದೆ ಅಲೆಮಾರಿಯಾಗಿದ್ದ ಮಾನವ ಸಮೂಹ ದೇಶ ಭಾಷೆ ಎಲ್ಲೆ ಮೀರಿ ತಾವು ಕಂಡುಕೊಂಡಿದ್ದ ಕಲೆಗಳ ಜ್ಞಾನವನ್ನು ಹಂಚಿಕೊಂಡಿರುವ ಸಾದ್ಯತೆಗಳು ಹೆಚ್ಚಿವೆ. ಕಾಲಕಳೆದಂತೆ ನಂಬಿಕೆಗಳು ಬಲಗೊಂಡಂತೆ ಸಮಯ ಸಂಧರ್ಭಕ್ಕೆ ತಕ್ಕಂತೆ ಕಲೆಯನ್ನು ಬೇರೆ ಬೇರೆ ಉದ್ದೇಶಗಳಿಗೆ ಕಂಡುಕೊಳ್ಳಲಾಗಿದೆ. ಉದಾಹರಣೆಗೆ ಸರಳ ರೇಖಾ ಚಿತ್ರಗಳು ಜ್ಯಾಮಿತಿಯ ಅಂಶಗಳ ಮಾದರಿಯ ವಿನ್ಯಾಸವನ್ನೇ ಕರ್ನಾಟಕದಲ್ಲಿ 'ಹಸೆಚಿತ್ತಾರ', ಹಲಿ,ಹಸಗರವೆಂದು ,ಮಹಾರಾಷ್ಟ್ರದಲ್ಲಿ 'ವರ್ಲಿ'ಯೆಂದೂ ಕರೆದಿದ್ದಾರೆ. ಬಿಹಾರದಲ್ಲಿ ಮಧುಬನಿ,ಒರಿಸ್ಸಾದಲ್ಲಿ ಸೊರಾ ಹೀಗೆ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆ.ಆದರೆ ವಿನ್ಯಾಸದಲ್ಲಿ ಸಾಕಷ್ಟು ವೈವಿಧ್ಯತೆಯಿದೆ. ಕಲಾನಂತರ ಅವು ಪ್ರಾದೇಶಿಕ ನೆಲಮೂಲದ ಜ್ಞಾನದೊಂದಿಗೆ ಬದಲಾವಣೆ ಹೊಂದುತ್ತಾ ಇಂದು ಹಸೆ ಚಿತ್ತಾರಕ್ಕೂ ,ವರ್ಲಿಗೂ ವಿನ್ಯಾಸದಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಮಹಾರಾಷ್ಟ್ರದಲ್ಲಿರುವ ವರ್ಲಿಜನಾಂಗ ಮಧ್ಯಪ್ರದೇಶದಿಂದ ಅಲ್ಲಿಗೆ ವಲಸೆ

ಹೋದವರಾಗಿದ್ದು ಅವರ ಮಾತೃಭಾಷೆ ಈಗಲೂ ಮರಾಠಿ ಅಲ್ಲ ಎನ್ನುವುದು ಗಮನಾರ್ಹ ಅಂಶ. ಅವರು ಕರ್ನಾಟಕ ಮೂಲದವರಾಗಿದ್ದು ಅಂದು ಗೋದಾವರಿ ನದಿವರೆಗೆ ಹಬ್ಬಿದ್ದ ಕನ್ನಡ ನೆಲಮೂಲದವರಾಗಿದ್ದು ಅವರ ಭಾಷೆಯಲ್ಲಿ ಕನ್ನಡದ ಪ್ರಭಾವ ಹೆಚ್ಚಾಗಿದ್ದು ವರ್ಲಿ ಚಿತ್ತಾರ ಮೂಲ ಕರ್ನಾಟಕವೇ ಆಗಿದೆ ಎನ್ನುವುದು ಸಂಶೋದಕ ಬಾಬು ಶಿವಪೂಜಾರ ಅವರ ಅಭಿಮತವಾಗಿದೆ. ನಾನು ಮಹಾರಾಷ್ಟ್ರ ಭಾಗದಲ್ಲಿ ಕ್ಷೇತ್ರ ಅಧ್ಯಯನ ಮಾಡುವಾಗ ಹಾಗು ಅಲ್ಲಿನ ವರ್ಲಿ ಕಲಾವಿದೆ ರಾಖಿ ಸಾಳಂಕಿ, ಭಾರತಿ ಪೌಲ್ಸೆ ಅವರ ಸಂಪರ್ಕದಿಂದ ತಿಳಿದುಕೊಂಡ ಮಾಹಿತಿಯಂತೆ ವರ್ಲಿ ಚಿತ್ತಾರದ ಮೋಟಿಫ್‌ಗಳಿಗೆ ನಾವು ಕನ್ನಡದಲ್ಲಿ ಕರೆಯುವ ಕೆಲವು ಹೆಸರುಗಳನ್ನೆ ಅವರು ಸಹ ಕರೆಯುವ ರೂಢಿಯಿರುವುದು ಗಮನಾರ್ಹ. ಅವರ ಚಿತ್ರದಲ್ಲಿಯೂ ಬಾಸಿಂಗ,ಪಪ್ಪುಳಿ ಮತ್ತಿತರೆ ಕನ್ನಡ ಪದಗಳಿವೆ. ಬುಡಕಟ್ಟು ಸಂಪ್ರದಾಯದ ಸಮುದಾಯಗಳು ಮದುವೆ, ಹಬ್ಬಗಳಿಗೆ ಸಂಪ್ರದಾಯವಾಗಿಯೂ ,ಮನೆಯ ಗೋಡೆ ಅಲಂಕಾರಕ್ಕು ಹಸೆಚಿತ್ತಾರವನ್ನು ಇಂದಿಗೂ ಬಳಸುತ್ತಿರುವುದನ್ನು ಕಾಣುತ್ತೇವೆ.


ಆದಿಮ ಬಂಡೆಚಿತ್ರಕಲೆಗಳ ಕಲಾನಂತರ ವಿಕಾಸವಾದ ಬುಡಕಟ್ಟುಗಳ ಜನಸಂಸ್ಕೃತಿಯ ಚಿತ್ತಾರ ಮಾದರಿಯನ್ನೇ ಮಾದರಿಯಾಗಿಟ್ಟುಕೊಂಡು ಮುಂದೆ ವೈದಿಕ ಪರಂಪರೆಯಲ್ಲಿ ,ಯಜ್ಞಯಾಗಗಳಿಗೆ ಮಂಡಲ ಬರೆಯಲಿಕ್ಕೂ ,ಕೆಲವು ಶಾಸ್ತ್ರಗಳಿಗೂ ಆನಂತರ ಮಾಟ ಮಂತ್ರಗಳ ಕುರಿತು ನಂಬಿಕೆ ಬಲಗೊಂಡಂತೆ ,ನಿಗೂಡ ರಹಸ್ಯಗಳಂತೆ ನಂಬಿಕೆ ಹುಟ್ಟಿಸಲು ಮಂಡಲ ಬರೆಯಲಿಕ್ಕೂ ,ಮತ್ತಿತರ ಕಾರ್ಯಗಳಿಗೆ ಸರಳ ರೇಖಾ ಚಿತ್ರ ವಿನ್ಯಾಸಗಳ ಮಾದರಿ ಬಳಕೆ ಆರಂಭಿಸಿದ್ದು ಕಂಡುಬರುತ್ತದೆ.ವೇದಗಳ ಕಾಲದಲ್ಲಿ ಚಿತ್ರಕಲೆ ಧಾರ್ಮಿಕ ಆಚರಣೆಗಳ ಮೂಲದ ಕಲೆಯಾಗಿ ಹೆಚ್ಚು ಹೆಚ್ಚು ಬಳಸಲಾಗಿದೆ. ಹೀಗೇ ಬುಡಕಟ್ಟು ಜನಜೀವನ ಸಂಸ್ಕೃತಿಯೇ ಅಧಿಕವಾಗಿದ್ದ ಕಾಲಘಟ್ಟದಲ್ಲಿ ಅಂದಿನ ಜನಸಮುದಾಯಗಳ ನೆಲಮೂಲದ ಸರಳ ರೇಖಾ ಚಿತ್ರಕಲೆ ನಾಗರೀಕತೆ ಬೆಳೆದಂತೆ ವಿನ್ಯಾಸದಲ್ಲಿ, ಬಳಕೆಯ ಉದ್ದೇಶದಲ್ಲಿ ಬಹುಆಯಾಮದಲ್ಲಿ ಬೆಳೆಯುತ್ತಾ ಬಂದಿದೆ. ತಲೆಮಾರಿನಿಂದ ತಲೆಮಾರಿಗೆ ಚಿತ್ತಾರ ಕಲೆ ನಲಿವಿಗೂ

,ನೋವಿಗೂ ಬಳಕೆಯಾಗುತ್ತಾ ಜನಮಾನಸದಲ್ಲಿ ಬೆಳೆಯಿತು.ಗೋಡೆ, ಬಾಗಿಲ ಮೇಲಿನ ಚಿತ್ತಾರ, ಮಡಿಕೆ–ಕುಂಭಗಳ ಮೇಲಿನ ಚಿತ್ತಾರ,ಹಚ್ಚೆ ರಂಗೋಲಿಗಳೆಲ್ಲ ಮಹಿಳೆಯರ ಸೌಂದರ್ಯ ಪ್ರಜ್ಞೆಯ ಪ್ರತೀಕವೆಂದೇ ಹೇಳಬಹುದು. ಹಂತಹಂತವಾಗಿ ವಿಕಾಸಗೊಳ್ಳುತ್ತ ಕಲಾತ್ಮಕ ಅಭಿವ್ಯಕ್ತಿಯನ್ನು ಕೊಡುತ್ತಾ ವಿಕಾಸಗೊಂಡಿವೆ. ಮನರಂಜನೆ, ಸೌಂದರ್ಯ ಪ್ರಜ್ಞೆ, ಸಂಪ್ರದಾಯವಷ್ಟೇ ಅಲ್ಲ ನಿತ್ಯ ಬದುಕಿನ ,ಹೊರಜಗತ್ತಿನ ಬಗೆಗಿನ ಹುಡುಕಾಟ ಮತ್ತು ಮಿತಿಗಳನ್ನು ಮೀರುವ ಬದುಕು ಕಟ್ಟಿಕೊಳ್ಳುವ ನಿರಂತರ ಪ್ರಯತ್ನವನ್ನು ಸಹ ಕಾಣಬಹುದು.

ಚಿತ್ರಕಲೆ ಎಂಬುದು ಮಾನವನ ಸಾಮಾಜಿಕ,ಧಾರ್ಮಿಕ ಜೀವನದ ವಿಕಾಸದ ರೂಪದಲ್ಲಿ ನಾವು ಗ್ರಹಿಸಬಹುದು. ಚಿತ್ರಕಲೆ ಹೊಟ್ಟೆ ತುಂಬಿದಾಗ ಹುಟ್ಟಿದ ಅಭಿವ್ಯಕ್ತಿಯಷ್ಟೇ ಅಲ್ಲ ,ಹೊಟ್ಟೆ ಹಸಿದಾಗ ಹುಟ್ಟುವ ಪ್ರಶ್ನೆ, ತಾಕಲಾಟ,ಬವಣೆಗಳ ಚಿತ್ರ ನಿರೂಪಣೆಯೂ ,ಕೆಲವು ಚಿತ್ರಗಳು ಅಗೋಚರ ಶಕ್ತಿಗಳ ಬಗ್ಗೆ ಹೊಂದಿದ್ದ ಭಯದಿಂದ ಹೊರಬರಲು ಕಂಡುಕೊಂಡ ಮಾಧ್ಯಮವೂ ಆಗಿರುತ್ತದೆ. ಉದಾಹರಣೆಯಾಗಿ ಮಂಡಲ ಚಿತ್ರಕಲೆಗಳನ್ನು ಪರಿಶೀಲಿಸಬಹುದು.ಅವು ಅಗೋಚರ ಶಕ್ತಿಗಳ ಕುರಿತಾದ ನಂಬಿಕೆಗಳಿಂದ ಹುಟ್ಟಿದ ಚಿತ್ರಕಲೆಯಾಗಿದೆ. ದೀವರ ಬುಟ್ಟಿ ಚಿತ್ತಾರ ನಿಸರ್ಗ ಆರಾಧನೆ ,ಕೃಷಿಬದುಕಿನ ಅಭಿವ್ಯಕ್ತಿ ಒಳಗೊಂಡಿದೆ. ಜನಪದರ ಚಿತ್ತಾರ ಕಲೆಯನ್ನು ಚಿತ್ರಲಿಪಿಯಲ್ಲಿ ಬರೆದ ಜನಪದರ ಕಲಾ ಚರಿತ್ರೆ ಅಥವಾ ಆತ್ಮಚರಿತ್ರೆ ಸಹ ಎನ್ನಬಹುದು . ಚಿತ್ರಕಲೆ ಭಾವರೂಪಿಯೂ ಹಾಗೂ ಬಣ್ಣಗಳ ಭೌತಿಕರೂಪಿಯೂ ಆಗಿದೆ.

ಸಾಂಪ್ರದಾಯಿಕ ದೇಶೀ ಚಿತ್ರಕಲೆಗಳು ಮತ್ತು ಶಿಷ್ಟಚಿತ್ರ ಕಲೆಗಳು

ಚಿತ್ರಕಲೆಯೂ 64 ರಾಜವಿಧ್ಯೆಗಳಲ್ಲಿ ಒಂದೆನಿಸಿದ ನಂತರ ಮತ್ತಷ್ಟು ವಿಸ್ತಾರವಾಗಿ ಹೊಸ ಹೊಸ ವಿನ್ಯಾಸಗಳಲ್ಲಿ ಬೆಳೆಯುತ್ತಾ ಬಂದಿದೆ.ನಾಗರೀಕತೆ ಬೆಳೆದಂತೆ ಬಣ್ಣಗಳ ಪರಿಕಲ್ಪನೆ



ಬೆಳೆದಂತೆ ಹೊಸ ವಿನ್ಯಾಸಗಳ ಚಿತ್ರಕಲೆಗಳು ಜಗತ್ತಿನೆಲ್ಲೆಡೆ ಬೆಳೆದವು. ಒಂದು ಕಡೆ ನಾಗರೀಕತೆಗೆ ದೂರ ಉಳಿದ ಅರಣ್ಯವಾಸಿ ಬುಡಕಟ್ಟುಗಳು ತಮ್ಮದೇ ಆದ ಆಚರಣೆ, ಸಂಪ್ರದಾಯ ಕಲೆ ರೂಢಿಸಿಕೊಂಡರೆ ,ರಾಜಪ್ರಭುತ್ವ ಬೆಳೆದಂತೆ ನಾಗರೀಕ ಸಮಾಜ ತನ್ನದೇ ಆದ ವಿಕಸಿತ ಹೊಸ ಸಂಪ್ರದಾಯ ,ಆಚರಣೆ ,ಚಿತ್ರಕಲೆ ಕಂಡುಕೊಂಡಂತೆ ಚಿತ್ರಕಲೆಯಲ್ಲಿಯೂ ಬೇರೆ ಬೇರೆ ಮಾದರಿಗಳು ವಿಕಾಸವಾದವು. ರಾಜಪ್ರಭುತ್ವದೊಂದಿಗೆ ಬೆಳೆದು ಬಂದ ಚಿತ್ರಕಲೆಗೂ, ಜನಸಾಮಾನ್ಯರ ಮನೆಯಲ್ಲಿ, ಬುಡಕಟ್ಟು ಜನಜೀವನ ಸಂಸ್ಕೃತಿಯಲ್ಲಿ ಬೆಳೆದು ಬಂದ ಸಾಂಪ್ರದಾಯಿಕ ರೇಖಾಚಿತ್ರಗಳಿಗೂ ಅಜಗಜಾಂತರ ವ್ಯತ್ಯಾಸಗಳು ಹಾಗೆ ಉಳಿದುಕೊಂಡವು. ರಾಜಪ್ರಭುತ್ವದ ಪೋಷಣೆಯಲ್ಲಿ ಬೆಳೆದ ಚಿತ್ರಕಲಾ ಶಾಸ್ತ್ರಗಳು ಜನಸಾಮಾನ್ಯರ ಮನೆಯ ಸಾಂಪ್ರದಾಯಿಕ ರೇಖಾಚಿತ್ರ ಕಲಾವಿದೆಯರ ಮೇಲೆ ಬೀರಿದ ಪ್ರಭಾವ ಕಡಿಮೆ. ಜನಸಾಮಾನ್ಯರು ತಮ್ಮ ಮನೆಗಳಲ್ಲಿ ಆಚರಣೆಯ ಭಾಗವಾಗಿ ತಮ್ಮದೇ ಆದ ಸರಳ ರೇಖೆಗಳ ಚಿತ್ರ ಬರೆಯುವ ಸಂಪ್ರದಾಯವನ್ನು ತಮ್ಮದೇ ಆದ ನೆಲಮೂಲದ ತಾತ್ವಿಕ ನೆಲೆಗಟ್ಟಿನಲ್ಲಿ , ತಮ್ಮದೇ ಆದ ರಸಾಭಿವ್ಯಕ್ತಿಯನ್ನು , ನಾವಿನ್ಯತೆಯನ್ನು ಸಂಯೋಜಿಸುತ್ತ ತಮ್ಮದೇ ಆದ ಪರಿಕಲ್ಪನೆಯಲ್ಲಿ ರಚಿಸುತ್ತಾ ಇಂದಿನವರೆಗೂ ಅದನ್ನೇ ಮುಂದುವರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಕ್ರಿ.ಶ ಎರಡನೇ ಶತಮಾನದಿಂದ ಕ್ರಿ.ಶ ಸುಮಾರು ಹದಿನೈದನೇ ಶತಮಾನದ ನಡುವೆ ರಚಿತವಾದ ವಿಷ್ಣುಧರ್ಮೋತ್ತರ ಪುರಾಣ,ವಾತ್ಸಾಯನನ ಕಾಮಸೂತ್ರ ,ವಿನಯ ಪೀಠಕ, ಬೃಹತ್ ಸಂಹಿತೆ ಗ್ರಂಥಗಳಲ್ಲಿ ಚಿತ್ರಕಲೆಯ ಮಹತ್ವ, ಶಾಸ್ತ್ರಬದ್ಧ ನಿಯಮಗಳು,ಪ್ರಮಾಣ, ಚಿತ್ರಪರಿಕರಗಳ ತಾಯಾರಿಕೆ ಇತ್ಯಾದಿ ವಿಷಯಗಳ ಮಾಹಿತಿ ಅಕ್ಷರ ರೂಪದಲ್ಲಿ ಸಿಗುತ್ತದೆ. ಆದರೆ ಇದ್ದಕ್ಕಿಂತ ಪೂರ್ವದಲ್ಲೇ ಭಾರತದಾದ್ಯಂತ ವಿವಿಧ ಭಾಗದಲ್ಲಿ ವಿವಿಧ ಬಗೆಯ ಚಿತ್ರ ಬರೆಯುವಿಕೆ ಇದ್ದದ್ದು ಕಂಡುಬರುತ್ತದೆ.

ಚಿತ್ರಕಲೆಯು ಕಲೆಗಳಲ್ಲಿ ಶ್ರೇಷ್ಠವಾದದ್ದು. ಧರ್ಮ, ಅರ್ಥ, ಕಾಮ, ಮೋಕ್ಷ ಚತುರ್ವಿದ ಪುರುಷಾರ್ಥಗಳನ್ನು ಕೊಡಬಲ್ಲುದು ಎಂದು ವಿಷ್ಣುಧರ್ಮೋತ್ತರ ಪುರಾಣದಲ್ಲಿ ಹೇಳಲಾಗಿದೆ. ದೇಶೀ ಚಿತ್ರಕಲೆಯಾದ ಹಸೆ ಚಿತ್ತಾರದಲ್ಲೂ ಧರ್ಮ ,ಆರ್ಥ,ಕಾಮ,ಮೋಕ್ಷವಿದೆ.ಪ್ರಮಾಣಬದ್ಧ ವಿನ್ಯಾಸಗಳನ್ನು ,ಷಡಂಗಗಳನ್ನು ,ಬಣ್ಣವೈವಿಧ್ಯತೆಯನ್ನು ಹೊಂದಿರುವ ಶಿಷ್ಟ ಚಿತ್ರಕಲೆಯು ಸಾಂಪ್ರದಾಯಿಕ ದೇಶೀಕಲೆಗಳಿಗಿಂತ ಭಿನ್ನವಾದದ್ದು ಮತ್ತು ಆಧುನಿಕವಾದದ್ದು. ಬಹು ಆಯಾಮಗಳನ್ನು ಸಹ ಹೊಂದಿರುತ್ತದೆ. ಆದರೆ ಸಾಂಪ್ರದಾಯಿಕ ದೇಶಿ ಚಿತ್ರಕಲೆಗಳು ಆದಿಮ ಚಿತ್ರಕಲಾ ಮೂಲದ ವಿಕಸಿತ ರೂಪಗಳು.ಅವು ಸರಳ ರೇಖೆಗಳ ಸಂಯೋಜನೆಯಾಗಿರುತ್ತವೆ. ಶಿಷ್ಟಚಿತ್ರಗಳಂತೆ ಪೂರ್ಣವಾಗಿ ಸಾದೃಶ್ಯತೆ ,ಬಾವಬದ್ದತೆ, ಲಾವಣ್ಯ ಯೋಜನೆ ,ಪ್ರಮಾಣ ಬದ್ದತೆ ್ನ ಹೊಂದಿರದ ಸಾಂಪ್ರದಾಯಿಕ ಆಚರಣೆ ಮೂಲದ ಚಿತ್ರಕಲೆ. ಅವು ನೈಸರ್ಗಿಕವಾದ ಮೂಲಬಣ್ಣಗಳಾದ ಕೆಂಪು,ಕಪ್ಪು,ಬಿಳಿ,ಹಸಿರು,ಹಳದಿ ಬಣ್ಣಗಳಿಗೆ ಮಾತ್ರ ಸೀಮಿತವಾದವು. ದೇಶೀ ಚಿತ್ರಕಲೆಯ ವಿಕಸಿತ ರೂಪವೇ ಶಿಷ್ಟ ಚಿತ್ರಕಲೆ. ವೇದಗಳ ಕಾಲದಲ್ಲಿ ಚಿತ್ರಕಲೆ ಧಾರ್ಮಿಕ ಸ್ವರೂಪ ಪಡೆದು ಶಿಷ್ಟ ಸಂಪ್ರದಾಯದ ಪರಿಧಿಯಲ್ಲಿ ರೂಪುಗೊಳ್ಳುತ್ತಾ ಧಾರ್ಮಿಕ ತತ್ವಗಳನ್ನು ಸಾರಲು ಪ್ರಚಾರಕ್ಕೆ ಚಿತ್ರಕಲೆ ಬಳಕೆ ಹೆಚ್ಚಾದದ್ದು ಕಂಡುಬರುತ್ತದೆ. ಧರ್ಮಪ್ರಚಾರ ಎಂಬುದು ಸಾಮ್ರಾಜ್ಯ ವಿಸ್ತರಣೆ,ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಲು ಆರಂಭಿಸಿದ ಮೇಲೆ ಧರ್ಮಬೋದಕರು,ರಾಜಪ್ರಭುತ್ವ ಧಾರ್ಮಿಕ ತತ್ವ ವಿಚಾರಗಳನ್ನು ಅನಕ್ಷರಸ್ತರಿಗೂ ಸಶಕ್ತವಾಗಿ ತಲುಪಿಸಲು ಮಾಧ್ಯಮವಾಗಿ ಚಿತ್ರಕಲೆಯನ್ನು

ಬಳಸಿಕೊಳ್ಳಲಾರಂಭಿಸಿದಂತೆ ಶಿಷ್ಟ ಚಿತ್ರಕಲೆ ಪರಂಪರೆ ಬೆಳೆದಿದೆ. ಅಜಂತಾ ಎಲ್ಲೋರಾದ ಬಿತ್ತಿಚಿತ್ರಗಳು ಈಗಲೂ ವಿಶ್ವವನ್ನೇ ಬೆರಗುಗೊಳಿಸುತ್ತಿವೆ.

ಅಜಂತಾದ ಗುಹೆಗಳಲ್ಲಿ ಬುದ್ದನ ಜಾತಕ ಕತೆಗಳ ಚಿತ್ರಗಳನ್ನು ಈಗಲೂ ಕಾಣಬಹುದು. ಕ್ರಿ.ಪೂ 2ನೇ ಶತಮಾನದಿಂದ 4ನೇ ಶತಮಾನದವರೆಗಿನ ಕರ್ನಾಟಕದ ಬಾದಾಮಿಯ ಗುಹಾಂತರ ಚಿತ್ರಗಳು,ಲೇಪಾಕ್ಷಿ,ತಂಜಾವೂರಿನ ಚಿತ್ರಗಳನ್ನು ಕಾಣಬಹುದು.ಆನಂತರ ಭಾರತದಲ್ಲಿ ಪರಕೀಯರ ಆಕ್ರಮಣ ,ಆಡಳಿತ ಹೆಚ್ಚಾದಂತೆ ಭಾರತೀಯ ಚಿತ್ರಕಲೆಯಲ್ಲಿ ಪರ್ಶಿಯನ್ ,ಮೊಘಲ್ ಶೈಲಿಗಳು ದಟ್ಟಪ್ರಭಾವ ಬೀರಿದವು.ಇಂದು ಕಾಣುವ ದಖನ್ ಚಿತ್ರ ಶೈಲಿ, ಪಹಾಡಿ,ರಾಜಸ್ತಾನಿ,ಗುಲೇರ್, ಕಂಗ್ರಾ,ಬಸೋಲಿ ಶೈಲಿಗಳಲ್ಲೂ ವಿದೇಶಿ ಚಿತ್ರಶೈಲಿಗಳ ಪ್ರಭಾವ ಕಂಡುಬರುತ್ತದೆ. ನಮ್ಮ ದೇಶದ ರಾಜಪ್ರಭುತ್ವವೂ ವಿದೇಶೀ ಶೈಲಿಗಳಿಗೆ ಹೆಚ್ಚು ಮನ್ನಣೆ ನೀಡಿದ್ದು ಕಂಡುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಾಗೂ ಮೈಸೂರು ಸಾಮ್ರಾಜ್ಯದ ಕಾಲದಲ್ಲಿನ ರಾಜಪ್ರಭುತ್ವಗಳು ಪೋಷಿಸಿದ ಚಿತ್ರಕಲೆಯಲ್ಲಿ ದಟ್ಟವಾಗಿ ಬೇರೆ ಬೇರೆ ಚಿತ್ರಕಲಾ ಶೈಲಿಗಳ ಪ್ರಭಾವ ಕಂಡುಬರುತ್ತದೆಯಾದರೂ ಸಾಂಪ್ರದಾಯಿಕ ದೇಶೀ ಚಿತ್ರಕಲೆಗಳು ಅಂತಹ ಯಾವ ಪ್ರಭಾವಕ್ಕೂ ಒಳಗಾಗದೆ ತಲೆಮಾರಿನಿಂದ ತಲೆಮಾರಿಗೆ ಸಾಂಪ್ರದಾಯಿಕ ಪರಿಧಿಯಲ್ಲೆ ಮುಂದುವರಿದಿರುವುದು ಕಂಡುಬರುತ್ತದೆ.

ಕ್ರಿ.ಶ.1850 ರಿಂದ 1950 ರವರೆಗಿನ ಅವಧಿಯಲ್ಲಿ ಬ್ರಿಟೀಷರು ಮದ್ರಾಸ್.ಕಲ್ಕತ್ತಾ, ಮುಂಬೈ,ಮೈಸೂರಿನಲ್ಲಿ ಪ್ರಾರಂಭಿಸಿದ ಕೈಗಾರಿಕಾ ತರಭೇತಿ ಶಾಲೆಗಳಲ್ಲಿ ಪಾಶ್ಚಾತೀಕರಣ ಚಿತ್ರಕಲಾ ಶೈಲಿಯ ತರಬೇತಿ ಆರಂಭಿಸಿತ್ತು.ಭಾರತೀಯ ರೇಖಾಪ್ರಧಾನ ಚಿತ್ರಗಳನ್ನು ಅನರ್ಥ ರೇಖಾವಿಲಾಸ ಎಂದು ಜರಿದ ಬ್ರಿಟೀಷರು ಗ್ರೀಕೋರೋಮನ್ ಶೈಲಿಯ ರಿಯಲಿಸ್ಟಿಕ್ ಅಥವಾ ವಿಕ್ಟೋರಿಯನ್ ಅಕಾಡೆಮಿಕ್ ಎನ್ನಬಹುದಾದ ಶೈಲಿ ಪರಿಚಯಿಸಿ ಭಾರತೀಯ ಶಿಷ್ಟ ಚಿತ್ರಕಲೆಗೆ ಹೊಸಬದಲಾವಣೆ ತಂದರು.ಕೆಲವೇ ಸಮುದಾಯಕ್ಕೆ ಸೀಮಿತವಾಗಿದ್ದ ಚಿತ್ರಕಲೆಯನ್ನು ಬ್ರೀಟೀಷರು ಕಲಿಯಲು ಬಯಸುವ ಎಲ್ಲರಿಗೂ ಮುಕ್ತ ಅವಕಾಶ ನೀಡಿ ಹೊಸಪಲ್ಲಟಕ್ಕೂ ಕಾರಣರಾದರು. ಆದರೆ ಇದಾವುದರ

ನೆರಳನ್ನೂ ಸೋಕಿಸಿಕೊಳ್ಳದೆ ,ಬದಲಾವಣೆಯ ಪರಿವೆಯೂ ಇಲ್ಲದೆಂತೆ ತನ್ನದೇ ವಿನ್ಯಾಸ ತನ್ನದೇ ಸಂಪ್ರದಾಯದ ಪರಿಧಿಯಲ್ಲೇ ಉಳಿದುಕೊಂಡು ಬಂದದ್ದು ಸಾಂಪ್ರದಾಯಿಕ ದೇಶೀ ಚಿತ್ರಕಲೆ. ವಿದೇಶೀ ಚಿತ್ರಕಲೆಯ ಯಾವ ಶೈಲಿಯನ್ನೂ ಅನುಕರಣೆ ಮಾಡದೆ ತಮ್ಮದೇ ಅಂತಃಸತ್ವ ಪೋಷಿಸಿಕೊಂಡು ಇಂದಿನ ಜಾಗತಿಕಯುಗದಲ್ಲೂ ಉಳಿದದ್ದೆ ಹೆಚ್ಚುಗಾರಿಕೆ. ಈ ಹೆಚ್ಚುಗಾರಿಕೆ ಆ ದೇಶೀ ಚಿತ್ತಾರ ಶೈಲಿಯನ್ನು ತಮ್ಮ ಜೀವನದೊಂದಿಗೇ ಪರಂಪರೆಯಿಂದ ಪರಂಪರೆಗೆ ಉಳಿಸಿಕೊಂಡು ಬಂದ ಬುಡಕಟ್ಟು ಸಮುದಾಯಗಳಿಗೆ ಸಲ್ಲುತ್ತದೆ. ಕರ್ನಾಟಕದ ಮಲೆನಾಡಿನಲ್ಲಿ ಪ್ರಧಾನವಾಗಿ ದೀವರು ಸಮುದಾಯ ಪ್ರತಿ ಮನೆಮನೆಯಲ್ಲೂ ಕಡ್ಡಾಯವಾಗಿ ಆಚರಣೆಯ ಭಾಗವಾಗಿ ದೇಶೀ ಚಿತ್ರಶೈಲಿಯಾದ ಹಸೆ ಚಿತ್ತಾರ ಉಳಿಸಿಕೊಂಡು ಬಂದಿರುವುದು ಅವರ ಸಾಂಪ್ರದಾಯಿಕ ಬದ್ದತೆಗೆ, ಸೌಂದರ್ಯಪ್ರಜ್ಞೆಗೆ ಸಾಕ್ಷಿ.ಕರ್ನಾಟಕದಲ್ಲಿ ವಿರಳವಾಗಿ ಅಲ್ಲಲ್ಲಿ ಕೆಲವು ಸಮುದಾಯಗಳಲ್ಲಿ ಮದುವೆ ,ಹಬ್ಬಗಳ ಶಾಸ್ತ್ರಕ್ಕೆ ಸಂಬಂದಿಸಿದಂತೆ ಕೆಲವು ಸರಳ ಹಸೆಚಿತ್ರ,ಹಲಿ,ಹಸಗರ ಶೇಡಿ ,ರಂಗೋಲಿ ಮತ್ತಿತರ ಸಾಂಪ್ರದಾಯಿಕ ದೇಶೀ ಚಿತ್ರಕಲಾ ಮಾದರಿಗಳಿವೆ. ಮಹಾರಾಷ್ಟ್ರದ ವರ್ಲಿ ಚಿತ್ರಕಲೆ,ಬಿಹಾರದ ಮಧುಬನಿ,ಒರಿಸ್ಸಾದ ಸೊರಾ ಅಪ್ಪಟ ದೇಶೀ ಸಾಂಪ್ರದಾಯಿಕ ಚಿತ್ರಕಲೆಗಳಾಗಿದ್ದು ಇಂದಿಗೂ ಜಗತ್ತಿನ ಚಿತ್ರಕಲಾವಿದರ ಗಮನಸೆಳೆಯುತ್ತಲೇ ಇವೆ. ದೇಶೀ ಚಿತ್ರಕಲಾ ಪ್ರದರ್ಶನಗಳು ಸಹ ನಡೆಯುತ್ತಿವೆ. ಜವಳಿ ಉಧ್ಯಮಗಳು, ಡಿಜಿಟಲ್ ಮಾಧ್ಯಮಗಳು,ಅನಿಮೇಶನ್ಗಳಲ್ಲಿಯೂ ಇಂದು ದೇಶೀ ಸಾಂಪ್ರದಾಯಿಕ ಚಿತ್ರಕಲೆಗಳನ್ನು ಬಳಕೆ ಮಾಡಲಾಗುತ್ತಿದೆ.

ಜನಪದರ ಆಚರಣೆಗಳ ಮೂಲದ, ಸೌಂದರ್ಯಪ್ರಜ್ಞೆಯ ವರ್ಣರೇಖಾ ರೂಪವೇ ದೇಶೀ ಸಾಂಪ್ರದಾಯಿಕ ಚಿತ್ತಾರ ಕಲೆಯಾಗಿದೆ. ಜನಪದರ ಚಿತ್ರಕಲೆಯಲ್ಲಿ ಸಂಪ್ರದಾಯ ,ಸೌಂದರ್ಯವೇ ಮೂಲಘಟಕವಾಗಿರುತ್ತದೆ. ರೇಖೆಗಳ ಮೂಲಕ ಅಭಿವ್ಯಕ್ತಿ ಪ್ರಧಾನವಾಗಿರುತ್ತದೆ. ಸಮಗ್ರ ಜನಪದ ದೇಶೀ ಚಿತ್ತಾರ ಕಲೆಗಳನ್ನು ಸೌಂದರ್ಯ ಮೂಲ, ಪ್ರಯೋಜನ ಮೂಲ, ಮನರಂಜನೆ ಮೂಲ, ಧಾರ್ಮಿಕ ಆಚರಣೆಗಳ ಮೂಲ, ವೃತ್ತಿಮೂಲಗಳೆಂದು

ವರ್ಗೀಕರಿಸಬಹುದು.ಜನಪದ ಚಿತ್ರಕಲೆಯಲ್ಲಿ ಜನಪದರ ದಟ್ಟವಾದ ಸಾಂಸ್ಕೃತಿಕ ಬದುಕು ,ನಂಬಿಕೆ ಇರುವುದನ್ನು ಕಾಣುತ್ತೇವೆ. ಶಿಷ್ಟ ಚಿತ್ರಕಲೆಯಲ್ಲಿ ಬೆರಳಣಿಕೆಯಷ್ಟು ಮಹಿಳೆಯರಿದ್ದರೆ, ಜನಪದರ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಮಹಿಳೆಯರದೇ ಸಿಂಹಪಾಲು. ಜನಪದರ ಚಿತ್ತಾರ ಕಲೆ ಸಂಪ್ರದಾಯನಿಷ್ಟವಾಗಿ ಸರಳ ರೂಪದಲ್ಲಿದ್ದರೆ ,ಶಿಷ್ಟಚಿತ್ರಕಲೆ ಸಂಕೀರ್ಣವಾಗಿ ಕ್ಲಿಷ್ಟತೆಯನ್ನು ,ಆಧುನಿಕ ವರ್ಣವಿನ್ಯಾಸವನ್ನು ಹೊಂದಿರುತ್ತದೆ.ಕರ್ನಾಟಕದ ದೇಶೀ ಚಿತ್ರಕಲೆಯಾದ ಹಸೆ ಚಿತ್ತಾರ ಗೋಡೆ ಅಲಂಕಾರಕ್ಕಾಗಿಯಲ್ಲದೆ ಮುಖ್ಯವಾಗಿ ಮದುವೆ, ಹಬ್ಬಗಳ ಆಚರಣೆಯ ವಿಧಿ ವಿಧಾನಗಳ ಭಾಗವಾಗಿ ಪರಂಪರೆಯಿಂದ ಪರಂಪರೆಗೆ ಉಳಿಸಿಕೊಂಡು ಬರಲಾಗಿದೆ.ಕಾಲಕಾಲಕ್ಕೆ ಸಾಕಷ್ಟು ಬದಲಾವಣೆಯೊಂದಿಗೆ ಸಾಂಪ್ರದಾಯಿಕತೆಯನ್ನು ಬಿಟ್ಟುಕೊಡದೆ ವೈವಿಧ್ಯಮಯ ವಿನ್ಯಾಸದಲ್ಲಿ ವಿಕಾಸವಾಗುತ್ತ ಬೆಳೆದಿದೆ.ತನ್ನದೇ ಸಾಂಪ್ರದಾಯಿಕ ದೇಶೀ ಚಿತ್ರ ವಿಶಿಷ್ಟತೆಯನ್ನು ಈಗಲೂ ಹಾಗೇ ಉಳಿಸಿಕೊಂಡಿರುವುದನ್ನು ಹಳ್ಳಿಗಳಲ್ಲಿ, ಬುಡಕಟ್ಟು ಜನಸಂಸ್ಕೃತಿಯಲ್ಲಿ ಹೆಚ್ಚಾಗಿ ಈಗಲೂ ಕಾಣಬಹುದು.

ಕರ್ನಾಟಕದಲ್ಲಿ ಜನಪದರ ದೇಶಿಚಿತ್ರ ಕಲಾ ಪರಂಪರೆ

ಕರ್ನಾಟಕ ದೇಶೀ ಚಿತ್ರಕಲಾ ಪರಂಪರೆಯ ಮೂಲವನ್ನು ಕರ್ನಾಟಕದಲ್ಲಿ ಕಾಣಸಿಗುವ ಆದಿಮ ಬಂಡೆ ಚಿತ್ರಕಲೆಗಳಲ್ಲಿಯೇ ಗುರುತಿಸಬಹುದು. ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕ ಭಾಗದ ತುಂಗಾ ಭದ್ರಾ ನದಿ ತೀರದ ರಾಯಚೂರು, ಕೊಪ್ಪಳ ಮತ್ತಿತರ ಕೆಲವು ಪ್ರದೇಶಗಳಲ್ಲಿ ಹಾಗೂ ತುಂಗಾ ನದಿ ತೀರದ ಶಿವಮೊಗ್ಗ,ಚೆನ್ನಗಿರಿಯ ಕೆಲವು ಪ್ರದೇಶಗಳಲ್ಲಿ ಆದಿಮ ಚಿತ್ತಾರ ಕಲೆಗಳ ಕುರುಹುಗಳು ಕಾಣಸಿಗುತ್ತವೆ.(ವಿವರಗಳಿಗೆ ಮೋಹನ್ ಆರ್ ಅವರ ಕರ್ನಾಟಕ ಆದಿಮ ಚಿತ್ರಕಲೆ ಕೃತಿ ನೋಡಬಹುದು) ಅಂದು ಆದಿಮ ಬುಡಕಟ್ಟುಗಳು ಕಂಡುಕೊಂಡ ಚಿತ್ತಾರ ಮಾದರಿಗಳೆ ಮುಂದೆ ಕಾಲಾನಂತರ ಬೇರೆ ಬೇರೆ ಪ್ರದೇಶಗಳಲಿ ಹರಿದು ಹಂಚಿಹೋದ ಮಾನವಕುಲವು ತಮ್ಮದೇ ಆದ ನೆಲಮೂಲದ ಜ್ಞಾನದೊಂದಿಗೆ ಬೇರೆ ಬೇರೆ ಕಲಾ ಮಾದರಿಗಳನ್ನು ಬೇರೆ ಬೇರೆ ಸಂಧರ್ಭಗಳಿಗೆ, ಉದ್ದೇಶಿತ ಆಚರಣೆಗಳಿಗೆ ಸೃಜಿಸಿಕೊಳ್ಳುತ್ತಾ

ಸಾಗಿ ಬಂದಿದೆ. ಬುಡಕಟ್ಟು ಬದುಕಿನ ನೆಲಮೂಲದ ಜ್ಞಾನದ ಆಚರಣೆಗಳ ಭಾಗವಾಗಿ ಅಭಿವ್ಯಕ್ತಪಡಿಸುತ್ತಾ ಕಂಡುಕೊಂಡ ವಿಶಿಷ್ಟ ಬಗೆಯ ವಿನ್ಯಾಸದ ಚಿತ್ತಾರ ಮಾದರಿಗಳಲ್ಲಿ ಹಸೆಚಿತ್ತಾರ ವಿಶಿಷ್ಟವಾದದ್ದು. ಕರ್ನಾಟಕದ ಹಲವು ಭಾಗದಲ್ಲಿ ಇಂದಿಗೂ ವಿರಳವಾಗಿ ಅಲ್ಲಲ್ಲಿ ಹಬ್ಬಗಳಿಗೆ ವಿವಿಧ ರೇಖಾ ವಿನ್ಯಾಸಗಳ ಚಿತ್ರಬಿಡಿಸುವಿಕೆ ಹಳ್ಳಿಗಳಲ್ಲಿ ಕಂಡುಬರುತ್ತದೆ. ಅವೆಲ್ಲವೂ ದೇಶೀ ಚಿತ್ರಕಲೆಯೆಂದೇ ಪರಿಗಣಿಸಬಹುದು. ರಂಗೋಲಿ, ಶೇಡಿ,ಹಲಿ ,ಹಸಗರ ಕಾವಿ,ಮಂಡಲ ಕಲೆ ಸಹ ಹಸೆಚಿತ್ತಾರದಂತೆಯೇ ಕರ್ನಾಟಕದ ಹಲವೆಡೆ ಆಚರಣೆಗಳಲ್ಲಿ ಕಂಡುಬರುವ ಸಾಂಪ್ರದಾಯಿಕ ದೇಶೀ ಚಿತ್ರ ಕಲೆಗಳಾಗಿವೆ.

ಭಾರತದ ಜನಪದೀಯ ಚಿತ್ತಾರ ಕಲಾ ಪರಂಪರೆಯಲ್ಲಿ ಮಹಾರಾಷ್ಟ್ರದ ಭಾಗದಲ್ಲಿ ಜನಜನಿತವಾಗಿರುವ ಅಲ್ಲಿನ ಬುಡಕಟ್ಟು ವರ್ಗಗಳ ಮೂಲ ಕಲೆಯಾದ ವರ್ಲಿ ಕಲೆ ,ಬಿಹಾರದ ಮಧುಬನಿ,ಗೋವಾದ ಕಾವಿ ಕಲೆಯಂತೆಯೇ ಕರ್ನಾಟಕದ ಮಲೆನಾಡು ಭೂಬಾಗದಲ್ಲಿ ಹಸೆ ಚಿತ್ತಾರ ಪ್ರಮುಖ ದೇಶೀ ಚಿತ್ತಾರ ಕಲೆಯಾಗಿದೆ. ಇಂದಿಗೂ ಮಲೆನಾಡಿನ ಶಿವಮೊಗ್ಗ ಉತ್ತರ ಕನ್ನಡಜಿಲ್ಲೆಯ ಭಾಗದ ದಟ್ಟ ಅರಣ್ಯದಲ್ಲಿ ಮಾತ್ರ ವಾಸವಿದ್ದ ದೀವರ ಸಮುದಾಯದ ಪ್ರತಿ ಮನೆಮನೆಯಲ್ಲಿ ಪ್ರಧಾನವಾಗಿ ಮದುವೆ, ಹಬ್ಬಗಳ ಆಚರಣೆಯ ಭಾಗವಾಗಿ ಕಂಡುಬರುವ ಹಸೆ ಚಿತ್ತಾರ ಕಲೆ ವಿನ್ಯಾಸ ಮತ್ತು ಆಚರಣೆಗಳ ಅಂತಃಸತ್ವ ,ದೃಷ್ಟಿಕೋನದಿಂದ ಅತಿ ವಿಶಿಷ್ಟ ಬಗೆಯ ಬುಡಕಟ್ಟು ಜನಗಳ ನೆಲಮೂಲದ ಜ್ಞಾನವಾಗಿದೆ. ಕರ್ನಾಟಕದ ವಿವಿಧ ಬುಡಕಟ್ಟು ಜನಸಂಸ್ಕೃತಿ ಸಮುದಾಯಗಳಲ್ಲಿ ವಿಭಿನ್ನ ಮಾದರಿಯ ಸಾಂಪ್ರದಾಯಿಕ ಚಿತ್ತಾರ ಬರೆಯುವಿಕೆ ರೂಢಿಯಲ್ಲಿದೆ. ಧಾರ್ಮಿಕ ಆಚರಣೆಗಳಲ್ಲಿ ಮಂಡಲ ಬರೆಯುವಿಕೆ ,ಕಾವಿಚಿತ್ರಕಲೆ ಸಹ ದೇಶೀ ಚಿತ್ತಾರ ಕಲೆಯ ಭಾಗವೇ ಆಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ದೀವರ ಸಮುದಾಯ ಹಾಗೂ ಕರೆಒಕ್ಕಲಿಗರು, ಹಾಲಕ್ಕಿಗಳು,ಮಡಿವಾಳರು,ಹವ್ಯಕರು,ಮೊಘವೀರರು, ಮತ್ತಿತರ ವಿವಿಧ ಸಮುದಾಯದಲ್ಲಿ ವಿವಿಧ ಸಂಪ್ರದಾಯಗಳ ಚಿತ್ತಾರ ಮಾದರಿ ಬರೆಯುವಿಕೆ ಈಗಲೂ ಕಂಡುಬರುತ್ತದೆ. ಮಲೆನಾಡು, ಚಿಕ್ಕಮಂಗಳೂರು .ಕರಾವಳಿ ತೀರದಲ್ಲೂ ಹಸಗರ, ಹಲಿ ,ಶೇಡಿ ,ಕಾವಿ ಚಿತ್ತಾರ ಮಾದರಿಗಳಿವೆ. ಹಚ್ಚೆ,ರಂಗವಲ್ಲಿ ಚಿತ್ರಕಲೆಗಳು

ಸಹ ಕರ್ನಾಟಕ ಜನಪದರ ಆದಿಮ ರೇಖಾ ಶೈಲಿಯಿಂದ ವಿಕಾಸವಾದ ನೆಲಮೂಲದ ದೇಶೀ ಚಿತ್ರಕಲೆಗಳಾಗಿ ಇಂದಿಗೂ ಉಳಿದು ಬೆಳೆದಿವೆ. ವಿವಿಧ ಶಿಷ್ಟಕಲಾ ಶೈಲಿಗಳ ನಡುವೆಯೂ ವಿಶಿಷ್ಟ ಚಿತ್ರಕಲೆಗಳಾಗಿ ಕರ್ನಾಟಕ ದೇಶೀ ಚಿತ್ರಕಲೆಗಳು ತಮ್ಮ ಸಾಂಪ್ರದಾಯಿಕ ಮಹತ್ವ ಉಳಿಸಿಕೊಂಡಿವೆ.



ಶಿವಮೊಗ್ಗದ ಕೆಲವು ತಾಲ್ಲೂಕುಗಳಲ್ಲಿ ಕಂಡುಬರುವ ಮದುವೆ ಸಂಪ್ರದಾಯಯದ ಹಸೆಚಿತ್ತಾರಗಳು

ಅಧ್ಯಾಯ – 3

ಹಸೆ ಚಿತ್ತಾರ

ಹಸೆ ಚಿತ್ತಾರ ಪದದ ಶಬ್ದೋತ್ಪತ್ತಿ ಮತ್ತು ಅರ್ಥ

ಹಸೆ ಚಿತ್ತಾರ ಪದವು ಎರಡು ಪದಗಳಿಂದ ಕೂಡಿದೆ. ಹಸೆ ಮತ್ತು ಚಿತ್ತಾರ ಎರಡೂ ಬೇರೆ ಬೇರೆ ಪದಗಳೇ ಆದರೂ ಎರಡೂ ಪದಗಳು ಚಿತ್ರಕಲೆ ಎಂಬ ಅರ್ಥವನ್ನೇ ಧ್ವನಿಸುತ್ತವೆ. ಆದರೂ ರೂಢಿಗತವಾಗಿ ಮಲೆನಾಡಿನಲ್ಲಿ ಹಸೆಚಿತ್ತಾರ ಎನ್ನುವ ಹೆಸರು ಜನಜನಿತವಾಗಿದೆ. ಮಲೆನಾಡಿನ ಗ್ರಾಮೀಣ ಭಾಗದಲ್ಲಿ ಹಿಂದಿನಿಂದ'ಲೂ ಕಲೆ,ಚಿತ್ರ,ರಂಗೋಲಿ ಎನ್ನುವ ಅರ್ಥದಲ್ಲಿ ಹಸೆ ಎನ್ನುವ ಕನ್ನಡ ಪದ ಬಳಕೆಯಿದೆ. ಅಲ್ಲದೇ ಈಚಲ ಗರಿಗಳಿಂದ ಮಾಡಿದ ಚಾಪೆಗೆ ಸಹ ಮಲೆನಾಡಿನ ಗ್ರಾಮೀಣ ಭಾಗದಲ್ಲಿ ‘ಹಸೆ’ ಎನ್ನುವರು. ಈಚಲ ಗರಿಗಳಿಂದ ಹಸೆ ಹೆಣೆಯುವುದೂ ಸಹ ಒಂದು ಕಲೆಯೇ ಆಗಿದೆ.



ಈಚಲ ಗರಿಗಳ ಹಸೆಯಲ್ಲಿಯೂ ಹಸೆಚಿತ್ತಾರ ವಿನ್ಯಾಸದಲ್ಲೇ ಬಣ್ಣಬಣ್ಣದ ಹಸೆ (ಚಾಪೆ) ಹೆಣೆಯುವುದೂ ಸಹ ಮಲೆನಾಡಿನ ಸ್ತ್ರೀಯರ ಕರಕುಶಲ ಕಲೆಯಾಗಿದೆ. ಈಚಲ ಗರಿಗಳಿಗೆ ಬಣ್ಣ ಹಾಕಿ , ಬಣ್ಣದ ಚಿತ್ತಾರ ವಿನ್ಯಾಸದಲ್ಲಿ ಚಾಪೆ ಹೆಣೆಯುವುದರಿಂದಲೇ ಚಾಪೆಗೂ ಹಸೆ ಎಂದು ಕರೆಯುವ ರೂಢಿ ಬಂದಿರಬಹುದು ಎಂದು ಹಿರಿಯರು ಮಾತಿನಿಂದ ತಿಳಿದುಬರುತ್ತದೆ.

ನೆಲಚಿತ್ತಾರಗಳಿಗೆ ರಂಗೋಲಿ ಎನ್ನುವ ಪದಕ್ಕಿಂತ ಮೊದಲು ಹಸೆ ಮತ್ತು ಚಿತ್ತಾರ ಎನ್ನುವ ಪದವೇ ಕನ್ನಡ ನೆಲಮೂಲದ ಪದವಾಗಿ ಗ್ರಾಮೀಣ ಭಾಗದಲ್ಲಿ ರೂಢಿಯಲ್ಲಿತ್ತು. ಚಿತ್ತಾರ ಎನ್ನುವ ಪದವು ಸಹ ಕನ್ನಡ ನೆಲಮೂಲದ ಜನಪದರ ರೂಢಿಗತ ಪದವಾಗಿದೆ. ಸಂಸ್ಕೃತ ಮೂಲದ ‘ಚಿತ್ರ’ ಎನ್ನುವ ಪದದ ಅರ್ಥವನ್ನೇ ಸೂಚಿಸುವ ಕನ್ನಡ ನೆಲಮೂಲದ ಪದವೇ ಚಿತ್ತಾರ. ಮದುವೆ ಶಾಸ್ತ್ರಗಳಲ್ಲಿ ಕಂಡುಬರುವ ಹಸೆ ಶಾಸ್ತ್ರದಲ್ಲಿ ಕೆಲವು ಭಾಗದಲ್ಲಿ ನೆಲಚಿತ್ರ ಬರೆಯುವ ಸಂಪ್ರದಾಯವಿದೆ. ಕೆಲವು ಕಡೆ ನೆಲಚಿತ್ರ ಮತ್ತು ಗೋಡೆ ಚಿತ್ರ ಸಹ ಬರೆಯು ಸಂಪ್ರದಾಯವಿದ್ದು ಅದನ್ನು ಸಹ ಹಸೆ ,ಹಸೆಗೋಡೆ ಶಾಸ್ತ್ರ ಎನ್ನುವರು. ಈ ಹಸೆ ಶಾಸ್ತ್ರ ,ಸಂಪ್ರದಾಯ ಮೂಲದ ವೈವಿಧ್ಯಮಯ ರೇಖಾ ಚಿತ್ತಾರವನ್ನೇ ಹಸೆ ಚಿತ್ತಾರ ಎಂದು ಕರೆಯುವುದು ಮಲೆನಾಡಿನಲ್ಲಿ ರೂಢಿಗತವಾಗಿದೆ.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿನ್ಯಾಸದ ಸಾಂಪ್ರದಾಯಿಕ ದೇಶಿ ಚಿತ್ರಕಲೆಗಳಿದ್ದು ಹಲಿ,ಹಸಗರ,ಶೇಡಿ,ಮಂಡಲ ,ಕಾವಿ ಕಲೆ ಸಹ ಬೇರೆ ಬೇರೆ ಸಮುದಾಯದಲ್ಲಿವೆ. ಬಣ್ಣದ ಪುಡಿಯಿಂದ ನೆಲದ ಮೇಲೆ ಬರೆದದ್ದನ್ನು ರಂಗೋಲಿ ಎಂದು ಕರೆಯುವಂತೆ ,ಮೈಚರ್ಮದ ಮೇಲೆ ಬರೆದರೆ ಹಚ್ಚೆ ಎಂದು ಕರೆದಂತೆ ಗೋಡೆಯ ಮೇಲೆ ,ಬಿದಿರಿನ ಬುಟ್ಟಿಗಳ ಮೇಲೆ ,ಮರದ ಮೇಲೆ ನೈಸರ್ಗಿಕ ಬಣ್ಣಗಳಿಂದ ನೈಸರ್ಗಿಕ ಕುಂಚ ಬಳಸಿ ಬರೆದ ವಿಶಿಷ್ಟ ರೇಖಾ ವಿನ್ಯಾಸದ ಕಲೆಯನ್ನೇ ಪ್ರಾಚೀನ ಕಾಲದಿಂದ ಹಸೆ ಚಿತ್ತಾರ ಎಂದು ಕರೆದಿದ್ದಾರೆ. ಸರಳ ರೇಖೆಗಳು,ತ್ರಿಭುಜ,ಚೌಕ,ಆಯತ,ವೃತ್ತ, ವಜ್ರಾಕೃತಿ ಮತ್ತಿತರ ಜ್ಯಾಮಿತಿಯ ಅಂಶಗಳನ್ನು ಪ್ರಧಾನವಾಗಿ ಬಳಸಿ ಸಂಪೂರ್ಣ ರೇಖಾವಿನ್ಯಾಸದಲ್ಲೇ ಚಿತ್ರಿಸಿ ಮೂಲ ಬಣ್ಣಗಳಾದ ಕೆಂಪು ,ಕಪ್ಪು,ಬಿಳಿ,ಹಳದಿ,ಹಸಿರು ಬಣ್ಣಗಳಲ್ಲಿ ಬರೆಯುವ ರೇಖಾ ವಿನ್ಯಾಸಗಳ ಚಿತ್ರವೇ ಹಸೆಚಿತ್ತಾರ ಎನ್ನಬಹುದು. ಜಾಗತೀಕರಣದ ಈ ದಿನಗಳಲ್ಲೂ ಈವರೆಗೂ ಶಿಷ್ಟ ಚಿತ್ರಶೈಲಿಯನ್ನು ಅನುಕರಿಸದೆ ದೇಶೀ ಚಿತ್ರಶೈಲಿಯಲ್ಲೇ ಉಳಿಸಿಕೊಂಡಿರುವುದು ಹಸೆಚಿತ್ತಾರದ ಹೆಚ್ಚುಗಾರಿಕೆ. ಮಹಾರಾಷ್ಟ್ರದ ವರ್ಲಿ ಕಲೆ ಸಹ ಹಸೆಚಿತ್ತಾರ ಮಾದರಿಯಲ್ಲೇ ಇದೆ.ಆದರೆ ವಿನ್ಯಾಸ ಮತ್ತು

ಅಂತಃಸತ್ವದಲ್ಲಿ, ಸಾಕಷ್ಟು ವ್ಯತ್ಯಾಸಗಳಿವೆ.ಸೂಕ್ಷ್ಮ ಮತ್ತು ಸಂಕೀರ್ಣ ರೇಖಾವಿನ್ಯಾಸ ಹಸೆಚಿತ್ತಾರದ ವಿಶಿಷ್ಟತೆಯಾಗಿದೆ.

ನಮ್ಮ ರಾಜ್ಯದಲ್ಲಿರುವ ಎಲ್ಲಾ ಸಮುದಾಯಗಳು ಹಸೆಚಿತ್ತಾರವನ್ನು ಆಚರಣೆಯ ಭಾಗವಾಗಿ ಸಾಂಪ್ರದಾಯಿಕವಾಗಿ ರೂಡಿಸಿಕೊಂಡಿಲ್ಲ. ಮಲೆನಾಡಿನಲ್ಲಿ ಮಾತ್ರವೇ ಪ್ರಧಾನವಾಗಿ ಕಂಡುಬರುತ್ತದೆ. ಮಲೆನಾಡಿನಲ್ಲಿ ಇಂದಿಗೂ ಹಸೆಚಿತ್ತಾರ ಕಲೆಯನ್ನು ಪ್ರಧಾನವಾಗಿ ಪೋಷಿಸಿಕೊಂಡು ಬಂದಿರುವ ಬುಡಕಟ್ಟು ಜನಸಂಸ್ಕೃತಿಯ ದೀವರು ಸಮುದಾಯ ಹೆಚ್ಚಾಗಿ ಇರುವ ಸಾಗರ,ಸೊರಬ, ಹೊಸನಗರ,ತೀರ್ಥಹಳ್ಳಿ ಭಾಗದಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತದೆ.ವಿರಳವಾಗಿ ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಂಗಳೂರಿನಲ್ಲಿ ಕಂಡುಬರುತ್ತದೆ. ಮಲೆನಾಡು ಭಾಗದಲ್ಲಿರುವ ಕೆಲವು ಹಳ್ಳಿಗಳ ಬುಡಕಟ್ಟು ಜನಜೀವನ ಸಂಸ್ಕೃತಿಯ ಕೆಲವು ಭಾಗದ ಕರೆಒಕ್ಕಲಿಗ ಕುಟುಂಬಗಳು,ಗೊಂಡರು,ಹಾಲಕ್ಕಿಗಳು , ಹಸಲರ ಕುಟುಂಬಗಳೂ ,ಕೆಲವು ಕುಣಬಿಯವರು,ಅಲ್ಲಲ್ಲಿ ಗೌಳಿ,ಸಿದ್ದಿಯರು ಹಬ್ಬಗಳಲ್ಲಿ ಮನೆ ಅಲಂಕಾರಕ್ಕೆ ,ಕೆಲವರು ಮದುವೆಯ ಸಮಯದಲ್ಲಿ ಅಥವಾ ಗೋಡೆಗಳಿಗೆ ಹಲಿ,ಹಸಗರ ಎನ್ನುವ ಹೆಸರಿನಲ್ಲಿ ಹಸೆಚಿತ್ತಾರ ಮಾದರಿ ಹೋಲುವ ಚಿತ್ರ ಬರೆಸಿರುವ ರೂಢಿ ಕಂಡುಬರುತ್ತದೆ. ಕೆಲವೆಡೆ ಹವ್ಯಕರ ಕೆಲವು ಕುಟುಂಬಗಳು ,ಇತರೆ ಸಮುದಾಯದವರು ಸಹ ಈ ಕಲೆಯನ್ನು ಇಷ್ಟಪಟ್ಟು ಮದುವೆಗೆ ,ಹಬ್ಬಕ್ಕೆ ಅಲಂಕಾರಕ್ಕೆ ದೀವರ ಚಿತ್ತಾರಗಿತ್ತಿಯರನ್ನು ವೀಳ್ಯ ನೀಡಿ ಬರೆಸಿರುವ ಸಂಪ್ರದಾಯ ಕಂಡುಬರುತ್ತಿದೆ.

ಕೆಲವರು ಆಸಕ್ತಿಯಿಂದ ಇತ್ತೀಚಿನ ವರ್ಷಗಳಲ್ಲಿ ಕಲಿಯುತ್ತಿರುವುದು ಸಹ ಗಮನಾರ್ಹ. ಆದರೆ ದೀವರನ್ನು ಹೊರತುಪಡಿಸಿ ಮೇಲೆ ಹೆಸರಿಸಿದ ಜಾತಿಯಲ್ಲಿ ಕೆಲವು ಊರುಗಳ ಕೆಲವು ಕುಟುಂಬಗಳಲ್ಲಿ ಮಾತ್ರವೇ ಕೆಲವು ಮಾದರಿಯಲ್ಲಿ ಹಸೆಚಿತ್ತಾರ ಬರೆಯುವುದು ಕಂಡುಬರುತ್ತಿದ್ದು ವಿನ್ಯಾಸದಲ್ಲಿ ಕೆಲವು ಸಮುದಾಯಗಳ ನಡುವೆ ಕೆಲವು ವ್ಯತ್ಯಾಸಗಳಿವೆ. ಮಲೆನಾಡಿನ ಎಲ್ಲಾ ಜಾತಿಯ ಎಲ್ಲಾ ಕುಟುಂಬಗಳು ಮದುವೆಗೆ,ಹಬ್ಬಗಳಿಗೆ ಹಸೆಗೊಡೆ ಚಿತ್ತಾರ ಪರಂಪರೆ ಸಾಂಪ್ರದಾಯಿಕವಾಗಿ ಪಾಲಿಸಿಲ್ಲ. ಕೆಲವರು ಬರೆದರೂ ವಿನ್ಯಾಸದಲ್ಲಿ

ಸಂಕೀರ್ಣತೆಯಲ್ಲಿ ,ಆಚರಣೆಗಳಲ್ಲಿ ಹಲವು ವ್ಯತ್ಯಾಸಗಳಿವೆ. ದೀವರು ಜಾತಿಯ ಜನರು ಸಾಂಪ್ರದಾಯಿಕವಾಗಿ ಕಡ್ಡಾಯವಾಗಿ, ಮದುವೆಗೆ, ಹಬ್ಬಕ್ಕೆ, ಹಸೆಚಿತ್ತಾರ ಬರೆಯುತ್ತಾರೆ. ಇಂದಿನ ಕಾಂಕ್ರೇಟು ಮನೆಗಳಲ್ಲೂ ದೀವರು ಹಸೆಚಿತ್ತಾರ ಕಡ್ಡಾಯವಾಗಿ ಮದುವೆಗೆ ಬರೆಸುತ್ತಾರೆ. ಹಸೆಚಿತ್ತಾರ ಶಾಸ್ತ್ರ ಮಾಡದೆ ಮದುವೆಗಳು ದೀವರಲ್ಲಿ ನಡೆಯುವುದಿಲ್ಲ. ದೀವರ ಹೆಣ್ಣುಮಕ್ಕಳಿಗೆ ಅದು ರಕ್ತಗತ ಕಲೆಯಂತೆ ಪರಂಪರೆಯಿಂದ ಬಂದಿದೆ. ದೀವರ ವಿಶಿಷ್ಟ ವಿನ್ಯಾಸದ ಹಸೆ ಚಿತ್ತಾರ ಕಲೆಯಿಂದ ಮಲೆನಾಡಿನ ಕೆಲವು ಬೇರೆ ಬೇರೆ ಸಮುದಾಯಗಳ ಕೆಲವು ಕುಟುಂಬಗಳು ಪ್ರಭಾವಿತವಾಗಿ ಅವರು ಸಹ ಕೆಲವೆಡೆ ಹಸೆಚಿತ್ತಾರವನ್ನು ಅನುಸರಿಸುವುದನ್ನು ಹಿರಿಯ ತಲೆಮಾರಿನವರು ಸ್ಮರಿಸುತ್ತಾರೆ.

ಮದುವೆ ಶಾಸ್ತ್ರದಲ್ಲಿ ಹಸೆಮಣೆ ಶಾಸ್ತ್ರ, ಹಲವು ಸಮುದಾಯದಲ್ಲಿ ಇದೆ.ಕೆಲವು ಕಡೆ ನೆಲ ಚಿತ್ತಾರ ಬರೆಯುವಿಕೆಯಿದೆ. ಅಕ್ಕಿಯಿಂದ ,ಬಣ್ಣದಿಂದ ವಿಭಿನ್ನ ವಿನ್ಯಾಸದ ಮಂಡಲ ಬರೆಯುವಿಕೆ, ಚಿಹ್ನೆ ಬರೆಯುವಿಕೆ ರಾಜ್ಯದ ಹಲವು ಭಾಗದಲ್ಲಿ ಕೆಲವು ಸಮುದಾಯಗಳಲ್ಲಿ ಅವರದೇ ಆದ ನಂಬಿಕೆ, ಸಾಂಪ್ರದಾಯಿಕ ವೈಶಿಷ್ಟತೆಯೊಂದಿಗೆ ಕಂಡುಬರುತ್ತದೆ. ಆದರೆ ಮಲೆನಾಡಿನ ದೀವರ ಸಮುದಾಯದ ಹಸೆಗೋಡೆ ಮತ್ತು ಶಾಸ್ತ್ರಗಳು ಇತರೆ ಸಮುದಾಯಗಳಿಗಿಂತ ವಿಭಿನ್ನವಾಗಿ ಕಂಡುಬರುತ್ತದೆ. ದೀವರ ಸಮುದಾಯದಲ್ಲಿರುವ ಮದುವೆಗಳಲ್ಲಿ ಹಸೆಶಾಸ್ತ್ರದಲ್ಲಿ ಹಸೆಮಣೆ ಶಾಸ್ತ್ರದೊಂದಿಗೆ ಈಚಲ ಚಾಪೆಯ (ಹಸೆ) ಮೇಲೆ ಬಂಧುಬಳಗದ ಸಮ್ಮುಖದಲ್ಲಿ ವಧು ವರರನ್ನು ಕೂರಿಸಿ ಹಸೆಶಾಸ್ತ್ರ ಮಾಡುವ ಜೊತೆಗೆ ಮನೆಯ ಒಳಗೆ ಗೋಡೆಗೆ ಪೂರ್ವಾಭಿಮುಖವಾಗಿ, ಕೆಲವೆಡೆ ಉತ್ತರಾಭಿಮುಖವಾಗಿ ಫಲವಂತಿಕೆ, ಮದುವೆ ಸಂಭ್ರಮ,ಸಂಪ್ರದಾಯ ಸಾಂಕೇತಿಸುವ ವಿಶಿಷ್ಟ ವಿನ್ಯಾಸದಲ್ಲಿ ಗೋಡೆಗೆ ದೊಡ್ಡದಾಗಿ ಚೌಕ,ಆಯತ ಆಕಾರದಲ್ಲಿ ಹಸೆಚಿತ್ತಾರ ಬರೆಯುತ್ತಾರೆ.ಆ ಚಿತ್ತಾರದ ಗೋಡೆಯ ಮುಂದೆ ಮದುಮಕ್ಕಳನ್ನು ಕೂರಿಸಿ (ವಧುವರರು) ಗಂಡು ಹೆಣ್ಣಿನ ಕಡೆಯವರೆಲ್ಲ ಸೇರಿ ಎಂಟು ಹಸೆ ಹಾಸಿ ಕೂರಿಸುವ ರೂಢಿಗತ ಹಸೆಶಾಸ್ತ್ರವೂ ಇದೆ. ಗೋಡೆಗೆ ಬರೆದ ಮದುವೆ ಶಾಸ್ತ್ರದ ಚಿತ್ತಾರದ ಜೊತೆ ಹಸೆ ಶಾಸ್ತ್ರವೂ ಸೇರೆ ರೂಢಿಗತವಾಗಿ 'ಹಸೆಚಿತ್ತಾರ' ಶಬ್ದೋತ್ಪತ್ತಿಯಾಗಿದೆ

ಎಂದು ಹಲವು ಹಿರಿಯ ದೀವರ ಚಿತ್ತಾರಗಿತ್ತಿಯರ (ಚಿತ್ತಾರ ಕಲಾವಿದರು) ಸಂದರ್ಶನದಿಂದ ತಿಳಿದು ಬಂದಿದೆ.ಹಸೆ ಶಾಸ್ತ್ರಕ್ಕೆ ನೆಲದ ಮೇಲೆ ಸರಳವಾಗಿ ಬರೆಯುವ ಚಿತ್ತಾರಗಳಿಗಿಂತ ಮನೆಯೊಳಗೆ ಬರೆಯುವ ಗೋಡೆ ಚಿತ್ತಾರ ಗಳು ವಿಶಿಷ್ಟ ವಿನ್ಯಾಸದಲ್ಲಿವೆ.ಅವುಗಳನ್ನು ಹಸೆಗೋಡೆ ಚಿತ್ತಾರ ಎಂದೇ ಕರೆಯುವರು. ಅಲ್ಲದೆ ಭೂಮಿಹುಣ್ಣಿಮೆ ಪೂಜೆಗಾಗಿ ಬಿದಿರಿನ ಬುಟ್ಟಿಯ ಮೇಲೆ ಚಿತ್ತಾರ ಬರೆಯುವರು. ಅದನ್ನು ಬುಟ್ಟಿ ಚಿತ್ತಾರ ಎಂದು ಕರೆಯುವರು. ಅದು ವಿನ್ಯಾಸದಲ್ಲಿ ಮತ್ತಷ್ಟು ವಿಶಿಷ್ಟ ರೂಪದಲ್ಲಿದೆ. ಬಾಗಿಲಲ್ಲಿ ಬರೆದದ್ದು ಬಾಗಿಲು ಚಿತ್ತಾರ ,ತಿರುಗೆ ಮಣೆಗೆ ಬರೆದದ್ದು ತಿರುಗೆಮಣೆ ಚಿತ್ತಾರ ಹೀಗೆ ಹಸೆಚಿತ್ತಾರ ಬೇರೆ ಬೇರೆ ರೂಪ ,ಬೇರೆ ಬೇರೆ ವಿನ್ಯಾಸ, ಬೇರೆ ಬೇರೆ ಹೆಸರು ಪಡೆದಿದೆ.

ಹಸೆ ಚಿತ್ತಾರದ ಮೂಲ ಹುಟ್ಟು ಮತ್ತು ಬೆಳವಣಿಗೆ

ಹಸೆ ಚಿತ್ತಾರದ ಮೂಲಹುಟ್ಟು ತಿಳಿದುಕೊಳ್ಳಲು ಪ್ರಾಚೀನ ಮಾನವ ಕಂಡುಕೊಂಡಿದ್ದ ಆದಿಮ ಬಂಡೆ ಚಿತ್ರಕಲೆಯ ಪರಂಪರೆಯ ಕುರಿತು ಮೊದಲು ತಿಳಿದುಕೊಂಡು ವಿವೇಚಿಸಬೇಕಾಗುತ್ತದೆ. ಆದಿಮ ಬಂಡೆಚಿತ್ರಕಲೆಯ ಪರಂಪರೆಯ ಚಿತ್ರಕಲಾ ಜ್ಞಾನ ಪೀಳಿಗೆಯಿಂದ ಪೀಳಿಗೆಗೆ ಹಸ್ತಾಂತರವಾದಂತೆ ಬುಡಕಟ್ಟು ಜನಪದರು ತಮ್ಮದೇ ನೆಲಮೂಲದ ಜ್ಞಾನದಿಂದ ಮತ್ತಷ್ಟು ನಾವಿನ್ಯಯುತ ವಿಕಸಿತ ಚಿತ್ರಕಲೆಯನ್ನು ಕಂಡುಕೊಂಡಿದ್ದು ಚಿತ್ರಕಲೆ ಬೆಳೆದು ಬಂದ ಪರಂಪರೆಯನ್ನು ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಅಂದು ಕಂಡುಕೊಂಡ ಚಿತ್ರಕಲಾ ಜ್ಞಾನ ಪರಂಪರೆಯೇ ಮುಂದೆ ಬೇರೆ ಬೇರೆ ಪ್ರದೇಶಗಳಲ್ಲಿನ ಜನಪದರಲ್ಲಿನ ನಂಬಿಕೆ ,ಸಂಪ್ರದಾಯ, ಗೃಹಾಲಂಕಾರ ಸೌಂದರ್ಯ ಪ್ರಜ್ಞೆಯಿಂದಾಗಿ ಬೇರೆ ಬೇರೆ ವಿನ್ಯಾಸದಲ್ಲಿ ಬೆಳವಣಿಗೆಯಾಗಿದೆ. ನೆಲಮೂಲದ ಜ್ಞಾನದಿಂದ ಹಲವು ಸಮುದಾಯಗಳು ತಮ್ಮದೇ ಆದ ಸಂಪ್ರದಾಯದೊಂದಿಗೆ ಚಿತ್ರಕಲೆಯನ್ನೂ ಸಹ ಅಚರಣೆಗಳ ಭಾಗವಾಗಿ ಗೃಹ ಅಲಂಕಾರದ ಭಾಗವಾಗಿಯೂ ಇಂದಿಗೂ ಉಳಿಸಿಕೊಂಡಿದ್ದಾರೆ.

ಕರ್ನಾಟಕದ ಜನಪದರು ಸಹ ಪುರಾತನ ಕಾಲದಿಂದ ಪಡೆದ ಜನಪದರ ಚಿತ್ರಕಲಾ ಜ್ಞಾನಪರಂಪರೆಯನ್ನು ತಮ್ಮದೇ ನಾವಿನ್ಯತೆಯೊಂದಿಗೆ ತಮ್ಮದೇ ಬದುಕಿನ ನಂಬಿಕೆ, ಜ್ಞಾನ ಗ್ರಹಿಕೆಯಿಂದ ಸಂಪ್ರದಾಯದ ಭಾಗವಾಗಿ ಕಂಡುಕೊಂಡ ಚಿತ್ರಕಲಾ ಪ್ರಕಾರವೇ ಇಂದು ನಮಗೆ ಕಾಣಸಿಗುತ್ತಿರುವ ಈ ಹಸೆಚಿತ್ತಾರ ಎನ್ನಬಹುದು. ಇಂದು ನಾವು ನೋಡುತ್ತಿರುವ ಹಸೆಚಿತ್ತಾರದ ಹಿಂದೆ ಸಾಂಪ್ರದಾಯಿಕ ರೂಢಿ, ನಂಬಿಕೆಗಳ ಜೊತೆಗೆ , ಸಾವಿರಾರು ಚಿತ್ತಾರ ಕಲಾವಿದರ ಬೌದ್ಧಿಕತೆ, ಕಲಾ ಅಭಿವ್ಯಕ್ತಿಯಿದೆ. ಸಾಂಪ್ರದಾಯಿಕ ಹಸೆಚಿತ್ತಾರವನ್ನು ಬರೆಯಲು ಆರಂಭಿಸಿದವರು ಹಿಂದಿನಿಂದಲೂ ಗೃಹಕಾರ್ಯಗಳ ಹೊಣೆಹೊತ್ತು ಹಬ್ಬ,ಆಚರಣೆಗಳ ಬಹುಪಾಲು ಕಾರ್ಯ ನಿರ್ವಹಿಸುತ್ತಿದ್ದ ಸ್ತ್ರೀಯರು ಎಂಬುದು ಹಲವು ಮೂಲಗಳಿಂದ ತಿಳಿದು ಬರುತ್ತದೆ. ಇಂದಿಗೂ ಹಸೆಚಿತ್ತಾರ ಸ್ತ್ರೀಯರ ಕಲೆಯೇ ಆಗಿದೆ. ಅಲ್ಲಲ್ಲಿ ಹವ್ಯಾಸಿ ಚಿತ್ರಕಲಾ ಪುರುಷರು ಈಗೀಗ ಬಿಡಿಸುತ್ತಿದ್ದಾರೆಯೇ ಹೊರತು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯದಂತೆ ಗೃಹಿಣಿಯರೇ ಪ್ರಧಾನವಾಗಿ ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಿಸಿಕೊಂಡು ಬಂದ ಅಭಿವ್ಯಕ್ತಿಯೆ ಹಸೆಚಿತ್ತಾರ ಕಲೆಯಾಗಿದೆ. ಇದರ ಮೂಲ ವಿನ್ಯಾಸ, ಬೆಳವಣಿಗೆಯನ್ನು ಹುಡುಕುತ್ತ ಹೋದರೆ ಆದಿಮ ಬಂಡೆ ಚಿತ್ರಕಲೆಯ ಮೂಲಕ್ಕೆ ಹೋಗಬೇಕಾಗುತ್ತದೆ. ವರ್ಲಿ ಚಿತ್ತಾರದ ಮೂಲವನ್ನು ಸಹ ವಿವೇಚಿಸಬೇಕಾಗುತ್ತದೆ.

ಆದಿಮ ಬಂಡೆ ಚಿತ್ರ ಕಲೆ ಮತ್ತು ಹಸೆಚಿತ್ತಾರ

ಹಸೆಚಿತ್ತಾರದ ಹುಟ್ಟು ಬೆಳವಣಿಗೆಯನ್ನು ತಿಳಿಯಲು ನಾವು ಆದಿಮ ಚಿತ್ರಕಲೆಯ ವಿಕಾಸದ ಬಗ್ಗೆ ಸಹ ಒಂದಿಷ್ಟು ತಿಳಿದುಕೊಂಡರೆ ಹಸೆ ಚಿತ್ತಾರದ ಬೆಳವಣಿಗೆಯ ಮೂಲದ ಬಗ್ಗೆ ವಿವೇಚಿಸಬಹುದು. ಹಿಂದಿನ ಪುಟಗಳಲ್ಲಿ ಬಂಡೆಚಿತ್ರಕಲೆಗಳ ಕುರಿತು, ಕರ್ನಾಟಕದ ರಾಯಚೂರಿನ ಮಾನವಿಯಲ್ಲಿ ಈಗಲೂ ಕಾಣಸಿಗುವ ರಂಗೋಲಿ ಗವಿಯ ಒಂದು ಬಂಡೆಚಿತ್ರ ಸಹಿತ ಆಧಾರದೊಂದಿಗೆ ವಿವರಿಸಿದ್ದೇನೆ. ಸಂಶೋದಕ ಆ ಸುಂದರ ಅವರ 'ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ', ಚಿತ್ರದುರ್ಗದ ಸಂಶೋಧಕ ಮೋಹನ್ ಆರ್

ಅವರ 'ಕರ್ನಾಟಕ ಆದಿಮ ಚಿತ್ರಕಲೆ' ಸಂಶೋದನಾ ಕೃತಿಗಳಲ್ಲಿ ಪ್ರಾಚೀನ ಮಾನವನ ಬಂಡೆ ಚಿತ್ರಕಲೆಯ ಬಗ್ಗೆ ವಿಸ್ತಾರವಾಗಿ ಸಂಶೋಧಿಸಿ ವಿವರಿಸಿದ್ದಾರೆ.

ಅಂದಿನ ಬಂಡೆ ಚಿತ್ರಕಲೆಯು ವಿಕಾಸವಾದಂತೆ , ನಾಗರಿಕತೆ ಬೆಳೆದಂತೆ ವಿವಿಧ ಬಗೆಯ ಚಿತ್ರಕಲೆಗಳನ್ನು ಕಂಡುಕೊಂಡ ಮಾನವ ಚಿತ್ರಕಲೆಯನ್ನು ವ್ಯಾಪಕವಾಗಿ ಆರಂಭಿಸಿದ್ದೆ ಸರಳ ರೇಖಾಕೃತಿಗಳ ಮೂಲಕ. ಬಿಡುವಿನ ವೇಳೆಯಲ್ಲಿ ಪರಿಸರವನ್ನು ಅನುಕರಿಸುತ್ತಾ ಹಲವು ಜಾಮಿತಿ ಅಂಶಗಳನ್ನು ಒಳಗೊಂಡ ಚಿತ್ರ ಬಿಡಿಸುವುದನ್ನು ಕಲಿತುಕೊಂಡು ಹಲವು ಬಗೆಯ ಕಲಾಭಿವ್ಯಕ್ತಿ ವಿಕಸಿತಗೊಳ್ಳುತ್ತಾ ಬೆಳೆದಿದೆ. ಬಹುತೇಕ ಬಂಡೆ ಚಿತ್ರಗಳಲ್ಲಿ ಪ್ರಾಣಿಗಳನ್ನು ಕೆತ್ತಲಾಗಿದೆ. ಮುಖ್ಯವಾಗಿ ಕಾಡುಹಂದಿ ಕಾಡೆಮ್ಮೆ, ಚುಕ್ಕೆ ಜಿಂಕೆ ಕೃಷ್ಣಮೃಗ ಮತ್ತಿತರ ಪ್ರಾಣಿಗಳನ್ನು ಸೇರಿದಂತೆ ಬೆತ್ತಲೆ ಮಾನವಾಕೃತಿ ಚಿತ್ರಗಳು ಕಂಡು ಬರುತ್ತವೆ. ಬಂಡೆ ಚಿತ್ರಗಳು ಮಾನವನ ಬಿಡುವಿನ ವೇಳೆಯ ಮನೋರಂಜನೆಗಾಗಿ ಬಿಡಿಸಿದವುಗಳಾಗಿವೆ. ಸಂಶೋಧಕರು ಗುರುತಿಸಿರುವಂತೆ ತುಂಗಭದ್ರಾ ನದಿ ತೀರದಲ್ಲಿ ಹಲವು ಬಗೆಯ ಬಂಡೆ ಚಿತ್ರಗಳನ್ನು ಸಂಶೋಧಿಸಲಾಗಿದೆ.

ನಮ್ಮ ಕರ್ನಾಟಕದ ಮಲೆನಾಡಿನಲ್ಲಿ ಸಹ ಆ ಸುಂದರ ಅವರು ಗುರುತಿಸಿರುವಂತೆ ಶಿವಮೊಗ್ಗದ ತುಂಗಾ ನದಿ ತೀರದ ಹೊಳಲೂರು ಹೊಳೆಹಟ್ಟಿ ,ಹೊಳೆಹಾಸನವಾಡಿ ,ಅರಕೇರಿ, ಕೆಲವೆಡೆ ಬಂಡೆಗಳಲ್ಲಿ ಗೀರುಚಿತ್ರಗಳನ್ನು ಗುರುತಿಸಿದ್ದಾರೆ.ಇವು ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಯ ಕಾಲದವು ಎಂದು ಗುರುತಿಸಲಾಗಿದೆ. ಇವು ತೀರಾ ಸರಳವಾದ ಗೀರು ಚಿತ್ರಗಳಾಗಿವೆ. ಇವೆಲ್ಲವೂ ಬಿಡುವಿನ ವೇಳೆಯ ಮನೋರಂಜನೆಗೆ ಸೀಮಿತವಾದವು .ಕರ್ನಾಟಕದ ಬಂಡೆ ಚಿತ್ರಗಳ ಸಂಸ್ಕೃತಿಯು ಸುಮಾರು 25 ಸಾವಿರ ವರ್ಷಗಳ ಹಿಂದಿನದು ಎಂದು ಸಂಶೋಧಕರು ಅಂದಾಜಿಸಿದ್ದಾರೆ. ಜಾಮಿತಿಯ ಚಿತ್ರಗಳು ಮಾನವನ ಕಲಾಸೃಷ್ಟಿಯ ಮೊದಲ ಹಂತ ಎಂಬುದು ಜಗತ್ತಿನ ವಿದ್ವಾಂಸರ ವಾದ. ಇದು ಅತ್ಯಂತ ಹಳೆಯ ಶಿಲಾಯುಗದಿಂದ ಸಾಗಿ ಬಂದ ಚಿತ್ರಕಲೆಯೆಂದು ಗುರುತಿಸಲಾಗುತ್ತದೆ.

ಕರ್ನಾಟಕದ ರಾಯಚೂರಿನ ಮಾನ್ವಿ ತಾಲೂಕಿನ ಮಲ್ಲಿಖಾರ್ಜುನ ಬೆಟ್ಟದ ಗವಿಯಲ್ಲಿ ಈಗಲೂ ಕಾಣಸಿಗುವ ಚಿತ್ರಗಳಲ್ಲಿ ವಜ್ರಾಕೃತಿಗಳ ಸಾಲು ಕಂಡುಬರುತ್ತದೆ. ಇವು ನಮ್ಮ ಹಸೆಚಿತ್ತಾರ ಮಾದರಿಯಲ್ಲಿ ಕಂಡುಬರುವ ಜಾಮಿತಿಯ ಅಂಶಗಳ ವಜ್ರಾಕೃತಿಯ ಚೌಕಟ್ಟನ್ನು ಹೊಂದಿದ್ದು ಗಮನಾರ್ಹ ವಿಷಯ.ಇದು ಮಧ್ಯಯುಗದ ಇತಿಹಾಸ ಕಾಲದ್ದು ಎಂದು ಗುರುತಿಸಲಾಗಿದ್ದು ರಾಯಚೂರಿನ ಮಾನ್ವಿ ತಾಲೂಕಿನ ಗವಿಯಲ್ಲಿ ಸಂಶೋಧಕ ಅ.ಸುಂದರ ಅವರು 2006ರಲ್ಲಿ ಗುರುತಿಸಿದ್ದಾರೆ.ಈ ರಂಗೋಲಿ ಗವಿಯಲ್ಲಿ ಮಾನವನ ರೇಖಾ ಚಿತ್ರಗಳನ್ನು, ಸಾಲುಸಾಲಾಗಿ ಉರುಮಂಜು (ಸೊರಮಾ ಬಣ್ಣ ಎಂದು ರಾಯಚೂರಿನಲ್ಲಿ ಕರೆಯುವರು) ಬಣ್ಣದಲ್ಲಿ ಬಿಡಿಸಿದ್ದಾರೆ. ಸಾಲು ಸಾಲು ಮಾನವರ ಚಿತ್ರಗಳ ಸುತ್ತ ವಜ್ರಾಕೃತಿಗಳ ಸಾಲುಗಳಂತೆ ಕಾಣುವ, ಸಾಲುಸಾಲು ಬೆಟ್ಟಗುಡ್ಡಗಳನ್ನು ಬಿಂಬಿಸುವಂತೆ ತೋರುವ ಫ್ರೇಮ್ ಕಂಡುಬರುತ್ತದೆ. ಹಸೆ ಚಿತ್ತಾರದಲ್ಲಿ ಸಹ ಅಲ್ಲಿ ಕಂಡುಬರುವ ಕೆಲವು ವಿನ್ಯಾಸಗಳು ಕಂಡುಬರುವುದನ್ನು ಗಮನಿಸಬಹುದು.

ಅಜಂತಾ ಎಲ್ಲೋರಾದ ಗುಹಾಂತರ ದೇವಾಲಯದ ಕೆಲವು ಗುಹೆಗಳ ಮಾಳಿಗೆಯಲ್ಲಿ ನಮ್ಮ ಹಸೆ ಚಿತ್ತಾರದ ಮೋಟಿಫ್‌ಗಳನ್ನು ಹೋಲುವ ಚಿತ್ರಗಳು ಕೆಲವೆಡೆ ಇವೆ.ತಮಗೆಲ್ಲ ತಿಳಿದಿರುವಂತೆ ಮಹಾರಾಷ್ಟ್ರದಲ್ಲಿ ವರ್ಲಿ ಕಲೆ ಎಂದು ಹೆಸರಾಗಿರುವ ಬುಡಕಟ್ಟು ಚಿತ್ರ ಸಂಸ್ಕೃತಿಗೂ ನಮ್ಮ ಮಲೆನಾಡಿನ ಹಸೆ ಚಿತ್ತಾರ ಸಂಸ್ಕೃತಿಗೂ ಕೆಲವು ಸಾಮ್ಯತೆಗಳಿವೆಯಾದರೂ ಸಂಸ್ಕೃತಿ–ಪರಂಪರೆ ಆಚರಣೆಯ ಭಾಗವಾಗಿರುವ ನಮ್ಮ ಹಸ ಚಿತ್ತಾರ, ಬುಟ್ಟಿ ಚಿತ್ತಾರಗಳು ವಿನ್ಯಾಸದ ದೃಷ್ಟಿಯಿಂದ,ಆಚರಣೆಯ ಅಂತಃಸತ್ವಗಳಿಂದ ಕೂಡಿರುವ ವಿಶಿಷ್ಟ ಕಲಾವಿನ್ಯಾಸವಾಗಿದ್ದು ಸಾಕಷ್ಟು ವಿಶಿಷ್ಟ ವ್ಯತ್ಯಾಸಗಳನ್ನು ಹೊಂದಿದೆ. ವಾರ್ಲಿ ಜನಾಂಗದ ಮದುವೆಗೆ ಬರೆಯುವ ಗೋಡೆಚಿತ್ತಾರದ ನಂಬಿಕೆಗಳಿಗೂ,ಸಂಪ್ರದಾಯಿಕ ರೇಖಾ ಚಿತ್ತಾರದ ಒಟ್ಟು ವಿನ್ಯಾಸದಲ್ಲಿ ಸಾಕಷ್ಟು ಸಾಮ್ಯತೆಯಿರುವುದನ್ನು ಸಹ ಗಮನಿಸಬಹುದು. ಚಚ್ಚೌಕ ಚಿತ್ತಾರ ಬರೆಯುವಿಕೆ, ಪಪ್ಪುಳಿ,ಬಾಸಿಂಗ.ರೇಖೆ, ನಿಲಿಕೊಚ್ಚು ,ಮುಖ್ಯವಾಗಿ ದೇವಚೌಕ ಹಾಗು

ಸೂರ್ಯಚಂದ್ರರನ್ನು ಬರೆಯುವಿಕೆಯಲ್ಲಿ ಸಾಮ್ಯತೆಗಳಿವೆ. ಚಿತ್ತಾರದ ಮೋಟಿಫ್‌ಗಳಿಗೆ ಕರ್ನಾಟಕದ ದೀವರು ಕರೆಯುವ ಹೆಸರಿನಲ್ಲೂ ,ಮಹಾರಾಷ್ಟ್ರದ ವಾರ್ಲಿಯವರು ಕರೆಯುವ ಹೆಸರಿನಲ್ಲೂ ಕೆಲವು ಹೋಲಿಕೆ ಇದೆ. ಹಿಂದೆ ಬಹುತೇಕ ಸಮುದಾಯಗಳು ವಲಸೆ ಪರಂಪರೆ ಹೊಂದಿದ್ದು ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಸಾಮಾನ್ಯ ಸಂಗತಿಯಾಗಿತ್ತು. ಯಾರು ಯಾರಿಂದ ಯಾವ ಸಂಸ್ಕೃತಿ ,ಕಲೆಯನ್ನು ಪಡೆದರು ಎಂದು ನಿಖರವಾಗಿ ಹೇಳಲು ಆಧಾರಗಳು ಕಡಿಮೆ. ಸಂಸ್ಕೃತಿ ,ಪರಂಪರೆ, ಜಾನಪದ ಬೇರುಗಳ ಜಾಡು ಹಿಡಿದು ಬೇರೆ ಬೇರೆ ಸಮುದಾಯಗಳ ಬೇರೆ ಬೇರೆ ದೇಶಗಳ ಕಲೆ ಸಂಸ್ಕೃತಿಗಳ ಬಗ್ಗೆ ಒಂದಿಷ್ಟು ತುಲನಾತ್ಮಕ ಅಧ್ಯಯನ ಮಾಡಿದಾಗ ಒಂದಿಷ್ಟು ಹೆಚ್ಚಿನ ಆಧಾರಗಳು ಲಭ್ಯವಾಗಬಹುದು. ಸಧ್ಯಕ್ಕೆ ಇರುವ ಆಧಾರಗಳ ಆಧಾರದಲ್ಲಿ ಕರ್ನಾಟಕದ ಹಸೆಚಿತ್ತಾರ ವಿನ್ಯಾಸ ಆಚರಣೆಗಳಲ್ಲಿ ಇಂತಹ ಕಾಲಘಟ್ಟದಲ್ಲಿಯೇ ಕಂಡುಬಂತು ಎಂದು ನಿಖರವಾಗಿ ಹೇಳಲು ಲಿಖಿತ ದಾಖಲೆಗಳಿಲ್ಲ.ಜಾನಪದ ಸಂಸ್ಕೃತಿ ಪರಂಪರೆಯ ಆಧಾರದಲ್ಲಿ ತುಂಬಾ ಪುರಾತನವಾದ್ದು ಎಂದೇ ಹೇಳಬಹುದು.

ಕರ್ನಾಟಕದಲ್ಲಿ ಶಿವಮೊಗ್ಗ ಭಾಗದಲ್ಲಿ ವಾಸವಾಗಿರುವ ದೀವರು ಹಸೆಚಿತ್ತಾರವನ್ನು ಹೆಚ್ಚಾಗಿ ಮದುವೆ ಹಬ್ಬಗಳಿಗೆ ಬರೆಯುವುದು ಕಂಡುಬರುತ್ತದೆ. ಅವರ ಭೂಮಣ್ಣಿ ಬುಟ್ಟಿ ಚಿತ್ತಾರ ವಿನ್ಯಾಸಗಳು ಬೇರಾವ ಭಾಗದಲ್ಲೂ ಕಂಡುಬರುವುದಿಲ್ಲ. ಸೊರಬ ಭಾಗದಲ್ಲಿ ಕರೆಒಕ್ಕಲಿಗರಲ್ಲಿ ಕೆಲವೆಡೆ ಹಸೆಚಿತ್ತಾರ ಬರೆಯುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಮಡಿವಾಳರು,ಹಸಲರು, ಹವ್ಯಕರು ಸೇರಿದಂತೆ ಕೆಲವು ಕುಟುಂಬಗಳಲ್ಲಿ ವಿರಳವಾಗಿ ಅಲ್ಲಲ್ಲಿ ಚದುರಿದಂತೆ ಕೆಲವು ಪ್ರದೇಶಗಳಲ್ಲಿ ಮಾತ್ರ ಶಿವಮೊಗ್ಗ ಭಾಗದ ಇತರೆ ಸಮುದಾಯದಲ್ಲಿ ಹಸೆಚಿತ್ತಾರ ಬರೆಯುವ ಸಂಪ್ರದಾಯ ರೂಢಿಯಲ್ಲಿದೆ. ದೀವರು ಹೆಚ್ಚಾಗಿ ವಾಸಮಾಡುವ ದಟ್ಟ ಅರಣ್ಯ ಪ್ರದೇಶಗಳಾದ ಸಾಗರ,ಸೊರಬ ಹೊಸನಗರ ,ತೀರ್ಥಹಳ್ಳಿಯಲ್ಲಿ ಮಾತ್ರ ಹಸೆಚಿತ್ತಾರ ವೈವಿಧ್ಯಮಯ ವಿನ್ಯಾಸದಲ್ಲಿ ಕಂಡುಬರುತ್ತದೆ. ಉತ್ತರ ಕನ್ನಡ ಜಿಲ್ಲೆ, ಕರಾವಳಿ ತೀರದಲ್ಲಿ ,ಚಿಕ್ಕಮಂಗಳೂರಿನಲ್ಲಿ ಕಂಡು ಬರುವ ಸಾಂಪ್ರದಾಯಿಕ ರೇಖಾಚಿತ್ರಗಳಾದ ಹಲಿ,ಹಸಗರ ಶೇಡಿ , ಕಾವಿ ಚಿತ್ರಕಲೆಗಳ ವಿನ್ಯಾಸದಲ್ಲಿ ವ್ಯತ್ಯಾಸಗಳಿವೆ. ಸರಳವಾಗಿವೆ.

ಹಸೆಚಿತ್ತಾರವು ಕರ್ನಾಟಕದಲ್ಲಿ ಮದುವೆ ,ಹಬ್ಬಗಳ ಶಾಸ್ತ್ರದ ಪರಂಪರೆಯ ಭಾಗವಾಗಿ ಯಾವಾಗ ಸೇರ್ಪಡೆಯಾಯಿತು ,ಯಾರಿಂದ ಸೇರ್ಪಡೆಯಾಯಿತು ಎನ್ನುವ ಬಗ್ಗೆ ನಿಖರವಾಗಿ ನಿರ್ಧರಿಸಲು ಸೂಕ್ತ ಆಧಾರಗಳಿಲ್ಲ. .ಬುಡಕಟ್ಟು ಜನಪದ ಸಂಸ್ಕೃತಿಯಲ್ಲಿ ಫಲವಂತಿಕೆಯ ಆಚರಣೆಗಳು ಆರಂಭವಾದ ಮೇಲೆ ಮದುವೆ ಶಾಸ್ತ್ರಕ್ಕೆ ಚಿತ್ತಾರ ಬರೆಯುವ ವಿಧಿ ವಿಧಾನ ಅನುಸರಿಸಿರಬಹುದು. ದೀವರಲ್ಲಿ ಫಲಹೊತ್ತ ಹೊಲದ ಬೆಳೆಗೆ ಚರಗ ಚೆಲ್ಲಲು ಸಹ ಚಿತ್ತಾರ ಬರೆದ ಬುಟ್ಟಿಗಳನ್ನೇ ಕಡ್ಡಾಯವಾಗಿ ಬಳಸುವುದನ್ನು ಈಗಲೂ ಪಾಲಿಸಿಕೊಂಡು ಬರಲಾಗುತ್ತಿದೆ.ಹಾಗಾಗಿ ಮದುವೆ ಸಂಧರ್ಬದಲ್ಲಿಯೂ ಫಲವಂತಿಕೆಯ ಶಾಸ್ತ್ರ ,ಹಸೆ ಶಾಸ್ತ್ರಗಳಲ್ಲಿ ನಾವಿನ್ಯತೆಯ ಆಚಣೆಗಳನ್ನು ಕಂಡುಕೊಂಡಂತೆ ಹಸೆಗೋಡೆ ಬರೆಯುವಿಕೆಯನ್ನು ಸಹ ಸಾಂಪ್ರದಾಯಿಕವಾಗಿ ಪಾಲಿಸಿಕೊಂಡು ಬಂದಿರಬಹುದು.

ಕೆಲವು ಹಿರಿಯರು ಹೇಳುವ ಪ್ರಕಾರ ಬುಡಕಟ್ಟು ಜನಜೀವನ ಸಂಸ್ಕೃತಿ ಪರಂಪರೆಯಲ್ಲಿ ವಧುವರರನ್ನು ಶಿವಪಾರ್ವತಿಯಂತೆ ಮದುವೆ ಮನೆಯಲ್ಲಿ ಹಸೆಮಣೆಯಲ್ಲಿ ಕೂರಿಸುವುದು, ಮೆರವಣಿಗೆ ಮಾಡುವುದು, ದೇವರಂತೆ ಕಾಣುವುದು ರೂಢಿಯಲ್ಲಿತ್ತು. ತಮ್ಮ ಮಕ್ಕಳ ಮಧುವೆಯನ್ನೂ ಸಹ ಸಡಗರ ಸಂಭ್ರಮದಿಂದ ಜಾತ್ರೆಯಂತೆ ಆಚರಿಸುತ್ತಾ, ತಮ್ಮ ಮನೆಯ ಒಂದು ಕೋಣೆಯ ಭಾಗದಲ್ಲಿ ಶಿವನ ಗುಡಿಯಂತೆ ಸಾಂಕೇತಿಸಿ ಗೋಡೆಗೆ ದೊಡ್ಡದಾಗಿ ಶಿವನ ಗುಡಿಯ ಮುಂಭಾಗದಂತೆ ಮುಂಡಿಗೆ ಬರೆದು ಮಧ್ಯದಲ್ಲಿ ದಂಡಿಗೆ ಬರೆದು ಅದರಲ್ಲಿ ಮೆರವಣಿಗೆ ಮಾಡುವಂತೆ ವಧುವರರನ್ನು ಚಿತ್ರಿಸುವಿಕೆ,ತೇರಿನಲ್ಲಿ ವಧುವರರನ್ನು ಕೂರಿಸಿ ಮೆರವಣಿಗೆ ಮಾಡಿ ಸಂಭ್ರಮಿಸುವಂತೆ ಚಿತ್ರಿಸಿ ಹಸೆಶಾಸ್ತ್ರ ಮಾಡಿ ಮದುವೆ ಮಾಡುವ ಪದ್ದತಿ ಅನುಸರಿಸಲಾಗಿದೆ. ರಾಜಮಹಾರಾಜರ ,ಉಳ್ಳವರ ಮದುವೆಯ ಆಚರಣೆಗಳಿಗೆ ಕಡಿಮೆಯಿಲ್ಲದಂತೆ ಬುಡಕಟ್ಟು ಜನಸಮುದಾಯಗಳು ಸಹ ಸಡಗರ ಸಂಭ್ರಮದಿಂದ ಆಯಾ ಸಮುದಾಯಗಳು ನಂಬಿಕೊಂಡು ಬಂದ ಸಂಪ್ರದಾಯದಂತೆ ಮದುವೆ ,ಹಬ್ಬಗಳನ್ನು ಆಚರಿಸಿಕೊಂಡು ಬಂದಿರುವುದನ್ನು ಕಾಣಬಹುದು. ಆದರೆ ಯಾವ ರಾಜ ಮಹಾರಾಜರುಗಳ ಮದುವೆಯಲ್ಲೂ

ಹಸೆಗೋಡೆ ಚಿತ್ತಾರ ಬರೆದು ಮದುವೆ ಮಾಡುತ್ತಿದ್ದರೆಂಬ ಬಗ್ಗೆ ಮಾಹಿತಿ ಉಲ್ಲೇಖವಿಲ್ಲ. ಮಹಾಲಿಂಗ ಸ್ವಾಮಿ ಅವರು ಬರೆದ ಕುಮಾರ ರಾಮ ಸಾಂಗತ್ಯ ಕೃತಿಯಲ್ಲಿ ಹಸೆಮಣೆ ಕುರಿತಾಗಿ ಉಲ್ಲೇಖವಿದೆಯೆಂದು ಸಂಶೋಧಕ ಬಾಬು ಶಿವಪೂಜಾರಿಯುವರು ತಿಳಿಸಿದ್ದಾರೆ.ಬಹುತೇಕ ಸಮುದಾಯುಗಳ ಮದುವೆಶಾಸ್ತ್ರಗಳಲ್ಲಿ ಹಸೆಶಾಸ್ತ್ರಗಳು ಇವೆ. ಆದರೆ ಮಲೆನಾಡಿನ ದೀವರಲ್ಲಿ ಕಾಣಸಿಗುವ ಹಸೆಗೋಡೆ ಚಿತ್ತಾರ ವಿನ್ಯಾಸ ವೈವಿಧ್ಯತೆ ರಾಜ್ಯದ ಬೇರೆ ಸಮುದಾಯಗಳಲ್ಲಿ ಕಂಡುಬರುವುದಿಲ್ಲ.ಬಹುತೇಕ ಬುಡಕಟ್ಟು ಜನಜೀವನ ಪರಂಪರೆಯಲ್ಲೇ ಬೆಳೆದು ತಲೆತಲಾಂತರಗಳಿಂದ್ದ ಸಾಂಪ್ರದಾಯಿಕವಾಗಿ ಬೆಳವಣಿಗೆ ಕಾಣುತ್ತ ಬಂದಿದ್ದು ಆದಿಮ ರೇಖಾ ಶೈಲಿಯ ಚಿತ್ತಾರಗಳ ಜ್ಞಾನಪರಂಪರೆಯೇ ಕಾಲದಿಂದ ಕಾಲಕ್ಕೆ ವಿಕಸಿತ ರೂಪ ತಳೆದು ಪ್ರಾದೇಶಿಕವಾಗಿ ಒಂದಿಷ್ಟು ಬದಲಾವಣೆಗಳೊಂದಿಗೆ ,ನೆಲಮೂಲದ ಸಂಪ್ರದಾಯ ,ನಂಬಿಕೆಗಳ ಭಾಗವಾಗಿ ಇಂದಿಗೂ ನಾವಿನ್ಯರೂಪ ಪಡೆಯುತ್ತಲೇ ಮುಂದುವರಿದಿದೆ.

ದೀವರ ಸಮುದಾಯದಲ್ಲಿ ವೈವಿಧ್ಯಮಯ ಹಸೆಚಿತ್ತಾರ ವಿನ್ಯಾಸ ಬೆಳವಣಿಗೆ

ಹಬ್ಬಗಳೆಂದರೆ ಅಲ್ಲಿ ಸಡಗರ ಸಂಭ್ರಮದ ಜೊತೆಗೆ ಸಂಪ್ರದಾಯಗಳಿಗೆ ಹೆಚ್ಚಿನ ಮಹತ್ವವಿರುತ್ತದೆ. ಹಬ್ಬಗಳಲ್ಲಿ ಮಹಿಳೆಯರ ಪಾತ್ರ ಅಧಿಕ. ಗೃಹಕಾರ್ಯಗಳಿಗೆ ಸೀಮಿತವಾಗಿದ್ದ ಮಹಿಳೆಯರಿಗೆ ಹಬ್ಬಗಳೆಂದರೆ ವಿಶೇಷ ಸಡಗರದ ಜೊತೆಗೆ ಅವುಗಳ ಜೊತೆ ಜೊತೆಗೆ ದೈನಂದಿನ ಏಕತಾನತೆಯನ್ನು ಮೀರುವಿಕೆಯ ಭಾಗವಾಗಿ ಹಾಡುವಿಕೆ ,ಚಿತ್ರಬಿಡಿಸುವಿಕೆ ,ಮನೆಯನ್ನು ಅಲಂಕಾರ ಮಾಡುವಿಕೆಗೆ ತೊಡಗುತ್ತಾಳೆ. ಹೆಣ್ಣಿನ ಸೌಂಧರ್ಯ ಪ್ರಜ್ಞೆ ಬೆಳೆದಂತೆ ತನ್ನ ಮನೆಯನ್ನು ಅಲಂಕಾರಿಸಲು ಆರಂಬಿಸಿದಂತೆ ಹಬ್ಬಗಳಿಗೆ ಮಧುವೆಗಳಿಗೂ ವಿಶೇಷ ಚಿತ್ತಾರಗಳಿಂದ ಅಲಂಕರಿಸುವ ಸಂಪ್ರದಾಯ ರೂಡಿಸಿಕೊಂಡಳು. ತನ್ನ ನೆಲಮೂಲದ ಜ್ಞಾನದೊಂದಿಗೆ ತನ್ನದೇ ಅಭಿವ್ಯಕ್ತಿಯ ಚಿತ್ತಾರವನ್ನು ತನ್ನದೇ ನಾವಿನ್ಯತೆಯೊಂದಿಗೆ ಬಿಡಿಸಲು ಆರಂಭಿಸಿದಂತೆ ವೈವಿಧ್ಯಮಯ ವಿನ್ಯಾಸಗಳು ಪ್ರಾದೇಶಿಕವಾಗಿ ಬೆಳೆದವು. ಹಾಗೆಯೇ ಹಸೆ ಚಿತ್ತಾರ ಸಹ

ಕರ್ನಾಟಕದ ಮಲೆನಾಡಿನ ಭಾಗದಲ್ಲಿ ಆಚರಣೆಗಳ ಮೂಲ ಕಲೆಯಾಗಿ ವೈವಿಧ್ಯಮಯ ವಿನ್ಯಾಸದಲ್ಲಿ ಬೆಳೆಯುತ್ತಾ ಬಂದಿದೆ.

ದೀವರಲ್ಲಿ ಇಂದಿಗೂ ಸ್ತ್ರೀಯರು ಹಲವು ಬಗೆಯ ಹಸೆಚಿತ್ತಾರ ವಿನ್ಯಾಸಗಳನ್ನು ರಕ್ತಗತ ಕಲೆಯಂತೆ ರೂಢಿಸಿಕೊಂಡು ಬಂದಿದ್ದಾರೆ. ಕೆಲವರು ಭಾಗದಲ್ಲಿ ಕೆಲವು ಸಮುದಾಯಗಳು ಹಲಿ.ಹಸಗರ,ಶೇಡಿ ಎನ್ನುವ ಹೆಸರಿನಲ್ಲಿ ಹಲವು ವಿನ್ಯಾಸದ ಚಿತ್ತಾರಗಳನ್ನು ಕಂಡುಕೊಂಡಂತೆ ಮಲೆನಾಡಿನ ದೀವರಲ್ಲಿನ ಚಿತ್ತಾರಗಿತ್ತಿಯರ ಕುಟುಂಬಗಳು ತಮ್ಮ ಸಂಪ್ರದಾಯಗಳಲ್ಲಿ ತಮ್ಮದೇ ವಿಶಿಷ್ಟ ವಿನ್ಯಾಸದ ಚಿತ್ತಾರ ಬರೆಯುವಿಕೆಯನ್ನು ಮೈಗೂಡಿಸಿಕೊಂಡರು.ಇಂದಿಗೂ ಶಿವಮೊಗ್ಗ ,ಉತ್ತರ ಕನ್ನಡ ಜಿಲ್ಲೆಯಲ್ಲಿ ಲಕ್ಷಾಂತರ ದೀವರ ಸ್ತ್ರೀಯರು ಹಸೆಚಿತ್ತಾರವನ್ನೂ ಪ್ರಯತ್ನಪೂರ್ವಕವಾಗಿ ಕಲಿಯದೆ ರಕ್ತಗತ ಕಲೆಯಂತೆ ಲೀಲಾಜಾಲವಾಗಿ ಸೊಗಸಾಗಿ ವೈವಿಧ್ಯಮಯ ವಿನ್ಯಾಸಗಳಲ್ಲಿ ಬಿಡಿಸುವುದನ್ನು ಕಾಣಬಹುದು. ದೀವರ ಕುಟುಂಬಗಳು ತಲೆತಲಾಂತರಗಳಿಂದ ಅದೇ ಹಸೆಚಿತ್ತಾರವನ್ನು ಮದುವೆಗೆ, ಭೂಮಿ ಹುಣ್ಣಿಮೆಗೆ ,ದೀಪಾವಳಿಗೆ ,ಮಹಾನವಮಿಗೆ ಕಡ್ಡಾಯವಾಗಿ ತಮ್ಮದೇ ವಿಧಿವಿದಾನಗಳೊಂದಿಗೆ ಬರೆಯುವುದನ್ನು ಸಂಪ್ರದಾಯವಾಗಿ ರೂಢಿಸಿಕೊಂಡಿದ್ದಾರೆ. ಅದರಂತೆಯೇ ರಾಜ್ಯದ ಹಲವು ಭಾಗಗಳಲ್ಲಿ ಹಲವು ಸಮುದಾಯಗಳು ತಮ್ಮದೇ ಆದ ಚಿತ್ರಕಲಾ ಸಂಸ್ಕೃತಿಯನ್ನು ಸಂಪ್ರದಾಯದಂತೆ ರೂಡಿಸಿಕೊಂಡು ಬಂದಿವೆ.ಇಂದು ಹಸೆಚಿತ್ತಾರ ವೈವಿಧ್ಯಮಯವೂ ವಿಶಿಷ್ಟವೂ ಸಂಕೀರ್ಣವೂ ಆದ ವಿನ್ಯಾಸಗಳಲ್ಲಿ ಮಲೆನಾಡಿನಲ್ಲಿ ಮಾತ್ರ ವಾಸವಿರುವ ದೀವರ ಸಮುದಾಯದಲ್ಲಿ ಹೆಚ್ಚಾಗಿ ಕಾಣಬಹುದು.ಬೇರೆ ಬೇರೆ ಜಾತಿವಾರು ಶೈಲಿಯಲ್ಲಿ ವ್ಯತ್ಯಾಸ ಸಹ ಕಾಣಬಹುದು.



(ಹಸೆಗೋಡೆ ಚಿತ್ತಾರಕ್ಕೆ ಶಾಸ್ತ್ರಬದ್ದವಾಗಿ ಪೂಜೆ ಸಲ್ಲಿಸುತ್ತಿರುವ ದೀವರ ಮದುವೆಯ ವಧುವರರ ಸಾಂಧರ್ಬಿಕ ಚಿತ್ರ. ಮಂಡಗಳಲೆ .ಸಾಗರ ತಾ.)

ಫಲವಂತಿಕೆಯ ಆಚರಣೆಗಳ ಸಂಕೇತಗಳು,ಶಿವ ಪಾರ್ವತಿ, ಸೂರ್ಯ ,ಚಂದ್ರ ,ಪರಿಸರ ಆರಾಧನೆ,ಲೈಂಗಿಕತೆ, ಪತಿಪತ್ನಿಯರ ಸಹಸಂಬಂಧದ ಹಲವು ಸಂಗತಿಗಳನ್ನು ರೇಖೆಗಳ ಮೂಲಕವೇ ಅಭಿವ್ಯಕ್ತಗೊಳಿಸಿರುವುದು ಹಸೆಚಿತ್ತಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗ್ರಹಿಸಬಹುದು.

ಕರ್ನಾಟಕದ ವಿವಿಧ ಬುಡಕಟ್ಟು ಸಮುದಾಯದಲ್ಲಿ ಹಾಗೂ ಕೆಲವು ಇತರೆ ಸಮುದಾಯದ ಹಬ್ಬಗಳು, ಮದುವೆಗಳಲ್ಲಿ ರೇಖಾ ಚಿತ್ತಾರಕಲೆಯ ಹಲವು ಬಗೆಯ ಮಾದರಿಗಳನ್ನು ಬರೆಯಲಾಗುತ್ತದೆ. ಆದರೆ ಮಲೆನಾಡಿನ ದೀವರ ಹಸೆಚಿತ್ತಾರ ವಿನ್ಯಾಸ ಹಾಗು ಮದುವೆಯ ಹಸೆಶಾಸ್ತ್ರ ಸಂಪ್ರದಾಯವೇ ವಿಭಿನ್ನವಾದುದಾಗಿದೆ. ಕರ್ನಾಟಕದ ಬಹುತೇಕ ರಾಜಮನೆತನಗಳಲ್ಲಿ ಹಳೆಪೈಕ ದೀವರು ಸೈನಿಕರಾಗಿ ಸೇವೆಸಲ್ಲಿಸುತ್ತಿದ್ದ ಬಗ್ಗೆ ಶಾಸನಗಳಿವೆ.ದೀವರ ಸಮುದಾಯದ ಪಂಗಡಗಳು ಕುಶಲ ಬೇಟೆಗಾರರೂ, ಕೃಷಿಕರೂ ಆಗಿದ್ದು ವಿಶಿಷ್ಟ ಸಂಸ್ಕೃತಿ ಆಚರಣೆಗಳನ್ನು ರೂಢಿಸಿಕೊಂಡವರು. ದೀವರು ಎನ್ನುವ ಪದಕ್ಕೆ ನಿಘಂಟುಗಳಲ್ಲಿ ಕುಶಾಗ್ರಮತಿಗಳು,ಬುದ್ದಿವಂತರು, ಬೇಟೆಗಾರರೂ ಸೈನಿಕರು ಎನ್ನುವ ಅರ್ಥವಿರುವುದನ್ನು ಇಲ್ಲಿ ಸ್ಮರಿಸಬಹುದು.ದೀವರ ಚಿತ್ತಾರಗಿತ್ತಿಯರಿಗೆ ವೀಳ್ಯೆ ನೀಡಿ ಬೇರೆಬೇರೆ ಸಮುದಾಯಗಳು ಮದುವೆಗೆ ಹಬ್ಬಕ್ಕೆ ಹಸೆಚಿತ್ತಾರ ಬರೆಸುತ್ತಿದ್ದ ಬಗ್ಗೆ ಈಗಲೂ ಹಿರಿಯರು ಸ್ಮರಿಸುತ್ತಾರೆ.

ಹಸೆಚಿತ್ತಾರವನ್ನು ಪ್ರಧಾನವಾಗಿ ಈಗಲೂ ಆಚರಣೆಯ ಭಾಗವಾಗಿ ಕಾಪಾಡಿಕೊಂಡು ಬಂದ ದೀವರು ಈಚಲು ಮರದ ಗರಿಗಳಿಂದ ಮಾಡುವ ಚಾಪೆಗೆ ಹಸೆ ಎನ್ನುತ್ತಾರೆ. ಹಸೆ (ಚಾಪೆ)ಹೆಣೆಯುವುದು ದೀವರ ಸ್ತ್ರೀಯರ ಪ್ರಮುಖ ಕರಕುಶಲ ಕಲೆಯಾಗಿಯೂ ಸಹ ಆಗಿದೆ. ಮಲೆನಾಡಿನ ಭಾಗದಲ್ಲಿ ಈಚಲು ಚಾಪೆಗಳು ಹಿಂದೆ ಹೆಚ್ಚಾಗಿ ಬಳಕೆಯಲ್ಲಿದ್ದವು.ಈಚಲು ಹಣ್ಣುಗಳಿಂದ ಹೆಂಡ ಸಹ ತಾಯಾರಿಸುತ್ತಿದ್ದ ದೀವರು ಸಮುದಾಯ ಈಚಲ ಗರಿಗಳಿಂದ ಸುಂದರವಾದ ವಿವಿಧ ವಿನ್ಯಾಸದ ಚಾಪೆಗಳನ್ನು ಹೆಣೆಯುತ್ತಿದ್ದರು. ಅವರು ಆ ಚಾಪೆಗಳನ್ನು ಹಸೆ ಎಂದು ಕರೆಯುತ್ತಾರೆ. ವಿವಿಧ ಬುಡಕಟ್ಟುಗಳಲ್ಲಿಯೂ ಸಹ ಚಾಪೆ ಹೆಣೆಯುತ್ತಿದ್ದರಾದರೂ ಚಾಪೆಗೆ ನೈಸರ್ಗಿಕ ಬಣ್ಣ ಸೇರಿಸಿ ವಿವಿಧ

ವಿನ್ಯಾಸದಲ್ಲಿ ವೈವಿಧ್ಯಮಯವಾಗಿ ಹೆಣೆಯುವುದನ್ನು ದೀವರ ಹೆಣ್ಣುಮಕ್ಕಳು ರಕ್ತಗತ ಕಲೆಯಂತೆ ಲೀಲಾಜಾಲವಾಗಿ ರೂಢಿಸಿಕೊಂಡಿದ್ದರೆಂದು ಹಿರಿಯರು ಹೇಳುತ್ತಾರೆ.

ಈಗಲೂ ಮಲೆನಾಡಿನ ಸಾಗರ ,ಸೊರಬ ಭಾಗದ ಅಲ್ಲಲ್ಲಿ ಹಸೆ ಹೆಣೆಯುವವರು ಕಾಣಸಿಗುತ್ತಾರೆ. ಮದುವೆ ಶಾಸ್ತ್ರಕ್ಕಾಗಿಯೇ ವಿಶೇಷ ವಿನ್ಯಾಸದ ಚಿತ್ತಾರಗಳು ಮೂಡುವಂತೆ ಹಸೆಗಳನ್ನು ಹೆಣೆಯುವ ಕೌಶಲ ಸಹ ದೀವರ ಚಿತ್ತಾರಗಿತ್ತಿಯರಿಗೆ ಕರಗತವಾಗಿತ್ತು. ದೀವರ ಶಾಸ್ತ್ರೋಕ್ತ ಮದುವೆಗಳಲ್ಲಿ ಈಗಲೂ ಹಸೆಶಾಸ್ತ್ರ ಮತ್ತು ಹಸೆಗೋಡೆ ಚಿತ್ತಾರ ಬರೆಸುವುದು ಕಡ್ಡಾಯ ವಿಧಿ ವಿಧಾನವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ.ಮದುವೆಯ ಹಸೆಶಾಸ್ತ್ರದೊಂದಿಗೆ ಮದುವೆಮನೆ ಅಲಂಕರಿಸಲು ಗೋಡೆಗೆ ಚಿತ್ತಾರ ಬಿಡಿಸುವ ಪದ್ದತಿ ರೂಡಿಸಿಕೊಂಡ ಮೇಲೆ ಹಸೆಗೋಡೆ ಚಿತ್ತಾರ ಎನ್ನುವ ರೂಡಿ ಆಗಿದ್ದು ,ತಲೆಮಾರಿನಿಂದ ತಲೆಮಾರಿಗೆ ವೈವಿಧ್ಯಮಯ ಚಿತ್ತಾರಗಳನ್ನು ಕಂಡುಕೊಂಡವರು ದೀವರು ಸಮುದಾಯ. ಇದು ಮಹಿಳಾ ಅಭಿವ್ಯಕ್ತಿಯ ಕಲೆಯಾಗಿದ್ದು ಹಸೆ ಚಿತ್ತಾರ ಬರೆಯುವ ಸ್ತ್ರೀಯರಿಗೆ ಚಿತ್ತಾರಗಿತ್ತಿ ಎಂದು ಕರೆಯುತ್ತಾರೆ. ದೀವರು ಮದುವೆಗಾಗಿ ನಡುಮನೆಯಲ್ಲಿ , ಜಗುಲಿಯಲ್ಲಿ ಪೂರ್ವಾಭಿಮುಖವಾಗಿ ಹಸೆಗೋಡೆ ಚಿತ್ತಾರವನ್ನು ತಮ್ಮದೆ ಶಾಸ್ತ್ರ ಸಂಪ್ರದಾಯ,ವಿಧಿ ವಿಧಾನಗಳ ಮೂಲಕ ಬಿಡಿಸುತ್ತಾರೆ.ಹಸೆಗೋಡೆ ಜಾಗವನ್ನು ದೇವರ ಕೋಣೆಗೆ ಸಮನಾಗಿ ಶಿಷ್ಟಾಚಾರ ಪಾಲಿಸುವರು.ಯಾವುದೇ ಶುಭ ಸಮಾರಂಭಗಳನ್ನು ಹಸೆಗೋಡೆ ಜಾಗದಲ್ಲಿಯೇ ಮಾಡುವರು.

ದೀವರ ಹಸೆಶಾಸ್ತ್ರ

ದೀವರ ಸಮುದಾಯದ ಮದುವೆ ಶಾಸ್ತ್ರದಲ್ಲಿ ಹಸೆಶಾಸ್ತ್ರ ಪ್ರಮುಖವಾದದ್ದು. ಚಾಪೆಯನ್ನು (ಬೆಡ್) ಹಸೆ ಎಂದು ದೀವರಲ್ಲಿ ಕರೆಯುವ ರೂಢಿಯಿದೆ. ದೀವರ ಸಮುದಾಯದ ಮದುವೆಗಳಲ್ಲಿ

ವಧೂವರರನ್ನು ಕೂರಿಸುವಾಗ ಅಕ್ಕಿಯಲ್ಲಿ ಹದಿನಾರು ಮೂಲೆ ಆರತಿ ಚಿತ್ರ ಚೌಕಾಕಾರವಾಗಿ ಬರೆದು ಇದರ ಮೇಲೆ ಎರಡು ವೀಳ್ಯದೆಲೆ, ಎರಡು ಅಡಿಕೆ ಜಕ್ಕು ಬಾಳೆಕಾಯಿ ಇಟ್ಟು ನಂತರ ಇದರ ಮೇಲೆ ಈಚಲು ಚಾಪೆಗಳನ್ನು ಹಾಸುತ್ತಾರೆ. ಧಾರೆಗೆ ಹೋಗುವ ಮುನ್ನ ವರನ ಮನೆಯಲ್ಲಿ ಹೀಗೆ ಮಾಡುತ್ತಾರೆ. ಇದೇ ರೀತಿ ವಧುವಿನ ಮನೆಯಲ್ಲೂ ಚೌಕ ಬರೆದು ಎಲೆ ಅಡಿಕೆ, ಜಕ್ಕುಬಾಳೆಕಾಯಿ ಇಟ್ಟು ಐದು ಅಥವಾ ಹತ್ತು ಅಥವಾ ಹನ್ನೆರಡು ಈಚಲು ಚಾಪೆಗಳನ್ನು ಹಾಸುತ್ತಾರೆ. ಹಾಸುವ ಚಾಪೆಗಳು ಸರಿ ಸಂಖ್ಯೆಯಲ್ಲಿಯೇ ಇರಬೇಕು ಎಂಬ ನಿಯಮವಿದೆ. ಇವುಗಳ ಮೇಲೆ ಗಂಡಿನ ಮನೆಯವರು ತಂದ ಹಸೆ ಸೀರೆಯನ್ನು ಹಾಸಿ ಇದರ ಮೇಲೆ ವಧುವಿನ ಮನೆಯವರು ಉಡುಗೊರೆಯಾಗಿ ಕೊಡುವ ಜಮಖಾನವನ್ನು ಹಾಸುತ್ತಾರೆ. ನಂತರ ಇದರ ಮೇಲೆ ವಧೂವರರನ್ನು ಕೂರಿಸುತ್ತಾರೆ. ಇದನ್ನೇ **'ಹಸೆ' ಶಾಸ್ತ್ರ** ಎನ್ನುತ್ತಾರೆ. ಹಸೆಯ ಮೇಲೆ ಹಾಸುವ ಅಷ್ಟೂ ಚಾಪೆಗಳನ್ನು ವಧುವಿಗೆ ಉಡುಗೊರೆಯಾಗಿ ವಧುವಿನ ಅಕ್ಕ–ತಂಗಿಯರು, ಸೋದರತ್ತೆಯರು, ಸಂಬಂಧಿಕರು ಕೊಡುತ್ತಾರೆ. ಹಾಸಿದ ಹಸೆಯ ಹಿಂಭಾಗದ ಗೋಡೆಗೆ ಬರೆಸುವ ಫಲವಂತಿಕೆಯ ಆಚರಣೆಯನ್ನು ಸಾಂಕೇತೀಕರಿಸುವ ವಿಶಿಷ್ಟ ವಿನ್ಯಾಸದ ರೇಖೆಗಳು ,ಜ್ಯಾಮಿತಿಯ ಅಂಶಗಳನ್ನು ಒಳಗೊಂಡ ಚಿತ್ತಾರ ಮಾದರಿಯೇ ಹಸೆಚಿತ್ತಾರ. ಅದನ್ನು ವಾಡಿಕೆಯಲ್ಲಿ ಹಸೆಗೋಡೆ ಚಿತ್ತಾರ ಎಂದೂ ಸಹ ಕರೆಯುತ್ತಾರೆ . ಹೀಗೆ ದೀವರ ಮದುವೆಯ ಹಸೆಶಾಸ್ತ್ರದೊಂದಿಗೆ ದೀವರ ಸಮುದಾಯದ ಜನಪದರ ಚಿತ್ತಾರ ಕಲೆ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿ ಭಾಗವಾಗಿಯೂ ಆಚರಣೆಯ ಭಾಗವಾಗಿಯೂ ಬೆಸೆದು ಹಸೆ ಚಿತ್ತಾರ ಶಬ್ದೋತ್ತಿ ಆಗಿದೆ . ಈ ಬಗ್ಗೆ ಇಂದಿಗೂ ದೀವರ ಸಮುದಾಯದ ಬಹುತೇಕ ಪ್ರತಿ ಮದುವೆ ಶಾಸ್ತ್ರದಲ್ಲಿ ಪಾಲಿಸಿಕೊಂಡು ಬಂದಿರುವ ಹಸೆಶಾಸ್ತ್ರ, ಮದುವೆಯ ಹಸೆಗೋಡೆಯನ್ನು ಪರಿಶೀಲಿಸಬಹುದು. ಮದುವೆಯ ಸಮಯದಲ್ಲಿ ನೆಲದ ಮೇಲೆ ಬರೆಯುವ ಆರತಿ ಚಿತ್ತಾರ,ಕೇಲುಕುಂಭ ಚಿತ್ತಾರಗಳು ಸಹ ಸಾಂಪ್ರದಾಯಿಕ ಹಸೆಚಿತ್ತಾರವೆ ಆಗಿದೆ.ತೇರು ಚಿತ್ತಾರ,ಚಚ್ಚೌಕ ಚಿತ್ತಾರ,ಚಕ್ಕಳಮಕ್ಕಳಿ ಚಿನ್ನಾಣಿ ಚಿತ್ತಾರ,ಮುಂಡಿಗೆ ಇರುವ ಹಸೆ ಚಿತ್ತಾರ ಅತಿ ವಿಶಿಷ್ಟ ಹಸೆಚಿತ್ತಾರ ವಿನ್ಯಾಸಗಳು ದೀವರ ಮದುವೆ ಶಾಸ್ತ್ರಗಳಲ್ಲಿ ಈಗಲು

ಕಂಡುಬರುತ್ತದೆ. ಈ ಹಸೆ ಶಾಸ್ತ್ರದ ಹಿಂದೆ ಸಾವಿರಾರು ವರ್ಷಗಳಿಂದ ರೂಢಿಸಿಕೊಂಡು ಫಲವಂತಿಕೆ ಶಾಸ್ತ್ರದ ನಂಬಿಕೆಗಳಿವೆ.

ಹಲವಾರು ಸಮುದಾಯಗಳ ಮದುವೆ ಸಾಂಪ್ರದಾಯಗಳಲ್ಲಿ ವಧುವರರನ್ನು ಹಸೆ ಮೇಲೆ ಕೂರಿಸುವ ವಿಭಿನ್ನ ಶಾಸ್ತ್ರಗಳು ಇವೆಯಾದರೂ ಹೆಸೆಶಾಸ್ತ್ರ ನಡೆಯುವ ಜಾಗದ ಗೋಡೆಯ ಮೇಲೆ ದೀವರ ಚಿತ್ತಾರಗಿತ್ತಿಯರು ಬಿಡಿಸುವಷ್ಟು ವಿಶಿಷ್ಟ ವೈವಿಧ್ಯಮಯ ವಿನ್ಯಾಸದ ಚಿತ್ತಾರ ಬರೆಯುವ ಪರಂಪರೆ ಕರ್ನಾಟಕದ ಬೇರೆ ಸಮುದಾಯಗಳಲ್ಲಿ ಇಲ್ಲ. ಒಂದಿಷ್ಟು ಸರಳ ಮಾದರಿಯ ರೇಖಾ ವಿನ್ಯಾಸದಲ್ಲಿ ಹಲಿ,ಹಸಗರ,ಶೇಡಿ ಎನ್ನುವ ಹೆಸರಿನಲ್ಲಿ ಗೋಡೆಚಿತ್ತಾರ ಬರೆಯುವಿಕೆ ಅಲ್ಲಲ್ಲಿ ಬೇರೆ ಬೇರೆ ಸಮುದಾಯದಲ್ಲಿ ವಿರಳವಾಗಿ ಕಂಡುಬರುತ್ತದೆ. ದೀವರು ಹೆಣೆಯುವ ಈಚಲು ಚಾಪೆಯ ಮೇಲೆಯೂ ಸಹ ಬಣ್ಣ ಬಣ್ಣದಲ್ಲಿ ಚಿತ್ತಾರ ಮಾದರಿಯ ವಿನ್ಯಾಸಗಳಿರುವುದನ್ನು ಸಹ ಗಮನಿಸಬಹುದು.ಅಲ್ಲದೇ ದೀವರ ಮದುವೆ ಶಾಸ್ತ್ರದಲ್ಲಿ ಹಸೆ (ಈಚಲು ಚಾಪೆ) ಮೇಲೆ ಹಾಸುವ ಸೀರೆಗೆ ಹಸೆಸೀರೆ ಎಂತಲೂ ಕರೆಯುವ ಶಾಸ್ತ್ರವೂ ಇದೆ.

ದೀವರಲ್ಲಿ ತಮ್ಮ ಮನೆಗಳಿಗೆ ಬಂದ ಅತಿಥಿಗಳಿಗೆ ಹಸೆ (ಈಚಲು ಚಾಪೆ) ಹಾಕಿ ಕೂರಿಸುವುದು ರೂಢಿಗತವಾದ ಪದ್ಧತಿ. ಮಲೆನಾಡಿನ ದೀವರ ಗ್ರಾಮೀಣ ಸಂಸ್ಕೃತಿಯ ಮೌಲಿಕ ರೂಪಗಳೆನಸಿದ ವಿವಿಧ ನಮೂನೆಯ ಹಸೆ ಚಿತ್ತಾರಗಳ ಜೊತೆಗೆ ಭೂಮಣ್ಣಿ ಹಬ್ಬಕ್ಕಾಗಿ ಬಿದಿರಿನ ಬುಟ್ಟಿಗಳ ಮೇಲೆ ಬರೆಯುವ ಬುಟ್ಟಿ ಚಿತ್ತಾರಗಳು ಈವತ್ತಿನವರೆಗೂ ಸೌಂದರ್ಯಾಭಿರುಚಿಯನ್ನು ಪರಂಪರೆಯಿಂದ ಪರಂಪರೆಗೆ ಆಚರಣೆಗಳ ಭಾಗವಾಗಿಯೂ ಉಳಿಸಿಕೊಂಡು ಬೆಳೆಸಿಕೊಂಡು ಬರಲಾಗಿದೆ. ಭೂಮಣ್ಣಿ ಬುಟ್ಟಿ ಚಿತ್ತಾರದಲ್ಲಿಯೂ ಹಲವಾರು ವಿನ್ಯಾಸದ ಕೆಂಪು,ಕಪ್ಪು,ಬಿಳಿ ಬಣ್ಣದ ಬುಟ್ಟಿ ಚಿತ್ತಾಗಳು ದೀವರಲ್ಲಿ ಮಾತ್ರ ಕಂಡುಬರುತ್ತವೆ. ಮನೆಯ ಗೋಡೆಯ ಮೇಲೆ, ಬಿದಿರು ಬುಟ್ಟಿಗಳ ಮೇಲೆ ರಚಿಸುವ ಚಿತ್ತಾರಗಳು ಹಳ್ಳಿಮನೆ ಗೋಡೆಗಳಿಗಷ್ಟೇ ಸೀಮಿತವಾಗದೆ ಈಗ ಬದಲಾದ ಸಿಮೆಂಟು ಕಾಂಕ್ರೀಟಿನ ಮನೆಗಳ ಮೇಲೂ ಬರೆಸುತ್ತಿದ್ದಾರೆ.ದೀವರ

ಹಸೆ ಚಿತ್ತಾರ ಪರಂಪರೆಯಂತೆ ದೀವರು ವಾಸವಾಗಿರುವ ಪ್ರದೇಶದಲ್ಲಿನ ಮಲೆನಾಡಿನ ಕೆಲವು ಊರಿನ ಕರೆಒಕ್ಕಲಿಗ ಕುಟುಂಬಗಳಲ್ಲಿ, ಮಡಿವಾಳರು, ಹಸಲರು, ಹವ್ಯಕರು ,ಹಾಲಕ್ಕಿಯವರು ಮತ್ತಿತರ ಬೇರೆ ಬೇರೆ ಸಮುದಾಯದ ಕೆಲವು ಕುಟುಂಬಗಳಲ್ಲಿಯೂ ಈ ಮಾದರಿ ಚಿತ್ತಾರ ಬರೆಸುವ ರೂಢಿ ಅನುಸರಿಸಿದ್ದು ಕಂಡು ಬರುತ್ತದೆ.ಆದರೆ ದೀವರ ಪ್ರತಿ ಮನೆಮನೆಯಲ್ಲೂ ಕಡ್ಡಾಯವಾಗಿ ಸಂಪ್ರದಾಯವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ.ಈಗಿನ ಯುವ ಪೀಳಿಗೆ ಆ ಕೌಶಲವನ್ನು ಅಷ್ಟಾಗಿ ರೂಢಿಸಿಕೊಳ್ಳುತ್ತಿಲ್ಲ. ಪ್ಲಾಷ್ಟಿಕ್ ಚಾಪೆಗಳು ಬಂದ ಮೇಲೆ ಈಚಲ ಹಸೆ ಬಳಕೆ ಇಲ್ಲವೆಂದೇ ಹೇಳಬಹುದಾದಷ್ಟು ಕಡಿಮೆಯಾಗಿದೆ. ಆದರೆ ಹಸೆ ಚಿತ್ತಾರ ಮದುವೆ ಶಾಸ್ತ್ರಕ್ಕೆ ದೀವರಲ್ಲಿ ಕಡ್ಡಾಯವಾಗಿದೆ. ಹಸೆಗೋಡೆ ಬರೆಸದೇ ದೀವರ ಮನೆಯಲ್ಲಿ ಮದುವೆಯೇ ನಡೆಯದು ಹಾಗೂ ಭೂಮಣ್ಣಿ ಬುಟ್ಟಿ ಬರೆಸದೆ ಗದ್ದೆಗೆ ಚರಗ ಚೆಲ್ಲುವಂತಿಲ್ಲ ಅನ್ನುವಷ್ಟು ಕಟ್ಟುನಿಟ್ಟು ವಿಧಿ ವಿಧಾನವಾಗಿ ಪಾಲಿಸಿಕೊಂಡು ಬಂದಿರುವುದಿಂದ ಹಸೆಚಿತ್ತಾರ ಇಂದಿಗೂ ಉಳಿದಿದೆ.

ಒಟ್ಟಿನಲ್ಲಿ ಈ ಹಸೆಗೂ, ಹಸೆಶಾಸ್ತ್ರಕ್ಕೂ ,ಹಸೆಚಿತ್ತಾರಕ್ಕೂ ಮದುವೆ ಆಚರಣೆಯಲ್ಲಿ ಸಹಸಂಬಂಧ ಏರ್ಪಟ್ಟು ತಲೆತಲಾಂತರಗಳಿಂದ ದೀವರ ಹೆಂಗಸರಲ್ಲಿ ಬೌದ್ಧಿಕತೆ, ಸೌಂದರ್ಯ ಪ್ರಜ್ಞೆ,ಬೆಳೆದಂತೆ ,ಕಲಾಅಭಿವ್ಯಕ್ತಿ ,ಕೌಶಲಗಳು ಚಿತ್ರಕಲಾ ಗ್ರಹಿಕೆ ವಿಸ್ತರಣೆ ಆದಂತೆ ವಿನ್ಯಾಸದಲ್ಲಿ ನಾವಿನ್ಯತೆ ಕಂಡುಕೊಳ್ಳುತ್ತಾ ಸಾಗಿರುವುದು ಕಂಡುಬರುತ್ತದೆ. ಹಾಗಾಗಿಯೇ ದೀವರಲ್ಲಿ ಹಲವು ಬಗೆಯ ವಿಶಿಷ್ಟ ವೈವಿಧ್ಯಮಯ ಹಸೆಚಿತ್ತಾರ ರೂಡಿಗೆ ಬಂದಿದ್ದು ದೀವರ ಸಮುದಾಯದ ಮನೆಗಳಲ್ಲಿ ಈಗಲೂ ಮದುವೆ ಹಬ್ಬಗಳಲ್ಲಿ ಪ್ರಧಾನ ಆಕರ್ಷಣೆಯಾಗಿ ಕಾಣಸಿಗುತ್ತವೆ.

ಕರ್ನಾಟಕದ ವಿವಿಧ ಜಾತಿ ಸಮುದಾಯಗಳಲ್ಲಿ ಸಾಂಪ್ರದಾಯಿಕ ಚಿತ್ತಾರಗಳು

ಕರ್ನಾಟಕದ ಉದ್ದಗಲಕ್ಕೂ ಕೆಲವು ಕಡೆ ಹಬ್ಬಗಳಿಗೆ ,ಮದುವೆಗೆ ಗೋಡೆ ಚಿತ್ತಾರ ಬರೆಯುವ ಪದ್ದತಿ ಹಿಂದಿನಿಂದ ರೂಢಿಯಲ್ಲಿದೆ.ಪ್ರದೇಶವಾರು,ಸಮುದಾಯಾವಾರು ವಿಭಿನ್ನ ಮಾದರಿ ಸಾಂಪ್ರದಾಯಿಕ ಚಿತ್ತಾರ ಬಿಡಿಸುವ ರೂಡಿ ಸಂಪ್ರದಾಯಗಳಿವೆ. ಬಹುತೇಕ ಕಡೆ ಅವು ಬೊಟ್ಟು ಇಡುವಿಕೆ, ಸರಳ ರೇಖೆಗಳ ಚಿತ್ತಾರ,ಮಂಡಲ ಬರೆಯುವಿಕೆಗೆ ಸೀಮಿತವಾಗಿವೆ. ಇವುಗಳ ಮೂಲ, ಹುಟ್ಟು ,ಬೆಳವಣಿಗೆ ಬಗ್ಗೆ ಇನ್ನೂ ಹೆಚ್ಚಿನ ಪ್ರತ್ಯೇಕ ಅಧ್ಯಯನ ಅಗತ್ಯವಿದೆ. ಮಲೆನಾಡು, ಕರಾವಳಿ ಭಾಗದಲ್ಲಿ ಮಾತ್ರ ಹೆಚ್ಚಾಗಿ ಹಸೆಚಿತ್ತಾರ, ಹಲಿ,ಹಸಗರ,ಶೇಡಿ,ಕಾವಿಚಿತ್ರಕಲೆ, ಮಂಡಲ ಬರೆಯುವಿಕೆಯ ಸಾಂಪ್ರದಾಯಿಕ ಚಿತ್ರಕಲೆಗಳಿವೆ. ಆದರೆ ಅವು ಮಲೆನಾಡಿನ ದೀವರ ಹಸೆಗೋಡೆ ಚಿತ್ತಾರಕ್ಕಿಂತ ವಿಭಿನ್ನ ವಿನ್ಯಾಸ ಹೊಂದಿವೆ. ವಿಭಿನ್ನ ಸಾಂಪ್ರದಾಯಿಕ ನಂಬಿಕೆ,ವಿಧಿ ವಿಧಾನಗಳಿವೆ. ದೀವರಲ್ಲಿ ಕಂಡುಬರುವ ಹಸೆಗೋಡೆ,ಭೂಮಣ್ಣಿ ಬುಟ್ಟಿಚಿತ್ತಾರಗಳ ರೇಖೆಗಳ ವಿಶಿಷ್ಟ ವಿನ್ಯಾಸ ವೈವಿಧ್ಯತೆ, ಸಂಕೀರ್ಣತೆ,ಅಂತಸತ್ವ, ಕರ್ನಾಟಕದ ಯಾವ ಭಾಗದ ಸಮುದಾಯದ ಆಚರಣೆಗಳಲ್ಲಿಯೂ ಕಂಡುಬರುವುದಿಲ್ಲ. ಹಲಿ, ಹಸಗರ,ಶೇಡಿ ,ಕಾವಿ ,ಮಂಡಲ ಕಲೆಗಳ ನಡುವೆ ಸಾಕಷ್ಟು ವಿಭಿನ್ನತೆಗಳಿವೆ.ಉತ್ತರ ಕರ್ನಾಟಕ ಭಾಗದಲ್ಲಿ ಮದುವೆ ಗಾಗಿ ಗೋಡೆ ಮೇಲೆ ಕೆಲವು ಚಿತ್ತಾರ ಬರೆಯುವ ಸಂಪ್ರದಾಯ ಕೆಲವರು ಅನುಸರಿಸುವರು.ಅವು ವಿನ್ಯಾಸದಲ್ಲಿ ತುಂಬಾ ಸರಳವಾಗಿವೆ.

ಹಸೆಚಿತ್ತಾರದಷ್ಟು ಸಂಕೀರ್ಣವಲ್ಲದ ಸರಳ ರೇಖಾವಿನ್ಯಾಸದ ಹಲಿ,ಹಸಗರ,ಕಾವಿ, ಶೇಡಿಯಂತಹ ಸಾಂಪ್ರದಾಯಿಕ ಚಿತ್ರಕಲೆಗಳು ನಮ್ಮ ರಾಜ್ಯದ ಹಲವು ಸಮುದಾಯಗಳ ಹಬ್ಬಗಳ ಆಚರಣೆಗಳಲ್ಲಿ ಈಗಲೂ ಕಾಣಬಹುದು. ಅವುಗಳೆಲ್ಲಾ ಆಯಾ ಸಮುದಾಯದ ಜನಪದರ ಜ್ಞಾನಪರಂಪರೆ, ಸಂಪ್ರದಾಯ ಪರಂಪರೆಯೇ ಆಗಿದ್ದು ಅವೆಲ್ಲವೂ ಪುರಾತನವಾದವುಗಳಾಗಿವೆ.ತಲೆತಲಾಂತರ ವರ್ಷಗಳಿಂದ ಸಾಂಪ್ರದಾಯಿಕ

ಆಚರಣೆಗಳಲ್ಲಿ ,ನಂಬಿಕೆಗಳಲ್ಲಿ ಪರಸ್ಪರ ಕೊಡುಕೊಳ್ಳುವಿಕೆ ನಡೆದಿದೆಯಾದರೂ ಒಂದು ಸಮುದಾಯಕ್ಕಿಂತ ಇನ್ನೊಂದು ಸಮುದಾಯ ತನ್ನದೇ ನೆಲಮೂಲದ ನಂಬಿಕೆಗಳೊಂದಿಗೆ ವಿಭಿನ್ನತೆ ಪೋಷಿಸಿಕೊಂಡು ಬಂದಿರುವುದುನ್ನು ಕಾಣಬಹುದು. ಮೇಲ್ನೋಟಕ್ಕೆ ಎಲ್ಲವೂ ರೇಖೇಗಳ ಸಂಯೋಜನೆಯಂತೆಯೇ ಕಂಡುಬಂದರೂ ಪ್ರತಿ ಸಮುದಾಯದ ಸಾಂಪ್ರದಾಯಿಕ ಚಿತ್ರಕಲೆಯೂ ತನ್ನದೇ ಆದ ಅನನ್ಯತೆಯನ್ನು ಹೊಂದಿದೆ.

ಹಸೆಚಿತ್ತಾರದ ಹೋಲಿಕೆಯಿರುವ ಭಾರತದ ಇತರೆ ಚಿತ್ರಕಲೆಗಳು

ಹಸೆಚಿತ್ತಾರ ಮತ್ತು ಮಹಾರಾಷ್ಟ್ರದ ವರ್ಲಿ (ವಾರ್ಲಿ) ಕಲೆ

ವಾರ್ಲಿ ಜನಾಂಗದವರು ಪ್ರಧಾನವಾಗಿ ಸಂಪ್ರದಾಯದ ಭಾಗವಾಗಿ ಉಳಿಸಿಕೊಂಡು ಬಂದ ಮಹಾರಾಷ್ಟ್ರ ಭಾಗದಲ್ಲಿ ಜನಪ್ರಿಯವಾಗಿರುವ 'ವರ್ಲಿ' ಚಿತ್ರಕಲೆಗೂ ಮಲೆನಾಡಿನ ಪಶ್ಚಿಮ ಘಟ್ಟಗಳಲ್ಲಿ ಮಾತ್ರ ವಾಸಿಸುತ್ತಿರುವ ಕರ್ನಾಟಕ ದೀವರ ಹಸೆಚಿತ್ತಾರ ಚಿತ್ರಕಲಾ ಮಾದರಿಗೂ,ಮಲೆನಾಡಿನ ಇನ್ನಿತರೆ ಕೆಲವು ಸಮುದಾಯಗಳು ಬಿಡಿಸುವ ಸಾಂಪ್ರದಾಯಿಕ ಹಸೆಚಿತ್ತಾರಕ್ಕೂ,ಹಲಿ,ಹಸಗರ,ಶೇಡಿ ಕಲೆಗೂ ಕೆಲವು ಹೋಲಿಕೆಗಳು ಕಂಡುಬಂದರೂ ವಿನ್ಯಾಸದಲ್ಲಿ ಸಾಕಷ್ಟು ವೈವಿಧ್ಯತೆಯಿದೆ. ಮಲೆನಾಡಿಗರ ಸೌಂದರ್ಯಪ್ರಜ್ಞೆ, ಆಚರಣೆಗಳ ಮೂಲದ ಪರಂಪರೆಯ ಚಿತ್ತಾರ ಕಲೆಯಾಗಿರುವ ದೀವರು ಸಮುದಾಯದ ಹಸೆಚಿತ್ತಾರ ಕಲೆಯಲ್ಲಿಯಂತೂ ವಿನ್ಯಾಸದಲ್ಲಿ ಸಾಕಷ್ಟು ಸಂಕೀರ್ಣತೆಯಿದೆ. ಸಾಂಕೇತಿಕ ಅರ್ಥ,ನಂಬಿಕೆಗಳಿವೆ. ಅಂತಸತ್ವದಲ್ಲಿಯೇ ಭಿನ್ನತೆಯಿದೆ.ಇದು ಕರ್ನಾಟಕ ನೆಲಮೂಲದ್ದು ಎನ್ನಲು ಹಲವು ಅಂಶಗಳನ್ನು ಗಮನಿಸಬಹುದು.

ಕರ್ನಾಟಕದ ಹಸೆಚಿತ್ತಾರದಲ್ಲಿ ವಿನ್ಯಾಸದಲ್ಲಿ ಸಾಕಷ್ಟು ವಿಶಿಷ್ಟತೆಯಿದೆ.ಮುಂದುವರಿದ ಕಲಾ ನೈಪುಣ್ಯತೆ ,ಸಂಕೀರ್ಣತೆ, ವೈವಿಧ್ಯಮಯ

ವಿನ್ಯಾಸಗಳು ಕಂಡುಬರುವುದಲ್ಲದೆ,ಚಿತ್ತಾರವು ಹಲವು ಮೂಲಭೂತ ಅಂಶಗಳಿಂದ ,ವಿಧಿ ವಿಧಾನಗಳಿಂದ ಕೂಡಿದೆ. ಪ್ರತಿ ಎಳೆಗಳು ಕೇವಲ ಭೌತಿಕ ರೂಪವಲ್ಲದೆ ಬಾವರೂಪಿಯೂ ಆಗಿದೆ. ನೆಲಮೂಲದ ಪರಂಪರೆಯಲ್ಲಿ,ನಂಬುಗೆಗಳಲ್ಲಿ ಅಂತಃಸತ್ವದಲ್ಲಿ ಅನನ್ಯತೆಯಿದೆ. ಇಂದಿಗೂ ದೀವರ ಸಮುದಾಯದ ಮದುವೆ, ಹಬ್ಬಗಳಲ್ಲಿ ಕಡ್ಡಾಯವಾಗಿರುವ ಹಸೆಚಿತ್ತಾರದ ವಿವಿಧ ಬಗೆಗಳಾದ ಹಸೆಗೋಡೆಚಿತ್ತಾರ, ಭೂಮಣ್ಣಿ ಬುಟ್ಟಿ ಚಿತ್ತಾರ, ಗೋಡೆ ಚಿತ್ತಾರ ,ಬಾಗಿಲು ಚಿತ್ತಾರ, ತಿರುಗೆ ಮಣೆ ಚಿತ್ತಾರಗಳು ಸ್ತ್ರೀ ಸೌಂದರ್ಯ ಪ್ರಜ್ಞೆಯ ಕಲೆಯೊಂದಿಗೆ ಫಲವಂತಿಕೆಯ ಆಚರಣೆ, ನಿಸರ್ಗ ಆರಾಧನೆ, ಜನಪದರ ಸಮುದಾಯಿಕತೆಯ ಅಂತ:ಸತ್ವ ಕಂಡುಬುರುತ್ತದೆ. ವಿನ್ಯಾಸದಲ್ಲೂ ಹೆಚ್ಚಿನ ಜ್ಯಾಮಿತಿಯ ಅಂಶಗಳು, ರೇಖಾ ವಿನ್ಯಾಸ ಕಂಡುಬರುತ್ತವೆ. ಇದು ದೀವರು ಸಮುದಾಯದ ಚಿತ್ತಾರಗಿತ್ತಿಯರ ನೆಲಮೂಲದ ಜ್ಞಾನದಿಂದಲೇ ಬೆಳವಣಿಗೆ ಕಂಡ ಚಿತ್ತಾರ ಕಲೆಯಾಗಿದ್ದು ಶಿವಮೊಗ್ಗ ಭಾಗದಲ್ಲಿ ದೀವರ ಭೂಮಣ್ಣಿ ಬುಟ್ಟಿ , ದೀವರ ಹಸೆಚಿತ್ತಾರ ಎಂದೆ ರೂಢಿಗತವಾಗಿದೆ. ಈ ಬಗ್ಗೆ ಪದೋತ್ಪತ್ತಿಯಲ್ಲಿ ಹೇಳುವಾಗ ವಿವರವಾಗಿ ವಿವರಿಸಿದ್ದೇನೆ. ವರ್ಲಿ ಜನಾಂಗದ ಚಿತ್ತಾರ ಕಲೆಯ ಮೋಟಿಪ್‌ಗಳಿಗೆ ಕನ್ನಡದಲ್ಲಿ ದೀವರು ತಮ್ಮ ಹಸೆಚಿತ್ತಾರದ ಮೋಟಿಪ್‌ಗಳಿಗೆ ಕರೆಯುತ್ತಿರುವ ಬಾಸಿಂಗ, ಪಪ್ಪುಳಿ,ಸೂರ್ಯ ಚಂದ್ರ ಮತ್ತಿತರ ಪದಗಳನ್ನೇ ಕರೆಯುತ್ತಾರೆ. ಅಲ್ಲದೆ ಮಹಾರಾಷ್ಟ್ರದಲ್ಲಿ ನೆಲೆಸಿರುವ ವರ್ಲಿ ಜನಾಂಗದ ಮಾತೃಭಾಷೆ ಮರಾಠಿ ಅಲ್ಲ. ಅವರ ವಾರ್ಲಿ ಭಾಷೆಯಲ್ಲಿ ಹಿಂದಿ ಜೊತೆಗೆ ಹಲವು ಕನ್ನಡ ಶಬ್ದಗಳ ಬಳಕೆಯಿದ್ದು ಹಿಂದೆ ನರ್ಮದಾನದಿ ತೀರದವರೆಗೂ ಹಬ್ಬಿದ್ದ ಕನ್ನಡ ಭೂಭಾಗದ ವಾಸಿಗಳೇ ಆಗಿರುವ ಸಾಧ್ಯತೆಗಳಿದ್ದು ಈ ಬಗ್ಗೆ ಇನ್ನಷ್ಟು ಅಧ್ಯಯನ ಆಗಬೇಕಿದೆ.

ವರ್ಲಿ ಜನಸಮುದಾಯ ಅಲ್ಲಿನ ನೆಲಮೂಲದ ಪರಿಸರದಿಂದ ಪ್ರಭಾವಿತರಾಗಿದ್ದು ಅವರ ಚಿತ್ರಗಳಲ್ಲಿನ ಗಿಡ ಮರ ಹೂವುಗಳ ಚಿತ್ತಾರಗಳಿಂದ ತಿಳಿಯುತ್ತದೆ. ಹಸೆಚಿತ್ತಾರದಲ್ಲಿ ಮಲೆನಾಡಿನ ಪರಿಸರ ಪ್ರಭಾವ ಅಭಿವ್ಯಕ್ತಿ ಕಂಡುಬರುತ್ತದೆ.ಚೆಂಡುಹೂವಿನ ಸಾಲು, ಕೌಳಿಮಟ್ಟಿ, ಮೊಗ್ಗೆಸಾಲು,ಬಾಳೆಮರ, ಮಾವಿನ ಎಲೆ, ಅರಳಿ ಎಲೆ ,ಮುಂಡಿಗೆ ಬರೆಯುವಿಕೆ,ದಂಡಿಗೆ (ಫಲ್ಲಕ್ಕಿ)

ಗೋಪುರ, ಮಾದ್ನಕೈ,ಕುಂಬ,ಗರಗಸ ಸಾಲು,ತೇರು ಚಿತ್ತಾರ ಪ್ರಮುಖ ಆಕರ್ಷಣೆಯಾಗಿ ಹಸೆಚಿತ್ತಾರವು ವಿನ್ಯಾಸದಲ್ಲಿ ಸಾಕಷ್ಟು ಮುಂದುವರಿದ ಸಂಕೀರ್ಣ ವಿನ್ಯಾಸವಾಗಿ ಕಂಡುಬರುತ್ತದೆ. ಬರೆಯುವ ವಿಧಿ ವಿಧಾನಗಳು ,ನಂಬಿಕೆಗಳಲ್ಲೂ ಭಿನ್ನತೆಗಳಿವೆ.

ಕರ್ನಾಟಕದ ಮಲೆನಾಡಿನ ಭಾಗದ ಕೆಲವೇ ಬೆಟ್ಟಗುಡ್ಡವಾಸಿಗಳ ಜನಗಳಲ್ಲಿನ ಕೆಲವು ಕುಟುಂಬಗಳಲ್ಲಿ ಸರಳ ವಿನ್ಯಾಸಗಳಲ್ಲಿ ಕಂಡುಬಂದು ಪ್ರಧಾನವಾಗಿ ದೀವರು ವೈವಿಧ್ಯಮಯ ಸಂಕೀರ್ಣ ವಿನ್ಯಾಸಗಳಲ್ಲಿ ಸಮುದಾಯದಲ್ಲಿ ಪ್ರತಿ ಕುಟುಂಬದಲ್ಲಿ ಕಡ್ಡಾಯವಾಗಿ ಪರಂಪರೆಯಿಂದ ಹಬ್ಬ,ಮದುವೆ, ನಿಸರ್ಗ ಆರಾಧನೆಯ ಭಾಗವಾಗಿ ಉಳಿಸಿಕೊಂಡು ಬೆಳೆಸಿಕೊಂಡು ಬರಲಾಗಿದ್ದು ಪುರಾತನವಾದುದಾಗಿದೆ. ಹಿಂದೆ ಈಚಲು ಗರಿಗಳ ಹಸೆಯ ತಟ್ಟಿ ಮನೆಯಿಂದಾದಿಯಾಗಿ ,ಆನಂತರ ಮಣ್ಣಿನ ಗೋಡೆಗಳ ಮನೆ, ಇಂದಿನ ಕಾಂಕ್ರೀಟು ಮನೆಗಳಲ್ಲಿಯೂ ದೀವರು ಕಡ್ಡಾಯವಾಗಿ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ . ಈ ಕಲೆಯನ್ನೂ ಅನಕ್ಷರಸ್ಥ ಸ್ತ್ರೀಯರೇ ಈವರೆಗೆ ಉಳಿಸಿಕೊಂಡು ಬಂದಿದ್ದಾರೆ. ಈ ಕಲೆ ಸೃಜನೆಯ ಹಿಂದಿರುವ ಪರಿಸರ ಪ್ರೇಮ, ಹಬ್ಬಗಳ ಸಡಗರ ,ಪರಿಸರದೊಂದಿಗೆ ಬದುಕು ,ಪರಿಸರಕ್ಕೆ ಕೃತಜ್ಞತಾ ಅರ್ಪಣೆಯ ಮನೋಬಾವವಿರುವಿಕೆಯನ್ನು ಭೂಮಣ್ಣಿಬುಟ್ಟಿ ಚಿತ್ತಾರ ಕಲೆಯಲ್ಲಿ ಗುರುತಿಸಬಹುದು.

ವಾರ್ಲಿ ಚಿತ್ರಕಲೆಯ ಮೂಲ ಮತ್ತು ಪರಂಪರೆ

ವಾರ್ಲಿ ಸಾಂಪ್ರದಾಯಿಕ ಗೋಡೆ ಚಿತ್ರಕಲೆ. ವಾರ್ಲಿ ಜನಸಮುದಾಯವು ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ವಾಸಿಸುವ ಸ್ಥಳೀಯ ಬುಡಕಟ್ಟು ಸಮುದಾಯವಾಗಿದೆ. ಇವರ ಮಾತೃಭಾಷೆ ಮರಾಠಿಯಲ್ಲ.ಲಿಪಿಯಿಲ್ಲದ ವಾರ್ಲಿ ಭಾಷೆಯಲ್ಲಿ ಹಿಂದಿ,ಗುಜರಾತಿ,ಮರಾಠಿ,ಕನ್ನಡ ,ಸಂಸ್ಕೃತ ಪದಗಳು ಸಹ ಅವರ ಭಾಷೆಯಲ್ಲಿವೆ. ಅವರು ಮೂಲತಃ ಬೇಟೆಗಾರರಾಗಿದ್ದರು

ಆದರೆ ಅರಣ್ಯನಾಶ ಮತ್ತು ಅಸ್ತಿತ್ವದಲ್ಲಿರುವ ಕಾಡುಗಳಿಗೆ ಪ್ರವೇಶವನ್ನು ನಿರಾಕರಿಸಿದ್ದರಿಂದ, ಭತ್ತ ಕೃಷಿಯು ಈಗ ಅವರ ಅಸ್ತಿತ್ವದ ಮುಖ್ಯ ಕಸುಬಾಗಿದೆ. ಇಂದಿಗೂ ಅವರ ಸಂಪೂರ್ಣ ಜೀವನವು ಪ್ರಕೃತಿಯ ಸುತ್ತ ಸುತ್ತುತ್ತದೆ. ವಾರ್ಲಿಯು "ವಾರಲ್" ಎಂಬ ಪದದಿಂದ ಹುಟ್ಟಿಕೊಂಡಿದೆ, ಇದರರ್ಥ ಸಣ್ಣ ತುಂಡು ಭೂಮಿ. ವಾರ್ಲಿಗಳು ಹಿಂದಿ, ಮರಾಠಿ, ಗುಜರಾತಿ ಉಪಭಾಷೆಗಳನ್ನು ಒಳಗೊಂಡಿರುವ ಅಲಿಖಿತ ಭಾಷೆಯನ್ನು ಮಾತನಾಡುತ್ತಾರೆ.ಅವರ ಭಾಷೆಯಲ್ಲಿ ಕನ್ನಡ ಪದಗಳು ಸಹ ಇದ್ದು ಇನ್ನಷ್ಟು ಅಧ್ಯಯನ ಅವರ ಭಾಷೆಯ ಸುತ್ತ ನಡೆದರೆ ವಾರ್ಲಿ ಜನರ ಮೂಲ,ಅವರ ಕಲೆಯ ಮೂಲ,ವಿಕಾಸದ ಬಗ್ಗೆ ಹೆಚ್ಚು ಮಾಹಿತಿ ದೊರೆಯಬಹುದು. . ಎಪ್ಪತ್ತರ ದಶಕದ ಆರಂಭದಲ್ಲಿ ವಾರ್ಲಿ ಕಲೆಯನ್ನು ಬೇರೆ ಬೇರೆ ಕಲಾವಿದರು ಇಷ್ಟಪಟ್ಟು ಚಿತ್ರಿಸಲು ಆರಂಭಿಸಿ ಸಾಂಪ್ರದಾಯಿಕ ಪರಿಧಿಯಿಂದಾಚೆ ಹೆಚ್ಚು ಪ್ರಚಾರ ಮಾಡಿದರು.

ಈ ಕಲೆಯ ನಿಖರವಾದ ಮೂಲದ ಬಗ್ಗೆ ಯಾವುದೇ ದಾಖಲೆಗಳಿಲ್ಲದಿದ್ದರೂ, ಅದರ ಬೇರುಗಳು ಸಹ ಪುರಾತನ ಮಾನವನ ಬಂಡೆಚಿತ್ರಕಲೆಯಲ್ಲಿಯೇ ಇದೆ. ಹಿಂದೆ ಲಿಖಿತ ಭಾಷೆಯ ಪರಿಚಯವಿಲ್ಲದ ಅವರಿಗೆ ತಮ್ಮ ಸಾಂಪ್ರದಾಯಿಕತೆ ,ಅಭಿವ್ಯಕ್ತಿಯನ್ನು ರವಾನಿಸುವ ಏಕೈಕ ಸಾಧನ ಅವರ ಚಿತ್ರಕಲೆಯಾಗಿತ್ತು. ಅಲಂಕಾರಿಕ ಕಲೆಯ ವಿಶಿಷ್ಟ ರೂಪಕ್ಕಾಗಿ ವಾರ್ಲಿ ಕಲೆ ಇಂದು ಜನಪ್ರಿಯವಾಗಿ ಗಣ್ಯ ವಲಯಗಳಲ್ಲಿ ಪ್ರಸಿದ್ಧವಾಗಿದೆ. ಅವರು ಜೀವನವನ್ನು ವಿವರವಾಗಿ ಮತ್ತು ತಮ್ಮ ದಿನಚರಿಯನ್ನು ಸುತ್ತುವರೆದಿರುವ ಪ್ರತಿಯೊಂದು ಅಂಶವನ್ನು ಚಿತ್ರಿಸುವ ಅದ್ಭುತವಾದ ರೀತಿಯಲ್ಲಿ ಚಿತ್ರಿಸುತ್ತಾರೆ. ಸಾಂಪ್ರದಾಯಿಕವಾಗಿ, ಅವರು ಆಚರಣೆಗಳ ಸಮಯದಲ್ಲಿ ಅಥವಾ ಶುಭ ಸಮಾರಂಭಗಳಲ್ಲಿ ಗೋಡೆಗಳ ಮೇಲೆ ಚಿತ್ರಿಸುತ್ತಿದ್ದರು, ಆದರೆ ಕ್ರಮೇಣವಾಗಿ ಚಿತ್ರಗಳು ಮತ್ತು ಥೀಮ್‌ಗಳನ್ನು ಬಿದಿರು, ಬಟ್ಟೆ, ಮಣ್ಣಿನ ಮಡಕೆಗಳು ಮತ್ತು ಒಣಗಿದ ಬಾಟಲ್ ಸೋರೆಕಾಯಿಯ ಮೇಲೂ ಚಿತ್ರಿಸುವ ಮಟ್ಟಕ್ಕೆ ವರ್ಗಾಯಿಸಲಾಯಿತು.

ಅವರ ಚಿತ್ರಕಲೆಗಳಲ್ಲಿ ಕಂಡುಬರುವ ಮುಖ್ಯ ವಿಷಯವೆಂದರೆ ಸುರುಳಿಗಳು ಮತ್ತು ತೆರೆದ ವಲಯಗಳಲ್ಲಿ ನೃತ್ಯ ಮಾಡುವ ಜನರು. ವಾರ್ಲಿಯ ಸಾಂಪ್ರದಾಯಿಕ ಗುಡಿಸಲು ಅವರ ಕಲೆಯು ಅವರ ಅಂತರ್ಗತ ತತ್ವಶಾಸ್ತ್ರದ ಒಂದು ತೀಕ್ಷ್ಣವಾದ ಅಂಶವನ್ನು ವ್ಯಕ್ತಪಡಿಸುತ್ತದೆ. ಅವರ ಎಲ್ಲಾ ಕಥೆಗಳು, ಅದರ ವಿವಿಧ ಮನಸ್ಥಿತಿಗಳು ಮತ್ತು ಸೂಕ್ಷ್ಮ ವ್ಯತ್ಯಾಸಗಳನ್ನು ಕೇವಲ ಎರಡು ಮೂಲ ಬಣ್ಣಗಳಿಂದ ವ್ಯಕ್ತಪಡಿಸಲಾಗುತ್ತದೆ . ಭೂಮಿಯ ಕಂದು ಮತ್ತು ಅಕ್ಕಿಯಿಂದ ಬಿಳಿ ಬಣ್ಣ ತಾಯಾರಿಸಿಕೊಳ್ಳುತ್ತಾರೆ.

ವಾರ್ಲಿ ವರ್ಣಚಿತ್ರಗಳು ಸಾಂಪ್ರದಾಯಿಕವಾಗಿ ವಾರ್ಲಿ ಮಹಿಳೆಯರ ಕ್ಷೇತ್ರವಾಗಿದೆ. ಈ ವರ್ಣಚಿತ್ರಗಳನ್ನು ಸುವಾಸಿನಿಯರು ಅಥವಾ ವಿವಾಹಿತ ಮಹಿಳೆಯರಿಂದ ಮದುವೆಯ ಸಮಯದಲ್ಲಿ ಮನೆಗಳ ಗೋಡೆಗಳ ಮೇಲೆ ಚಿತ್ರಿಸುವರು. ಈಗ ಪುರುಷರೂ ಸಹ ವಾರ್ಲಿ ಚಿತ್ರ ಬಿಡಿಸುತ್ತಾರೆ. ಭಾರತದ ಇತರ ಜನಪದರ ಮತ್ತು ಬುಡಕಟ್ಟು ವರ್ಣಚಿತ್ರಗಳಂತೆ ವಾರ್ಲಿ ವರ್ಣಚಿತ್ರಗಳು ಯಾವುದೇ ಪೌರಾಣಿಕ ಕಥೆಗಳನ್ನು ಚಿತ್ರಿಸುವುದಿಲ್ಲ. ವಾರ್ಲಿ ಚಿತ್ತಾರಗಳು ಪರಿಸರದಲ್ಲಿನ ಸಸ್ಯ ಮತ್ತು ಪ್ರಾಣಿ ಮತ್ತು ಅವುಗಳ ಹಬ್ಬಗಳು ಮತ್ತು ಅವರ ದಿನನಿತ್ಯದ ಚಟುವಟಿಕೆಗಳ ಮೇಲೆ ಕೇಂದ್ರೀಕೃತವಾಗಿದೆ.

ವಾರ್ಲಿ ಚಿತ್ರಕಲೆಯ ಸ್ವರೂಪ

ವಾರ್ಲಿ ಚಿತ್ರಕಲೆಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು

1) ದೇವರುಗಳು, 2) ಜನರು, 3) ಪ್ರಾಣಿಗಳು 4) ಹಬ್ಬಗಳು ಮತ್ತು ಆಚರಣೆಗಳು. ವಾರ್ಲಿ ಜನರು ಈ ನಾಲ್ಕು ಪ್ರಮುಖ ವರ್ಗಗಳ ಸುತ್ತಲೂ ಚಿತ್ರಿಸುತ್ತಾರೆ. ಅವರು ಹಬ್ಬಗಳು, ಆಚರಣೆಗಳು ಮತ್ತು ಇತರ ಶುಭ ಸಮಾರಂಭಗಳ ಬಗ್ಗೆ ಚಿತ್ರಿಸುತ್ತಾರೆ.

ಎಲ್ಲಾ ಬುಡಕಟ್ಟು ವಾರ್ಲಿಯಂತೆ ಸರಳ, ವಿಧೇಯ ಮತ್ತು ವಿನೋದವನ್ನು ಪ್ರೀತಿಸುವ ಜನರು. ಹಬ್ಬಗಳು ಮತ್ತು ಸಂದರ್ಭಗಳಲ್ಲಿ ನೃತ್ಯ, ಸಂಗೀತ, ಆಹಾರ ಮತ್ತು ಮದ್ಯದೊಂದಿಗೆ ಆಚರಿಸಲಾಗುತ್ತದೆ. ವಾರ್ಲಿ ಜನರು ಅನೇಕ ಹಬ್ಬಗಳನ್ನು ಆಚರಿಸುತ್ತಾರೆ ಮತ್ತು ಈ ಆಚರಣೆಯು ಹಾಡುಗಾರಿಕೆ, ನೃತ್ಯ, ಕುಡಿಯುವುದು ಮತ್ತು ಆ ಹಬ್ಬಗಳ ಸಾಂಪ್ರದಾಯಿಕತೆಯಂತೆ ಮನೆಯ ಗೋಡೆಗಳನ್ನು ವರ್ಣಚಿತ್ರಗಳಿಂದ ಅಲಂಕರಿಸುವುದು ಒಳಗೊಂಡಿರುತ್ತದೆ. 'ತರ್ಪ ನೃತ್ಯ' ಪ್ರದರ್ಶಿಸುವ ಮೂಲಕ ಆಚರಿಸುವ ದೀಪಾವಳಿ ಹಬ್ಬಕ್ಕಾಗಿ, ಅವರು ತಮ್ಮ ಗೋಡೆಗಳ ಮೇಲೆ ಪುರುಷರು ಮತ್ತು ಮಹಿಳೆಯರು ಹಾಡುವ ಮತ್ತು ತರ್ಪ ನೃತ್ಯವನ್ನು ಬಣ್ಣಿಸುತ್ತಾರೆ. ಈ ಚಿತ್ರಕಲೆ ಅತ್ಯಂತ ಪ್ರಸಿದ್ಧವಾದ ಚಿತ್ರಕಲೆಗಳಲ್ಲಿ ಒಂದಾಗಿದೆ, ಇದು ಸುರುಳಿಗಳು ಮತ್ತು ತೆರೆದ ವಲಯಗಳಲ್ಲಿ ಜನರು ನೃತ್ಯ ಮಾಡುವುದನ್ನು ತೋರಿಸುತ್ತದೆ.

ಅವರ ಕಲೆಯು ಅವರ ಅಂತರ್ಗತ ತತ್ವಶಾಸ್ತ್ರದ ಒಂದು ತೀಕ್ಷ್ಣವಾದ ಅಂಶವನ್ನು ವ್ಯಕ್ತಪಡಿಸುತ್ತದೆ. ಅವರ ಎಲ್ಲಾ ಕಥೆಗಳು, ಅದರ ವಿವಿಧ ಮನಸ್ಥಿತಿಗಳು ಮತ್ತು ಸೂಕ್ಷ್ಮ ವ್ಯತ್ಯಾಸಗಳೊಂದಿಗೆ ಕೇವಲ ಎರಡು ಮೂಲಭೂತ ಬಣ್ಣಗಳಲಿ ವ್ಯಕ್ತಪಡಿಸಲಾಗುತ್ತದೆ. ಭೂಮಿಯ ಕಂದು ಮತ್ತು ಅಕ್ಕಿ ಪೇಸ್ಟ್‌ನ ಬಿಳಿ ಬಣ್ಣ ಬಳಸುವರು. ಅವರು ಗೋಡೆಗಳನ್ನು ಚಿತ್ರಿಸುವ ಮೂಲಕ ಮದುವೆಯನ್ನು ಆಚರಿಸುತ್ತಾರೆ. ಇದು 'ಚಾವ್ಕ್' (ದೇವ ಚೌಕ) ಎಂದು ಕರೆಯಲ್ಪಡುವ ಅತ್ಯಂತ ಪ್ರಸಿದ್ಧ ಚಿತ್ರಕಲೆಯಾಗಿದ್ದು, ಅಲ್ಲಿ ಮಹಿಳೆಯರು ಸುವಾಸಿನಿ ಎಂದು ಕರೆಯುತ್ತಾರೆ. ಮುಖ್ಯ ಕೋಣೆಗೆ ಎದುರಾಗಿರುವ ತಮ್ಮ ಪವಿತ್ರ ಅಡುಗೆಮನೆಯ ಗೋಡೆಯ ಮೇಲೆ ಚೌಕ್ ಅನ್ನು ಚಿತ್ರಿಸುತ್ತಾರೆ. ಚಿತ್ರಿಸಲು ಪ್ರಾರಂಭಿಸುವ ಮೊದಲು, ಈ ಗೋಡೆಗಳನ್ನು ಮೊದಲು ಹಸುವಿನ ಸಗಣಿಯಿಂದ ಸಾರಿಸುವರು. ಗೋಡೆಯ ಪ್ರಮುಖ ಭಾಗವನ್ನು ಕೆಂಪು ಮಣ್ಣಿನಿಂದ ಲೇಪಿಸಲಾಗುತ್ತದೆ. ಇದರ ಮೇಲೆ ಒಂದು ಚೌಕ್‌ಅನ್ನು ಚಿತ್ರಿಸಲಾಗುತ್ತದೆ ಮತ್ತು ಮಧ್ಯದಲ್ಲಿ

ತಾಯಿ ದೇವತೆ ಪಾಲಘಟವನ್ನು ಇರಿಸಲಾಗುತ್ತದೆ, ಏಕೆಂದರೆ ಅವಳು ಮದುವೆಗೆ ಹಾಜರಿರಬೇಕು. ಪಾಲಘಾಟ ದೇವಿಯು ಫಲವತ್ತತೆಯ ದೇವತೆಯನ್ನು ಪ್ರತಿನಿಧಿಸುತ್ತಾಳೆ. ಚೌಕ್‌ನ ಸುತ್ತಲಿನ ಜಾಗವು ದೇವತೆ, ಪ್ರಾಣಿಗಳು ಮತ್ತು ಪುರುಳರಿಗೆ ನೆರಳು ನೀಡುವ ಚುಕ್ಕೆಗಳ ಮರಗಳಿಂದ ತುಂಬಿರುತ್ತದೆ, ನೃತ್ಯ, ಸಂಗೀತ ನುಡಿಸುವುದು, ಮರಗಳನ್ನು ಏರುವುದು, ಹೊರೆಗಳನ್ನು ಹೊತ್ತುಕೊಳ್ಳುವುದು, ಅಥವಾ ತಮ್ಮ ಕೈಕಾಲುಗಳನ್ನು ಗಾಳಿಯಲ್ಲಿ ಹಾರಿಸುವುದು ಮತ್ತು ವಿವಿಧ ವಸ್ತುಗಳನ್ನು ಬಳಸುವುದು ಮತ್ತಿತರ ಚಿತ್ರ ಚಿತ್ರಿಸುವರು.ಸೂರ್ಯ ಮತ್ತು ಚಂದ್ರರನ್ನು ಸಹ ಒಳಗೊಂಡಿದೆ, ಅಂದರೆ ವಧುವರರು, ಸೂರ್ಯ ಮತ್ತು ಚಂದ್ರರು ಭೂಮಿಯ ಮೇಲೆ ಹೊಳೆಯುವವರೆಗೂ ವೈವಾಹಿಕ ಆನಂದವನ್ನು ಅನುಭವಿಸುತ್ತಾರೆ ಎನ್ನುವ ನಂಬಿಕೆ. ವಾಸ್ತವವಾಗಿ ಈ ಘಟನೆ ಇಲ್ಲದೆ ಮದುವೆ ನಡೆಯುವುದಿಲ್ಲ. ಇಂದು ಕಾಗದದ ಮೇಲೆ,ರಸ್ತೆಯಂಚಿನ ಗೋಡೆಗಳ ಮೇಲೆ ಕಲಾವಿದರು ಚಿತ್ರಿಸಲು ಆರಂಬಿಸಿದ ಮೇಲೆ ವಾರ್ಲಿ ವರ್ಣಚಿತ್ರಗಳು ಬಹಳ ಜನಪ್ರಿಯವಾಗಿವೆ . ಕರ್ನಾಟಕದ ಮಲೆನಾಡಿನ ಭಾಗದ ಹಸೆ ಚಿತ್ತಾರ ವರ್ಲಿ ಚಿತ್ರಕ್ಕಿಂತ ವಿನ್ಯಾಸದಲ್ಲಿ ವೈವಿಧ್ಯತೆಯಿಂದಲೂ ,ಸಂಕೀರ್ಣತೆಯಿಂದಲೂ ,ಸಂಪ್ರದಾಯಿಕ ಅಂತಃಸತ್ವದಿಂದ ಕೂಡಿದ್ದು ವರ್ಲಿಗಿಂತ ಸಾಕಷ್ಟು ಬಿನ್ನವಾಗಿದೆ. ಮಲೆನಾಡಿನ ದೀವರ ಹಸೆಚಿತ್ರಕಲೆಗೂ ವಾರ್ಲಿ ಜನಾಂಗದ ಮದುವೆ ಶಾಸ್ತ್ರಗಳಿಗೂ ,ಮದುವೆಗೆ ಬರೆಯುವ ಹಸೆಗೋಡೆ ಚಿತ್ತಾರಕ್ಕೂ ಅತಿ ಹತ್ತಿರದ ಕೆಲವು ಹೋಲಿಕೆಗಳಿದ್ದು ಯಾವುದೋ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಆಗಿದೆ ಎನ್ನಬಹುದು.

ಕರ್ನಾಟಕದ ದೇಶೀ ಚಿತ್ರಕಲೆ ಹಸೆ ಚಿತ್ತಾರ ರವಿರಾಜ್ ಸಾಗರ್

ಪರಂಪರೆಯಿಂದ ಬಂದ ವಿವಿಧ ಸಾಂಪ್ರದಾಯಿಕ ಚಿತ್ರಕಲೆಗಳು

ದೇಶಾದ್ಯಾಂತ ಹಲವು ಬಗೆಯ ಸಾಂಪ್ರದಾಯಿಕ ಚಿತ್ರಕಲೆಗಳು ಇಂದಿಗೂ ಕಾಣಬಹುದು.ರಾಜಸ್ತಾನದ ಮಾಂಡನಾ, ಮಂಡಲ, ಬಿಹಾರದ ಮಧುಬನಿ ಗೋವಾದ ಕಾವಿ, ಒರಿಸ್ಸಾದ ಸೊರಾ, ರಂಗೋಲಿ ಮತ್ತಿತರ ಹಲವು ಚಿತ್ರಕಲೆಗಳಿವೆ. ಯಾವುದೇ ಹಬ್ಬದ ಸಂಭ್ರಮಗಳಲ್ಲೂ ಮನೆಯ ಮುಂದೆ ಹಾಕುವ ಸುಂದರವಾದ ಬಣ್ಣದ ರಂಗೋಲಿ, ಚಿತ್ತಾರಗಳು ನಮ್ಮ ಸಂಪ್ರದಾಯ ಮತ್ತು ಅಲಂಕಾರದ ಭಾಗವಾಗಿ ನಮ್ಮನ್ನು ಆಕರ್ಷಿಸುತ್ತದೆ ಮತ್ತು ಮನಸ್ಸಿಗೆ ಮುದವನ್ನು ನೀಡುತ್ತದೆ. ಸಾಂಪ್ರದಾಯಿಕ ಚಿತ್ರಗಳನ್ನು ಕಂಡೊಡನೆ ಮನಸ್ಸು ಕ್ಷಣಮಾತ್ರಕ್ಕಾದರೂ ಅಲ್ಲಿಯೇ ನೆಟ್ಟು, ನಮಗರಿವಿಲ್ಲದಂತೆ ಹಿತವಾದ ಭಾವನೆಯನ್ನು, ಸಂತೋಷವನ್ನು ತಂದುಕೊಳ್ಳುತ್ತದೆ. ಚಿತ್ರಗಳ ರೂಪದಲ್ಲಿಯೇ ಮನಸ್ಸಿಗೆ ಅದಮ್ಯವಾದ ಶಕ್ತಿಯನ್ನು ತುಂಬುವ,ಆಕರ್ಷಿಸುವ ಆಚರಣೆಗಳ ಮೂಲದ ಆಧ್ಯಾತ್ಮಿಕ ಕಲೆಯೇ ಸಾಂಪ್ರದಾಯಿಕ ಚಿತ್ರಕಲೆಗಳು. ಅವುಗಳಲ್ಲಿ ಹಸೆಚಿತ್ತಾರದಂತೆ ಮಂಡಲ ಕಲೆಯೂ ಸಹ ಒಂದು.

ವೇದಗಳ ಪೂರ್ವದಲ್ಲೂ ನಮ್ಮ ಜನಪದರು ತಮ್ಮ ನೆಲಮೂಲದ ಜ್ಞಾನದಿಂದಲೇ ತಮ್ಮದೇ ಆದ ನಂಬಿಕೆಗಳಿಂದ ಸಾಂಪ್ರದಾಯಿಕ ಚಿತ್ರಗಳನ್ನು ಬರೆಯುವಿಕೆಯನ್ನು, ಮಂಡಲಗಳನ್ನು ರಚಿಸುತ್ತಿದ್ದ ಬಗ್ಗೆ ದಾಖಲೆಗಳಿವೆ. ವೇದಗಳ ನಂತರದ ಕಾಲದಲ್ಲಿ ಜ್ಯೋತಿಷ್ಯ ಶಾಸ್ತ್ರ,ಗಣಿತ,ವಿಜ್ಞಾನ ಶಾಸ್ತ್ರಗಳು ಬೆಳೆದಂತೆ ,ಮಂತ್ರ ತಂತ್ರಗಳ ನಂಬಿಕೆ ಬಲವಾದಂತೆ ಮತ್ತಷ್ಟು ವಿಭಿನ್ನ ವಿನ್ಯಾಸದ ಮಂಡಲಗಳನ್ನು ಕಂಡುಕೊಂಡಿರುವ ಬಗ್ಗೆ ದಾಖಲೆಗಳಿವೆ.ನಮ್ಮ ದೇಶದ ಬಹುತೇಕ ಭಾಗದಲ್ಲಿ ,ವಿವಿಧ ರಾಜ್ಯಗಳಲ್ಲಿ ವಿವಿಧ ಸಮುದಾಯಗಳಲ್ಲಿ, ವಿವಿಧ ವಿನ್ಯಾಸ ,ವಿವಿಧ ನಂಬಿಕೆಗಳೊಂದಿಗೆ ಧಾರ್ಮಿಕ ಆಚರಣೆಗಳಲ್ಲಿ, ಹಬ್ಬಗಳಲ್ಲಿ ಮಂಡಲ ಕಲೆ ಸಾಂಪ್ರದಾಯಿಕ ಭಾಗವಾಗಿ ಕಂಡುಬರುತ್ತದೆ. ಆದರೆ ಮಂಡಲ ಕಲೆಗೂ ಹಸೆಚಿತ್ತಾರಕ್ಕೂ ಆಚರಣೆ ಮತ್ತು ಅಂತಸತ್ವದಲ್ಲಿ ಬಹಳ ವ್ಯತ್ಯಾಸವಿದೆ.

ಸಂಸ್ಕೃತದಲ್ಲಿ "ಮಂಡ' ಎಂದರೆ ಅಲಂಕರಿಸುವುದು ಅಥವಾ ಸಿದ್ಧಗೊಳಿಸುವುದು. 'ಲ' ಎಂಬ ಅಂತ್ಯಪ್ರತ್ಯಯದೊಂದಿಗೆ, ಮಂಡಲವೆಂದರೆ ಒಂದು ಪವಿತ್ರವಾದ ವರ್ತುಲ ಅಥವಾ ಕೇಂದ್ರಬಿಂದು ಎಂದು ಅರ್ಥ. ಮಂಡಲ ಒಂದು ಸಂಕೀರ್ಣವಾದ, ಅಮೂರ್ತವಾದ, ಸಾಮಾನ್ಯವಾಗಿ ವೃತ್ತಾಕಾರದಲ್ಲಿ ರಚಿಸಲ್ಪಡುವ ಚಿತ್ರ. ಮಂಡಲ ನಮ್ಮ ಸುತ್ತಲಿನ ಶಕ್ತಿಯನ್ನು ಹಿಡಿದಿಟ್ಟುಕೊಳ್ಳುವ, ಎಲ್ಲೆಡೆ ತನ್ನಿಂದಲೇ ಹೊರಹೊಮ್ಮಿಸುವ ಒಂದು ಅಗಾಧ ಶಕ್ತಿಯ ವ್ಯೂಹ ಎಂದು ನಂಬಲಾಗಿದೆ.

ಮಂಡಲ ಮುಖ್ಯವಾಗಿ ಹಿಂದೂ ಮತ್ತು ಬೌದ್ಧ ಧರ್ಮಗಳಲ್ಲಿ ಅನಾದಿ ಕಾಲದಿಂದಲೂ ಬಳಸಿಕೊಂಡು ಬಂದಿರುವ ಒಂದು ಶ್ರದ್ಧಾಪೂರ್ವ ಧಾರ್ಮಿಕ ಚಿತ್ರಣ. ಕ್ರಿಶ್ಚಿಯನ್ನರು,ಅಮೆರಿಕನ್ನರಲ್ಲೂ ಕೂಡ ಈ ಕಲೆ ಪೂರ್ವಜರ ಕಾಲದಿಂದಲೂ ಆರಾಧನೆಯ ಬಳಕೆಯಲ್ಲಿತ್ತು. 4ನೇ ಶತಮಾನದಿಂದಲೇ ಟಿಬೆಟ್, ಇಂಡಿಯಾ, ಚೀನಾ, ಜಪಾನ್, ನೇಪಾಳ ಮೊದಲಾಗಿ ಹಲವು ಏಷಿಯಾ ದೇಶಗಳಲ್ಲಿ ಮಂಡಲಗಳ ರಚನೆ ಅಸ್ತಿತ್ವದಲ್ಲಿತ್ತು ಎಂದು ಹಲವು ಮೂಲಗಳಿಂದ ದೊರಕಿದ ಮಾಹಿತಿಯಿದೆ.ಈ ಸಮಸ್ತ ವಿಶ್ವವೇ ಒಂದು ಕೇಂದ್ರೀಕೃತವಾದ ಶಕ್ತಿಯ ಸ್ವರೂಪ ಎಂದು ಮಂಡಲಗಳ ಮೂಲಕ ಪ್ರತಿಬಿಂಬಿಸಲಾಗುತ್ತದೆ. ಇಂಡೋನೇಷ್ಯಾ ಮತ್ತು ಕ್ಯಾಂಬೋಡಿಯಾದಲ್ಲಿ 3–ಡಿ ಮಾದರಿಯ ಸಾವಿರಾರು ವರ್ಷಗಳ ಇತಿಹಾಸವಿರುವ ಬೌದ್ಧ ದೇವಾಲಯಗಳು ಈ ಮಂಡಲಗಳ ಭೌತಿಕ ಅನುಭೂತಿಯನ್ನು ನೀಡುತ್ತದೆ.ಇಲ್ಲಿನ ಪ್ರತಿ ರಚನೆಗೂ ಅದರದ್ದೇ ಉದ್ದೇಶವಿರುತ್ತದೆ.

ಭಾರತದ ಹಲವೆಡೆ ಕರ್ನಾಟಕ ಹಸೆಚಿತ್ತಾರ ಕಲೆಯಂತೆಯೇ ವಿನ್ಯಾಸದಲ್ಲಿ ಕೆಲವು ಅಂಶಗಳನ್ನು ಹೋಲುವ ಬೇರೆ ಬೇರೆ ದೇಶೀ ಚಿತ್ತಾರ ಕಲಾ ಮಾದರಿಗಳು ಇವೆ.ಅವುಗಳಲ್ಲಿ ಬಿಹಾರದ ಮಧುಬನಿ ಚಿತ್ರಕಲೆ ವಿಶಿಷ್ಟವಾದ್ದಾಗಿದೆ. ಮಧುಬನಿ ಇನ್ನಷ್ಟು ಮುಂದುವರಿದ ವರ್ಣವಿನ್ಯಾಸ ಹೊಂದಿದ್ದು ದಾರ್ಮಿಕ ಆಚರಣೆಯ ಮೂಲದ ಕಲೆಯೇ ಆಗಿದೆ. ಬಿಹಾರದ ಮಿಥಿಳಾ ಕಲೆಯೆಂದೂ ಕರೆಯಲಾಗುವ

ಮಧುಬನಿ ವಿನ್ಯಾಸದಲ್ಲಿ ಸಾಕಷ್ಟು ವೈವಿಧ್ಯತೆಯೊಂದಿಗೆ ಆಕರ್ಷಣೆಗೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಮದುವೆ ,ಹಬ್ಬಗಳಿಗೆ ಗೃಹ ಅಲಂಕಾರಗಳಿಗೆ ಮಧುಬನಿ ಕಲೆ ಅಲ್ಲಿ ಜನಪ್ರಿಯವಾಗಿತ್ತು. ಕೃಷ್ಣ ರುಕ್ಮಿಣೀ ಅಲ್ಲಿ ಆಕರ್ಷಕ ಕೇಂದ್ರಬಿಂದುವಾದ ಮೇಲೆ ಮತ್ತಷ್ಟು ಜನಪ್ರಿಯತೆ ,ವ್ಯಾಪಕತೆ ಪಡೆದು ಧಾರ್ಮಿಕ ಮಜಲುಗಳನ್ನು ಪಡೆದು ಅಲ್ಲಿನ ಎಲ್ಲ ವರ್ಗಗಳಲ್ಲೂ ಜನಪ್ರಿಯವಾಗಿ ಬೆಳೆಯಿತು. ಆದರೆ ಹಸೆಚಿತ್ತಾರ ಶಿವ ಪಾರ್ವತಿಯನ್ನು ದಂಡಿಗೆಯೊಳಗೆ ಚಿತ್ರಿಸುತ್ತಾ ಬುಡಕಟ್ಟು ಆಚರಣೆ ಸಂಪ್ರದಾಯಗಳ ಭಾಗವಾಗಿಯೇ ಉಳಿದು ಈಗ ಮಲೆನಾಡಿನ ಕೆಲವೇ ಸಮುದಾಯಗಳಲ್ಲಿ ಕಂಡುಬರುವ ಕಲಾಪರಂಪರೆಯಾಗಿ ಉಳಿದಿದೆ. ಮಧುಬನಿಯಲ್ಲಿ ಬರುವ ಚೌಕಟ್ಟು ,(ಪ್ರೇಂ)ನಲ್ಲಿ ಕಂಡುಬರುವ ರೇಖಾವಿನ್ಯಾಸ ,ಜ್ಯಾಮಿತಿಯ ಅಂಶಗಳ ಬಳಕೆ ಹಸೆಚಿತ್ತಾರದಲ್ಲೂ ಇದೆ.

ಒಡಿಸ್ಸಾದಲ್ಲಿ ಕಂಡುಬರುವ ಸೊರಾ ಚಿತ್ರಕಲೆ ಸಹ ಬುಡಕಟ್ಟು ಚಿತ್ರಕಲಾ ಪರಂಪರೆಯೇ ಆಗಿದ್ದು ವರ್ಲಿ ಚಿತ್ರಕಲಾ ವಿನ್ಯಾಸಕ್ಕೆ ಸಮೀಪದಲ್ಲಿದೆ. ಅಲ್ಲಿಯೂ ಧಾರ್ಮಿಕ ಆಚರಣೆ, ಗೃಹ ಅಲಂಕಾರಕ್ಕೆ ಚಿತ್ರಬರೆಯಲಾಗುತ್ತದೆ. ವಿನ್ಯಾಸದಲ್ಲಿ ಅಂತಹ ವಿಶಿಷ್ಟತೆ ಸಂಕೀರ್ಣತೆಯೇನು ಕಂಡುಬರುವುದಿಲ್ಲ. (ಚಿತ್ರಗಳಿಗೆ ವಸೀ ನೋಡಿ ಹಸೆಚಿತ್ತಾರ ವೈವಿಧ್ಯತೆ ಅಧ್ಯಾಯ ನೋಡಿ) ಅಲ್ಲದೇ ಮಧ್ಯಪ್ರದೇಶ ,ರಾಜಸ್ತಾನ,ಕೇರಳ,ತಮಿಳುನಾಡು ಮತ್ತಿತರ ಹಲವು ರಾಜ್ಯಗಳ ಕೆಲವು ಭಾಗದಲ್ಲಿ ಸಹ ಆದಿವಾಸಿ ಬುಡಕಟ್ಟುಗಳಲ್ಲಿ ಸರಳವಾಗಿ ರೇಖೆಗಳಲ್ಲಿ ,ತ್ರಿಭುಜಗಳ ಆಕಾರ ಬಳಸಿ ಬಿಡಿಸುವ ಕೆಲವು ಚಿತ್ತಾರ ಮಾದರಿಗಳಿವೆ.

ಗೋವಾದಲ್ಲಿ ಜನಪ್ರಿಯತೆ ಪಡೆದ ಕಾವಿ ಕಲೆಯು ಗೋವಾದಿಂದ ಕರಾವಳಿ ಜಿಲ್ಲೆಗಳಿಗೆ ವಲಸೆ ಬಂದ ಸಾರಸ್ವತ ಬ್ರಾಹ್ಮಣ ಸಮುದಾಯ,ವಿಶ್ವಕರ್ಮರ ಮೂಲಕ ಕರಾವಳಿ ಕರ್ನಾಟಕಕ್ಕೆ ಪ್ರವೇಶಿಸಿತು ಎನ್ನಲಾಗುತ್ತಿದೆ. ಮಹಾರಾಷ್ಟ್ರ ಮತ್ತು ಕೇರಳದಲ್ಲೂ ಈ ಬಗೆಯ ಚಿತ್ತಾರ ಕಲೆಯು ದೇವಾಲಯಗಳು,ಮಠಗಳ ಅಲಂಕಾರಕ್ಕೆ ಬಳಸಲಾಗಿದೆ. ಹಸೆಚಿತ್ತಾರದಂತೆ ರೇಖೆಗಳು,ಜ್ಯಾಮಿತಿ ಅಂಶಗಳ

ಬಳಕೆ ಕಂಡುಬರುತ್ತದೆಯಾದರೂ ಆದಿ ರೇಖಾವಿನ್ಯಾಸಗಳ ಚಿತ್ರಕಲೆಗಳಿಗಿಂತ ವಿನ್ಯಾಸದಲ್ಲಿ ಶಿಲ್ಪಕಲೆಗಳ ಪ್ರಭಾವಳಿಯ ವಿನ್ಯಾಸ ಬದಲಾವಣೆಗಳು ಕಂಡುಬರುತ್ತವೆ. ಕಾವಿಕಲೆಯಲ್ಲಿ ಮಣ್ಣುಗೆಂಪು ಬಣ್ಣ ಅಥವಾ ಕಾವಿಬಣ್ಣ ಎಂದು ಕರೆಯಲಾಗುವ ಬಣ್ಣವನ್ನೆ ಪ್ರಧಾನವಾಗಿ ಬಳಸುತ್ತಾರೆ. ಹಸೆಚಿತ್ತಾರಕ್ಕೂ ಕಾವಿ ಕಲೆಗೂ ಸಾಕಷ್ಟು ವ್ಯತ್ಯಾಸಗಳಿವೆ. ಮುಖ್ಯವಾಗಿ ರೇಖಾ ವಿನ್ಯಾಸದ ಜೊತೆಗೆ ಮೂರು ಆಯಾಮಗಳಲ್ಲೂ ಚಿತ್ರ ಬಿಡಿಸುವಿಕೆ ,ಪ್ರಮಾಣಬದ್ಧತೆ, ಷಡಂಗ,ಸಾದೃಶ್ಯತೆ ಕಂಡುಬರುತ್ತದೆ. ಕಾವಿ ಕಲೆಯು ಹೆಚ್ಚಾಗಿ ದೇವಾಲಯಗಳ ಅಲಂಕಾರಕ್ಕೆ ಬಿಡಿಸಿರುವುದು ಕಂಡುಬರುತ್ತೆ. ಆನಂತರ ಮಠಗಳ ಅಲಂಕಾರಕ್ಕೆ, ಗೃಹ ಅಲಂಕಾರಕ್ಕೆ, ಚರ್ಚುಗಳ ಅಲಂಕಾರಕ್ಕೆ ಗೋವಾ ,ಕರ್ನಾಟಕ ,ಕೇರಳದಲ್ಲೂ ಬಳಸಿರುವುದು ಕಂಡುಬರುತ್ತದೆ. ರಾಜಾಶ್ರಯ ಕಾಲದಲ್ಲಿ ದೇವಾಲಯಗಳ ಅಲಂಕಾರಕ್ಕೆ ಕಾವಿ ಕಲೆಯನ್ನು ಪ್ರೋತ್ಸಾಹಿಸಿದ್ದಾರೆ.

ಕರ್ನಾಟಕದ ಕೆಲವು ಕಡೆ ರಂಗೋಲಿಗೂ ಹಸೆ ಅನ್ನುವ ಅರ್ಥದಲ್ಲಿ ಸಾಮಾನ್ಯವಾಗಿ ಕರೆಯುವ ರೂಢಿ ಇದೆ. ಆದರೆ ಬರೆಯುವ ವಿಧಾನ, ಬಳಸುವ ಬಣ್ಣಗಳ ಸ್ವರೂಪ ಮತ್ತು ವಿನ್ಯಾಸದ ದೃಷ್ಟಿಯಿಂದ ರಂಗೋಲಿಗೂ ಹಸೆಚಿತ್ತಾರಕ್ಕೂ ಹಲವು ವ್ಯತ್ಯಾಸಗಳಿವೆ. ಹಸೆಚಿತ್ತಾರ ರಂಗೋಲಿಯಲ್ಲ. ರಂಗೋಲಿ ಉತ್ತರ ಭಾರತದ ಭಾಗದಲ್ಲಿ ಹೆಚ್ಚು ವೈವಿಧ್ಯಮಯ ವಿನ್ಯಾಸದಲ್ಲಿ ಬೆಳೆದು ದೇಶಾದ್ಯಾಂತ ಜನಪ್ರಿಯವಾಯಿತು.

ರಂಗೋಲಿ ಸಹ ಹಿಂದಿನಿಂದಲೂ ರೂಢಿಗತವಾಗಿ ಮಹಿಳೆಯರು ರೂಢಿಸಿಕೊಂಡು ಬಂದ ಕಲೆಯೇ ಆಗಿದೆ. ನೆಲದ ಮೇಲೆ ಬಣ್ಣದ ಪುಡಿಗಳನ್ನು ಹಾಸಿ ರಂಗೋಲಿ ಬರೆಯುವುದು ಹಿಂದಿನಿಂದಲೂ ಕಂಡುಕೊಂಡುಬಂದ ಕಲೆಯಾಗಿದೆ.ಚುಕ್ಕೆ ಇಟ್ಟು ಬರೆಯುವ ರಂಗೋಲಿ, ಚುಕ್ಕೆ ಇಲ್ಲದ ರಂಗೋಲಿ ಸಹ ರೂಡಿಯಲ್ಲಿದೆ. ಆದರೆ ಹಸೆಚಿತ್ತಾರ ನೈಸರ್ಗಿಕ ಕುಂಚ ಬಳಸಿ ದ್ರವರೂಪದ ನೈಸರ್ಗಿಕ ಬಣ್ಣ ಬಳಸಿ ಗೋಡೆ ,ಬುಟ್ಟಿಗಳ ಮೇಲೆ ಬರೆಯುವುದಾಗಿದೆ.ಇತ್ತೀಚೆಗೆ ಆಧುನಿಕ ತೈಲವರ್ಣಗಳ ಬಳಕೆ ಸಹ ಕಂಡುಬರುತ್ತಿದೆ. ರೇಖಾ ವಿನ್ಯಾಸಗಳು

,ಜ್ಯಾಮಿತಿಯ ಅಂಶಗಳು ಹಸೆಚಿತ್ತಾರ ಮತ್ತು ರಂಗೋಲಿ ಎರಡರಲ್ಲೂ ಕಂಡುಬರುತ್ತವೆ. ಆದರೆ ಹಸೆ ಚಿತ್ತಾರದಲ್ಲಿರುವ ಮೋಟಿಫ್‌ಗಳಿಗೆ ,ವಿನ್ಯಾಸದಲ್ಲಿನ ಮೂಲಾಂಶಗಳಿಗೆ ಸಾಂಖೇತಿಕ ಅರ್ಥಗಳಿವೆ. ಸಾಂಪ್ರದಾಯಿಕ ರಚನೆಗಳಲ್ಲಿ ಸಾಂಸ್ಕೃತಿಕ ಅಂತಸತ್ವವಿದೆ,ನಂಬಿಕೆಗಳಿವೆ. ಪ್ರಧಾನವಾಗಿ ಮದುವೆ ಮತ್ತು ಭೂಮಣ್ಣಿ ಹಬ್ಬಕ್ಕೆ ಬರೆಯುವ ಚಿತ್ತಾರಗಳಲ್ಲಿ ಫಲವಂತಿಕೆಯ ಆಚರಣೆ, ನಿಸರ್ಗ ಆರಾಧನೆ ಇದೆ. ಸೌಭಾಗ್ಯ, ಶುಭಸಂದೇಶ, ದೈವತ್ವ ಭಾವ ,ಸಾಂಪ್ರದಾಯಿಕ ಶಾಸ್ತ್ರ ಮನ್ನಣೆ,ಹೆಣ್ಣಿನ ಅಭಿವ್ಯಕ್ತಿ ಸಹ ಹಸೆಚಿತ್ತಾರದಲ್ಲಿ ಇದೆ. ಹಸೆಚಿತ್ತಾರ ಭಾವರೂಪಿಯೂ ಬೌತಿಕ ರೂಪಿಯೂ ಆಗಿದ್ದು ರಂಗೋಲಿಗಿಂತ ಸಂಕೀರ್ಣವೂ ವಿಶಿಷ್ಟವೂ ಆದ ರೇಖಾವಿನ್ಯಾಸಗಳ ಸಂಯೋಜನೆಯಾಗಿದೆ.ರಂಗೋಲಿ ,ಹಸೆಚಿತ್ತಾರ ಬಿಡಿಸುವ ಉದ್ದೇಶಗಳಲಿಯೂ ವಿಭಿನ್ನತೆಯಿದೆ. ಬೆಳಗ್ಗೆ ಅಂಗಳದ ಅಲಂಕಾರಕ್ಕೆ ,ಹಬ್ಬಗಳಿಗೆ ರಂಗೋಲಿ ಬಿಡಿಸುವುದು ವಾಡಿಕೆ. ಬಹುತೇಕ ದೇಶಾದ್ಯಾಂತ ವಿಭಿನ್ನ ಬಗೆಯ ರಂಗೋಲಿಗಳಿವೆ.ವಿಭಿನ್ನ ಬಣ್ಣ ಸಂಯೋಜನೆಯಿದೆ. ಹಸೆಚಿತ್ತಾರ ಮದುವೆಗೆ ,ಹಬ್ಬಗಳಿಗೆ ಕೆಲವು ನಿಗದಿತ ವಿಧಿವಿಧಾನಗಳೊಂದಿಗೆ ಬಿಡಿಸುವ ಚಿತ್ತಾರವಾಗಿದೆ. ದೀರ್ಘಕಾಲ ಇರುತ್ತದೆ. ಕರ್ನಾಟಕದ ಮಲೆನಾಡು ಭಾಗದಲ್ಲಿ ಮಾತ್ರ ಕಂಡುಬರುತ್ತದೆ. (ಸಂಬಂದಿತ ವಿವಿಧ ವಿನ್ಯಾಸದ ಚಿತ್ರಗಳನ್ನು ಕೃತಿಯ ಆರಂಭದಲ್ಲಿಯೇ ನೀಡಲಾಗಿದೆ)

ಹಸೆಚಿತ್ತಾರದ ನಲೆಬೀಡು ಶಿವಮೊಗ್ಗ ಮತ್ತು ಹಸೆಚಿತ್ತಾರ ಪರಂಪರೆ




ಮಲೆನಾಡಿನ ಶಿವಮೊಗ್ಗ ಜಿಲ್ಲೆ, ಮೂಲತಹ ನಿತ್ಯಹರಿದ್ವರ್ಣಗಳ ಕಾಡಿನ ನಾಡು ಅಷ್ಟೇ ಅಲ್ಲ ಹಲವು ನದಿಗಳ, ಹಲವು ಕಲೆಗಳ, ಹಲವು ಸಾಹಿತಿಗಳ, ಹಲವು ದೇವಾಲಯಂಗಳ, ರಾಜಮನೆತನಗಳ, ಸ್ವಾತಂತ್ರ್ಯ ಹೋರಾಟಗಾರರ, ಮುಖ್ಯವಾಗಿ ಸಮಾಜವಾದಿಗಳ ನೆಲೆ ನಾಡು, ಗೇಣಿ ಚಳುವಳಿಗಳ ಬೀಡು ಸಹ ಆಗಿದೆ.ಜೊತೆಗೆ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದ ಸಾಂಪ್ರದಾಯಿಕ ಹಸೆಚಿತ್ತಾರ ಕಲಾವಿಧರ ನೆಲೆಬೀಡಾಗಿದೆ.ಶಿವಮೊಗ್ಗದಲ್ಲಿ ವಾಸಿಸುವ ದೀವರ ಲಕ್ಷಾಂತರ ಹೆಣ್ಣುಮಕ್ಕಳು ಸಾಂಪ್ರದಾಯಿಕ ಹಸೆಚಿತ್ತಾರವನ್ನು ಪುರಾತನ ಕಾಲದಿಂದ ಪರಂಪರೆಯಿಂದಲೆ ರಕ್ತಗತ ಕಲೆಯಂತೆ ರೂಢಿಸಿಕೊಂಡಿದ್ದಾರೆ. ಕರೆವಕ್ಕಲಿಗರಲ್ಲಿ, ಮಡಿವಾಳರಲ್ಲಿ, ಹಸಲರಲ್ಲಿಯೂ ಹಸೆಚಿತ್ತಾರಗಿತ್ತಿಯರು ಅಲ್ಲಲ್ಲಿ ಕಂಡುಬರುತ್ತಾರೆ. ಹಸೆಗೋಡೆ ಚಿತ್ತಾರ ಈಗೀಗ ಸಂಪ್ರದಾಯದಾಚೆ ಜನಪ್ರಿಯವಾಗಿದ್ದು ಕೆಲವೆಡೆ ಹವ್ಯಾಸಿ ಕಲಾವಿದರು ಸಂಪ್ರದಾಯದಾಚೆ ಹಸೆಚಿತ್ತಾರ ಪ್ರಯೋಗ ವಿಸ್ತರಿಸಿದ್ದಾರೆ.

ಈಶ್ವರ ನಾಯ್ಕ , ಲಕ್ಷ್ಮಮ್ಮ ಗಡೇಮನೆ, ಚಂದ್ರಶೇಖರ ಸಿರಿವಂತೆ, ಗೌರಮ್ಮ ಹುಚ್ಚಪ್ಪ ಮಾಸ್ತರ, ರಾಧಾ ಸುಳ್ಳೂರು, ಕುಸುಮ ಅಣ್ಣಪ್ಪ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡು ಶಿವಮೊಗ್ಗ ನೆಲದ ದೀವರ ಸಾಂಪ್ರದಾಯಿಕ ಹಸೆಚಿತ್ತಾರವನ್ನು ಜನಪ್ರಿಯಗೊಳಿಸಿದ್ದಾರೆ. ಶಿವಮೊಗ್ಗ ಮೂಲದ ಕಲಾವಿದ ಸಿದ್ದಾಪುರದ

ಹಸುವಂತೆಯ ಈಶ್ವರನಾಯ್ಕರ ಕೊಡುಗೆ ವಿಶಿಷ್ಟವಾದದ್ದಾಗಿದೆ. ಶಿವಮೊಗ್ಗದ ಬಹುಸಂಖ್ಯಾತ ದೀವರ ಸಮುದಾಯದ ಪ್ರತೀ ಮನೆಯ ಮಹಿಳೆಯರೂ ರಕ್ತಗತವೆಂಬಂತೆ ಸಾಂಪ್ರದಾಯಿಕ ಹಸೆಚಿತ್ತಾರ ಕಲಾವಿದರೆ ಆಗಿದ್ದಾರೆ. ಈಗೀಗ ಪುರುಷರು ಹಸೆಚಿತ್ತಾರ ಕಲಾವಿದರಾಗುತ್ತಿರುವುದು ಹೊಸ ಭರವಸೆ ಮೂಡಿಸಿದೆ. ಮಲೆನಾಡಿನ ಹಸೆ ಚಿತ್ತಾರವನ್ನು ಉತ್ತರ ಕರ್ನಾಟಕ ಭಾಗದಲ್ಲಿ ತರಬೇತಿ ನೀಡುವಿಕೆ, ಜನಪ್ರಿಯಗೊಳಿಸುವಿಕೆಯಲ್ಲಿ ಉಷಾ ರವಿಚಂದ್ರ ದಂಪತಿಗಳು ತೊಡಗಿದ್ದಾರೆ. ರಾಧಾಕೃಷ್ಣ ಬಂದಗದ್ದೆ ,ವಿಶ್ವ ಹೆಚ್ಚೆ,ಅಣ್ಣಪ್ಪ ದಿಗಟೆಕೊಪ್ಪ ಹಾಗೂ ನನ್ನನ್ನು ಒಳಗೊಂಡಂತೆ ಶಿವಮೊಗ್ಗದಲ್ಲೀಗ ಹಲವು ಪುರುಷ ಕಲಾವಿಧರು ಸಹ ಹಸೆಚಿತ್ತಾರದಲ್ಲಿ ನಾವಿನ್ಯತೆ ,ಚಲನಶೀಲತೆ ತಂದು ಜನಪ್ರಿಯಗೊಳಿಸುತ್ತಿದ್ದಾರೆ.

ಶಿವಮೊಗ್ಗದಲ್ಲಿ ಮಂಡಲ ಚಿತ್ರಕಲೆ, ಕಾವಿ ಚಿತ್ರಕಲೆ ,ರಂಗೋಲಿ ಹಸಗರ, ಹಲಿ,ಶೇಡಿ ಚಿತ್ರಕಲೆ ಮಾದರಿಗಳ ಸಾಂಪ್ರದಾಯಿಕ ರೂಢಿ ಸಹ ಅಲ್ಲಲ್ಲಿ ಕೆಲವು ಜಾತಿ ಸಮುದಾಯಗಳ ಆಚರಣೆಗಳಲ್ಲಿ ಕಂಡುಬರುತ್ತದೆ. ಅವು ಹಸೆಚಿತ್ತಾರಕ್ಕಿಂತ ವಿಭಿನ್ನವಾದ ಆಚರಣೆಗಳ ಅಂತಸತ್ವ ಹೊಂದಿವೆ. ಹಸಲರು,ಮಡಿವಾಳರು,ಕರೆಒಕ್ಕಲಿಗರು ಹವ್ಯಕರಲ್ಲೂ ಮಂಡಲ ಚಿತ್ರಕಲೆ,ಕಾವಿ ಚಿತ್ರಕಲೆ ,ಹಸೆಚಿತ್ರಕಲೆಗಳ ರಚನೆಗಳ ಮಾದರಿಗಳ ಸಂಪ್ರದಾಯ ಕೆಲವು ಕುಟುಂಬಗಳಲ್ಲಿ ಚದುರಿದಂತೆ ಕಂಡುಬರುತ್ತದೆ. ಈಗೀಗ ಕೆಲವು ಬೇರೆ ಬೇರೆ ಕಲಾವಿದರೂ ಸಹ ಹಸೆಚಿತ್ತಾರ ಬಿಡಿಸುತ್ತಾರೆ. ಆಯಾ ಸಮುದಾಯದ ಕೆಲವು



ಸಂಪ್ರದಾಯಗಳಿಗನುಗುಣ ರೇಖಾ ವಿನ್ಯಾಸದಲ್ಲಿ,ಸ್ವರೂಪದಲ್ಲಿ, ವಿಧಿ ವಿಧಾನಗಳಲ್ಲೂ ಒಂದಿಷ್ಟು ಬಿನ್ನತೆಗಳನ್ನು ಒಳಗೊಂಡಂತೆ ಸಂಪ್ರದಾಯಿಕ ಚಿತ್ರಕಲೆಗಳಿವೆ. ಕೆಲವು ಸಮುದಾಯದವರು ಹಲಿಯೆಂದೂ ,ಹಸಗರ ,ಶೇಡಿ, ಹಸೆ ಎಂದೂ ಕರೆಯುತ್ತಾರೆ. ಒಂದು ಕಾಲದಲ್ಲಿ ಹಸೆಚಿತ್ತಾರ ಎಂದರೆ ಅದು ತಳ ಸಮುದಾಯದ ಕಲೆಯೆಂದು ಜರಿಯುತ್ತಿದ್ದವರ ಎದುರೇ ಹಸೆಚಿತ್ತಾರ ಇಂದು ಜಾಗತಿಕವಾಗಿ ಜನಮನ್ನಣೆ ಪಡೆದುಕೊಂಡು ಆಕರ್ಷಕ ವಿನ್ಯಾಸಗಳಲ್ಲಿ ಜಗತ್ತಿನ ಬಹುಭಾಗದಲ್ಲಿ ಚಿತ್ರಕಲಾರಸಿಕರ ಮನೆಯಲ್ಲಿ ಸ್ಥಾನ ಪಡೆದಿದೆ.ಬೆಂಗಳೂರಿನ ರೈಲ್ವೇ ನಿಲ್ದಾಣದಲ್ಲಿ,ರಾಜಭವನದಲ್ಲಿಯೂ ಹಸೆಚಿತ್ತಾರ ಪ್ರದರ್ಶನವಾಗಿದೆ. ಅಮೇರಿಕಾ ,ಜಪಾನ್ ಆಸ್ಟ್ರೇಲಿಯಾ,ಇಂಗ್ಲೆಂಡ್, ಪ್ರಾನ್ಸ್ ,ಸಿಂಗಾಪೂರ್ ಮತ್ತಿತರ ದೇಶಗಳಲ್ಲಿ ನಮ್ಮ ಶಿವಮೊಗ್ಗದ ಹಸೆಚಿತ್ತಾರ ಕಲಾ ಪ್ರದರ್ಶನ ನಡೆಯುತ್ತಲೇ ಇರುತ್ತದೆ.ಇಂದು ಉದ್ಯಮೋಪಾದಿಯಲ್ಲಿ ಬೆಳೆದು ಹಲವರಿಗೆ ವೃತಿಯಾಗಿಯೂ ಹಸೆಚಿತ್ತಾರ ಅನ್ನದ ಕಲೆಯಾಗಿದೆ.

ದೇಶದ ಬಹುಭಾಗದಲ್ಲಿ ದೇಶೀ ಚಿತ್ತಾರಕಲೆಯ ವಿವಿಧ ಮಾದರಿಗಳಿವೆ. ಆದರೆ ಶಿವಮೊಗ್ಗದ ಮಲೆನಾಡಿನ ಭೂಭಾಗದಲ್ಲಿ ಕಂಡುಬರುವ ವೈವಿಧ್ಯಮಯ ವಿಶಿಷ್ಟ ಹಸೆಚಿತ್ತಾರ ,ಭೂಮಿಬುಟ್ಟಿ ಚಿತ್ತಾರ ವಿನ್ಯಾಸಗಳು ಬೇರೆಲ್ಲೂ ಕಂಡುಬರುವುದಿಲ್ಲ. ಉತ್ತರಕನ್ನಡ ಜಿಲ್ಲೆ,ಚಿಕ್ಕಮಂಗಳೂರು ಭಾಗದಲ್ಲಿ ಕಂಡುಬರುವ ಹಸೆಚಿತ್ತಾರ, ಹಲಿ ಹಸಗರ ಶೇಡಿ, ಕಾವಿಕಲೆ ನಡುವೆ ಬಹಳ ಅಂತರಗಳಿವೆ. ಶಿವಮೊಗ್ಗ ಭಾಗದ ದೀವರು ಬರೆಯುವ ಚಿತ್ತಾರ ಅತಿ ಸಂಕೀರ್ಣ ರೇಖಾ ಸಂಯೋಜನೆಯದ್ದಾಗಿದೆ. ಹಾಗಾಗಿ ಶಿವಮೊಗ್ಗ ಜಿಲ್ಲೆ ಹಸೆಚಿತ್ತಾರದ ನೆಲೆನಾಡು ಎಂದು ಕರೆಯಬಯಸುವೆ.

. ಜಗತ್ತಿನಲ್ಲಿ ಹಲವು ಬಗೆಯ ಬುಡಕಟ್ಟು ಚಿತ್ರಕಲಾ ಮಾದರಿಗಳಿವೆ.ಅವುಗಳಲೆಲ್ಲ ಕೆಲವು ಸಾಮ್ಯತೆಗಳಿವೆ. ಆದರೆ ಅವರು ಆ ಚಿತ್ತಾರಗಳನ್ನು ಆಚರಣೆ ,ಸಂಸ್ಕೃತಿ ಪರಂಪರೆ ಭಾಗವಾಗಿ ತಮ್ಮದೇ ನೆಲಮೂಲದ ಅನುಭವದ ಜ್ಞಾನದಿಂದ ವಿಶಿಷ್ಟ ವಿನ್ಯಾಸಗಳನ್ನು ಕಂಡುಕೊಳ್ಳುತ್ತಾ ಬೆಳೆಸಿಕೊಂಡು

ಬಂದ ಬಗೆಯಲ್ಲಿ, ಕಾಲದಿಂದ ಕಾಲಕ್ಕೆ ತಮ್ಮ ವೃತ್ತಿ,ಬದುಕಿನ ವಿಧಾನ , ಮದುವೆ ,ಹಬ್ಬ ಮತ್ತಿತರ ಸಡಗರ ಸಂಭ್ರಮದ ಆಚರಣೆಗಳ ಸಂದರ್ಭಕ್ಕನುಗುಣವಾಗಿ ವಿನ್ಯಾಸದಲ್ಲಿ ಕಂಡುಕೊಂಡ ಬದಲಾವಣೆಗಳಿಂದಾಗಿ ಗುರುತಿಸಬಹುದಾದ ಸಾಕಷ್ಟು ವ್ಯತ್ಯಾಸಗಳಿವೆ. ಶಿವಮೊಗ್ಗದ ದೀವರ ಹಸೆ ಚಿತ್ತಾರ ,ಬುಟ್ಟಿ ಚಿತ್ತಾರ,ಬಾಗಿಲು ಚಿತ್ತಾರ, ಭತ್ತದ ತೋರಣಗಳು, ಗೋಡೆ ಚಿತ್ತಾರಗಳು ವಿಶಿಷ್ಟ ಬುಡಕಟ್ಟು ಚಿತ್ತಾರ ಕಲಾ ಮಾದರಿಗಳೆ ಆಗಿವೆ.

ನಮ್ಮ ದೇಶದಲ್ಲಿ ಕಂಡುಬರುವ ವರ್ಲಿ ಕಲೆ, ಮಧುಬನಿಗಿಂತ ದೀವರ ಹಸೆಚಿತ್ತಾರ ಕಲೆ ವಿನ್ಯಾಸ ಮತ್ತು ಆಚರಣೆ, ಸಂಸ್ಕೃತಿ ಪರಂಪರೆ ಚೌಕಟ್ಟಿನಲ್ಲಿ ಅತಿ ವಿಶಿಷ್ಟವಾದುದಾಗಿದೆ. ಆದರೆ ಕರ್ನಾಟಕದ ಮಲೆನಾಡಿನ ಶಿವಮೊಗ್ಗ ನೆಲಮೂಲದ ಹಸೆ ಚಿತ್ತಾರ, ಭೂಮಣ್ಣಿ ಬುಟ್ಟಿ ಚಿತ್ತಾರವು ಕರ್ನಾಟಕದ ಹೆಮ್ಮೆಯ ಅತಿ ವಿಶಿಷ್ಟ ಚಿತ್ತಾರ ಕಲೆ ಅನ್ನುವ ಸಂಗತಿ ಯಾಕೋ ಮುನ್ನಲೆಗೆ ಅಷ್ಟಾಗಿ ಬಂದೇ ಇಲ್ಲ.

ಈ ಬಗ್ಗೆ ನಮ್ಮಲ್ಲಿರುವ ವಿವಿಧ ಬಗೆಯ ಅಕಾಡೆಮಿ ವಲಯದಲ್ಲಿಯಾಗಲಿ,ಇತಿಹಾಸ ಸಂಶೋಧಕರ ವಲಯದಲ್ಲಾಗಲಿ ಹೆಚ್ಚಿನ ದಾಖಲೀಕರಣವಾಗಲೀ ಚರ್ಚೆಯ ಕಾರ್ಯಗಳಾಗಲಿ ಆಗಿಲ್ಲ ಎನ್ನುವುದೇ ವಿಪರ್ಯಾಸ. ಇತಿಹಾಸಕಾರರ ಹಲವು ಪುಸ್ತಕಗಳನ್ನು ಹುಡುಕಿದರೂ ಹಸೆ ಚಿತ್ತಾರದ ಕುರಿತಾಗಿ ಅಷ್ಟಾಗಿ ಉಲ್ಲೇಖಗಳಿಲ್ಲ. ಇನ್ನು ರಾಜಮಹರಾಜರ ಕಾಲದ ಶಾಶನಗಳಲ್ಲಿ,ಅರಮನೆಗಳಲ್ಲಿ ಬುಡಕಟ್ಟು ಚಿತ್ತಾರ ಕಲೆಗಳಿಗೆಲ್ಲ ಪ್ರಾಮುಖ್ಯತೆ ನೀಡಿಯೇ ಇಲ್ಲವಾದ್ದರಿಂದ ಮಲೆನಾಡಿನ ಭಾಗದ ಆಳರಸರುಗಳ ಕಾಲದ ದಾಖಲೆಗಳಲ್ಲೂ ಹಸೆ ಚಿತ್ತಾರಕ್ಕೆ ಪ್ರೋತ್ಸಾಹ ನೀಡಿರುವ ಕುರಿತು ಮಾಹಿತಿ ಈವರೆಗೆ ಸಿಕ್ಕಿಲ್ಲ. ಸಾಂಪ್ರದಾಯಿಕ ಆಚರಣೆಗಳ ಕಲೆಯಾದ್ದರಿಂದ ಅದನ್ನು ಆಯಾ ಸಮುದಾಯದ ಸಂಪ್ರದಾಯಕ್ಕೆ ಸೀಮಿತಗೊಳಿಸಿರುವುದರಿಂದ ಆ ಬಗ್ಗೆ ಅಂದು ಗಮನಹರಿಸದಿರಬಹುದು. ಬುಡಕಟ್ಟು ಜನಸಂಸ್ಕೃತಿಯ ಚಿತ್ರಕಲೆಗಳಿಗೆ ಅಂದು ಅಷ್ಟಾಗಿ ರಾಜಸಂಸ್ಕೃತಿ ಮನ್ನಣೆ ನೀಡಿಲ್ಲ ಎನ್ನಬಹುದು.

ಅಳಿವಿನ ಅಂಚಿನ ಸಾಂಪ್ರದಾಯಿಕ ಕಲೆಗಳನ್ನು ಹಾಗೆಯೇ ಹೂತು ಹೋಗಲು ಬಿಡಬಾರದು. ಅಂದಿನ ಜನಪದರ ಜ್ಞಾನಪರಂಪರೆಯನ್ನು ಅರಿತು ಶೋಧಿಸಿ ಬೆಳಕಿಗೆ ತರಬೇಕಾಗಿದೆ. ಅಂದಿನ ಜನಪದರ ಜ್ಞಾನಪರಂಪರೆ ಅರಿತು ಮತ್ತಷ್ಟು ಹೊಸತು ಸೃಷ್ಟಿಸಲು ಪುರಾತನ ಜ್ಞಾನ,ಕಲ್ಪನೆಗಳ ಆವಿಷ್ಕಾರಗಳ ಅರಿವು ಸಹ ಅಗತ್ಯವಾಗಿದೆ. ಹಾಗಾಗಿ ಹಸೆಚಿತ್ತಾರ ಕಲೆಯಂತಹ ಬುಡಕಟ್ಟು ಚಿತ್ತಾರ ಕಲೆಗಳನ್ನು ನಾವು ನಿರ್ಲಕ್ಷಿಸಬಾರದು. ಶಿವಮೊಗ್ಗ ನೆಲದಲ್ಲಿ ಈಗಲೂ ಲಕ್ಷಾಂತರ ದೀವರ ಹೆಣ್ಣುಮಕ್ಕಳು ತಾವು ನಂಬಿಬಂದ ವಿಧಿನಿಯಮಗಳ ಆಚರಣೆಗಳೊಂದಿಗೆ ಹಸೆಗೋಡೆ ಚಿತ್ತಾರ,ಭೂಮಣ್ಣಿ ಬುಟ್ಟಿ ಚಿತ್ತಾರ ,ಬಾಗಿಲು ಚಿತ್ತಾರ ಬಿಡಿಸುವುದನ್ನು ರೂಡಿಗತ ಸಂಪ್ರದಾಯವಾಗಿ ಉಳಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಹಸೆಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರ ಸಂಪ್ರದಾಯ ವೈವಿಧ್ಯಮಯ ವಿನ್ಯಾಸದಲ್ಲಿ ಪ್ರಧಾನವಾಗಿ ಕಂಡುಬರುವುದು ಶಿವಮೊಗ್ಗದಲ್ಲಿ ಮಾತ್ರವಾಗಿದ್ದು ಜಗತ್ತಿನ ಹಲವು ದೇಶಗಳ ಕಲಾವಿದರ ಮನ್ನಣೆ ಪಡೆದು ಜನಪ್ರಿಯವಾಗಿವೆ. ಹಾಗಾಗಿ ಶಿವಮೊಗ್ಗವನ್ನು ಹಸೆಚಿತ್ತಾರ ಕಲೆಯ ತವರೂರು ಎನ್ನಬಹುದು. ಕರ್ನಾಟಕದಲ್ಲಿ ಚೆನ್ನಪಟ್ಟಣದ ಬೊಂಬೆಗಳಿಗೆ, ಬೀದರಿನ ಬಿದಿರಿ ಕಲೆಗೆ ,ನೀಡಿದ ಆದ್ಯತೆಯಂತೆ ಶಿವಮೊಗ್ಗದ ಮಲೆನಾಡಿನ ಹಸೆಚಿತ್ತಾರಕ್ಕೆ ಇನ್ನಷ್ಟು ಪ್ರೋತ್ಸಾಹ ಅಗತ್ಯವಿದೆ.

ಕರ್ನಾಟಕದ ಬುಡಕಟ್ಟುವಾಸಿಗಳು ಮತ್ತು ಹಸೆಚಿತ್ತಾರ ಕಲೆ

ಸಧ್ಯ ಲಭ್ಯವಿರುವ ಸಮೀಕ್ಷೆಗಳ ಆಧಾರಗಳ ಪ್ರಕಾರ ಭಾರತ ಸಂವಿಧಾನದ 342ನೇ ಅನುಚ್ಛೇದದ ಪ್ರಕಾರ ಸರಿಸುಮಾರು 21ಕ್ಕೂ ಹೆಚ್ಚು ಬುಡಕಟ್ಟುಗಳನ್ನು ಕರ್ನಾಟಕದ ಬೌಗೋಳಿಕ ವ್ಯಾಪ್ತಿಯಲ್ಲಿ ಗುರುತಿಸಲಾಗಿದೆ. ಇಲ್ಲಿನ ಬುಡಕಟ್ಟುಗಳನ್ನು ಕುರಿತು ಪಾಶ್ಚಾತ್ಯ ವಿದ್ವಾಂಸರು ತುಂಬಾ ಹಿಂದೆಯೇ ಕೆಲಸ ಮಾಡಿದ್ದರು. ವೇರಯರ್ ಎಲ್ವಿನ್, ಜಿ.ಎಚ್. ಹಟ್ಟನ್, ಜೆ.ಪಿ. ಮಿಲ್ಸ್, ಸ್ಮಿತ್, ಹೈಮರ್ ಡಾಪ್ ಇವರೆಲ್ಲರೂ ಉತ್ತರ ಭಾರತದ ಬುಡಕಟ್ಟುಗಳನ್ನು ಅಭ್ಯಾಸಿಸಿದರೆ; ಎಡ್ಗರ್ ಥರ್ಸ್ಟನ್, ಸರ್ ಜಾರ್ಜ ಜೇಮ್ಸ್ ಮುಂತಾದವರು ದಕ್ಷಿಣ ಭಾರತದ ಬುಡಕಟ್ಟುಗಳನ್ನು ಶೋಧಿಸಿದರು. ದಕ್ಷಿಣ ಭಾರತದ ಬುಡಕಟ್ಟುಗಳಲ್ಲಿ ತೋಡ, ಸೋಲಿಗ, ಚೆಂಚು, ಕೋಟಾ, ಇರುಳಿಗ, ಜೇನುಕುರುಬ, ಗೊಲ್ಲ, ಕಾಡುಗೊಲ್ಲ, ಅಡಿಯಾನ್ ಮುಂತಾದವು ಮುಖ್ಯವಾಗಿದೆ.ಕರ್ನಾಟಕದಲ್ಲಿ ಈ ಬಗ್ಗೆ ಹಿಂದೆಯೇ ಅಧ್ಯಯನ ಆರಂಭವಾಗಿತ್ತು. ಎ.ಎ.ಡಿ.ಲೂಯಿಸ್‌ರವರು ತಮ್ಮ Tribes of Mysore ಕೃತಿಯಲ್ಲಿ ರಾಜ್ಯದ 27 ಬುಡಕಟ್ಟುಗಳನ್ನು ವಿವರವಾಗಿ ತಿಳಿಸಿದ್ದಾರೆ.

ಡಾ. ಕೆ. ಕೆಂಪೇಗೌಡರು According to 1971 census report there are nearly 85 trible language and dialects in Karnataka (A brief survey of Dravion Trible Language of Karnataka arts Journey p-49-1994)ಎಂದು ಉಲ್ಲೇಖಿಸುತ್ತಾರೆ. ಸಾಮಾನ್ಯಾಗಿ 85 ಬುಡಕಟ್ಟುಗಳನ್ನು ಹೆಸರಿಸಲಾಗಿದೆ. "ಆದಿಯಾ, ಬಡಗ, ಬೆಲಾರಿ, ಬೆಟ್ಟಕುರುಬ, ಚೆಂಚು, ಜೇನುಕುರುಬ,ಕಾಡುಕುರುಬ, ಕಾಡುಚೆಂಚು, ದೊಂಬ, ಗೊಂಡ, ಹಸಲ, ಇರುಳಿಗ, ಕಾಪಾಲಿ, ಕಾಡುಗೊಲ್ಲ,ಕೊರಚ, ಕೊರಮಾ, ಕೋಟ, ಕೋಯಾ, ಪಣಿಯಾ, ಸೋಲಿಗ, ತೋಡ, ಯವರಾ, ಸುಡುಗಾಡುಸಿದ್ದ, ಮಲೆಕುಡಿಯಾ, ಮಪೇರ, ಮಾಡುಕೊರಗ, ಮುಳ್ಳುಕೊರವು, ಒಂಟಿಕೊರಗ, ಪಣಿಯ, ಸೋಲಿಗ, ಮೋಡ, ಯರವ, ಸುಡಗಾಡುಸಿದ್ದ, ಕಿಳ್ಳೆಕ್ಯಾತ, ಕಚ್ಚೆಗೌಳಿಗ, ಹಾಲಕ್ಕಿ, ಸಿದ್ದಿ, ಕಣಿಯಾ, ಬಂಜಾರ,

ಹಳೆಪೈಕ, ದೀವ, ಮೋರ, ಮನ್ಸ, ಮ್ಯಾಸಬ್ಯಾಡ, ಮೇದ" (ಉಲ್ಲೇಖ: ಇರುಳಿಗರು ಜಾನಪದೀಯ ಅಧ್ಯಯನ, 2002, ಪುಟ–8) ಮುಂತಾದವು. ಪರಿಶಿಷ್ಟ ಜಾತಿ ಮತ್ತು ವರ್ಗಗಳ ವರ್ಗೀಕರಣ ವಿಧಿ (ನಂ. 108 ರ 1976) ದಿನಾಂಕ: 18ನೇ ಸೆಪ್ಟೆಂಬರ್ 1976 ರಂತೆ ಕರ್ನಾಟಕ ಬುಡಕಟ್ಟುಗಳ ಪಟ್ಟಿಯಲ್ಲಿ ಒಟ್ಟು 49 ಬುಡಕಟ್ಟುಗಳನ್ನು ಗುರುತಿಸಲಾಗಿದೆ.

ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಮತ್ತು ಕಾರವಾರ ಜಿಲ್ಲೆಯ ಕೆಲವು ಪ್ರದೇಶಗಳಲಿ ಮಲೆನಾಡಿನ ಬುಡಕಟ್ಟುಗಳನ್ನು ಗುರುತಿಸಬಹುದು. "ಹಸಲರು, ಸಿದ್ಧಿಯರು, ಗೊಂಡರು, ಹಾಲಕ್ಕಿ ಒಕ್ಕಲಿಗರು, ಕರೆ ಒಕ್ಕಲಿಗರು,ಮಲೆ ಕುಡಿಯರು, ಕೊರಗರು, ಗೌಳಿಗರು" ಮುಂತಾದವರು ಮುಖ್ಯರು. ಅವರ ಜೊತೆಯಲ್ಲಿ ಬುಡಕಟ್ಟಿನ ಆಚಾರ–ವಿಚಾರ ನಡವಳಿಕೆಗಳನ್ನು ಭಾಗಶಃ ಹೊಂದಿರುವ ಬುಡಕಟ್ಟಿನೊಂದಿಗೆ ಜಾತಿಯಾಗಿ ಬದಲಾಗುತ್ತಿರುವ ಹಲವು ಜನಾಂಗಗಳು ಬರುತ್ತವೆ. ಅವರಲ್ಲಿ ದೀವರು ಕೂಡಾ ಸೇರುತ್ತಾರೆ. ಬುಡಕಟ್ಟಿನ ಬಹುತೇಕ ಅಂಶಗಳನ್ನು ,ಜನಜೀವನ ಸಂಪ್ರದಾಯಗಳನ್ನು ದೀವರು ಇನ್ನೂ ಒಳಗೊಂಡಿರುವುದರಿಂದ ಇವರನ್ನು ಬುಡಕಟ್ಟೆಂದು ಗ್ರಹಿಸಬೇಕಾಗುತ್ತದೆ.ಅದಕ್ಕೆ ದೀವರ ಹಸೆಚಿತ್ತಾರ ಪರಂಪರೆ ,ಸಂಪ್ರದಾಯ ,ಆಚರಣೆಗಳು ಪ್ರಮುಖ ಮೂಲಾಧಾರಗಳಾಗಿ ಸಿಗುತ್ತವೆ. ಕರ್ನಾಟಕದಲ್ಲಿ ಮದುವೆ ,ಹಬ್ಬದ ಆಚರಣೆಗಳಲ್ಲಿ ಈಗಲೂ ಕಡ್ಡಾಯವಾಗಿ ಪ್ರಧಾನವಾಗಿ ಹಸೆ ಚಿತ್ತಾರ, ಬುಟ್ಟಿ ಚಿತ್ತಾರ ಪರಂಪರೆ ಉಳಿಸಿಕೊಂಡಿರುವ ದೀವರ ಜೊತೆಗೆ ವಿರಳವಾಗಿ ಮಲೆನಾಡಿನ ಹಸಲರು, ಹಾಲಕ್ಕಿಗಳು, ಕರೆಒಕ್ಕಲಿಗರು,ಗೊಂಡರು ಹಲಿ,ಹಸಗರ,ಶೇಡಿ ಎನ್ನುವ ಹೆಸರಿನ ಚಿತ್ತಾರ ಪರಂಪರೆ ಅನುಸರಿಸಿದ್ದು ಇವರೆಲ್ಲರೂ ಬುಡಕಟ್ಟು ಜನಸಮುದಾಯಗಳೇ ಎಂದು ಕಂಡುಬರುತ್ತದೆ.ಬಹುತೇಕ ಈ ಎಲ್ಲಾ ಬುಡಕಟ್ಟುಗಳಲ್ಲಿ ಸಾಂಪ್ರದಾಯಿಕ ಚಿತ್ರಕಲಾ ಸಂಪ್ರದಾಯವಿರುವುದು ಗಮನಾರ್ಹ ಅಂಶ.ಬುಡಕಟ್ಟುಗಳ ಆಚರಣೆ, ನಂಬಿಕೆಗಳೆ ವಿಶಿಷ್ಟ ವಿಭಿನ್ನ.ಆದಿಕಾಲದ ಕಲೆಗಳಿನ್ನೂ ಅವರಲ್ಲಿ ಜೀವಂತ.

ಪಶ್ಚಿಮಘಟ್ಟಗಳು ಮತ್ತು ಬುಡಕಟ್ಟು ಚಿತ್ತಾರ ಕಲೆ

ಭಾರತದಲ್ಲಿ ಕಂಡು ಬರುವ ಬಹುತೇಕ ಬುಡಕಟ್ಟು ಚಿತ್ತಾರ ಕಲೆಗೂ ಪಶ್ಚಿಮ ಘಟ್ಟಕ್ಕೂ ನೆಲಮೂಲದ ಸಂಬಂಧವಿದೆ. ಮಹಾರಾಷ್ಟ್ರದಲ್ಲಿ ಜನಪ್ರಿಯವಾಗಿರುವ ವರ್ಲಿ ಚಿತ್ರಕಲೆಯು ಸಹ ಅಲ್ಲಿನ ಸಮುದ್ರ ತೀರದಂಚಿನ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿಯೇ ಮುಖ್ಯವಾಗಿ ವರ್ಲಿ ಸಮುದಾಯದ ಸಾಂಪ್ರದಾಯಿಕ ಆಚರಣೆಯ ಭಾಗವಾಗಿದ್ದು ಈಗಲೂ ಕಂಡುಬರುತ್ತದೆ. ಅಲ್ಲಿನ ಕಲಾವಿಧರು, ಸರ್ಕಾರದ ವಿವಿಧ ಇಲಾಖೆಗಳ ಪ್ರೋತ್ಸಾಹವು ದೊರೆತ ಮೇಲೆ ಅದು ದೇಶಾದ್ಯಂತ ಮಾತ್ರವಲ್ಲದೇ ಜಗತ್ತಿನ ಬೇರೆ ಬೇರೆ ಭಾಗದ ಚಿತ್ರಕಲಾವಿಧರ ಗಮನಸೆಳೆದು ಜನಪ್ರಿಯವಾಯಿತು. ಅದರ ಮೂಲ ಆದಿಮ ಚಿತ್ತಾರ ಕಲೆಯೇ ಆಗಿರಬಹುದಾದರೂ ವಿನ್ಯಾಸದಲ್ಲಿ ಬೆಳವಣಿಗೆ ಹೊಂದಿದ್ದು ಅಲ್ಲಿನ ವರ್ಲಿ ಜನಾಂಗದಲ್ಲಿ ಎಂದು ಕಂಡುಬರುತ್ತದೆ.

ಕರ್ನಾಟಕದ ನೆಲಮೂಲದ ಹಸೆಚಿತ್ತಾರಕಲೆ ಸಹ ಮಲೆನಾಡಿನ ಘಟ್ಟ ಪ್ರದೇಶದಲ್ಲಿಯೇ ಪ್ರಧಾನವಾಗಿ ಕಂಡುಬರುತ್ತದೆ. ಮುಖ್ಯವಾಗಿ ಶಿವಮೊಗ್ಗದಲ್ಲಿ ಕಂಡುಬರುವ ಹಸೆಚಿತ್ತಾರದಂತೆ ವಿರಳವಾಗಿ ಉತ್ತರ ಕನ್ನಡ ಜಿಲ್ಲೆ, ಚಿಕ್ಕಮಂಗಳೂರಿನಲ್ಲಿ ,ಕರಾವಳಿ ಭಾಗದ ಘಟ್ಟಪ್ರದೇಶಗಳಲ್ಲಿ ಹಲಿ,ಹಸಗರ,ಸೇಢಿ, ಕಾವಿ ಚಿತ್ರಕಲೆ ಕಂಡುಬರುತ್ತದೆ. ಇದು ಬುಡಕಟ್ಟು ಚಿತ್ರಕಲೆಗೂ ಪಶ್ಚಿಮ ಘಟ್ಟಗಳಲ್ಲಿ ವಾಸವಾಗಿರುವ ಬುಡಕಟ್ಟು ಜನಸಂಸ್ಕೃತಿ ಪರಂಪರೆಗೂ ಇರುವ ಸಂಬಂಧವನ್ನು ಸಹ ಸೂಚಿಸುತ್ತದೆ. ಕರ್ನಾಟಕದ ದೀವರು ಮಲೆನಾಡಿನ ಪಶ್ಚಿಮ ಘಟ್ಟ ಹೊರತುಪಡಿಸಿ ಬೇರೆಲ್ಲೂ ವಾಸವಾಗಿರದಿರುವುದು ಕಂಡುಬರುತ್ತದೆ. ಕರ್ನಾಟಕದ ದೀವರ ಮನೆಯ ಪ್ರತಿಕುಟುಂಬದಲ್ಲಿಯೂ ಪ್ರಧಾನವಾಗಿ ಮದುವೆ , ಹಬ್ಬಗಳ ಆಚರಣೆಯಲ್ಲಿ ಸಾಂಪ್ರದಾಯಿಕವಾಗಿ ಕಂಡುಬರುವ ಹಸೆ ಚಿತ್ತಾರ ಕಲೆ, ಬುಟ್ಟಿ ಚಿತ್ತಾರ ಕಲೆ, ಗೋಡೆ ಚಿತ್ತಾರ ಕಲೆಗಳನ್ನು ದೀವರ ಚಿತ್ತಾರಕಲೆ ಎಂದೇ ಶಿವಮೊಗ್ಗದ ಹಲವು ಸಮುದಾಯಗಳ ಹಿರಿಯರು ಇಂದಿಗೂ ಗುರುತಿಸುತ್ತಾರೆ.

ಹಲಿ,ಹಸಗರ ಎನ್ನುವ ಚಿತ್ರಕಲಾ ಮಾದರಿಗಳು ಇಂದಿಗೂ ವಿರಳವಾಗಿ ಮಲೆನಾಡಿನ ಕೆಲ ಭಾಗದ ಕರೆಒಕ್ಕಲಿಗರಲ್ಲಿ, ಗೊಂಡರಲ್ಲಿ,ವಿರಳವಾಗಿ ಕೆಲವು ಊರುಗಳ ಹಸಲರಲ್ಲಿ ಕಂಡುಬರುವುದು ಗಮನಾರ್ಹವಾದುದು. ಇವರೂ ಸಹ ಪಶ್ಚಿಮಘಟ್ಟವಾಸಿಗಳು ಎನ್ನುವುದು ಗಮನಾರ್ಹ ಸಂಗತಿ. ಈ ಸಮುದಾಯಗಳಲ್ಲಿ ಈಗಲೂ ದಟ್ಟವಾಗಿ ಬುಡಕಟ್ಟು ಪರಂಪರೆಯ ಜನಜೀವನ ಸಂಸ್ಕೃತಿ ಇದೆ. ಇದೆಲ್ಲವೂ ಭಾರತದ ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ಕೆಲವು ಬುಡಕಟ್ಟುಗಳಲ್ಲಿ ಕಂಡುಬರುವ ಸಾಕಷ್ಟು ಸಾಮ್ಯತೆಗಳಿರುವ ವರ್ಲಿ ಮತ್ತು ಹಸೆಚಿತ್ತಾರ ಮಾದರಿಗಳ ಕಾರಣದಿಂದಾಗಿ ಈ ಮಾದರಿ ಚಿತ್ತಾರದ ಮೂಲ ಬುಡಕಟ್ಟು ಜನಸಂಸ್ಕೃತಿಯದೇ ಎಂದು ಹೇಳಲು ಒಂದಿಷ್ಟು ಸುಳಿವುಗಳು ಸಿಗುತ್ತವೆ.

ಬಹುತೇಕ ಕಾಲಘಟ್ಟಗಳಲ್ಲಿ ಅಲೆಮಾರಿಗಳಾಗಿದ್ದ ಬುಡಕಟ್ಟು ಜನಾಂಗಗಳು ತಮ್ಮ ಕಲೆಯನ್ನು ಮಾತ್ರ ಇನ್ನು ತಮ್ಮ ಸಂಪ್ರದಾಯಗಳಲ್ಲಿ ಬಿಟ್ಟಿಲ್ಲ. ಅವರು ಯಾರಿಂದ ಯಾರು ಯಾವ ಕಲೆಯನ್ನು ಪಡೆದರು ಎಂದೂ ನಿರ್ಧಿಷ್ಟವಾಗಿ ಹೇಳಲಾಗದಿದ್ದರೂ ಅವರ ನಡುವೆ ನೆಲಮೂಲದ ಸಹಸಂಬಂಧವಿರಹಬಹುದೆಂಬ ಪ್ರಶ್ನೆಗಳು ಹುಟ್ಟುತ್ತವೆ. ಆದರೆ ಈ ಎರಡೂ ಚಿತ್ತಾರ ಮಾದರಿಗಳಲ್ಲಿ ಹೋಲಿಕೆ ಇದ್ದ ಮಾತ್ರಕ್ಕೆ ವರ್ಲಿ ಚಿತ್ರಬರೆಯುವ ಸಮುದಾಯಕ್ಕೂ ಕರ್ನಾಟಕದ ಹಸೆ ಚಿತ್ತಾರ ಬರೆಯುವ ಸಮುದಾಯಕ್ಕೂ ಇರುವ ಸಹಸಂಬಂದದ ಬಗ್ಗೆ ನಿಖರ ತೀರ್ಮಾನಕ್ಕೆ ಬರಲು ಆಗದು. ಸಾಂಸ್ಕೃತಿಕ ಮೂಲಾಧಾರಗಳ ಆಧಾರದ ಮೇಲೆ ಊಹಿಸಬಹುದೇ ಹೊರತು ಹೆಚ್ಚಿನ ಬೇರೆ ದಾಖಲೆಗಳಿಲ್ಲ. ಅಲ್ಲದೇ ಕರ್ನಾಟಕದ ಹಸೆಚಿತ್ತಾರ ವಿನ್ಯಾಸದಲ್ಲಿ, ಆಚರಣೆಯ ವಿಧಿ ವಿಧಾನಗಳಲ್ಲಿ, ಅಂತಃಸತ್ವದಲ್ಲಿ ಸಾಕಷ್ಟು ವ್ಯಾತ್ಯಾಸಗಳು ಸಹ ಇವೆ. ಹಾಗಾಗಿ ಇವುಗಳ ಮೂಲದ ಬಗ್ಗೆ ,ಸಹಸಂಬಂಧದ ಬಗ್ಗೆ ನಿಖರ ತೀರ್ಮಾನಕ್ಕೆ ಬರಲಾಗದು. ಮುಖ್ಯವಾಗಿ ಇಲ್ಲಿ ಗಮನಸಬೇಕಾದ ಮತ್ತೊಂದು ಅಂಶವೆಂದರೆ ಈ ಎರಡೂ ಬಗೆಯ ಚಿತ್ತಾರವನ್ನು ಸಂಪ್ರದಾಯಿಕವಾಗಿ ಬರೆಯುವವರು ಸ್ತ್ರೀಯರು. ಇತ್ತೀಚಿನವರೆಗೂ ಮಾತೃಪ್ರದಾನ ಕುಟುಂಬಗಳಾಗಿದ್ದ ದೀವರ ಸ್ತ್ರೀಯರ ಸೌಂದರ್ಯ ಪ್ರಜ್ಞೆಗೆ,

ಕಲಾ ಅಭಿವ್ಯಕ್ತಿಗೆ ಹಸೆಚಿತ್ತಾರ ವಿನ್ಯಾಸಗಳೆ ಸಾಕ್ಷಿಯಾದರೆ ಮಹಾರಾಷ್ಟ್ರದ ವರ್ಲಿಜನಾಂಗದಲ್ಲಿನ ಸ್ತ್ರೀಯರು ಪ್ರಧಾನವಾಗಿ ಬರೆಯುತ್ತಿದ್ದ ವರ್ಲಿಕಲೆಯು ಸಹ ಸ್ತ್ರೀಯರ ಕರಕುಶಲ ಕಲಾ ಅಭಿವ್ಯಕ್ತಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪುರುಷ ಕಲಾವಿದರೂ ಸಹ ಕಲಿತು ಬರೆಯುವುದು ಅಲ್ಲಲ್ಲಿ ಕಂಡುಬರುತ್ತದೆ. ಆದರೆ ದೀವರ ಪ್ರತಿ ಕುಟುಂಬದಲ್ಲಿನ ಸ್ತ್ರೀಯರಲ್ಲಿ ಅದನ್ನು ಕಲಿಯಲೆಂದೇ ಕಲಿಯದೇ ಪರಂಪರೆಯಿಂದ ನೋಡಿಕೊಂಡು ಬಂದಿದ್ದರಿಂದ ರಕ್ತಗತವಾದ ಕಲೆಯಂತೆ ಲೀಲಾಜಾಲವಾಗಿ ಸೊಗಸಾಗಿ ಬಿಡಿಸುತ್ತಾರೆ. ಅವರ ಪ್ರಭಾವದಿಂದ ಬೇರೆ ಬೇರೆ ಸಮುದಾಯದ ಕೆಲವು ಆಸಕ್ತ ಕಲಾವಿದರು ಈಗೀಗ ಕಲಿತು ಸಂಪ್ರದಾಯದಾಚೆ ವಾಣಿಜ್ಯ ಸಂಕೀರ್ಣಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ, ಕಾಂಪೌಂಡುಗಳಲ್ಲಿ, ಶಾಲೆಗಳಲ್ಲಿ ಮತ್ತಿತರ ಕಡೆ ಗೋಡೆಗಳಲ್ಲಿ ಬಿಡಿಸುವುದು ಕಂಡುಬರುತ್ತಿದೆ.

ಕರ್ನಾಟಕದ ಹಸೆಚಿತ್ತಾರ ಕಲೆ ಹಾಗೂ ಮಹಾರಾಷ್ಟ್ರದ ವರ್ಲಿ ಚಿತ್ತಾರ ಕಲೆ ಜಗ್ತತಿನ ಕಲಾವಿಧರ ಗಮನಸೆಳೆಯುವಲ್ಲಿ ಯಶಸ್ವಿಯಾಗಿದೆ. ಜಗತ್ತಿನ ಹಲವು ಕಡೆ ಇಂದಿನ ಹಸೆಚಿತ್ತಾರ ಕಲಾವಿದರ ಹಸೆಚಿತ್ತಾರ ಪ್ರದರ್ಶನ ಮಾಡಿ ಜನಪ್ರಿಯಗೊಳಿಸಿದ್ದಾರೆ.ಅಲ್ಲದೆ ಇಂದು ಚಲನಶೀಲತೆಯೊಂದಿಗೆ ಉದ್ಯಮಶೀಲತೆಯತ್ತಲೂ ಭಾರತದ ಪಶ್ಚಿಮ ಘಟ್ಟಗಳ ನೆಲಮೂಲದ ಈ ಎರಡೂ ಬಗೆಯ ಚಿತ್ತಾರ ಕಲೆಗಳೂ ಯಶಸ್ವಿಯಾಗಿವೆ.

ಬುಡಕಟ್ಟು ಜನಸಂಸ್ಕೃತಿ ಮತ್ತು ದೀವರ ಹಸೆಚಿತ್ತಾರ

ನಮ್ಮ ದೇಶದಲ್ಲಿ ಕೆಲವು ರಾಜ್ಯಗಳಲ್ಲಿ ಬುಡಕಟ್ಟು ಜನಜೀವನ ಸಂಸ್ಕೃತಿ ಜೊತೆಗೆ ಬುಡಕಟ್ಟು ಚಿತ್ತಾರ ಕಲಾ ಪರಂಪರೆ ಇಂದಿಗೂ ಮುಂದುವರಿದಿದ್ದು ವಿಶಿಷ್ಟವಾಗಿ ಕಂಡುಬರುತ್ತದೆ. ಮಹಾರಾಷ್ಟ್ರದ ಪಶ್ಚಿಮ ಘಟ್ಟಭಾಗದಲ್ಲಿ ಕಂಡುಬರುವ ಬುಡಕಟ್ಟು ಜನಸಂಸ್ಕೃತಿಯ ವರ್ಲಿಕಲೆಯಂತಯೇ ಕರ್ನಾಟಕದ ಪಶ್ಚಿಮ ಘಟ್ಟಗಳ ಭಾಗದಲ್ಲಿ ವಾಸಿಸುವ ಕೆಲವು ಬುಡಕಟ್ಟು ಜನಪದರ ಸಾಂಪ್ರದಾಯಿಕ ಚಿತ್ತಾರ ಕಲೆಯಾಗಿ ಹಸೆಚಿತ್ತಾರ ಕಂಡುಬರುತ್ತದೆ.

ಕರ್ನಾಟಕದ ದೀವರಲ್ಲಿ ಇಂದಿಗೂ ಪ್ರಧಾನವಾಗಿ ಕಂಡುಬರುವ ಹಸೆಚಿತ್ತಾರ ಕಲೆ ವ್ಯಾಪಕವಾಗಿ ಇಂದಿಗೂ ಉಳಿದು ಬಂದಿದೆ. ಇದು ದೀವರು ಪುರಾತನ ಕಾಲದಿಂದ ಬುಡಕಟ್ಟು ಜನಜೀವನ ಪರಂಪರೆಯವರು ಎಂದು ಹೇಳಲು ಇರುವ ಪ್ರಮುಖ ಮೂಲಾಧಾರವಾಗಿದೆ. ಅಲ್ಲದೆ ದೀವರು ಇಂದಿಗೂ ನದಿ ಪೂಜೆ, ಹೊಲಗದ್ದೆ ಪೂಜೆ, ಸೂರ್ಯ ಚಂದ್ರರ ಪೂಜೆ ಆಚರಣೆ ಉಳಿಸಿಕೊಂಡೇ ಬಂದಿರುವುದನ್ನು ನಾವಿಲ್ಲಿ ಸ್ಮರಿಸಬಹುದು. ಈಗಲೂ ಬೇಟೆ ಆಡುವಿಕೆ,ಕಾಡಿನ ವನೌಷದ ಬಳಕೆ ,ಮಲೆನಾಡಿನ ದಟ್ಟ ಅರಣ್ಯ ಭಾಗದಲ್ಲಿ ಮಾತ್ರ ವಾಸವಾಗಿರುವ ದೀವರು ಶಿವಮೊಗ್ಗದ ಸಾಗರ,ಸೊರಬ,ತೀರ್ಥಹಳ್ಳಿ,ಹೊಸನಗರದಲ್ಲಿ ಬಹುಸಂಖ್ಯಾತರಾಗಿದ್ದು ,ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಲವು ತಾಲ್ಲೂಕುಗಳಲ್ಲಿ ನಾಮಧಾರಿ ದೀವರೆಂದು ಕಂಡುಬರುತ್ತಾರೆ. ಅಲ್ಲಿ ಹಸೆಚಿತ್ತಾರ ಜೊತೆಗೆ ಹಸಗರ,ಹಲಿ ಎನ್ನುವ ಬುಡಕಟ್ಟು ಚಿತ್ತಾರ ಮಾದರಿಗಳಿವೆ.

ಕರ್ನಾಟಕದ ದೀವರು ಮಲೆನಾಡಿನ ಪಶ್ಚಿಮಘಟ್ಟ ಹೊರತುಪಡಿಸಿ ಬೇರೆಲ್ಲೂ ವಾಸವಾಗಿರದಿರುವುದು ಕಂಡುಬರುತ್ತದೆ. ಅವರು ವಾಸಕ್ಕೆ ದಟ್ಟವಾದ ಕಾಡನ್ನೆ ಆಯ್ಕೆಮಾಡಿಕೊಂಡು ಅಲ್ಲಿಯೇ ತಮ್ಮದೇ ಆದ ಸಂಸ್ಕೃತಿ ಪರಂಪರೆ ರೂಡಿಸಿಕೊಂಡು ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಗೇಣಿ ಪದ್ದತಿವಿರುದ್ದ ಹೋರಾಡಿ ಉಳುವ ಭೂಮಿಯ ಹಕ್ಕು ಪಡೆದ ನಂತರ ರಾಜಕೀಯವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಬೆಳೆದಿದ್ದು , ಹಿಂದೆ ಬುಡಕಟ್ಟುಜನಸಂಸ್ಕೃತಿಯ ಜನಜೀವನ ಅನುಸರಿಸಿದ್ದು ಅವರು ರೂಡಿಸಿಕೊಂಡು ಬಂದ ಹಸೆಚಿತ್ತಾರ ಸಂಪ್ರದಾಯ,ಹಬ್ಬಗಳಿಂದ ಕಂಡುಬರುತ್ತದೆ. ಕರ್ನಾಟಕದ ದೀವರ ಮನೆಯ ಪ್ರತಿಕುಟುಂಬದಲ್ಲಿಯೂ ಪ್ರಧಾನವಾಗಿ ಮದುವೆ , ಹಬ್ಬಗಳ ಆಚರಣೆಯಲ್ಲಿ ಸಾಂಪ್ರದಾಯಿಕವಾಗಿ ಕಂಡುಬರುವ ಹಸೆ ಚಿತ್ತಾರ ಕಲೆ, ಬುಟ್ಟಿ ಚಿತ್ತಾರ ಕಲೆ, ಗೋಡೆ ಚಿತ್ತಾರ ಕಲೆಗಳನ್ನು ದೀವರ ಚಿತ್ತಾರಕಲೆ ಎಂದೇ ಶಿವಮೊಗ್ಗದ ಹಲವು ಸಮುದಾಯಗಳ ಹಿರಿಯರು ಇಂದಿಗೂ ಗುರುತಿಸುತ್ತಾರೆ.

ಬಹುತೇಕ ಬುಡಕಟ್ಟು ಚಿತ್ರಕಲಾ ಮಾದರಿಗಳು ಇಂದಿಗೂ ಉಳಿದಿರುವುದು ದೇಶದ ಪಶ್ಚಿಮಘಟ್ಟ ವಾಸಿಜನಗಳಲ್ಲಿ ಎನ್ನುವುದೇ ಮಹತ್ವದ ಸಂಗತಿ. ಹಾಗಾಗಿ ಈ ಎಲ್ಲಾ ಬುಡಕಟ್ಟು ಜನಸಂಸ್ಕೃತಿ ವಾಸಿಗಳು ಹಿಂದೆ ಒಂದೆಡೆ ನೆಲೆಸಿದ್ದು ಸಾಂಸ್ಕೃತಿಕ ಕೊಡುಕೊಳ್ಳುವಿಕೆ ನಡೆದಿರುವ ಸಾದ್ಯತೆ ಇದೆ ಎಂದು ತೀರ್ಮಾನಿಸಿಬಹುದು. ಕರ್ನಾಟಕದ ಪಶ್ಚಿಮ ಘಟ್ಟಗಳ ಶಿವಮೊಗ್ಗ, ಉತ್ತರ ಕನ್ನಡ ,ಚಿಕ್ಕಮಂಗಳೂರು ಜಿಲ್ಲೆಯಲ್ಲಿ ವಾಸಿಸುವ ಬಹುಸಂಖ್ಯಾತ ದೀವರು ಸಮುದಾಯದ ಬಹುತೇಕ ಜನಜೀವನ,ಆಚಾರಣೆಗಳು ಸಂಸ್ಕೃತಿ ಪರಂಪರೆಗಳು ಬುಡಕಟ್ಟು ಪರಂಪರೆಯುಲ್ಲಿಯೇ ಈಗಲೂ ಮುಂದುವರಿದಿದೆ.ಬಹು ವೈವಿಧ್ಯಮಯ ಹಸೆಚಿತ್ತಾರವನ್ನು ದೀವರ ಅನಕ್ಷರಸ್ಥ ಹೆಣ್ಣುಮಕ್ಕಳು ರಕ್ತಗತ ಕಲೆಯಂತೆ ಪೋಷಿಸಿಕೊಂಡು ಬಂದಿದ್ದು ಈಗಿನ ಅಕ್ಷರಸ್ಥ ದೀವರು ಸಹ ಬಿಡಿಸುತ್ತಾರೆ.

ದೀವರು ಸಮುದಾಯದ ಭಾಷಾಸೊಗಡಿನಲ್ಲಿ, ಜಾನಪದಗಳಲ್ಲಿ ಹಸೆಚಿತ್ತಾರದ ಪರಂಪರೆಯ ಉಲ್ಲೇಖಗಳಿವೆ. ಅವರ ಬದುಕು,ಅವರು ನಂಬಿಕೊಂಡು ಬಂದ ಸಂಪ್ರದಾಯ, ಆಚರಣೆಗಳು ಸಹ ಬುಡಕಟ್ಟು ಪರಂಪರೆಯದ್ದೇ ಆಗಿದೆ. ಅದಕ್ಕೆ ಮುಖ್ಯ ಸಾಕ್ಷಿಯಾಗಿ ಅವರು ಪರಂಪರೆಯಿಂದ ಪೋಷಿಸಿಕೊಂಡು ಬಂದಿರುವ ಹಸೆಚಿತ್ತಾರ ಪರಂಪರೆ, ನಿಸರ್ಗಆರಾಧನೆಯ ವಿಶಿಷ್ಟ ಆಚರಣೆಯ ಭೂಮಣ್ಣಿ ಹಬ್ಬ,ಹೊಳೆಹಬ್ಬ,ಆದ್ರೆಮಳೆಹಬ್ಬ, ಬಲೀಂದ್ರ ಪೂಜಾಪದ್ದತಿ ಮತ್ತಿತರ ಉದಾಹರಣೆಗಳನ್ನು ನೀಡಬಹುದು. ದೀವರು ಸಮುದಾಯದ ಭೂಮಿ ಹುಣ್ಣಿಮೆ ಹಬ್ಬದ ಆಚರಣೆಯಲ್ಲಿನ ವಿಧಿವಿದಾನಗಳು,ಗೌರಿ ಹಬ್ಬದ ವಿಧಿ ವಿಧಾನಗಳು,ಗೌರಿ ಹಬ್ಬಕ್ಕೆ ಕಾಡಿನ ವಿವಿಧ ಹೂಗಳನ್ನು,ಫಸಲನ್ನು ತಂದು ಪಳುವಳಿಕೆ ಕಟ್ಟುವಿಕೆಯಂತ ಆಚರಣೆಗಳು, ಬೇಟೆ ಆಡುವಿಕೆ ಹೀಗೆ ಹಲವಾರು ಉದಾಹರಣೆಗಳಲ್ಲಿ ದೀವರು ಸಮುದಾಯ ಬುಡಕಟ್ಟು ಪರಂಪರೆಯ ಮೂಲದ್ದೆಂದು ಹೇಳಲು ಮೂಲಾಧಾರಗಳು ಸಿಗುತ್ತವೆ. ಅವರ ಹಸೆ ಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರ ಬುಡಕಟ್ಟು ಜನಸಂಸ್ಕೃತಿಯ ನೆಲಮೂಲದ ಜ್ಞಾನದ ಅತಿ ವಿಶಿಷ್ಟ ಪರಂಪರೆಯ ಪರಿಕಲ್ಪನೆಯಾಗಿದೆ.

ಅಧ್ಯಾಯ –3

ಹಸೆ ಚಿತ್ತಾರ ಕಲೆಯ ಸ್ವರೂಪ ವಿಧಗಳು ಮತ್ತು ವಿನ್ಯಾಸಗಳು

ಕರ್ನಾಟಕ ಹಸೆಚಿತ್ತಾರ ಕಲೆಯು ಪ್ರಧಾನವಾಗಿ ಸರಳ ರೇಖೆಗಳು ,ತ್ರಿಭುಜ,ಚೌಕ,ಆಯತ,ವಜ್ರಾಕೃತಿ,ವೃತ್ತ ಮತ್ತಿತರ ಹಲವಾರು ಜ್ಯಾಮಿತಿಯ ಅಂಶಗಳ ಸಂಯೋಜನೆಯ ವಿನ್ಯಾಸವಾಗಿರುತ್ತದೆ. ಪ್ರಮಾಣ ಬದ್ದತೆ, ಷಡಂಗಗಳು, ವರ್ಣವೈವಿಧ್ಯತೆಗೆ ಆಧ್ಯತೆ ಕಡಿಮೆಯಿದ್ದರೂ ,ಮೇಲ್ನೋಟಕ್ಕೆ ಸರಳ ರೇಖೆಗಳ ಸರಳ ಸಂಯೋಜನೆ ಎನಸಿದರೂ ರಚನೆ ಸಂಕೀರ್ಣವೂ ,ಸಾಂಕೇತಿಕವೂ ಆದುದಾಗಿದೆ.ಧಾರ್ಮಿಕ ಮೂಲದ ಸಂಪ್ರದಾಯಿಕ ಚಿತ್ತಾರ ಕಲೆಯಾಗಿದ್ದು ಬದುಕು ಮತ್ತು ಆಚರಣೆಗಳ ಮಹತ್ವದ ಸಂಗತಿಗಳ ಅಂತಃಸತ್ವ ಹಸೆಚಿತ್ತಾರಕ್ಕಿದೆ.



ಹಸೆಚಿತ್ತಾರ ಪ್ರಧಾನವಾಗಿ ಸ್ತ್ರೀ ಅಭಿವ್ಯಕ್ತಿಯ , ವಿಶಿಷ್ಟ ಕಲೆಯಾಗಿದೆ.ಅಂದಿನ ಅನಕ್ಷರಸ್ತ ಬುಡಕಟ್ಟು ನೆಲಮೂಲದ ಜನಪದರ ಈ ಚಿತ್ತಾರ ಮಾದರಿ ಹಲವು ತಲೆಮಾರುಗಳ ಕಾಲಾನಂತರ ಬೆಳವಣಿಗೆ ಕಾಣುತ್ತಾ ಇತ್ತೀಚಿನ ಶತಮಾನಗಳಲ್ಲಿ ಮತ್ತಷ್ಟು ವಿಶಿಷ್ಟ ವಿನ್ಯಾಸ ಕಂಡುಕೊಂಡದ್ದು ಅಚ್ಚರಿ ಮತ್ತು ವಿಶೇಷ. ಮುಖ್ಯವಾಗಿ ಚಿತ್ತಾಗಿತ್ತಿಯರೇ ಮನೆಯಲ್ಲಿ ತಾಯಾರಿಸಿಕೊಂಡ ನೈಸರ್ಗಿಕ ಬಣ್ಣಗಳು, ಅವರೇ ತಾಯಾರಿಸಿದ ಕುಂಚಗಳ ಬಳಕೆ ಮತ್ತಷ್ಟು ವಿಶೇಷ.

ಅವರ ನೆಲಮೂಲದ ಜ್ಞಾನ ಇಂದಿನ ಆಧುನಿಕತೆಯುನ್ನೂ ನಾಚಿಸುವಂತಹುದು.ಇಂದು ಮಲೆನಾಡಿನ ದೀವರ ಸಮುದಾಯದ ಚಿತ್ತಾರಗಿತ್ತಿಯರಲ್ಲಿ ಹಲವು ಬಗೆಯ ವಿಶಿಷ್ಟ ಸಂಕೀರ್ಣ ಹಸೆಗೋಡೆ ಚಿತ್ತಾರ, ಬುಟ್ಟಿಚಿತ್ತಾರಗಳನ್ನು ಬಿಡಿಸುವುದು ರೂಡಿಯಲ್ಲಿದೆ.ಬುಟ್ಟಿಚಿತ್ತಾರಗಳಲ್ಲಿ ನಿಸರ್ಗ ಆರಾಧನೆ ಪ್ರಧಾನವಾಗಿದ್ದು ನಿಸರ್ಗ,ಕೃಷಿ ಸಂಬಂದಿತ ಚಿತ್ತಾರ ಕಂಡುಬರುತ್ತದೆ. ಬಾಗಿಲು ಚಿತ್ತಾರಗಳು ಸಾಲುಸಾಲು ಚೌಕಗಳ ಸಂರಚನೆಯಲ್ಲಿ ಕಂಡುಬರುತ್ತದೆ.

ಮದುವೆಗೆ ಚಿತ್ರಿಸುವ ಹಸೆಗೋಡೆ ಚಿತ್ತಾರ ಪ್ರಧಾನವಾಗಿ ಚಚ್ಚೌಕಾಕಾರದಲ್ಲಿ ಬರೆಯುತ್ತಾರೆ. ಮೂರರಿಂದ ಐದು ಅಡಿ ಅಗಲ ಮತ್ತು ಉದ್ದದವರೆಗೆ ಸಾಮಾನ್ಯವಾಗಿ ಬಿಡಿಸುತ್ತಾರೆ. ಮದುವೆಗೆ ಸಂಬಂದಿಸಿದಂತೆ ಫಲವಂತಿಕೆ,ಸಂಭ್ರಮ ,ಸಾಮುದಾಯಿಕತೆ, ಧರ್ಮ ಅರ್ಥ ಕಾಮ ಮೋಕ್ಷ ಸಾಂಕೇತೀಕರಿಸುವ ಮೋಟಿಪ್‌ಗಳು ವಿನ್ಯಾಸದಲ್ಲಿ ಕಂಡುಬರುತ್ತವೆ. ಗಂಡು ಹೆಣ್ಣು ಅಥವಾ ಶಿವ ಪಾರ್ವತಿಯನ್ನ ಸಾಂಕೇತಿಸಿ ಹಸೆಗೋಡೆ ಚಿತ್ತಾರದ ಮಧ್ಯಭಾಗದಲ್ಲಿ ದಂಡಿಗೆಯಲ್ಲಿ(ಫಲ್ಲಕ್ಕಿಯಲ್ಲಿ) ಚಿತ್ರಿಸುತ್ತಾರೆ. ಗಂಡು ಹೆಣ್ಣಿನ ಸಹಸಂಬಂಧ, ಸಹಬಾಳ್ವೆ, ಮಿಲನ ಸಾಂಕೇತಿಸುವ ಹಲವು ಮೋಟಿಪ್‌ಗಳು ಹಸೆಚಿತ್ತಾರದಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಕುಂಬ, ಬಾಸಿಂಗ, ಮದುಮಕ್ಕಳನ್ನು ಮೆರವಣಿಗೆ ಮಾಡುವ ಪಲ್ಲಕ್ಕಿ, ವಾಧ್ಯ ನುಡಿಸುವವರು, ಸೂರ್ಯ ಚಂದ್ರ, ಮೊಟ್ಟೆ ಇಡುವ ಕೋಳಿ,ಮಾದ್ನ ಕೈ ,ದಂಡಿಗೆಗಳು, ತೇರು ಮಾದರಿ ಮತ್ತಿತರ ಸಾಕಷ್ಟು ಬಗೆಯ ನಾವಿನ್ಯತೆಗಳೊಂದಿಗೆ ಪ್ರಾದೇಶಿಕವಾಗಿ ಬದಲಾವಣೆಗೆ ಒಳಪಡಿಸಿಕೊಳ್ಳುತ್ತಲೇ ಸಾಂಪ್ರದಾಯಿಕತೆಯ ಪರಿಧಿಯೊಳಗೆ ಚಿತ್ತಾರವನ್ನು ದೀವರ ಸ್ತ್ರೀಯರು ಕಡ್ಡಾಯ ಆಚರಣೆಯ ಭಾಗವಾಗಿ ದೈವಿಕ ಪೂಜ್ಯ ಬಾವನೆಯೊಂದಿಗೆ ಉಳಿಸಿಕೊಂಡುಬಂದಿದ್ದಾರೆ. ಭೂಮಿಹುಣ್ಣಿಮೆಗೆ ಬಳಸುವ ಬುಟ್ಟಿಚಿತ್ತಾರವು ಸಹ ಅತಿ ವಿಶಿಷ್ಟ ವಿನ್ಯಾಸದ್ದಾಗಿದೆ. ಬಾಗಿಲು ಚಿತ್ತಾರ ,ಕಿಟಕಿ ಚಿತ್ತಾರ ,ನೆಲಚಿತ್ತಾರಗಳು ಸಹ ವಿಶಿಷ್ಟ ವಿನ್ಯಾಸದ ಹಸೆಚಿತ್ತಾರಗಳಾಗಿವೆ.

ಹಸೆಚಿತ್ತಾರದ ವಿಧಗಳು

ಕರ್ನಾಟಕ ಹಸೆಚಿತ್ತಾರಗಳಲ್ಲಿ ವಿನ್ಯಾಸದ ದೃಷ್ಟಿಯಿಂದ ಪ್ರಧಾನವಾಗಿ ಹೆಚ್ಚಿನ ವಿಶಿಷ್ಟತೆ, ವೈವಿಧ್ಯಮಯ ವಿನ್ಯಾಸ ,ಸಂಕೀರ್ಣತೆ ,ಅಂತಃಸತ್ವ ಕಂಡುಬರುವುದು ಮಲೆನಾಡಿನ ದೀವರ ಸಮುದಾಯದ ಚಿತ್ತಾರಗಿತ್ತಿಯರು ಬಿಡಿಸುವ ಹಸೆಚಿತ್ತಾರದಲ್ಲಿ .ಹಾಗಾಗಿಯೇ ಈ ಕೃತಿಯುದ್ದಕ್ಕೂ ದೀವರ ಸಮುದಾಯದ ಹಸೆಚಿತ್ತಾರವನ್ನೇ ಪ್ರಧಾನವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.ಹಲಿ ,ಹಸಗರ, ಸೇಡಿ ಎನ್ನುವ ಹೆಸರಿನ ಹಸೆಚಿತ್ತಾರ ಮಾದರಿಗಳು ಸಹ ಕರ್ನಾಟಕದ ಬೇರೆ ಬೇರೆ ಸಮುದಾಯಗಳಲ್ಲಿ ಅಲ್ಲಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಕಂಡುಬರುತ್ತವೆ. ಆದರೆ ವಿನ್ಯಾಸ ಸರಳವಾಗಿವೆ.ಅವುಗಳ ಮೋಟಿಫ್ಗಳಲ್ಲಿ ವಿನ್ಯಾಸದಲ್ಲಿ ವೈವಿಧ್ಯತೆ ಕಡಿಮೆಯಿದೆ. ಹಸೆಚಿತ್ತಾರದ ಸ್ವರೂಪ,ವಿನ್ಯಾಸ ,ಆಚರಣೆಯ ಭಾಗವಾಗಿ ಬಿಡಿಸುವಿಕೆ, ಬಿಡಿಸುವ ಸ್ಥಳಗಳಿಗೆ ಅನುಗುಣವಾಗಿ ದೀವರ ಜನಪದರೇ ವಿವಿಧ ಹೆಸರುಗಳಲ್ಲಿ ಕರೆದಿದ್ದಾರೆ. ಅವುಗಳನ್ನು ಈ ಕೆಳಗಿನ ವಿಧಗಳಲ್ಲಿ ಗುರುತಿಸಲಾಗಿದೆ.

ಹಸೆ ಚಿತ್ತಾರದ ಪ್ರಮುಖ ವಿಧಗಳು

1)ಮದುವೆ ಶಾಸ್ತ್ರಕ್ಕಾಗಿ ಬರೆಯುವ ಚಿತ್ತಾರಗಳು ; ಹಸೆಗೋಡೆ ಚಿತ್ತಾರ

ಮದುವೆಗೆ ಬರೆಯುವ ಹಸೆಗೋಡೆ ಚಿತ್ತಾರದಲ್ಲಿ ಪ್ರಧಾನವಾಗಿ ಸಾಂಪ್ರದಾಯಿಕವಾಗಿ ಮುಂಡಿಗೆ ಇಲ್ಲದ ಚಚ್ಚೌಕ ಹಸೆ ಚಿತ್ತಾರ, ಮುಂಡಿಗೆ ಇರುವ ಹಸೆಚಿತ್ತಾರ, ತೇರು ಚಿತ್ತಾರ, ಚಕ್ಕಲ್ಮುಕಳಿ ಚಿನ್ನಾಣಿ ಚಿತ್ತಾರ ಮತ್ತಿತರ ಹಲವು ವಿನ್ಯಾಸಗಳಿವೆ.

2) ಮನೆಯ ಅಲಂಕಾರಕ್ಕಾಗಿ ಬರೆಯುವ ಚಿತ್ತಾರಗಳು

ಗೋಡೆ ಚಿತ್ತಾರ, ಕಿಟಕಿಚಿತ್ತಾರ,ಬಾಗಿಲು ಚಿತ್ತಾರ ,ವಸ್ತ್ರ ಚಿತ್ತಾರ,ಮಡಿಕೆ

ಕುಂಭ ಚಿತ್ತಾರಗಳು , ನೆಲ ಚಿತ್ತಾರಗಳು

3) ಹಬ್ಬಗಳಲ್ಲಿ ಬರೆಯುವ ಚಿತ್ತಾರಗಳು

ಭೂಮಣ್ಣಿ ಬುಟ್ಟಿ ಚಿತ್ತಾರ,ತಿರುಗೆ ಮಣೆ ಚಿತ್ತಾರ,ಬಲೀಂದ್ರ ಚಿತ್ತಾರ, ಬೂರೇ ಬೊಟ್ಟುಗಳು, ಇಡುಕಲು ಚಿತ್ತಾರ.ಪಳತ ಚಿತ್ತಾರ ,ಮಡಿಕೆ ಚಿತ್ತಾರ,ಕುಂಭ ಚಿತ್ತಾರಗಳು

ಹೀಗೆ ವೈವಿಧ್ಯಮಯವಾದ ಹಲವು ಬಗೆಯ ವಿಧಗಳಿವೆ. ಹಲವು ಸಮುದಾಯಗಳಲ್ಲಿ ಬರೆಯುವ ಚಿತ್ತಾರಗಳಲ್ಲಿ ವಿನ್ಯಾಸದಲ್ಲಿ ಕೆಲವು ವಿಭಿನ್ನತೆಗಳು ಸಹ ಕಂಡುರುತ್ತವೆ. ಅವುಗಳನ್ನು ಸವಿಸ್ತಾರವಾಗಿ ಮುಂದೆ ವಿವರಿಸುವೆ.

ಮದುವೆ ಶಾಸ್ತ್ರಕ್ಕಾಗಿ ಬರೆಯುವ ಹಸೆಗೋಡೆ ಚಿತ್ತಾರಗಳು

ಮದುವೆಯೆಂದರೆ ಸಡಗರ ಸಂಭ್ರಮದ ಜೊತೆಗೆ ಸಂಪ್ರದಾಯ ಅತಿ ಮಹತ್ವದ್ದು. ಆಯಾ ಜನಸಮುದಾಯಗಳ ಆಚಾರ ವಿಚಾರಗಳಿಗೆ ತಕ್ಕಂತೆ ವೈವಿಧ್ಯಮಯ ಸಂಪ್ರದಾಯಗಳಿವೆ. ಈಗಿನ ಆಧುನಿಕ ಮದುವೆಗಳು ನಗರಭಾಗದ ಚೌಟರಿಗಳಲ್ಲಿ ನಡೆಯುತ್ತಿರುವ ಈಗಿನ ದಿನಗಳಲ್ಲಿ ಸಂಪ್ರದಾಯಕ್ಕಿಂತ ಆಡಂಬರಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಆದರೂ ಗ್ರಾಮೀಣ ಭಾಗದಲ್ಲಿ ಮದುವೆ ಸಂಪ್ರದಾಯಗಳು ಆಯಾ ಸಮುದಾಯಗಳು ತಲೆತಲಾಂತರಗಳಿಂದ ನಂಬಿಕೊಂಡುಬಂದ ಸಂಪ್ರದಾಯ ಪಾಲನೆ ಮಾಡುತ್ತಿದ್ದಾರೆ.ಇಂದಿನ ಆಧುನಿಕತೆ ಹಲವು ಸಾಂಸ್ಕೃತಿಕ ,ಸಾಂಪ್ರದಾಯಿಕ ಪಲ್ಲಟಗಳಿಗೆ ಕಾರಣವಾಗಿದ್ದರೂ ಸಹ ಮಲೆನಾಡಿನ ಬುಡಕಟ್ಟು ಜನಜೀವನ ಸಂಸ್ಕೃತಿಯ ಸಮುದಾಯಗಳ ಮದುವೆ ಮನೆಗಳಲ್ಲಿ ಹಸೆಚಿತ್ತಾರ ಬರೆಯುವ ಸಂಪ್ರದಾಯ ಈಗಲೂ ಮುಂದುವರಿದಿದೆ. ನಮ್ಮ ಸಂಸ್ಕೃತಿ ನಮ್ಮ ಪರಂಪರೆ ನಮ್ಮ ಅಸ್ಮಿತೆಯೆಂಬ ಹೆಮ್ಮೆಯೊಂದಿಗೆ ಮಲೆನಾಡಿನ ದೀವರು ಸಮುದಾಯ

ಹಸೆಚಿತ್ತಾರ ಪರಂಪರೆಯನ್ನು ಪೋಷಿಸಿಕೊಂಡು ಮುಂದುವರಿಸಿಕೊಂಡು ಬಂದಿದೆ.

ಮದುವೆ ಶಾಸ್ತ್ರಕ್ಕಾಗಿ ಬರೆಯುವ ಹಸೆಗೋಡೆ ಚಿತ್ತಾರಗಳಲ್ಲಿ ಹಲವು ವಿನ್ಯಾಸಗಳಿವೆ. ದೀವರ ಸಮುದಾಯದಲ್ಲಂತೂ ವೈವಿಧ್ಯಮಯ ಹಸೆಗೋಡೆ ಚಿತ್ತಾರ ಪರಂಪರೆಯಿದೆ. ದೀವರು ಬರೆಯುವ ಹಸೆಗೋಡೆ ಚಿತ್ತಾರಗಳು ಚಚ್ಚೌಕ ಚಿತ್ತಾರಗಳಲ್ಲದೆ, ವಿಶಿಷ್ಟ ವಿನ್ಯಾಸದ ಮುಂಡಿಗೆಗಳು, ಮಾದ್ನಕೈ, ದಂಡಿಗೆಯನ್ನು ಸಹ ಒಳಗೊಂಡಿರುತ್ತದೆ. ದೀವರ ಮುಂಡಿಗೆ ಮನೆಯ ಒಳಾಂಗಣದ ಮುಂಡಿಗೆಗಳ ವಿನ್ಯಾಸವನ್ನು ಗ್ರಹಿಸಿದ ಚಿತ್ತಾರಗಿತ್ತಿಯರು ತಾವು ಬಿಡಿಸುವ ಹಸೆಚಿತ್ತಾರದಲ್ಲಿ ಅಳವಡಿಸಿಕೊಂಡಿರಬಹುದು ಎನ್ನುವುದು ಹಿರಿಯರ ಅಭಿಮತ. ಹಳೆಯ ಕಾಲದ ಶಿವನಗುಡಿಯ ವಾಸ್ತುಶಿಲ್ಪ ನಕ್ಷೆಯ ಅಂಶಗಳನ್ನು ಹೋಲುತ್ತವೆ ಎಂಬುದು ಸಂಶೋಧಕ ಬಾಬುಶಿವಪೂಜಾರಿ ಅವರ ಅಭಿಮತ. ಹಸೆಗೋಡೆಚಿತ್ತಾರದಲ್ಲಿನ ಮಂಡಿಗೆಗಳು ,ಮಾದ್ನಕೈ (ಮಾದಪ್ಪ) ಗೋಪುರ ರಚನೆ, ದಂಡಿಗೆ ಒಟ್ಟಾರೆ ವಿನ್ಯಾಸವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಶಿವನಗುಡಿಯ ಮಾದರಿಯಂತೆ ಕಾಣುವುದು ಸಹ ಗಮನಿಸಬಹುದು. ಮದುಮಕ್ಕಳು ಶಿವ ಪಾರ್ವತಿಯಂತೆ ದೇವರ ಸಮಾನ ಎನ್ನುವ ನಂಬಿಕೆಯೊಂದಿಗೆ ದೀವರ ಮದುವೆ ಶಾಸ್ತ್ರಗಳಲ್ಲಿ ಹಲವು ಬಗೆಯ ಆಚರಣೆಗಳಿರುವುದು ಗಮನಾರ್ಹ. ಉತ್ತರ ಕನ್ನಡ ಜಿಲ್ಲೆ ,ಕರಾವಳಿ ತೀರದ ಕೆಲವು ಬುಡಕಟ್ಟು ಜನಾಂಗಗಳಲ್ಲಿ ಚಚ್ಚೌಕ ಚಿತ್ತಾರಗಳು, ಮಂಡಿಗೆಯಿಲ್ಲದ ಸರಳ ರಚನಾ ರೇಖಾ ವಿನ್ಯಾಸದ ಚಿತ್ತಾರ ಪರಂಪರೆ ಕಂಡುಬರುತ್ತದೆ.

ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಶಿಕಾರಿಪುರದ ಕೆಲವೆಡೆ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ದೀವರು ಜನಾಂಗದವರು ಹೆಚ್ಚಾಗಿ ವಾಸವಾಗಿದ್ದಾರೆ. ಇತ್ತೀಚಿನವರೆಗೂ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿದ್ದ ಈ ಜನಾಂಗದ ಮಹಿಳೆಯರು ಪುರಾತನ ಕಾಲದಿಂದ ಹಸೆಚಿತ್ತಾರ ಕಲೆಯನ್ನು ಹಲವು ಆಯಾಮಗಳಲ್ಲಿ

ವಿಶಿಷ್ಟವಾಗಿ ರೂಢಿಸಿಕೊಂಡು ಬಂದಿದ್ದಾರೆ. ಹಲವು ಬುಡಕಟ್ಟು ಸಮುದಾಯಗಳಲ್ಲೂ ಹಲವಾರು ರೀತಿಯ ಹಸೆಚಿತ್ತಾರ ವಿನ್ಯಾಸಗಳು ಕಾಣಸಿಗುತ್ತದೆಯಾದರೂ ದೀವರು ಮನೆಯ ಹಸೆಗೋಡೆ ಚಿತ್ತಾರ ಮದುವೆಗೆ ಈಗಲೂ ಪ್ರತಿ ಮನೆಯಲ್ಲೂ ಕಡ್ಡಾಯವಾಗಿದ್ದು ವಿನ್ಯಾಸದಲ್ಲಿ ಕಲೆಯ ಅಂತಃಸತ್ವದಲ್ಲಿ ವಿಶಿಷ್ಟವಾಗಿದೆ.ಆಚರಣೆಯ ಭಾಗವಾಗಿ ಕಡ್ಡಾಯವಾಗಿ ಉಳಿಸಿಕೊಂಡಿದ್ದಾರೆ. ಅಲ್ಲದೆ ಈಗಲೂ ದೀವರ ಪ್ರತಿ ಹೆಣ್ಣುಮಕ್ಕಳಿಗೂ ರಕ್ತಗತವಾದ ಕಲೆಯಂತೆ ವಂಶಪಾರಂಪರಿಕವಾಗಿ ಕರಗತವಾಗಿದೆ. ಹಲಿ, ಹಸಗರ ಎನ್ನುವ ಹೆಸರಿನಲ್ಲಿ ಗೊಂಡರು ,ಕರೆಒಕ್ಕಲಿಗರು, ಹಾಲಕ್ಕಿಗರು ,ಗಾಮೊಕ್ಕಲಿಗರು ಮಲೆನಾಡು ಕರಾವಳಿ ಭಾಗದ ಕೆಲವು ಬುಡಕಟ್ಟು ಜನಜೀವನ ಸಂಸ್ಕೃತಿಯ ಸಮುದಾಯಗಳಲ್ಲಿ ವಿವಿಧ ಬಗೆಯ ವಿನ್ಯಾಸದ ಹಸೆಚಿತ್ತಾರ ಮಾದರಿ ಹೋಲುವ ಹಲಿ,ಹಸಗರ,ಸೇಡಿ ಚಿತ್ತಾರ ಕಂಡುಬರುತ್ತವೆ.

ಮಲೆನಾಡಿನ ಹಳ್ಳಿಗಳಲ್ಲಿ ಹಿಂದೆ ಆರು ಅಂಕಣದಿಂದ ಹನ್ನೆರಡು ಅಂಕಣದ ಮನೆಗಳು ಇರುತ್ತಿದ್ದವು. ಒಂದು ಅಂಕಣವೆಂದರೆ ಹತ್ತು ಅಡಿ ಉದ್ದ ಹತ್ತು ಅಡಿ ಅಗಲವಿರುವ ಜಾಗ. ಅವಿಭಕ್ತ ಕುಟುಂಬದ ದೀವರ ಮನೆಗಳಲ್ಲಿ ಐವತ್ತು–ಅರವತ್ತು ಜನ ಒಟ್ಟಿಗೆ ವಾಸ ಮಾಡುತ್ತಿದ್ದರು. ಆದರೆ ಇಷ್ಟು ದೊಡ್ಡ ಮನೆಯಲ್ಲಿ "ದೇವರಕೋಣೆ" ಪ್ರತ್ಯೇಕವಾಗಿ ಇರುತ್ತಿರಲಿಲ್ಲ. ಅಡಿಗೆ ಮನೆಯಲ್ಲಿ ಪೂರ್ವ ಅಥವಾ ಉತ್ತರಾಭಿಮುಖವಾಗಿ ಅರ್ಧ ಅಡಿ ಎತ್ತರ, ಮೂರು ಅಡಿ ಉದ್ದ, ಒಂದೂವರೆ ಅಡಿ ಅಗಲದ ಮಣ್ಣಿನಿಂದ ಮಾಡಿದ ಜಾಗವಿರುತ್ತಿತ್ತು. ಈ ಜಾಗದ ಮಧ್ಯಭಾಗದಲ್ಲಿ ದೊಡ್ಡದಾದ ತಾಮ್ರದ ಹಂಡೆ, ಎಡಬಲ ಬದಿಗಳಲ್ಲಿ ಎರಡು ತಾಮ್ರದ ಕೊಡಪಾನಗಳಿರುವ ಸ್ಥಳವೇ 'ಇಡಕಲು'. ಇದು ದೈವೀ ಸ್ಥಾನ. ಆ ಕುಟುಂಬದಲ್ಲಿ ನಡೆಯುವ ದೇವರ ಕಾರ್ಯಗಳು ಈ ಸ್ಥಳದಲ್ಲಿಯೇ ನಡೆಯುತ್ತವೆ. ಕುಟುಂಬದ ಪೂರ್ವಜರು (ಹಿರಿಯರು) ಇರುವ ಸ್ಥಾನ. ಇಲ್ಲಿ ವಿಶಿಷ್ಟವಾದ ಗೋಡೆ ಚಿತ್ತಾರ ಬರೆಯುವುದು ಸಾಂಪ್ರದಾಯಿಕ ರೂಢಿಯಿದೆ.

ದೀವರ ಗ್ರಾಮೀಣ ಜನ ಮನೆ ಕಟ್ಟುವಾಗ ಮುಖ್ಯ ಬಾಗಿಲನ್ನು (ಪ್ರಧಾನ ಬಾಗಿಲು) ಪೂರ್ವ ಅಥವಾ ಉತ್ತರಾಭಿಮುಖವಾಗಿ ಇಡುವುದು ಸಂಪ್ರದಾಯ. ಮನೆಯನ್ನು ಪ್ರವೇಶಿಸಿದ ಕೂಡಲೇ ಸಿಗುವುದು ಮನೆಯ ಒಂದನೇ ಅಂಕಣದ ಜಗಲಿ. ಇದನ್ನು ದಾಟಿದ ನಂತರ ಸಿಗುವುದು ನಡುಮನೆ. ಇದು ಮನೆಯ ಎರಡನೇ ಅಂಕಣ. ಈ ಅಂಕಣದ ಪೂರ್ವ ಅಥವಾ ಉತ್ತರ ದಿಕ್ಕಿಗೆ ಎದುರಾಗುವ ಗೋಡೆಯೇ ಹಸೆಗೋಡೆ ಚಿತ್ತಾರ ಬರೆಯುವ ಗೋಡೆ. ಈ ಗೋಡೆಯ ಮಧ್ಯಭಾಗದಲ್ಲಿ ಐದು ಅಡಿ ಉದ್ದ, ಐದು ಅಡಿ ಅಗಲವಿರುವ ಚಿತ್ತಾರ ಬರೆಯುವ ರೂಡಿ ಇತ್ತು. ಈಗ ಎರಡು ಅಡಿ ಚಚ್ಚೌಕ, ಮೂರು ಅಡಿ ಚಚ್ಚೌಕ ಬರೆಯುವ ರೂಡಿಯೂ ಇದೆ. ಚಚ್ಚೌಕದ ಭಾಗದಲ್ಲಿ ಸಗಣಿಯಿಂದ ಸಾರಿಸಿ ಕೆಮ್ಮಣ್ಣು ಬಳಿಯುತ್ತಾರೆ. ನಂತರ ಬಿಳಿಬಣ್ಣದಿಂದ ಹಸೆಚಿತ್ತಾರವನ್ನು ಬರೆಯುತ್ತಾರೆ. ಈಗ ಬಣ್ಣಗಳು , ಬಿಡಿಸುವ ವಿಧಾನ ,ಕ್ರಮಗಳಲ್ಲಿ ಒಂದಿಷ್ಟು ಬದಲಾವಣೆ ಕಂಡುಬರುತ್ತದೆ. ನೈಸರ್ಗಿಕ ಬಣ್ಣಗಳ ಬದಲಿಗೆ ಆಧುನಕ ಬಣ್ಣಗಳ ಬಳಕೆ ಕಂಡುಬರುತ್ತದೆ. ಈ ಚಿತ್ತಾರದಲ್ಲಿ ಬಣ್ಣಗಳಲ್ಲಿ ,ವಿನ್ಯಾಸದಲ್ಲಿ ನಾವಿನ್ಯತೆ ತುಂಬುತ್ತಾ ಕಾಲಕಾಲಕ್ಕೆ ಒಂದಿಷ್ಟು ಪ್ರದೇಶವಾರು, ಕುಟುಂಬವಾರು,ಬಳಿವಾರು ಬದಲಿಸಿಕೊಂಡಿರುವ ಚಿತ್ತಾರಗಿತ್ತಿಯರು ಸಹ ಇದ್ದಾರೆ. ಹಳದಿ ಬಣ್ಣ, ಕಪ್ಪು ಬಣ್ಣ ಹಸಿರು ಬಣ್ಣದ ಚಿತ್ತಾರಗಳೂ ಇವೆ. ಈಗಲೂ ದೀವರ ಮನೆಯ ಪ್ರತಿಕುಟುಂಬಗಳು ತಮ್ಮ ಮನೆಯಲ್ಲಿ ಇದೇ ಸಂಪ್ರದಾಯ ಪಾಲಿಸುತ್ತಿವೆ. ಅದು ಮಣ್ಣಿನ ಗೋಡೆಯ ಹಂಚಿನ ಮನೆಯಾಗಿರಲಿ,ಕಾಂಕ್ರೇಟು ಮನೆಯೇ ಆಗಿರಲಿ ಪ್ರತಿ ಮನೆಯಲ್ಲಿ ಹಸೆಗೋಡೆ,ಇಡುಕಲ ಮೇಲೆ ಗೋಡೆ ಚಿತ್ತಾರಗಳು, ಬಾಗಿಲು ಚಿತ್ತಾರಗಳು ಬಹುತೇಕ ಕಡ್ಡಾಯವಾಗಿ ಇರುತ್ತದೆ.

ಹಸೆಗೋಡೆ ಚಿತ್ತಾರ ಮತ್ತು ಮದುವೆ ಸಂಪ್ರದಾಯ

ಹಸೆಗೋಡೆಚಿತ್ತಾರವನ್ನು ವಿಶಿಷ್ಟ ವಿನ್ಯಾಸದಲ್ಲಿ ರೂಢಿಸಿಕೊಂಡು ಬಂದಿರುವ ದೀವರು ಸಮುದಾಯ ಮದುವೆಯ ಆಚರಣೆಗಳ ಸಮಯದಲ್ಲಿ ಹಸೆಗೋಡೆಯ ಕೆಳಗೆ ವಧೂವರರನ್ನು ಕೂರಿಸುವಾಗ ಅಕ್ಕಿಯಲ್ಲಿ ಹದಿನಾರು ಮೂಲೆ ಆರತಿಚಿತ್ತಾರ ಚೌಕಾಕಾರವಾಗಿ ಬರೆದು ಇದರ ಮೇಲೆ ಎರಡು ವೀಳ್ಯದೆಲೆ, ಎರಡು ಅಡಿಕೆ ಜಕ್ಕು ಬಾಳೆಕಾಯಿ ಇಟ್ಟು ನಂತರ ಇದರ ಮೇಲೆ ಈಚಲು ಚಾಪೆಗಳನ್ನು ಹಾಸುತ್ತಾರೆ. ಧಾರೆಗೆ ಹೋಗುವ ಮುನ್ನ ವರನ ಮನೆಯಲ್ಲಿ ಹೀಗೆ ಮಾಡುತ್ತಾರೆ. ಇದೇ ರೀತಿ ವಧುವಿನ ಮನೆಯಲ್ಲೂ ಚೌಕ ಬರೆದು ಎಲೆ ಅಡಿಕೆ, ಜಕ್ಕುಬಾಳೆಕಾಯಿ ಇಟ್ಟು ಐದು ಅಥವಾ ಹತ್ತು ಅಥವಾ ಹನ್ನೆರಡು ಈಚಲು ಚಾಪೆಗಳನ್ನು ಹಾಸುತ್ತಾರೆ. ಹಾಸುವ ಚಾಪೆಗಳು ಸರಿ ಸಂಖ್ಯೆಯಲ್ಲಿಯೇ ಇರಬೇಕು ಎಂಬ ನಿಯಮವಿದೆ. ಇವುಗಳ ಮೇಲೆ ಗಂಡಿನ ಮನೆಯವರು ತಂದ ಹಸೆ ಸೀರೆಯನ್ನು ಹಾಸಿ ಇದರ ಮೇಲೆ ವಧುವಿನ ಮನೆಯವರು ಉಡುಗೊರೆಯಾಗಿ ಕೊಡುವ ಜಮಖಾನವನ್ನು ಹಾಸುತ್ತಾರೆ. ನಂತರ ಇದರ ಮೇಲೆ ವಧೂವರರನ್ನು ಕೂರಿಸುತ್ತಾರೆ. ಇದನ್ನೇ 'ಹಸೆಶಾಸ್ತ್ರ ಎಂದು ದೀವರು ಕರೆಯುತ್ತಾರೆ.

ಹಸೆಯ ಮೇಲೆ ಹಾಸುವ ಅಷ್ಟೂ ಚಾಪೆಗಳನ್ನು ವಧುವಿಗೆ ಉಡುಗೊರೆಯಾಗಿ ವಧುವಿನ ಅಕ್ಕ-ತಂಗಿಯರು, ಸೋದರತ್ತೆಯರು, ಸಂಬಂಧಿಕರು ಕೊಡುತ್ತಾರೆ. ಹಸೆಯ ಹಿಂಭಾಗದ ಗೋಡೆಯೇ 'ಹಸೆಗೋಡೆ'. ಈ ಗೋಡೆಯ ಮೇಲೆ ಬರೆದಿರುವ ಚಿತ್ರ 'ಹಸೆಗೋಡೆ ಚಿತ್ತಾರ'.ಹೀಗೆ ದೀವರು ಜನಪದರ ಸಮುದಾಯ ತಮ್ಮ ಚಿತ್ತಾರ ಕಲೆಯನ್ನು 'ಹಸೆಗೋಡೆ ಚಿತ್ತಾರ" ಎಂದು ಕರೆದಿದ್ದಾರೆ. ಹೀಗೆ ಹಸೆಗೋಡೆಚಿತ್ತಾರ ಪದ ರೂಡಿಗೆ ಬಂದಿದೆ.

ಹಸೆ ಎನ್ನುವ ಪದಕ್ಕೆ ಚಾಪೆ ಎನ್ನುವ (ಬೆಡ್) ಅರ್ಥ ರೂಡಿಯಲ್ಲಿದೆ. ಈಚಲು ಮರದ ಗರಿಗಳಿಂದ ಹಸೆ (ಚಾಪೆ) ಹೆಣೆಯುವುದು ದೀವರ ಸ್ತ್ರೀಯರ

ಪ್ರಮುಖ ಕರಕುಶಲ ಕಲೆಯಾಗಿಯೂ ಸಹ ಆಗಿದೆ. ಮಲೆನಾಡಿನ ಭಾಗದಲ್ಲಿ ಈಚಲು ಚಾಪೆಗಳು ಹಿಂದೆ ಹೆಚ್ಚಾಗಿ ಬಳಕೆಯಲ್ಲಿದ್ದವು. ಈಚಲು ಹಣ್ಣುಗಳಿಂದ ಹೆಂಡ ತಾಯಾರಿಸುತ್ತಿದ್ದ ದೀವರು ಸಮುದಾಯ ಈಚಲ ಗರಿಗಳಿಂದ ಸುಂದರವಾದ ವಿವಿಧ ವಿನ್ಯಾಸದ ಚಾಪೆಗಳನ್ನು ಹೆಣೆಯುತ್ತಿದ್ದರು. ವಿವಿಧ ಬುಡಕಟ್ಟುಗಳಲ್ಲಿಯೂ ಸಹ ಚಾಪೆ ಹೆಣೆಯುತ್ತಿದ್ದರಾದರೂ ಚಾಪೆಗೆ ನೈಸರ್ಗಿಕ ಬಣ್ಣ ಸೇರಿಸಿ ವಿವಿಧ ವಿನ್ಯಾಸದಲ್ಲಿ ವೈವಿಧ್ಯಮಯವಾಗಿ ಹೆಣೆಯುವುದನ್ನು ದೀವರ ಹೆಣ್ಣುಮಕ್ಕಳು ರೂಢಿಸಿಕೊಂಡಿದ್ದರೆಂದು ಹಿರಿಯರು ಹೇಳುತ್ತಾರೆ.

ಈಗಲೂ ಮಲೆನಾಡಿನ ಸಾಗರ ಸೊರಬ ಭಾಗದ ಅಲ್ಲಲ್ಲಿ ಹಸೆ ಹೆಣೆಯುವವರು ಕಾಣಸಿಗುತ್ತಾರೆ. ಮದುವೆ ಶಾಸ್ತ್ರಕ್ಕಾಗಿಯೇ ವಿಶೇಷ ವಿನ್ಯಾಸದ ಚಿತ್ತಾರಗಳು ಮೂಡುವಂತೆ ಹಸೆಗಳನ್ನು ಹೆಣೆಯುವ ಕೌಶಲ ಸಹ ದೀವರ ಚಿತ್ತಾರಗಿತ್ತಿಯರಿಗೆ ಕರಗತವಾಗಿತ್ತು. ದೀವರ ಶಾಸ್ತ್ರೋಕ್ತ ಮದುವೆಗಳಲ್ಲಿ ಈಗಲೂ ಹಸೆಶಾಸ್ತ್ರ ಮತ್ತು ಹಸೆಗೋಡೆ ಚಿತ್ತಾರ ಬರೆಸುವುದು ಕಡ್ಡಾಯ ವಿಧಿ ವಿಧಾನವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ. ಹೀಗೆ ಮದುವೆಯ ಆಚರಣೆಗಾಗಿ ಮದುಮಕ್ಕಳನ್ನು ಕೂರಿಸಿದ ಹಿಂದಿನ ಗೋಡೆಗೆ ಬರೆದ ಚಿತ್ತಾರದೊಂದಿಗೆ ಹಸೆಶಾಸ್ತ್ರ ಸೇರಿಕೊಂಡು ರೂಢಿಗತವಾಗಿ ದೀವರು ಸಮುದಾಯ ಹಸೆಗೋಡೆ ಚಿತ್ತಾರ ಎನ್ನುವ ಪದೋತ್ಪತ್ತಿ ಆಗಿದೆ ಎಂದು ಹಿರಿಯರು ಸ್ಮರಿಸುತ್ತಾರೆ.

ಚಾಪೆಯ ಮೇಲೆ ಹಾಸುವ ಸೀರೆಗೆ ಹಸೆಸೀರೆ ಎನ್ನುವುದೂ ರೂಢಿಯಿದೆ.. ಈ ಸೀರೆಯನ್ನು ವರನ ಮನೆಯವರು ತರುತ್ತಾರೆ. ಹೀಗೆ ಈ ಶಬ್ದಗಳ ಹಿಂದೆ ಹಸೆ ಶಬ್ದ ಸೇರಿಕೊಂಡಿದೆ. ಮಲೆನಾಡಿನ ದೀವರು ಮಹಿಳೆಯರು ಬರೆಯುವ ಅಪರೂಪದ ಚಿತ್ರಕಲೆ, ಇದೊಂದು ಸಮೂಹ ಚಿತ್ರಕಲೆ. ಇದು ಅತ್ಯಂತ ವಿಶಿಷ್ಟವಾದ ಹಾಗೂ ಸುಂದರವಾದ ಗ್ರಾಮೀಣ ಕಲಾಪ್ರಕಾರ. ಪಾರಂಪರಿಕ ವೃತ್ತಿ ಹಾಗೂ ಕಲೆಯ ದೃಷ್ಟಿಯಿಂದ ಹಸೆಗೋಡೆ ಮತ್ತು ಬುಟ್ಟಿ ಚಿತ್ತಾರಗಳು ಇಂದಿನವರೆಗೂ ತನ್ನೆಲ್ಲಾ ಸೌಂದರ್ಯಾಭಿರುಚಿಯನ್ನು

ಉಳಿಸಿಕೊಂಡು ಬಂದಿವೆ. ಮಲೆನಾಡಿನ ಗ್ರಾಮೀಣ ಸಂಸ್ಕೃತಿಯ ಮೌಲಿಕ ರೂಪಗಳೆನಿಸಿದ ಹಸೆಚಿತ್ತಾರಗಳು ಈ ಆಧುನಿಕ ಯುಗದಲ್ಲಿ ನಶಿಸುವ ಹಂತ ತಲುಪುವ ಅಪಾಯವಿದೆ. ಆದರೆ ಈ ವಿಶಿಷ್ಟ ಚಿತ್ರಶೈಲಿ ಅದರ ಎಲ್ಲಾ ಶ್ರೀಮಂತಿಕೆಯೊಂದಿಗೆ ಮೂಲ ರೂಪದಲ್ಲಿ ಉಳಿಯುವಂತಾಗಬೇಕು. ಆ ಮೂಲಕ ನಮ್ಮ ಸಂಸ್ಕೃತಿಯ ಬಹುಮುಖ್ಯ ಚಿತ್ರ ಪರಂಪರೆಯೆಂದು ಪುನರುಜ್ಜೀವನಗೊಳ್ಳಬೇಕು. ಇಂಥ ಕಲಾ ಪ್ರಕಾರದ ಪುನರುಜ್ಜೀವನವೆಂದರೆ ಅದನ್ನು ಯುವಜನರಿಗೆ ಕಲಿಸಿ, ಉಳಿಸಿ, ಬೆಳೆಸುವುದು ಎಂದೇ ಅರ್ಥ. ಇದು ಮಹಿಳೆಯರಿಗೆ ಒಂದು ಉತ್ತಮ ಕರಕುಶಲ ಕಲೆಯಾಗಿ ಉದ್ಯೋಗವಾಗಿಯೂ ಬೆಳೆಸಲು ಅವಕಾಶವಿದೆ. ಆ ನಿಟ್ಟಿನ ಸಣ್ಣ ಸಣ್ಣ ಪ್ರಯತ್ನಗಳು ಅಲ್ಲಲ್ಲಿ ಕಂಡುಬರುತ್ತಿದೆ.

ಇವತ್ತಿಗೂ ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ಮತ್ತು ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ವಾಸಮಾಡುತ್ತಿರುವ ದೀವರು ಮಹಿಳೆಯರಷ್ಟೇ ಅಲ್ಲದೇ ಇವರ ವಿಶಿಷ್ಟ ಆಚರಣೆಗಳಿಂದ ಪ್ರಭಾವಿತವಾದವರು, ಹಾಗೂ ಆಗೀಗ ಅಲ್ಲಲ್ಲಿ ಕೆಲವು ಕಾರಣಗಳಿಂದ ದೀವರ ಸಮುದಾಯದೊಂದಿಗೆ ವೈವಾಹಿಕ ಸಂಬಂದ ಬೆಳೆಸಿದವರು,ಚಿತ್ತಾರ ಪರಂಪರೆಯನ್ನು ಇಷ್ಟಪಟ್ಟು ಪ್ರಭಾವಕ್ಕೆ ಒಳಗಾದವರು ಮದುವೆಗೆ ಹಸೆಗೋಡೆ ಚಿತ್ತಾರ ಬರೆಸುವುದನ್ನು ಸಾಂಪ್ರದಾಯಿಕವಾಗಿ ಪಾಲಿಸಿರುವುದು ಕಂಡುಬರುತ್ತದೆ. ರಾಜ್ಯಾದ್ಯಾಂತ ಚದುರಿಕೊಂಡಿರುವ ಹಲವು ಜನಸಮುದಾಯುಗಳು ರಾಜ್ಯವ್ಯಾಪಿ ಹಸೆಚಿತ್ತಾರ ಬರೆಯುವುದು ಕಂಡುಬರುವುದಿಲ್ಲ. ಆದರೆ ದೀವರು ಸಮುದಾಯ ಮಾತ್ರ ಮಲೆನಾಡಿನ ಭಾಗದಲ್ಲಿ ಹೊರತಾಗಿ ಬೇರಾವ ಭಾಗದಲ್ಲೂ ವಾಸವಾಗಿಲ್ಲ.ದೀವರು ಸಮುದಾಯ ಪ್ರಧಾನವಾಗಿ ಕಡ್ಡಾಯವಾಗಿ ಗಂಡು ಮತ್ತು ಹೆಣ್ಣಿನ ಮದುವೆಮನೆಗಳಲ್ಲಿ ಹಸೆಚಿತ್ತಾರವನ್ನು ಸ್ವತಃ ಅವರ ಮನೆಯ ಅಥವಾ ಸಂಬಂಧಿ ಚಿತ್ತಾರಗಿತ್ತಿಯರಿಂದಲೇ ಬರೆಸುವ ರೂಢಿಯಿಟ್ಟುಕೊಂಡಿದ್ದಾರೆ.

ಮದುವೆಗೆ ಬರೆಯುವ ಹಸೆಗೋಡೆ ಚಿತ್ತಾರದ ವಿನ್ಯಾಸ

ಸ್ವರೂಪ ಮತ್ತು ವಿಧಗಳು

ಮದುವೆ ಆಚರಣೆಯ ಮೂಲದ ಕಲೆಯಾಗಿರುವ ಹಸೆಗೋಡೆ ಚಿತ್ತಾರದಲ್ಲಿ ಮಹಿಳೆಯರ ಸೌಂದರ್ಯ ಪ್ರಜ್ಞೆಯೂ ಪ್ರಧಾನವಾಗಿ ಕಂಡುಬರುತ್ತದೆ.ದೀವರ ಸಮುದಾಯದಲ್ಲಿ ವಧುವರರ ಮನೆಯಲ್ಲಿ ಹಸೆಗೋಡೆ ಚಿತ್ತಾರ ಬರೆಯದೆ ಮದುವೆ ಕಾರ್ಯ ಮಾಡುವ ಹಾಗಿಲ್ಲ ಎಂಬ ಸಂಪ್ರದಾಯವನ್ನು ಪರಂಪರೆಯಿಂದ ಪಾಲಿಸಿಕೊಂಡು ಬರಲಾಗಿದೆ. ಹಸೆಗೋಡೆಗೆ ಇಂದಿಗೂ ಪೂಜ್ಯನೀಯ ಸ್ಥಾನವಮಾನ, ವಿಧಿ ವಿಧಾನಗಳಿವೆ.ಹಸೆಗೋಡೆ ಶಿವಪಾರ್ವತಿಯರ ಸನ್ನಿಧಿಯೆಂಬ ನಂಬಿಕೆಗಳಿವೆ. ಹಸೆಗೋಡೆಯ ಕೆಳಗೆ ವಧುವರರನ್ನು ಕೂರಿಸಿಯೇ ಎಲ್ಲಾ ಮದುವೆ ಶಾಸ್ತ್ರ ಮಾಡಲಾಗುತ್ತದೆ. ಮದುವೆ ಶಾಸ್ತ್ರಕ್ಕೆ ಬರೆಯುವ ಮಲೆನಾಡಿನ ಹಸೆ ಗೋಡೆ ಚಿತ್ತಾರ ಕಲೆಯನ್ನು ವಿನ್ಯಾಸದ ದೃಷ್ಟಿಕೋನದಿಂದ ಹಲವು ಭಾಗವಾಗಿ ವಿಂಗಡಿಸಿಕೊಳ್ಳಬಹುದು.

1) ಮುಂಡಿಗೆಗಳು ಇರುವ ಹಸೆಚಿತ್ತಾರ

2) ಮುಂಡಿಗೆ ಇಲ್ಲದ ಮಾದ್ನಕೈ ಇರುವ ಸಾದಾ ಹಸೆ ಚಿತ್ರ

3) ಚಚ್ಚೌಕದ ಹಸೆ ಚಿತ್ರ

4) ತೇರು ಆಕಾರದ ಹಸೆ ಚಿತ್ರ

5) ಮೂರು ಗೋಪುರವಿರುವ ಹಸೆ ಚಿತ್ರ


6) ಒಂದು ಗೋಪುರವಿರುವ ಹಸೆ ಚಿತ್ರ

ಈ ಆರು ವಿನ್ಯಾಸಗಳ ಪ್ರತಿ ಚಿತ್ತಾರವನ್ನು ಜೋಡೆಳೆ ಮತ್ತು ಒಂಟೆಳೆ ಚಿತ್ರಗಳೆಂದು ಸಹ ವಿಂಗಡಿಸಬಹುದಾದ ಚಿತ್ತಾರಗಳಿವೆ. ಅಲ್ಲದೆ ಚಿತ್ತಾರಗಿತ್ತಿಯರು ತಮ್ಮದೇ ಆದ ವಿಶಿಷ್ಟತೆಯನ್ನು ಸಾಂಪ್ರದಾಯಿಕ ಪರಿಧಿಯಲ್ಲೇ ಸೃಷ್ಟಿಸುತ್ತಾ ಬಂದಿದ್ದಾರೆ. ಕಾಲಕಾಲಕ್ಕೆ ನಾವಿನ್ಯತೆಯನ್ನು ಮೈಗೂಡಿಸಿಕೊಂಡಿರುವುದು ಸಹ ಕಂಡುಬರುತ್ತದೆ. ದೀವರ ಮಹಿಳೆಯರು ಹೆಚ್ಚಾಗಿ ಮುಂಡಿಗೆ ಇರುವ ಹಸೆ ಚಿತ್ತಾರ ಮತ್ತು ಮಾದ್ನ ಕೈ ಇರುವ ಸಾದಾ ಚಿತ್ತಾರಗಳನ್ನು ,ತೇರು ಚಿತ್ತಾರಗಳನ್ನು, ಆರುಮೂಲೆ ಆರತಿ,ಹದಿನಾರು ಮೂಲೆ ಆರತಿ ಚಿತ್ತಾರವನ್ನು ವಿಶಿಷ್ಟ ವಿನ್ಯಾಸದಲ್ಲಿ ಬರೆಯುತ್ತಾರೆ. ಸಾಗರ ಸೊರಬ ಭಾಗದ ಬಹುತೇಕ ಹಳ್ಳಿಯ ನಡುಮನೆಗಳಲ್ಲಿ ಹಸೆಗೋಡೆಗಳನ್ನು ಈಗಲೂ ಕಾಣಬಹುದು. ಉಳಿದ ನಾಲ್ಕು ಬಗೆಯ ಚಿತ್ರಗಳನ್ನು ಬರೆಯುವುದು ಇತ್ತೀಚೆಗೆ ಕಡಿಮೆ. ಬೇರೆ ಬೇರೆ ಜನಾಂಗದ ಕೆಲವು ಕುಟುಂಬಗಳಲ್ಲಿ ಮಹಿಳೆಯರು ಇದೇ ಮಾದರಿಯ ಸರಳ ವಿನ್ಯಾಸದ ಸಾಂಪ್ರದಾಯಿಕ ಚಿತ್ತಾರ ಬರೆಯುತ್ತಾರೆ.

ಹಾಲಕ್ಕಿ ಒಕ್ಕಲಿಗರು,ಕರೆ ಒಕ್ಕಲಿಗರಲ್ಲಿ ,ಗೊಂಡರಲ್ಲಿ ಮತ್ತಿತರ ಸಮುದಯದಲ್ಲಿ ಕೆಲ ಭಾಗದಲ್ಲಿ ಬರೆಯುವ 'ಹಲಿ' , ಹಸಗರ ,ಶೇಡಿ, ಎಂದೂ ಕರೆಯುತ್ತಾ ಬರೆಯುವ ಮದುವೆ ಸಂಪ್ರದಾಯದ ಚಿತ್ತಾರಗಳ ರೂಡಿ ಇದೆ. ಕೆಲವು ಕಡೆ ಹವ್ಯಕ ಕುಟುಂಬದವರು ,ಮತ್ತಿತರ ಸಮುದಾಯದವರು ದೀವರ ಕನ್ನೆಯರನ್ನು ಮದುವೆಯಾದ ಸಂಧರ್ಭಗಳಲ್ಲಿ ದೀವರ ಹಸೆಗೋಡೆ ಚಿತ್ತಾರ ಬರೆಸಿಯೇ ಮದುವೆ ಮಾಡಿಕೊಂಡ ಉದಾಹರಣೆಗಳನ್ನು ಹಿರಿಯ ಚಿತ್ತಾರಗಿತ್ತಿಯರು ಸ್ಮರಿಸುತ್ತಾರೆ. ದೀವರಲ್ಲಿ ಅಂತರ್ಜಾತಿ ವಿವಾಹಗಳಾದ ಸಾಕಷ್ಟು ಉದಾಹರಣೆಗಳಿವೆ. ಮದುವೆಗೆ ಮುಂಚೆ ದೀವರ ಮಹಿಳೆಯರಿಗೆ ವೀಳ್ಯ ನೀಡಿ ಹಸೆಚಿತ್ತಾರ ಬರೆಯಲು ಆಹ್ವಾನಿಸುವ ಪದ್ದತಿ ಈಗಲೂ ಕೆಲವು ಹವ್ಯಕರಲ್ಲಿ ಬೇರೆ ಬೇರೆ ಸಮುದಾಯದಲ್ಲಿದೆ. ಇಂದಿನ ಆಧುನಿಕ ಕಲಾವಿಧರು ಸ್ವಯಂ ಆಸಕ್ತಿಯಿಂದ ಹಸೆ ಚಿತ್ತಾರ ಬಿಡಿಸುವುದನ್ನು ಕಲಿತಿರುವುದು ಕಂಡುಬರುತ್ತದೆ.

1. ಮುಂಡಿಗೆ ಇರುವ ಹಸೆಗೋಡೆ ಚಿತ್ತಾರ


ಈ ಚಿತ್ರದಲ್ಲಿ ನಾಲ್ಕು ಮುಂಡಿಗೆಗಳಿರುತ್ತವೆ. ಎರಡು ಮುಂಡಿಗೆಗಳನ್ನು ನಿಲ್ಲಿಸಿ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಒಂದೊಂದು ಮುಂಡಿಗೆಗಳನ್ನು ಅಡ್ಡ ಇಟ್ಟು ಬರೆಯುತ್ತಾರೆ. ಜೋಡೆಳೆ ಮುಂಡಿಗೆ ಚಿತ್ತಾರವಾದರೆ ಹನ್ನೆರಡು ಎಳೆಗಳಿರುತ್ತವೆ. ಒಂಟೆಳೆ ಚಿತ್ತಾರದಲ್ಲಿ ಎಂಟು ಎಳೆಗಳಿರುತ್ತವೆ. ಒಂಟೆಳೆ ಚಿತ್ರ ಬರೆಯುವುದು ಸುಲಭ, ಕೆಲಸ ಕಡಿಮೆ. ಜೋಡೆಳೆ ಹಸೆ ಚಿತ್ತಾರ ಬರೆಯುವುದು ತುಂಬಾ ಶ್ರೇಷ್ಠ ಎಂಬ ನಂಬಿಕೆ ಇದೆ. ಜೋಡೆಳೆ ಮತ್ತು ಒಂಟೆಳೆ ಹಸೆ ಚಿತ್ತಾರಗಳಲ್ಲಿ ಎರಡು ಮಾದ್ನ ಕೈಗಳಿರುತ್ತವೆ.



ನಾಲ್ಕು ಮುಂಡಿಗೆಗಳಲ್ಲಿ ಗೊಂಬೆ ಸಾಲುಗಳಿರುತ್ತವೆ. ಚಿತ್ರದ ಒಳ ಮತ್ತು ಹೊರಭಾಗದಲ್ಲಿ ಬರೆದಿರುತ್ತಾರೆ. ಗೂಡಿನಹಕ್ಕಿ ಎರಡರಿಂದ ನಾಲ್ಕು ಇರುತ್ತವೆ. ಚಿತ್ತಾರದ ಮೇಲ್ಭಾಗದಲ್ಲಿ ಆರರಿಂದ ಎಂಟು ಕಳಸದ ಗಿಂಡಿಗಳಿರುತ್ತವೆ. ಮಧ್ಯಭಾಗದಲ್ಲಿ ಎರಡು ಪಲ್ಲಕ್ಕಿಗಳು (ದಂಡಿಗೆ), ದಂಡಿಗೆ ಹೊರುವ ಮನುಷ್ಯರು, ದಿಬ್ಬಣದ ಜನಗಳು, ಮುಂಡಿಗೆಗಳು ಒಂದಕ್ಕೊಂದು ಸೇರುವ ಮೂಲೆಗಳಲ್ಲಿ ಪಪ್ಪಿ ಮತ್ತು ಅರೆಪಪ್ಪಳಿ, ಜಲ್ಲೆ ಸಾಲು, ಚೆಂಡುಹೂವಿನ ಸಾಲು ಚಿತ್ರಗಳಿರುತ್ತವೆ. ದಂಡಿಗೆ ಒಳಗೆ ಬಾಸಿಂಗ ,ತೊಂಡಿಲು ಸೂಡಿರುವ ವಧೂವರರ ಚಿತ್ರಿಸಿ ಶಿವ ಪಾರ್ವತಿ ಎನ್ನುವ ನಂಬುಗೆಯೊಂದಿಗೆ ಬರೆಯಲಾಗುತ್ತದೆ. ಒಂಟೆಳೆ ಮುಂಡಿಗೆ ಚಿತ್ರದಲ್ಲಿ ಕೂಡ ಇದೇ ವಿವರಗಳು ಇರುತ್ತವೆ. ಒಂದು ಕುಟುಂಬದಲ್ಲಿ ಎರಡು ಮದುವೆಗಳು ನಡೆದರೆ ಹಸೆ ಚಿತ್ತಾರದಲ್ಲಿ ಎರಡು ದಂಡಿಗೆಗಳನ್ನು ಬರೆದಿರುತ್ತಾರೆ. ಒಂದೇ ಮದುವೆಯಾದರೆ ಒಂದು ದಂಡಿಗೆ ಮಾತ್ರ ಇರುತ್ತದೆ.ಇಂದಿನ ಕಲಾವಿದರು

ಸಂಪ್ರದಾಯದೊಂದಿಗೆ ಒಂದಿಷ್ಟು ನಾವಿನ್ಯತೆಯೊಂದಿಗೆ ಬರೆಯುವುದೂ ಸಹ ಕಂಡುಬರುತ್ತದೆ.

2. ಮುಂಡಿಗೆ ಇಲ್ಲದ ಮಾದ್ನಕೈಗಳಿರುವ ಸಾದಾ ಹಸೆ ಚಿತ್ರ



ಇದು ಆರಂಬಿಕ ಕಾಲದಲ್ಲಿ ಕಂಡುಕೊಂಡ ಚಿತ್ತಾರ ಆಗಿರಬಹುದು. ವಿನ್ಯಾಸದ ದೃಷ್ಟಿಯಿಂದ ನೋಡಿದಾಗ ಪುರಾತನ ಕಾಲದ ಚಿತ್ತಾರ ಮಾದರಿ ಎನ್ನಬಹುದು. ಹಿಂದಿನ ಕಾಲದಲ್ಲಿ ಒಬ್ಬಿಬ್ಬರು ಚಿತ್ತಾರಗಿತ್ತಿಯರು ತಮ್ಮ ಮನೆಯಲ್ಲಿ ಬರೆಯಲು ಆರಂಭಿಸಿದ ಚಿತ್ತಾರಗಳೆ ಮದುವೆ ಸಂಪ್ರದಾಯಕ್ಕೂ ಬರೆಯಲು ಆರಂಭಿಸಿದ್ದು ಆನಂತರ ಎಲ್ಲರೂ ಒಂದೇ ರೀತಿ ಚಿತ್ರವನ್ನು ಬರೆಯು ರೂಢಿಮಾಡಿಕೊಂಡಿರಬಹುದು. ಆನಂತರ ತಮ್ಮದೇ ನೆಲಮೂಲದ ಅನುಭವ ಜ್ಞಾನದೊಂದಿಗೆ ನಾವಿನ್ಯತೆ ರೂಡಿಸಿಕೊಂಡಿರಬಹುದೆಂದು ಕಂಡುಬರುತ್ತದೆ. ಈ ಮಾದರಿ ಚಿತ್ತಾರದಲ್ಲಿ ಮುಂಡಿಗೆಗಳಿರುವುದಿಲ್ಲ. ಮುಂಡಿಗೆ ಇರುವ ಚಿತ್ತಾರಗಳು ಈಗ್ಗೆ ಇತ್ತೀಚಿನ ಶತಮಾನಗಳ ವರ್ಷಗಳ ಆಸು ಪಾಸಿನಲ್ಲಿ ಬಳಕೆಗೆ ಬಂದಿರಬಹುದೆಂದು ಹಿರಿಯ ಚಿತ್ತಾರಗಿತ್ತಿಯರು ಸ್ಮರಿಸುತ್ತಾರೆ. ಇದರಲ್ಲೂ ಜೋಡೆಳೆ ಒಂಟೆಳೆ ಚಿತ್ರಗಳಿರುತ್ತವೆ. ಜೋಡೆಳೆ ಚಿತ್ರದಲ್ಲಿ ಹನ್ನೆರಡು ಎಳೆಗಳಿರುತ್ತವೆ. ಒಂಟೆಳೆ ಚಿತ್ರದಲ್ಲಿ ಎಂಟು ಎಳೆಗಳಿರುತ್ತವೆ. ಇದರಲ್ಲಿ ಎರಡೂ ಕಡೆ ಐದೈದರಂತೆ ಹತ್ತು ಮದನನ ಕೈಗಳಿರುತ್ತವೆ. ಈಗೀಗ ಮೂರು ಮಾದ್ನ ಕೈ ಬರೆಯುವಿಕೆ ಕಂಡುಬರುತ್ತದೆ.

ಪ್ರಧಾನವಾಗಿ ಈ ಚಿತ್ರದಲ್ಲಿ ಪಪ್ಪಿ, ಮತ್ತು ಜೋಡೆಳೆ ನಿಲಿಕೊಚ್ಚುಗಳು ತುಂಬಿರುತ್ತವೆ. ಚಿತ್ರದ ಮೇಲ್ಭಾಗದಲ್ಲಿ ಐದು ಕಳಸಗಳಿರುತ್ತವೆ. ಚಿತ್ರದ

ಮಧ್ಯಭಾಗದಲ್ಲಿ ದಂಡಿಗೆ, ದಂಡಿಗೆ ಹೊರುವ ಜನಗಳು, ಓಲಗದವರು, ದಿಬ್ಬಣದವರು ಇರುತ್ತಾರೆ. ಈ ಚಿತ್ರದ ಸುತ್ತಲೂ ಮೂರುಕಡೆ ಎರಡಡಿಕೆ ಬಾಗಿಲು ಚಿತ್ರವಿರುತ್ತದೆ. ಇದು ತುಂಬಾ ಸುಂದರವಾದ ಚಿತ್ರ. ಈಗೀಗ ಈ ಮಾದರಿಯಲ್ಲಿ ಮೂರು ಮೂರರಂತೆ ಆರು ಮಾದ್ನಕೈಗಳಿರುವ ಚಿತ್ತಾರ ಬರೆಯುವಿಕೆಯೂ ಕಂಡುಬರುತ್ತದೆ. ಸೊರಬ ಭಾಗದಲ್ಲಿ ಈ ರೀತಿ ಚಿತ್ತಾರ ಹೆಚ್ಚಾಗಿ ಕಂಡುಬರುತ್ತದೆ.ಹೆಚ್ಚಾಗಿ ಕಪ್ಪು ಬಣ್ಣ, ಕೆಂಪು,ಬಿಳಿ ಬಣ್ಣ ಬಳಸಲಾಗುತ್ತದೆ.

3) ಚಚ್ಚೌಕದ ಹಸೆ ಚಿತ್ತಾರ



ಸಾದಾ ರೇಖಾವಿನ್ಯಾಸದ ಚಚ್ಚೌಕ ಚಿತ್ತಾರ ಸಹ ಬರೆಯುವ ರೂಢಿ ಕೆಲವು ಕಡೆ ಕಂಡುಬರುತ್ತದೆ.ಇಲ್ಲಿ ಪ್ರಧಾನವಾಗಿ ರೇಖೆಗಳು, ಚೌಕಗಳ ವಿನ್ಯಾಸ ಕಂಡುಬರುತ್ತದೆ. ಇದು ತುಂಬಾ ಹಿಂದಿನಿಂದ ರೂಢಿಯಲ್ಲಿದ್ದ ಚಿತ್ತಾರವಿನ್ಯಾಸವೆಂದು ಹಿರಿಯರು ಸ್ಮರಿಸುತ್ತಾರೆ. ಕೆಲವರು ಕೆಂಪುಹಸೆ ಬರೆದರೆ ಕೆಲವರು ಕಪ್ಪು ಹಸೆ ಬರೆಯುವ ಸಂಪ್ರದಾಯವಿದೆ. ಅವರವರ ಬಳಿಗೆ ತಕ್ಕಂತೆ ಬಣ್ಣವಿನ್ಯಾಸವಿರುವುದು ಗಮನಾರ್ಹ. ಹಾಗೂ ಪ್ರಾದೇಶಿಕವಾಗಿ ಲಭ್ಯವಿರುವ ನೈಸರ್ಗಿಗ ಬಣ್ಣತಾಯಾರಿಕೆಗೆ ಲಭ್ಯ ಸಂಪನ್ಮೂಲಗಳ ಆಧಾರದಲ್ಲಿ ಬಣ್ಣಗಳ ಭಿನ್ನ ಆಯ್ಕೆಯೂ ಸಹ ಇದೆ.ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಬಗೆಯ ಚಿತ್ರ ಹೆಚ್ಚಾಗಿದೆ.

4) ತೇರಿನ ಚಿತ್ತಾರ (ತೇರು ಆಕಾರದ ಹಸೆಚಿತ್ತಾರ)

ಇದು ತೇರು ಆಕಾರದಲ್ಲಿದ್ದು ಮಂಡಿಗೆ ಇರುವ ಚಿತ್ತಾರದ ಬಹುತೇಕ ಮೋಟಿಫ್‌ಗಳು ಇಲ್ಲಿಯೂ ಕಂಡುಬರುತ್ತವೆ. ಜಾತ್ರೆಯ ಸಮಯದಲ್ಲಿ ದೇವರ ಉತ್ಸವಕ್ಕೆ ಬಳಸುವ ತೇರನ್ನೇ ಹೋಲುವಂತೆ ರೇಖಾ ವಿನ್ಯಾಸದಲ್ಲಿ ಚಿತ್ರಿಸುತ್ತಾರೆ.

ಮದುಮಕ್ಕಳನ್ನು ದೇವರಂತೆ ಸಂಪ್ರದಾಯ, ಸಡಗರದೊಂದಿಗೆ ತೇರಿನಲ್ಲಿ ಕೂರಿಸಿಕೊಂಡು ಹೋಗುವಂತೆ ರೇಖಾ ವಿನ್ಯಾಸದಲ್ಲಿ ಚಿತ್ರಿಸಲಾಗುತ್ತದೆ.



ಓಲಘದವರನ್ನು, ವಾದ್ಯಗಳನ್ನು ,ದಿಬ್ಬಣದ ಜನಗಳನ್ನು ಚಿತ್ರಿಸಲಾಗುತ್ತದೆ. ಇದು ಚಿತ್ತಾರಗಿತ್ತಿಯರು ನಾವಿನ್ಯತೆಯನ್ನು ಕಂಡುಕೊಳ್ಳುತ್ತಾ ಸಾಗಿದಂತೆ ರೂಢಿಗೆ ಬಂದ ಹಸೆಚಿತ್ತಾರ ಮಾದರಿಯಾಗಿದೆ. ತೇರಿನ ವಿನ್ಯಾಸದಲ್ಲಿಯೂ ವೈವಿಧ್ಯತೆಗಳು ಕಂಡುಬರುತ್ತವೆ. (ಕೃತಿಯ ಆರಂಭದ ಅಧ್ಯಾಯ ಪುಟಗಳಲ್ಲಿ ಎಲ್ಲಾ ಬಗೆಯ ಚಿತ್ತಾರಗಳನ್ನು ಉದಾಹರಣೆಗಾಗಿ ಗಮನಿಸಿ) ತೇರಿನ ಚಿತ್ತಾರ ದೇವರ ಹಸೆಚಿತ್ತಾರದಲ್ಲಿ ಅತಿ ವಿಶಿಷ್ಟವಾದದ್ದು. ಕೆಳದಿ ಸೀಮೆ ಭಾಗದಲ್ಲಿ ಕೆಳದಿ ತೇರನ್ನು ನೋಡಿ ತೇರಿನ ಚಿತ್ತಾರ ಬಿಡಿಸುವ ಸಂಪ್ರದಾಯ ಬಂದಿರಬಹುದು ಎಂಬುದು ಸಹ ಕೆಲವು ಹಿರಿಯರ ಅಂಬೋಣ. ಈ ಚಿತ್ತಾರದಲ್ಲಿ ಉದ್ದ ಮುಂಡಿಗೆ ಅಡ್ಡ ಮುಂಡಿಗೆಗಳನ್ನಾಗಿ ವಿಭಾಗಿಸುತ್ತಾರೆ. ಕೆಳಗೆ ಎರಡು ಚಕ್ರಗಳನ್ನು ಸಹ ಬರೆಯುತ್ತಾರೆ. ತೇರು ಎಳೆಯುವ ಜನರನ್ನು ಸಹ ಬಿಡಿಸುತ್ತಾರೆ .ಉದ್ದದ ಮುಂಡಿಗೆಯ ಪಕ್ಕದಲ್ಲಿ ಮಾದ್ನಕೈ ಸಹ ಬಿಡಿಸುತ್ತಾರೆ. ತೇರಿನ ಮೇಲೆ ಬಾಸಿಂಗ ಕಳಸವನ್ನು ಸಾಂಪ್ರದಾಯಿಕ ಚಿತ್ತಾರದಂತೆ ಚಿತ್ರಿಸುತ್ತಾರೆ.ದಂಡಿಗೆ ಇಡುವ ಜಾಗದಲ್ಲಿ ವಧು–ವರರನ್ನು ದೇವರಂತೆ ಚಿತ್ರಿಸಲಾಗುತ್ತದೆ.ತೇರು ಚಿತ್ತಾರದಲ್ಲಿ ಬಾಸಿಂಗ ನಿಲಿಯನ್ನು ಹೆಚ್ಚಾಗಿ ಬಳಸುತ್ತಾರೆ. ಮದುವೆಯನ್ನು ಉತ್ಸವ , ಜಾತ್ರೆಯಂತೆ ಸಂಭ್ರಮಿಸುವ ಅಭಿವ್ಯಕ್ತಿ ಈ ಚಿತ್ತಾರಗಳಲಿ ಕಂಡುಬರುತ್ತದೆ.ರಾಜ ಮಹಾರಾಜರ ವೈಭವಯುತ ಮಧುವೆಗಳಂತೆ ತಮ್ಮ ಮಕ್ಕಳ ಮಧುವೆಯನ್ನೂ ಕಲ್ಪಿಸಿಕೊಂಡ ಜನಸಾಮಾನ್ಯ ಚಿತ್ತಾರಗಿತ್ತಿಯೊಬ್ಬಳು ತಮ್ಮ ಮಕ್ಕಳ ಮಧುವೆಯ ದಿಬ್ಬಣವನ್ನು ತೇರಿನೊಂದಿಗೆ ಕರೆತರುವಂತೆ ಹಸೆಗೋಡೆ ಚಿತ್ರಿಸಿರುವುದು ಅವರ ಕಲ್ಪನಾಶೀಲತೆಗೆ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

5) ಮೂರು ಗೋಪುರವಿರುವ ಹಸೆ ಚಿತ್ತಾರ

ಕೆಲವು ಭಾಗದಲ್ಲಿ ಹಸೆಚಿತ್ತಾರದ ಚೌಕಟ್ಟಿನ ಮೇಲ್ಭಾಗದಲ್ಲಿ ಕುಂಬಗಳನ್ನು ಸಾಲಾಗಿ ಚಿತ್ರಿಸುವಂತೆ ,ಕೆಲವು ಭಾಗಗಳಲ್ಲಿ ಗೋಪುರವನ್ನು ಚಿತ್ರಿಸುವಿಕೆ ರೂಢಿಯಿದೆ. ಉಳಿದಂತೆ ಅಂತಹ ವ್ಯತ್ಯಾಸವೇನೂ ಇರುವುದಿಲ್ಲ.ಕೆಲವು ಮನೆತನಗಳಲ್ಲಿ ,ಬಳಿಗಳಲ್ಲಿ ಮೂರು ಗೋಪುರ ಬಿಡಿಸಿ ಹಸೆಚಿತ್ತಾರವನ್ನು ವಿಶಿಷ್ಟಗೊಳಿಸುವಿಕೆ ಕಂಡುಬರುತ್ತದೆ.



ಉದ್ದ ಮತ್ತು ಅಡ್ಡ ಮುಂಡಿಗೆಗಳನ್ನು ಬರೆದು ಚೆಂಡೂ ಹೂ ಸಾಲುಗಳನ್ನು ನೇತು ಹಾಕಿ ಚಿತ್ರಿಸುವಿಕೆ ಕಂಡುಬರುತ್ತದೆ. ಇದರಲ್ಲಿಯೂ ಹಲವು ನಾವಿನ್ಯತೆಗಳನ್ನು ಪ್ರಾದೇಶಿಕವಾಗಿ ಚಿತ್ತಾರಗಿತ್ತಿಯರು ಸೃಜಿಸಿಕೊಂಡಿದ್ದಾರೆ.ನಡುವೆ ಕೆಲವರು ದಂಡಿಗೆ ಬರೆಯುತ್ತಾರೆ.ಕೆಲವರು ಬರೆಯುವುದಿಲ್ಲ. ಈಗ ಈ ಬಗೆಯಲ್ಲೂ ಒಂದಿಷ್ಟು ಹೊಸತನದ ವಿನ್ಯಾಸ ಕಂಡುಬರುತ್ತದೆ. ಇದು ಹೆಚ್ಚಾಗಿ ಸೊರಬ ,ಆನವಟ್ಟಿ, ಸಾಗರ ಭಾಗದಲ್ಲಿ ಕಂಡುಬರುವ ಚಿತ್ತಾರ ಮಾದರಿಯಾಗಿದೆ.

6) ಒಂದು ಗೋಪುರವಿರುವ ಹಸೆ ಚಿತ್ತಾರ

ಇದೂ ಸಹ ಮೂರು ಗೋಪುರವಿರುವ ಹಸೆಗೋಡೆ ಚಿತ್ತಾರದಂತೆಯೇ ಇದ್ದು ಮೇಲ್ಭಾಗದಲ್ಲಿ ಒಂದೇ ಗೋಪುರ ಚಿತ್ರಿಸುವಿಕೆ ರೂಢಿಯಿದೆ. ಉಳಿದಂತೆ ಎಲ್ಲಾ ಹಸೆಚಿತ್ತಾದ ಲಕ್ಷಣಗಳೂ ಇರುತ್ತವೆ. ಮದುವೆಯ ಸಡಗರ ಸಂಭ್ರಮದಲ್ಲೂ ಹಸೆಚಿತ್ತಾರವನ್ನು ಇತರರಿಗಿಂತ ವಿಶಿಷ್ಟಗೊಳಿಸಿ ಬರೆಯುವಿಕೆ, ನಾವಿನ್ಯತೆ ಮೆರೆಯುವಿಕೆ ದೀವರ ಚಿತ್ತಾರಗಿತ್ತಿಯರಲ್ಲಿ ಕಂಡುಬುತ್ತದೆ. ತಮ್ಮದೇ ಶೈಲಿ

ರೂಢಿಸಿಕೊಳ್ಳುವಿಕೆಯಿಂದಾಗಿ ಇಂದು ಹಲವು ಭಾಗಗಳಲ್ಲಿ ಹಲವು ಬಗೆಯ ಹಸೆಚಿತ್ತಾರಗಳು ಕಂಡುಬರುತ್ತವೆ.



ಈ ಮೇಲಿನ ವಿಧಗಳಲ್ಲದೆ ಉತ್ತರ ಕನ್ನಡಜಿಲ್ಲೆಯಲ್ಲಿ, ಕರಾವಳಿ ತೀರದಲ್ಲಿ ಹಾಗೂ ಶಿವಮೊಗ್ಗದ ಇನ್ನಿತರೆ ಸಮುದಾಯಗಳಲ್ಲಿ ಬೇರೆ ಬೇರೆ ಹೆಸರಿನ ಚಿತ್ತಾರ ರೂಢಿ ಸಂಪ್ರದಾಯಗಳಿವೆ. ಹಲಿ ,ಹಸಗರ ಎಂದು ಕರೆಯುವ ವಿನ್ಯಾಸದಲ್ಲಿ ಸರಳತೆಯಿರುವ ಬೇರೆ ಬೇರೆ ಲಕ್ಷಣಗಳ ದೇಶೀ ಚಿತ್ತಾರ ಮಾದರಿಗಳಿವೆ. ಹಸಲರ ಕೆಲವು ಮನೆತನಗಳಲ್ಲಿ ಬಿಡಿಸುವ ಚಿತ್ತಾರ ಮಾದರಿಗೂ ಕರೆಒಕ್ಕಲಿಗರ ಮಾದರಿಗೂ ,ಹಾಲಕ್ಕಿ ಸಮುದಾಯಗಳ ಮಾದರಿಗೂ ಕೆಲವು ಸೂಕ್ಷ್ಮ ವಿಭಿನ್ನತೆಗಳಿವೆ. (ಹಲವು ಬಗೆಯ ಹಸೆಚಿತ್ತಾರ ಮಾದರಿಗಳನ್ನು ಆರಂಭ ಅಧ್ಯಾಯದಲ್ಲಿ ಗಮನಿಸಬಹುದು)

ವಿವಿಧ ಬಣ್ಣಗಳ ಹಸೆ ಚಿತ್ತಾರ ಮತ್ತು ನೈಸರ್ಗಿಕ ಬಣ್ಣಗಳ ತಾಯರಿಕೆ

ಮಾನವ ನೆಲಮೂಲದ ಜ್ಞಾನದಿಂದ ಕಂಡುಕೊಂಡ ನೈಸರ್ಗಿಕ ಬಣ್ಣಗಳ ಜ್ಞಾನಪರಂಪರೆ ಅತಿ ಮಹತ್ವದ್ದು. ಸೌಂದರ್ಯ ಪ್ರಜ್ಞೆ ಬೆಳೆದಂತೆ ಆ ಬಣ್ಣಗಳಿಂದ ಚಿತ್ತಾರ ಬರೆಯುವುದನ್ನು ಕಲಿತ ಮಾನವನ ವಿಕಾಸದ ಹಾದಿಯಲ್ಲಿ ಬಗೆದಷ್ಟೂ ಬೆರಗೆನ ಆವಿಷ್ಕಾರಗಳಾಗಿವೆ. ದೇಶೀ ಚಿತ್ರಕಲೆಗಳು ಬಹುತೇಕ ನೈಸರ್ಗಿಕ ಬಣ್ಣಗಳಿಂದ ಅರಳಿದ ಕಲೆಗಳೇ ಆಗಿವೆ. ಕರ್ನಾಟಕದ ಹಸೆಚಿತ್ತಾರ ಕಲೆಯೂ ಸಹ ಕೆಲವು ನೈಸರ್ಗಕ ಸಂಪನ್ಮೂಲ ಬಳಸಿ ತಯಾರಿಸಿಕೊಂಡ ಬಣ್ಣಗಳಿಂದ ಬರೆಯುವ ವಿಶಿಷ್ಟ ಚಿತ್ರಕಲೆಯಾಗಿತ್ತು. ಪ್ರಧಾನವಾಗಿ ಕೆಂಪು,ಕಪ್ಪು,ಹಳದಿ ಹಸಿರು ಬಣ್ಣ ಬಳಕೆ ದೇಶೀ ಚಿತ್ತಾರ ಕಲೆಯಲ್ಲಿ ಕಂಡುಬರುತ್ತಿತ್ತು. ಈಗ ಆಧುನಿಕ ವರ್ಣಗಳನ್ನು ಬಳಸುವಿಕೆ ಅಲ್ಲಲ್ಲಿ ಕಂಡುಬರುತ್ತದೆ.

ಹೊಸ ತಲೆಮಾರಿನ ಹಸೆಚಿತ್ತಾರ ಕಲಾವಿದರು ಬಹುವರ್ಣಗಳ ಬಳಕೆ, ಆಕ್ರಿಲಿಕ್ ಪೇಂಟ್ಸ್, ಆಯಿಲ್ ಪೇಂಯಿಂಟ್ಸ್ ಬಳಸುವಿಕೆ ಸಹ ಈಗೀಗ ಕಂಡುಬರುತ್ತದೆ. ಆದರೆ ಮಲೆನಾಡಿನ ದೀವರ ಮಹಿಳೆಯರು ಅವರ ಬಳಿಗೆ ತಕ್ಕಂತೆ ಸಾಂಪ್ರದಾಯಿಕ ಹಸೆಗೋಡೆ ಚಿತ್ತಾರವನ್ನು ಪ್ರಧಾನವಾಗಿ ಮೂರು ನೈಸರ್ಗಿಕ ವರ್ಣಗಳಿಂದ ಮಾತ್ರ ಬರೆಯುತ್ತಾರೆ.

1) ಬಿಳಿ ಹಸೆ

2) ಕಪ್ಪುಹಸೆ

3) ಕೆಂಪು ಹಸೆ

ಬಿಳಿಹಸೆ

ಬಿಳಿಹಸೆ ಬರೆಯುವವರು ನೆರೆಗುಳಿ, ಹೊನಸು ಸೋಮಸಾಲೆ, ವಾಳ್ಯಾ ಭತ್ತದ ತಳಿಯ ಯಾವುದಾದರೂ ಒಂದು ಜಾತಿಯ ಭತ್ತದ ಅಕ್ಕಿಯನ್ನು ಚೆನ್ನಾಗಿ ತೊಳೆದು ಮೂರು ದಿವಸ ನೆನೆಸಿ ಅದನ್ನು ನುಣ್ಣಗೆ ಅರೆದು ಅಕ್ಕಿ ಹಿಟ್ಟಿನ ಅಂಟು (ಪೇಸ್ಟ್) ಮಾಡಿಕೊಳ್ಳುತ್ತಾರೆ. ಪುಂಡಿ ನಾರಿನಿಂದ ಕುಂಚ (ಬ್ರೆಶ್) ತಯಾರಿಸಿಕೊಂಡು ಕುಂಚದ ಹಿಂಭಾಗಕ್ಕೆ ಬೆರಳಿನಿಂದ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಭತ್ತದ ಹಲ್ಲಿನ ಕೊಳವೆಯನ್ನು ಹಾಕಿ ಕೊಳವೆ ಹಿಂಭಾಗದಲ್ಲಿ ದಾರ ಸರಿದಾಡದಂತೆ ದಾರವನ್ನು ಹಿಂಭಾಗಕ್ಕೆ ಗಂಟು ಹಾಕುತ್ತಾರೆ. ಚಿತ್ತಾರವನ್ನು ಪ್ರಾರಂಭಿಸುವ ಮೊದಲು ಗೋಡೆಯನ್ನು ಸಗಣಿಯಿಂದ ಸಾರಿಸಿ, ಕೆಮ್ಮಣ್ಣು ಬಳಿಯುತ್ತಾರೆ. ಇದರ ಮೇಲೆ ಅಕ್ಕಿಹಿಟ್ಟಿನಿಂದ ತಯಾರಿಸಿಕೊಂಡು ಬಿಳಿ ಬಣ್ಣದ ಹಸೆ ಚಿತ್ತಾರ ಬರೆಯುತ್ತಾರೆ. ಕೆಂಪುಗೋಡೆಯ ಮೇಲೆ ಬಿಳಿ ಬಣ್ಣದಿಂದ ಹಸೆ ಬರೆಯುವುದರಿಂದ ಎಳೆಗಳು ಎದ್ದು ಕಾಣುತ್ತವೆ.

ಕಪ್ಪು ಹಸೆ

ಕಪ್ಪು ಹಸೆ ಬರೆಯುವ ಕುಟುಂಬಗಳ ಚಿತ್ತಾರಗಿತ್ತಿಯರು (ಕಲಾವಿದೆಯರು) ನೆರೆಗುಳಿ, ಕರೆ ಇಸಡಿ, ಹೊನಸು, ವಾಳ್ಯಾ ಇನ್ನಿತರೆ ಜಾತಿಯ ಭತ್ತಗಳಲ್ಲಿ ಯಾವುದಾದರೂ ಒಂದು ತಳಿಯ ಭತ್ತದ ಅಕ್ಕಿಯನ್ನು ಕಪ್ಪಾಗುವಂತೆ ಹುರಿದು ನಂತರ ಗುಡ್ಡೆಗೇರು ಕಾಯಿ ಕೊಯ್ದು ಇದರಿಂದ ಬರುವ ಹಗಣವನ್ನು (ಗೇರುತುಪ್ಪ /ಗೇರೆಣ್ಣೆ) ಹುರಿದ ಅಕ್ಕಿಯ ಜೊತೆಗೆ ಸೇರಿಸಿ ರುಬ್ಬುತ್ತಾರೆ. ಇದು ಅಂಟು ಅಂಟಾದ ಕಪ್ಪು ಬಣ್ಣವಾಗುತ್ತದೆ. ಗೋಡೆಯನ್ನು ಸಗಣಿಯಿಂದ ಸಾರಿಸಿ ಜೇಡಿಮಣ್ಣಿನಿಂದ ಬಳಿಯುತ್ತಾರೆ. ಇದರ ಮೇಲೆ ಕಪ್ಪು ಬಣ್ಣದಿಂದ ಹಸೆ ಚಿತ್ತಾರ ಬರೆಯುತ್ತಾರೆ. ಕಪ್ಪು ಹಸೆ ಚಿತ್ತಾರದಲ್ಲಿ ಎಲ್ಲಾ ವಿವರಗಳನ್ನು ಕಪ್ಪು ಬಣ್ಣದಿಂದ ಬರೆಯುತ್ತಾರೆ. ಹಸೆ ಚಿತ್ತಾರದ ಮುಂಡಿಗೆ, ನಿಲಿ, ಗೊಂಬೆ ಸಾಲು, ಪಪ್ಪಿ, ಚೆಂಡುಹೂವಿನ ಸಾಲು, ಜೆಲ್ಲಿ ಸಾಲು, ಗೂಡಿನ ಹಕ್ಕಿ, ಕಳಸದ ಗಿಂಡಿಗಳು, ದಿಬ್ಬಣದ ಜನಗಳು ದಂಡಿಗೆ, ದಂಡಿಗೆ ಹೊರುವ ಜನಗಳು, ಓಲಗದವರು ಇತ್ಯಾದಿ ಚಿತ್ರಗಳನ್ನು ಬರೆಯುತ್ತಾರೆ.

ಕಪ್ಪು ಹಸೆ ಬರೆಯುವ ಸಂಪ್ರದಾಯದವರು ಮದುವೆಗಳಲ್ಲಿ ವರನಿಗೆ ಪೇಟಾ ತೊಡಿಸಿ ಕೈಯ್ಯಲ್ಲಿ ಕಠಾರಿಯನ್ನು ಕೊಡುತ್ತಾರೆ. ಈ ಸಂಪ್ರದಾಯದವರು ದೀಪಾವಳಿಯಲ್ಲಿ ಎತ್ತುಗಳಿಗೆ ಬಾಸಿಂಗ ಸೂಡುವುದಿಲ್ಲ. ಕರೂರು, ಬಾರಂಗಿ, ಆವಿನಹಳ್ಳಿ ಸೀಮೆಗಳಲ್ಲಿ ಕಪ್ಪು ಮತ್ತು ಕೆಂಪು ಹಸೆ ಬರೆಯುವ ದೀವರ ಸಂಪ್ರದಾಯದವರು ಸಾಕಷ್ಟು ಸಂಖ್ಯೆಯಲ್ಲಿ ಇದ್ದರು. ಹಿರೇಭಾಸ್ಕರ ಮತ್ತು ಲಿಂಗನಮಕ್ಕಿ ಆಣೆಕಟ್ಟೆಗಳಿಂದ ಮುಳುಗಡೆಯಾಗಿ ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಭಾಗದಲ್ಲಿ ಚದುರಿ ಹೋಗಿದ್ದಾರೆ.

ಕಪ್ಪು ಮತ್ತು ಕೆಂಪು ಹಸೆ ಬರೆಯುವ ಸಂಪ್ರದಾಯದ ದೀವರು ಸಾಗರ ಸೊರಬ ಹೊಸನಗರದಲ್ಲಿ ಹೆಚ್ಚಾಗಿ, ತೀರ್ಥಹಳ್ಳಿ,ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ವಿರಳವಾಗಿ ಕಂಡಬರುತ್ತಾರೆ.ಯಾವುದೇ

ಸಂಪ್ರದಾಯದವರಿಂದ ಯಾವುದೇ ಸಂಪ್ರದಾಯದ ದೀವರ ನಡುವೆ ಮದುವೆಗಳು ನಡೆಯುತ್ತವೆ. ದೀವರು ಹಿಂದಿನಿಂದ ಮಾತೃಪ್ರಧಾನ ಕುಟುಂಬಗಳಾಗಿದ್ದವು. ಅವರವರ ಮನೆತನದ ಬಳಿಗಳ ಸಂಪ್ರದಾಯದಂತೆ ಮದುವೆ ವಿಧಿ ವಿಧಾನಗಳು ನಡೆಯುತ್ತವೆ. ಕೆಳದಿ ಸೀಮೆಯ ಭಾಗದಲ್ಲಿ ಮಂಡಗಳಲೆ, ಕಾಗೋಡು, ಉಳ್ಳೂರು, ಯಲಕುಂದ್ಲಿ, ಹಿರೇನೆಲ್ಲೂರು,ಚಿಕ್ಕನೆಲ್ಲೂರು,ಮನೇಘಟ್ಟ, ಸೂರನಗದ್ದೆ, ಮುಂತಾದ ದೀವರೆ ಅತ್ಯಧಿಕ ಇರುವ ಶಿವಮೊಗ್ಗದ ನೂರಾರು ಹಳ್ಳಿಗಳ ಎಲ್ಲಾ ಕುಟುಂಬಗಳಲ್ಲಿ ಮದುವೆಗೆ ಕಡ್ಡಾಯವಾಗಿ ಈಗಲೂ ಹಸೆಚಿತ್ತಾರ ಬರೆಯುತ್ತಾರೆ.

ಕೆಂಪು ಹಸೆ

ಕೆಮ್ಮಣ್ಣಿನಿಂದ ಹಸೆ ಬರೆಯುವ ಕಲಾವಿದೆಯರು ಜೇಡಿಮಣ್ಣು(ಬಿಳಿಮಣ್ಣು)ನಿಂದ ಬಳಿದ ಗೋಡೆಯ ಮೇಲೆ ಹಸೆಚಿತ್ತಾರದ ಎಲ್ಲಾ ವಿವರಗಳನ್ನು ಕೆಮ್ಮಣ್ಣಿನಂದ ಬರೆಯುತ್ತಾರೆ. ಹಸೆ ಚಿತ್ತಾರದ ಮುಂಡಿಗೆ, ನಿಲಿ, ಗೊಂಬೆಸಾಲು, ಪಪ್ಪಿ, ಚೆಂಡುಹೂವಿನ ಸಾಲು, ಜೆಲ್ಲೆಸಾಲು ಗೂಡಿನ ಹಕ್ಕಿ, ಕಳಸದ ಗಿಂಡಿಗಳು, ದಿಬ್ಬಣದ ಜನಗಳು ಈ ಎಲ್ಲಾ ಚಿತ್ರಗಳನ್ನು ಬರೆದು ಮುಂಡಿಗೆ ಒಳಗಿನ ದಂಡಿಗೆ ಬರೆಯುವ ಸ್ಥಳವನ್ನು ಖಾಲಿ ಬಿಟ್ಟಿರುತ್ತಾರೆ.

ಕೆಂಪು ಹಸೆ ಬರೆಯುವ ಸಂಪ್ರದಾಯದವರು ದಂಡಿಗೆಯನ್ನು ಬರೆಯುವುದಿಲ್ಲ. ಇವರು ದೀಪಾವಳಿ ಹಬ್ಬದಲ್ಲಿ ಎತ್ತುಗಳಿಗೆ ಬಾಸಿಂಗ ಕಟ್ಟುವುದಿಲ್ಲ ಬಿಳಿಹಸೆ ಚಿತ್ತಾರ ಬರೆಯುವ ಸಂಪ್ರದಾಯದವರು ಮದುವೆಗಳಲ್ಲಿ ವಧೂವರರಿಗೆ ಬಾಸಿಂಗ ತೊಂಡಿಲು ತೊಡಿಸಿ ವರನ ಕೈಯಲ್ಲಿ ಹೂವಿನ ಕೋಲು ಕೊಡುತ್ತಾರೆ. ಕಪ್ಪು ಹಸೆ ಬರೆಯುವ ಸಂಪ್ರದಾಯದವರು ಮದುವೆಗಳಲ್ಲಿ ವರನಿಗೆ ಪೇಟಾ ತೊಡಿಸಿ ಕೈಯಲ್ಲಿ ಕಠಾರಿಯನ್ನು ಕೊಡುತ್ತಾರೆ. ದೀಪಾವಳಿಯಲ್ಲಿ ಎತ್ತುಗಳಿಗೆ ಬಾಸಿಂಗ ಕಟ್ಟುವುದಿಲ್ಲ.ಹೀಗೆ ಸಂಪ್ರದಾಯಿಕವಾಗಿ ರೂಢಿಗತವಾಗಿ ತಮ್ಮದೇ ಆದ ವಿಧಿ ವಿಧಾನಗಳನ್ನು ದೀವರು ಪಾಲಿಸಿಕೊಂಡು ಬಂದಿದ್ದಾರೆ.ಆಯಾ

ಸಮುದಾಯಗಳಲ್ಲಿ ಒಂದೊಂದು ವಿಧಿ ವಿಧಾನ ನಂಬಿಗೆಗಳಿವೆ.ಕರೆಒಕ್ಕಲಿಗರು ಆನವಟ್ಟಿಯ ಕೆಲವೆಡೆ ಕುಟುಂಬಗಳಲ್ಲಿ ಹೆಚ್ಚಾಗಿ ಕಪ್ಪು ಬಣ್ಣಚಿತ್ತಾರ ಬರೆಯುವಿಕೆ ಕಂಡುಬರುತ್ತದೆ.

ಮದುವೆ ಶಾಸ್ತ್ರಕ್ಕೆ ಹಸೆಚಿತ್ತಾರ ಬರೆಯುವಾಗಿನ ವಿಧಿ ವಿಧಾನ ನಿಯಮಗಳು

ಮದುವೆಗಳಲ್ಲಿ ಹಸೆಗೋಡೆ ಚಿತ್ತಾರ ಬರೆಯುವ ಪದ್ಧತಿ ಮಲೆನಾಡಿನ ದೀವರು ಮತ್ತು ಕೆಲವು ಇತರೆ ಹಿಂದುಳಿದ ಜನಾಂಗಗಳಲ್ಲಿ, ಬುಡಕಟ್ಟುಗಳಲ್ಲಿ ಅಲ್ಲಲ್ಲಿ ಪಾರಂಪರಿಕವಾಗಿ ರೂಡಿಸಿಕೊಂಡು ಬಂದಿರುವುದು ಕಂಡುಬರುತ್ತೆ. ಆದರೆ ಎಲ್ಲರೂ ತಮ್ಮದೇ ಆದ ವಿಧಿ ವಿಧಾನ ನಿಯಮಗಳನ್ನು ಅನುಸರಿಸಿಕೊಂಡು ಬಂದಿದ್ದಾರೆ. ಬಹುತೇಕ ಎಲ್ಲರೂ ನೈಸರ್ಗಿಕ ಬಣ್ಣಗಳಲ್ಲೇ ಬರೆಯುತ್ತಾರೆ. ಇತ್ತೀಚಿನ ದಿವಸಗಳಲ್ಲಿ ಪೇಟೆಯಲ್ಲಿ ಸಿಗುವ ಬೇರೆ ಬೇರೆ ಬಣ್ಣಗಳನ್ನು ಬಳಸುತ್ತಾರಾದರೂ ಚಿತ್ತಾರದ ವಸ್ತು, ವಿನ್ಯಾಸ, ರೇಖೆಗಳು ಮಾತ್ರ ಹಾಗೆಯೇ ಉಳಿದುಕೊಂಡು ಬಂದಿವೆ.

1) ಮದುವೆಗಳಲ್ಲಿ ಹಸೆಗೋಡೆ ಚಿತ್ತಾರಗಳನ್ನು ಮಧುಮಗ(ವರ)ನ ತಾಯಿ, ವಧುವಿನ ತಾಯಿ ಬರೆಯುವ ಹಾಗಿಲ್ಲ. ವಧೂ-ವರರ ಅಕ್ಕತಂಗಿಯರು, ಸೋದರತ್ತೆಯರು ಬರೆಯಬಹುದು. ಚಿಕ್ಕಮ್ಮ, ದೊಡ್ಡಮ್ಮಂದಿರು ಬರೆಯಬಹುದು.

2) ಚಿತ್ತಾರ ಬರೆಯುವವರು ಮದುವೆಯ ವಾರದ ಮುಂಚೆ ನಡೆಯುವ ವೀಳ್ಯಾಶಾಸ್ತ್ರದ ದಿವಸ ಎಳೆ ಹೊಡೆದು ಅಂದಿನಂದ ಬರೆಯಲು ಪ್ರಾರಂಭಿಸಬೇಕು.

3) ಹಸೆ ಚಿತ್ತಾರದ ಎಳೆಗಳನ್ನು ಒಂದು ಸಾರಿ ಹಾಕಿದರೆ ಅಳಿಸಿ ಬರೆಯುವ ಹಾಗಿಲ್ಲ. ಅಳಿಸಿ ಬರೆಯುವುದು ಅಪಶಕುನವೆಂದು ಭಾವಿಸುತ್ತಾರೆ. ಧಾರೆಯ ಮುಂಚೆಯೇ ಚಿತ್ತಾರ ಬರೆದು ಮುಗಿಸಿರಬೇಕು.

4) ಚಿತ್ತಾರದ ಬಣ್ಣ ತಯಾರಿಸಲು ಅಕ್ಕಿ ನೆನೆ ಹಾಕುವಾಗ ಒಳ್ಳೆಯ ಮುಹೂರ್ತ ನೋಡಿ ನೆನೆ ಹಾಕುತ್ತಾರೆ.

5) ಕುಟುಂಬದ ಸದಸ್ಯರಲ್ಲದೆ ಬೇರೆಯವರಿಂದ ಚಿತ್ತಾರ ಬರೆಸಿದಾಗ ಬರೆದ ಮಹಿಳೆಗೆ ರವಿಕೆ ಖಣ, ತೆಂಗಿನಕಾಯಿ, ಮಡಿಲಕ್ಕಿ ಹಾಕಿ ಗೌರವಿಸುತ್ತಾರೆ ಮತ್ತು ಚಿತ್ತಾರ ಬರೆಯುವಾಗ ಪ್ರಾರಂಭ ಮುಗಿಯುವವರೆಗೆ ತುಂಬಾ ಗೌರವದಿಂದ ಆತಿಥ್ಯ ಮಾಡುತ್ತಾರೆ.

6) ಒಮ್ಮೆ ಬರೆದ ಹಸೆ ಚಿತ್ತಾರವನ್ನು ಮೂರು ವರ್ಷಗಳವರೆಗೆ ಅಳಿಸಬಾರದು ಎಂಬ ನಿಯಮವಿದೆ. ಆದರೆ ಒಂದು ವರ್ಷ ತುಂಬುವುದರೊಳಗೆ ಆ ಮನೆಯಲ್ಲಿ ಮದುವೆಗಳು ನಡೆದರೆ ಆ ಸ್ಥಳವನ್ನು ಬಿಟ್ಟು ಪಕ್ಕದಲ್ಲಿಯೇ ಹೊಸದಾಗಿ ಚಿತ್ರವನ್ನು ಬರೆಯಬಹುದು.

7) ಎರಡು ಮದುವೆಗಳು ಒಮ್ಮೆ ಆದರೆ ಎರಡು ದಂಡಿಗೆಯಿರುವ ಹಸೆ ಚಿತ್ತಾರವನ್ನು ಬರೆಯುತ್ತಾರೆ. ಒಂದೇ ಮದುವೆಯಾದರೆ ಒಂದು ದಂಡಿಗೆ ಇರುವ ಹಸೆ ಚಿತ್ರವನ್ನು ಬರೆಯುತ್ತಾರೆ.

8. ಹಸೆ ಗೋಡೆಚಿತ್ತಾರ ಜೊತೆಗೆ ವಧುವರರ ಹೆಸರನ್ನು ಬರೆಯುವ ರೂಢಿಯಿದೆ.

ಈಗ ಅಷ್ಟು ಕಟ್ಟುನಿಟ್ಟಾಗಿ ನಿಯಮ ಪಾಲನೆ ಮಾಡುವುದು ಕಂಡುಬರುವುದಿಲ್ಲ. ಕೆಲವು ಕಡೆ ಸಿದ್ಧಮಾದರಿ ಹಸೆಗೋಡೆ ಚಿತ್ತಾರ ಖರೀದಿಸಿ ಗೋಡೆಗೆ ಅಂಟಿಸುವುದೂ ಇದೆ. ಆದರೆ ದೀವರ ಸಮುದಾಯದಲ್ಲಿ ಮನೆಯಲ್ಲಿ ಹಸೆಗೋಡೆ ಇಲ್ಲದೆ ಮದುವೆ ಮಾಡುವುದಿಲ್ಲ. ಕಡ್ಡಾಯ ಸಂಪ್ರದಾಯವಾಗಿದೆ.ಕೆಲವು ಬಳಿಗಳಲ್ಲಿ ಮಾತ್ರ ಹಸೆ ಸಂಪ್ರದಾಯವಿಲ್ಲದಿರುವುದೂ ಕಂಡುಬರುತ್ತದೆ.

ಕರ್ನಾಟಕದ ದೇಶೀ ಚಿತ್ರಕಲೆ ಹಸೆ ಚಿತ್ತಾರ ರವಿರಾಜ್ ಸಾಗರ್

ಮದುವೆಗೆ ಬರೆಯುವ ಶಾಸ್ತ್ರಬದ್ಧ ಹಸೆ ಚಿತ್ತಾರದ ವಿನ್ಯಾಸಗಳಲ್ಲಿ ಕಂಡುಬರುವ ಮೂಲಭೂತ ಅಂಶಗಳು (ಮೋಟಿಫ್‌ಗಳು)

ವಿಶಿಷ್ಟ ರೇಖಾಕೃತಿಯ ಜಾಮಿತಿಯ ಅಂಶಗಳ ಹಸೆಚಿತ್ತಾರ ವಿನ್ಯಾಸದ ದೃಷ್ಟಿಯಿಂದಲೂ ಹಾಗೂ ಅಂತಃಸತ್ವದ ದೃಷ್ಟಿಯಿಂದಲೂ ಅತಿ ವಿಶಿಷ್ಟವಾದದ್ದು. ಮದುವೆಯ ಶಾಸ್ತ್ರಬದ್ಧ ಹಸೆಚಿತ್ತಾರ ಬರೆಯುವಾಗ ದೀವರ ಚಿತ್ತಾರಗಿತ್ತಿಯರು ತಮ್ಮದೇ ಆದ ಸಾಂಪ್ರದಾಯಿಕ ನಿಯಮಗಳ ಜೊತೆಗೆ ಕೆಲವು ಮೂಲಭೂತ ಅಂಶಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಮದುವೆ ಶಾಸ್ತ್ರಗಳ ,ಸಂಭ್ರಮ ಸಡಗರಗಳ ಭಾವನೆಗಳನ್ನು ಹಸೆಚಿತ್ತಾರದಲ್ಲಿ ಅಭಿವ್ಯಕ್ತಪಡಿಸುತ್ತಾರೆ. ರೇಖೆಗಳ ಭೌತಿಕರೂಪಿಯೂ ಭಾವರೂಪಿಯೂ ಆಗಿದೆ. ಹಸೆ ಚಿತ್ತಾರ ಬರೆಯುವಾಗ ವಿಧಾನ,ಸ್ವರೂಪ ಸಾಂಪ್ರದಾಯಿಕ ಶಾಸ್ತ್ರದ ಜೊತೆಗೆ ಕೆಲವು ಮೂಲಭೂತ ಅಂಶಗಳನ್ನು ತಿಳಿದುಕೊಳ್ಳುವುದು ಅಗತ್ಯ.

1. ಎಳೆ : ಚಿತ್ತಾರದ ವಿನ್ಯಾಸದಲ್ಲಿ ಹೆಚ್ಚಾಗಿ ಅಡ್ಡ ಮತ್ತು ಉದ್ದ ಗೆರೆಗಳು ಕಂಡುಬರುತ್ತವೆ. ಇವುಗಳನ್ನು ಎಳೆಗಳು ಎಂದು ಕರೆಯುತ್ತಾರೆ.

2. ನಿಲಿ : ಎರಡು ಎಳೆಗಳ ಮಧ್ಯಭಾಗದಲ್ಲಿ ಓರೆಯಾಗಿ ಎಳೆಯುವ ಗೆರೆಯನ್ನು ನಿಲಿ ಎಂದು ಕರೆಯುತ್ತಾರೆ.

3. ನಿಲಿ ಕೊಚ್ಚು : ಎರಡು ಎಳೆಗಳ ಮಧ್ಯಭಾಗದಲ್ಲಿ ಓರೆಯಾಗಿ ಬರೆಯುವ ಅದಕ್ಕೆ ವಿರುದ್ಧವಾಗಿ ಬರೆಯುವ ನಿಲಿಯನ್ನು ನಿಲಿ ಕೊಚ್ಚು ಎನ್ನುತ್ತಾರೆ.

4. ಬಾಸಿಂಗ ನಿಲಿ : ತ್ರಿಭುಜಾಕೃತಿಯ ಮಧ್ಯೆ ನಿಲಿಯ ರಚನೆಗೆ ಬಾಸಿಂಗ ನಿಲಿ ಎನ್ನುತ್ತಾರೆ. ಮದುವೆಯ ಸಂದರ್ಭದಲ್ಲಿ ವರನಿಗೆ ಕಟ್ಟುವ ಬಾಸಿಂಗದ ಆಕೃತಿಯಲ್ಲಿರುತ್ತದೆ. ಇದರ ಒಳಗಡೆ ವಿನ್ಯಾಸದಲ್ಲಿ ನಿಲಿ ಕೊಚ್ಚುಗಳು ಸಹ ಇರುತ್ತವೆ. ಹಾಗಾಗಿ ಇದನ್ನು ಬಾಸಿಂಗ ನಿಲಿ ಅನ್ನುತ್ತಾರೆ.

5. ಜಲ್ಲೆ ಸಾಲು : ಮದುವೆಯ ಸಮಯದಲ್ಲಿ ಬೆಂಡನ್ನು ಹೂವಿನಂತೆ ಕತ್ತರಿಸಿ ಅವುಗಳನ್ನು ದಾರದಲ್ಲಿ ಪೋಣಿಸಿ ದಂಡೆ ಮಾಡಿ ಹಾರ ತಯಾರಿಸುತ್ತಾರೆ. ಈ ಹಾರವನ್ನು ವಧುವರರಿಗೆ ಹಾಕುತ್ತಾರೆ. ಇದನ್ನಜಲ್ಲೆ ದಂಡೆ ಎನ್ನುತ್ತಾರೆ. ಇಂತಹ ಜಲ್ಲೆ ದಂಡೆಯನ್ನು ಸಹ ಹಸೆ ಚಿತ್ತಾರದಲ್ಲಿ ಬಿಡಿಸುತ್ತಾರೆ.

6. ಚಂಡು ಹೂವಿನ ಸಾಲು : ಹಸೆ ಚಿತ್ತಾರದಲ್ಲಿ ಚೆಂಡುಹೂವನ್ನು ಸಾಲುಸಾಲಾಗಿ ಬಿಡಿಸುತ್ತಾರೆ. ಅದನ್ನು ಚೆಂಡುಹೂವಿನ ಸಾಲು ಎಂದೇ ಕರೆಯುತ್ತಾರೆ. ಮುಂಡಿಗೆಯ ನಡುವೆ, ಅಕ್ಕಪಕ್ಕದಲ್ಲಿ ಅಲಂಕರಿಸಿರುತ್ತಾರೆ.

7. ಪೊಪ್ಳಿ : ಚೌಕಾಕೃತಿಯಲ್ಲಿರುವ ಇದನ್ನು ಕಣ್ಣು ಎಂದು ಸಹ ಕರೆಯುತ್ತಾರೆ.ಅಡ್ಡ ನಾಲ್ಕು ಮತ್ತು ಉದ್ದವಾಗಿ ನಾಲ್ಕು ಚೌಕಾಕಾರದ ಮನೆಗಳನ್ನು ಒಂದು ಬಿಟ್ಟು ಒಂದನ್ನು ಪೂರ್ಣವಾಗಿ ತುಂಬುವ ರಚನೆಗೆ ಪೊಪ್ಪಳಿ ಎಂದು ಕರೆಯುವ ರೂಢಿ ಇದೆ.

8. ಅರೆ ಪೊಪ್ಳಿ : ಪೊಪ್ಪಳಿಯಲ್ಲಿ ಪ್ರತಿ ಚೌಕವನ್ನು ಪೂರ್ಣವಾಗಿ ತುಂಬಿದರೆ ಅರೆ ಪೊಪ್ಪಳಿಯಲ್ಲಿ ಚೌಕ ಕಾರವನ್ನು ಅಡ್ಡವಾಗಿ ಲಂಬವಾಗಿ ವಿಭಾಗಿಸಿ ಅರ್ಧಭಾಗಕ್ಕೆ ಮಾತ್ರ ಬಣ್ಣ ತುಂಬುವ ರೂಢಿ ಇದೆ ಇದನ್ನು ಅರೆ ಪೊಪ್ಪಳಿ ಎಂದು ಕರೆಯುತ್ತಾರೆ.

9. ಪೀಟಿ : ಮಲೆನಾಡಿನಲ್ಲಿ ಹಳ್ಳಿಗರು ಚಿಟ್ಟೆಗೆ ಪೀಟಿ ಎಂದು ಕರೆಯುತ್ತಾರೆ. ಚಂಡು ಹೂವಿನ ಸಾಲನ್ನು ಬರೆಯುವಂತೆ ಜೊತೆಗೆ ಪೀಟಿಯನ್ನು ಸಹ ಬರೆಯುತ್ತಾರೆ. ಹೂವು ಮತ್ತು ಚಿಟ್ಟೆಯ ಸಮಾಗಮ ದಂತೆ ಸಾಂಕೇತಿಕರಿಸಿ ಬರೆಯುವ ರೂಢಿ ಇದೆ.

10. ಕೋಳಿ : ಮಲೆನಾಡಿನ ಹಳ್ಳಿಗರಿಗೆ ಕೋಳಿ ಪ್ರೀತಿಯ ಸಾಕು ಪಕ್ಷಿ. ಮೊಟ್ಟೆ ಕೋಳಿಯನ್ನು ಫಲವಂತಿಕೆಯ ಸಾಂಕೇತಿಕವಾಗಿ ಹಸೆ ಚಿತ್ತಾರದಲ್ಲಿ

ಬರೆಯುವ ರೂಢಿ ಇದೆ. ದೇವರಿಗೆ ನೈವೇದ್ಯವಾಗಿ, ಹರಕೆಗಾಗಿ ಕೋಳಿ ಬಲಿ ಕೊಡುವ ರೂಢಿ ಸಹ ಇದೆ.

11.ಮಾದ್ನಕೈ : ಕಾಮದೇವನ ಸಾಂಕೇತಿಕವಾಗಿ ಮಾದ್ನಕೈ ಬರೆಯುವ ರೂಢಿ ಬಂದಿರಬಹುದು ಎಂದು ಕೆಲವರು ಹೇಳುತ್ತಾರೆ. ಹಸೆಚಿತ್ತಾರದಿಂದಾಗಿ ವಧು–ವರರಿಬ್ಬರೂ ದಾಂಪತ್ಯ ಜೀವನದಲ್ಲಿ ಪ್ರೀತಿ ಪ್ರೇಮದಿಂದ ಸುಖ ದಾಂಪತ್ಯ ನಡೆಸಲಿಕ್ಕೆ ಮದನನ ಹಾರೈಕೆ ಇರಲಿ ಎಂಬ ಆಶಯದೊಂದಿಗೆ ಈ ರೀತಿ ಚಿತ್ರೀಕರಿಸುವ ಸಂಪ್ರದಾಯ ಕಂಡುಬರುತ್ತದೆ.ಒಂದು ದಂಡಿಗೆಯ ಹಸೆ ಚಿತ್ರವಾದರೆ 4 ಮಾದ್ನಕೈ ,ಜೋಡು ದಂಡಿಗೆಯ ಚಿತ್ರವಾದರೆ 8 ಮಾದ್ನಕೈ ಬರೆಯುವ ಸಂಪ್ರದಾಯ ಸಹ ಇದೆ.ಈಗ ಪ್ರಾದೇಶಿಕವಾಗಿ ಎರಡು, ನಾಲ್ಕರಂತೆ ಬರೆಯುವ ಕೆಲವು ನಾವಿನ್ಯ ರೂಡಿಗಳು ಕಂಡುಬರುತ್ತದೆ. ಇಲ್ಲಿ ಮಾದ್ನಕೈ ಎಂದರೆ ಮದನ ಅಥವಾ ಮಾದಪ್ಪನನ್ನು ಸ್ಮರಿಸುತ್ತ ಸಾಂಕೇತಿಸಿರಬಹುದು. ಹಳೆಯ ಶಿವನ ದೇವಾಲಯಗಳಲ್ಲಿ ಮಾದ್ನಕೈ ಗಮನಿಸಬಹುದು.

12. ದಂಡಿಗೆ : ದಂಡಿಗೆಗೆ ಚಿತ್ತಾರದಲ್ಲಿ ಅತಿ ಮಹತ್ವವಿದೆ. ವಿನ್ಯಾಸದ ದೃಷ್ಟಿಯಿಂದಲೂ ಪ್ರಮುಖವಾದ ಭಾಗವಾಗಿದ್ದು ಇದು ಪಲ್ಲಕ್ಕಿಯ ವಿನ್ಯಾಸದಲ್ಲಿ ಇರುತ್ತದೆ. ರಾಜ ಮಹಾರಾಜರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಕೊಂಡು ಮೆರವಣಿಗೆ ಹೋಗುವ ಪದ್ಧತಿಯಂತೆ ಮದುಮಗ,ಮದ್ನಿಗಿತ್ತಿರನ್ನು ಗೌರವದಿಂದ ಮದುವೆಯ ಮೆರವಣಿಗೆ ಮಾಡುವ ಆಚರಣೆ ಇದ್ದು ಅದನ್ನೇ ಹಸೆ ಚಿತ್ತಾರದಲ್ಲಿ ಸಹ ಬಿಡಿಸಲಾಗುತ್ತದೆ.ರಾಜ ಮಹಾರಾಜರುಗಳ ಕಾಲದಲ್ಲಿ ಸೈನ್ಯದಲ್ಲಿ ಹೆಚ್ಚಾಗಿ ಸೇವೆ ಸಲ್ಲಿಸುತ್ತಿದ್ದ ದೀವರು ಮದುಮಕ್ಕಳನ್ನು ಮೆರವಣಿಗೆ ಮಾಡುವ ಪದ್ಧತಿ ರೂಢಿಸಿಕೊಂಡಿದ್ದಾರೆ. ಅಲ್ಲದೆ ಮದುವೆ ಸಮಯದಲ್ಲಿ ದೇವರಿಗೆ ಸಮಾನ ಗೌರವಭಾವದಿಂದ ಮದುಮಕ್ಕಳನ್ನು ಕಾಣಬೇಕು ಎಂಬ ನಂಬಿಕೆ ದೀವರಲ್ಲಿದೆ. ಹಸೆಗೋಡೆ ಚಿತ್ತಾರದ ಮಧ್ಯಭಾಗದಲ್ಲಿ ಗಂಗೆಯನ್ನು ಸಹ ಬರೆಯಲಾಗುತ್ತದೆ. ಇದರಲ್ಲಿ ಒಡಲು, ಹೊಟ್ಟೆ ಎಂದು ಕರೆಯುವ ವಿವಿಧ ವಿನ್ಯಾಸಗಳಿವೆ.

ಸಾಂಪ್ರದಾಯಿಕವಾಗಿ ಹಸೆ ಚಿತ್ತಾರದ ಬಹುತೇಕ ಬಿಡಿಸುವಿಕೆ ಮುಗಿದನಂತರ ದಂಡಿಗೆಯನ್ನು ಮದುವೆಯ ಹಿಂದಿನ ರಾತ್ರಿ ದೇವರ ಕಾರ್ಯ ಮಾಡುತ್ತ ಬಿಡಿಸುತ್ತಾರೆ. ಈಗೀಗ ಸಾಂಪ್ರದಾಯಿಕ ಶೈಲಿಯ ಜೊತೆಗೆ ಈ ಚಿತ್ರದಲ್ಲಿ ಕೆಲವು ಬದಲಾವಣೆ ಕಂಡುಬರುತ್ತದೆ.

13. ಏಣಿ : ಏಣಿಯು ಗಂಡು–ಹೆಣ್ಣು ಸಮನಾಂತರವಾಗಿ ಪರಸ್ಪರ ಸಹ ಸಂಬಂಧದೊಂದಿಗೆ ಸಹಬಾಳ್ವೆ ಮಾಡುತ್ತ ಬದುಕಿನ ಎಲ್ಲ ಹಂತಗಳಲ್ಲಿ ಮೇಲೇರುತ್ತ ಸಾಗುವ ಸಂಕೇತವಾಗಿದೆ.

14. ಅರಳಿ ಎಲೆ : ಸಾಮಾನ್ಯವಾಗಿ ವಧು–ವರರನ್ನು ಅರಳಿಮರದ ಕಟ್ಟೆಯ ಮೇಲೆ ಕೂರಿಸಿ ಊರಿನ ಗರತಿಯರಿಂದ ಆರತಿ ಎತ್ತುವ, ಮದುವೆಯ ಕೆಲವು ಶಾಸ್ತ್ರಗಳನ್ನು ಮಾಡುವ ವಿಧಾನ ದೀವರಲ್ಲಿ ಇದೆ. ಹಾಗಾಗಿ ಹಸೆಗೋಡೆ ಚಿತ್ತಾರದಲ್ಲಿ ಸಹ ಅರಳಿ ಎಲೆ ಬರೆಯುವ ಸಂಪ್ರದಾಯ ಇದೆ.

15. ಕುಂಭ : ಹಸೆಗೋಡೆ ಚಿತ್ತಾರದ ಮೇಲ್ಭಾಗದಲ್ಲಿ ಕುಂಭ ಬರೆಯುವ ಪದ್ಧತಿ ಇದೆ. ಕುಂಭದಲ್ಲಿ ಮಾವಿನ ಎಲೆ, ತೆಂಗಿನಕಾಯಿ ಸಹ ಬಿಡಿಸುತ್ತಾರೆ. ಮದುವೆ ಶಾಸ್ತ್ರಕ್ಕೆ ದೀವರಲ್ಲಿ ಕೇಲುಕುಂಭ ಅಲಂಕರಿಸುವ ಪದ್ಧತಿಯಿದೆ.

16. ಮುಂಡಿಗೆ : ಹಸೆ ಗೋಡೆ ಚಿತ್ತಾರದಲ್ಲಿ ಉದ್ದ ಮತ್ತು ಅಗಲದ ಮುಂಡಿಗೆ ಬರೆದುಕೊಂಡು ಅದರೊಳಗೆ ಚಿತ್ತಾರ ಬಿಡಿಸುವ ವಿನ್ಯಾಸವಿದೆ. ಹಿಂದೆ ಮುಂಡಿಗೆ ಮನೆಗಳು ಇದ್ದವು. ಅದನ್ನು ನೋಡಿ ಮುಂಡಿಗೆ ಬರೆದು ಚಿತ್ತಾರ ಬಿಡಿಸುವ ಪದ್ಧತಿ ಬಂದಿರಬಹುದು.

17. ಓಲಗದವರು : ಮದುವೆಯ ಮಂಗಳ ಕಾರ್ಯದಲ್ಲಿ ಸಂಗೀತ ಮೊಳಗಲಿ ಎಂದು ಶುಭ ಸಂಕೇತವಾಗಿ ಓಲಗದ ಅವರನ್ನು ಕರೆಸಿ ಮದುವೆ ಮಾಡಲಾಗುತ್ತಿದೆ. ಹಸೆಗೊಡೆ ಚಿತ್ತಾರದಲ್ಲಿ ಓಲಗದವರನ್ನು ಸಹ ಬಿಡಿಸಲಾಗುತ್ತದೆ.

18. ದಿಬ್ಬಣದ ಜನ : ಮಧು ಮಕ್ಕಳಿಗೆ ಆಶೀರ್ವದಿಸಲು ವರನ ಕಡೆಯಿಂದ ಬರುವ ಸಂಬಂಧಿಕರು ಜನಸಮೂಹವನ್ನು ದಿಬ್ಬಣ ಎಂದು ಕರೆಯುತ್ತಾರೆ. ,ಮದುವೆಯ ದಿಬ್ಬಣಕ್ಕೆ ಬರುವ ಜನರನ್ನು ಸಹ ಹಸೆ ಗೋಡೆಯಲ್ಲಿ ಚಿತ್ರಿಸಲಾಗುತ್ತದೆ.

19. ಮದುಮಗ–ಮದ್ನಿಗಿತ್ತಿ / ಶಿವ ಪಾರ್ವತಿ : ಹಸೆ ಗೋಡೆಯ ನಡುಭಾಗದಲ್ಲಿ ಮದುಮಗ ಮದ್ನಿಗಿತ್ತಿಯನ್ನು ಸರಳರೇಖೆಯಲ್ಲಿ ಚಿತ್ರಿಸುತ್ತಾರೆ. ಕೆಲವರು ಅದನ್ನು ಶಿವ–ಪಾರ್ವತಿ ಎಂದು ಸಹ ಸಾಂಕೇತಿಕವಾಗಿ ಚಿತ್ರಿಸುತ್ತಾರೆ.

20. ತೊಂಡ್ಲು ಮತ್ತು ಬಾಸಿಂಗ : ವಧುವಿನ ತಲೆಗೆ ಸಿಂಗರಿಸುವ ಬೆಂಡಿನಿಂದ ಮಾಡಿದ ಕಿರೀಟವನ್ನು ತೊಂಡ್ಲು ಎಂದು ವರನಿಗೆ ತೋರಿಸುವ ಬೆಂಡಿನಿಂದ ಮಾಡಿದ ಕಿರೀಟವನ್ನು ಬಾಸಿಂಗ ಎಂತಲೂ ಕರೆಯುತ್ತಾರೆ. ಅದನ್ನು ಸಹ ವಧು–ವರರನ್ನು ಚಿತ್ರಿಸುವಾಗ ಬಿಡಿಸುತ್ತಾರೆ.

21. ಮಗ್ಗೆ ಸಾಲು : ವಧುವಿಗೆ ಮಲ್ಲಿಗೆ ಮೊಗ್ಗುಗಳಿಂದ ಸಿಂಗರಿಸಿದ ಅಲಂಕಾರ ಮಾಡುವ ರೂಢಿಯಿದೆ. ಮಂಗಳ ಕಾರ್ಯಗಳಿಗೆ ಮೊಗ್ಗಿನ ದಂಡೆಗಳನ್ನು ಬಳಸುತ್ತಾರೆ.ಹಸೆ ಚಿತ್ತಾರದಲ್ಲಿಯೂ ಸಹ ಮಲ್ಲಿಗೆಮೊಗ್ಗೆ ಸಾಲುಗಳನ್ನು ಸಾಂಕೇತಿಕವಾಗಿ ಬಿಡಿಸುತ್ತಾರೆ.

22. ಗರಗಸ ಸಾಲು (ಕರಗಸ) : ಹಳ್ಳಿಯಲ್ಲಿ ಆಡುಭಾಷೆಯಲ್ಲಿ ಗರಗಸವನ್ನು ಕರಗಸ ಅನ್ನುವ ರೂಢಿಯಿದೆ. ಗರಗಸದ ಮುಳ್ಳಿನಂತೆ ಕಾಣುವ ತ್ರಿಭುಜಾಕಾರದ ಸಾಲುಗಳನ್ನು ಸಹ ಹಸೆ ಗೋಡೆ ಚಿತ್ತಾರದಲ್ಲಿ ಬರೆಯುತ್ತಾರೆ. ಇವುಗಳನ್ನು ತ್ರಿಭುಜಾಕಾರದ ಬೆಟ್ಟದಂತೆ ಬಿಡಿಸುವುದರಿಂದ ಕೆಲವರು ಬೆಟ್ಟದ ಸಾಲು ಎನ್ನುವುದು ಸಹ ರೂಢಿಯಿದೆ.

23. ಆರಕುಲ್ ಕಣ್ಣು : ಹಳ್ಳಿಯಲ್ಲಿ ನಕ್ಷತ್ರಕ್ಕೆ ಅರಕುಲ್ , ಆರ್ಲು ಎಂದು ಸಹ ಕರೆಯುತ್ತಾರೆ. ಹಸೆ ಗೋಡೆ ಚಿತ್ತಾರದಲ್ಲಿ ನಕ್ಷತ್ರಗಳ ಸಾಲುಗಳನ್ನು ಬಿಡಿಸಲಾಗುತ್ತದೆ.

24. ಎಲೆಬಳ್ಳಿ : ವೀಳ್ಯದ ಎಲೆಗಳು , ಮಾವಿನ ಎಲೆಗಳು ಮದುವೆಗೂ ಹಾಗೂ ಯಾವುದೇ ಶುಭ ಸಮಾರಂಭಕ್ಕೆ ಮಂಗಳಕರ ಎಂಬ ನಂಬುಗೆಯಿದೆ. ಹಾಗಾಗಿ ಎಲೆಗಳನ್ನು ಸಹ ಚಿತ್ತಾರದಲ್ಲಿ ಚಿತ್ರಿಸುತ್ತಾರೆ.

25. ಬೀಸಣಿಗೆ : ಹಿಂದೆ ಬೇಸಿಗೆಗಾಲದಲ್ಲಿ ಗಾಳಿಗಾಗಿ ಬಿದಿರಿನ ಬೀಸಣಿಗೆ ಬಳಸುವ ರೂಢಿ ಇತ್ತು. ಅದನ್ನು ಸಹ ಹಸೆಗೋಡೆ ಚಿತ್ರದಲ್ಲಿ ಪ್ರಾದೇಶಿಕವಾಗಿ ಕೆಲವೆಡೆ ಬಿಡಿಸುವುದು ಕಂಡು ಬರುತ್ತದೆ.

26. ಕೊನೆ : ಬಾಳೆಗೊನೆ, ಮಾವಿನ ಕೊನೆ ಸಹ ಹಸೆ ಚಿತ್ತಾರದಲ್ಲಿ ಚಿತ್ರಿಸುವುದು ಕಂಡುಬರುತ್ತದೆ. ಮಾವಿನ ಕೊನೆಕೆಗಳು, ಬಾಳೆಗೊನೆ ಶುಭ ಸಂಕೇತವಾಗಿ,ಫಲವಂತಿಕೆಯ ಸಂಕೇತವಾಗಿ ಪೂಜೆಗೊಳ್ಳುತ್ತದೆ.

27. ಬಾಚಣಿಕೆ : ಹಸೆಗೋಡೆ ಚಿತ್ತಾರದಲ್ಲಿ ಬಾಚಣಿಕೆ ಬರೆಯುವುದು ಸಹ ರೂಢಿ ಇದೆ. ಮದುವೆ ಶಾಸ್ತ್ರಗಳಲ್ಲಿ ಅತ್ತೆಯಾದವಳು ಸೊಸೆಗೆ ತಲೆಗೆ ಎಣ್ಣೆ ಹಾಕಿ ತಲೆ ಬಾಚುವ ಶಾಸ್ತ್ರ ಸಹ ಇದೆ. ಹಾಗಾಗಿ ಹಸೆ ಗೋಡೆಯಲ್ಲಿ ಬಾಚಣಿಕೆ ಚಿತ್ರಿಸುವುದು ಸಂಪ್ರದಾಯ.

28. ಜೋಗಿ ಜಡೆ : ಹೆಣ್ಣು ಮಕ್ಕಳಿಗೆ ಜಡೆ ಹೆಣೆಯುವುದು ಒಂದು ಕಲೆ. ಹಸೆಗೋಡೆ ಚಿತ್ತಾರವು ಸ್ತ್ರೀ ಅಭಿವ್ಯಕ್ತಿ ಕಲೆ ಆಗಿರುವುದರಿಂದ ಅಂದಿನ ಸ್ತ್ರೀಯರು ಪ್ರಧಾನವಾಗಿ ತಮ್ಮ ಸೌಂದರ್ಯ ಪ್ರಜ್ಞೆಯನ್ನು ಹಸೆಗೋಡೆ ಚಿತ್ತಾರದಲ್ಲಿ ಸಹ ಚಿತ್ರಿಸುವುದು ಹಾಗಾಗಿ ಜೋಗಿಜಡೆ ಸಹ ಕಂಡುಬರುತ್ತದೆ . ಶಿವನ ಜಡೆ ಅಥವಾ ಜೋಗಿ ಜಡೆ ಎಂದು ಕರೆಯುವ ರೂಢಿ ಸಹ ಇದೆ.

29. ಮೂಲೆ ಆರತಿ : ಮದುವೆ ಸಂದರ್ಭದಲ್ಲಿ ದೀಪಕ್ಕೆ ಹೆಚ್ಚು ಮಹತ್ವ ಇರುತ್ತದೆ. ಆರತಿ ಎತ್ತುವುದು ಮದುವೆ ಶಾಸ್ತ್ರದಲ್ಲಿ ಪ್ರಧಾನವಾಗಿ ಕಂಡುಬರುತ್ತದೆ.ಅದರ ಸಂಕೇತವಾಗಿ ಹಸೆಗೋಡೆ ಚಿತ್ತಾರದಲ್ಲಿ ಮೂಲೆ ಆರತಿ ಚಿತ್ತಾರ ಕಂಡುಬರುತ್ತದೆ.ಸಾಮಾನ್ಯವಾಗಿ ಎಂಟರಿಂದ ಒಂಬತ್ತು ಮೂಲೆಗಳ ಆರತಿ ಚಿತ್ತಾರ ಬರೆಯುವುದು ಕಾಣಬಹುದು.ಈಗೀಗ ಕೆಲವರು ನಾವಿನ್ಯತೆಯನ್ನು

ರೂಢಿಸಿಕೊಂಡು ಹೆಚ್ಚೆಹೆಚ್ಚು ಆರತಿ ಚಿತ್ತಾರ, ಸಾಂಪ್ರದಾಯಿಕ ಪರಿಧಿಯಲ್ಲಿಯೇ ಹೊಸಬಗೆಯ ಚಿತ್ತಾರ ಬರೆಯುವುದು ಸಹ ಕಂಡುಬರುತ್ತದೆ.ಅಂದಿನ ಜನಪದರು ಸದಾ ನಾವಿನ್ಯತೆಯನ್ನು ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿ ರೂಢಿಸಿಕೊಂಡು ಬಂದಿರುವುದನ್ನು ಸಹ ಗಮನಿಸಬಹುದು.

30. ಕೊಡೆ : ಮಲೆನಾಡಿನಲ್ಲಿ ಮದುವೆ ಶಾಸ್ತ್ರದಲ್ಲಿ ಕೊಡೆಗು ಸಹ ಮಹತ್ವ ಇದೆ. ವರನಿಗೆ ಜೊತೆಯಾಗಿ ಕೊಡೆ ಹಿಡಿದುಕೊಂಡು ಕರೆದುಕೊಂಡು ಹೋಗುವ ಸಂಪ್ರದಾಯ ಇದೆ. ಹೊಸದಾಗಿ ಮದುವೆಯಾದ ವರ್ಷದಲ್ಲಿ ವರನಿಗೆ ಕೊಡೆ ಕೊಡುವ "ಕೊಡೆ ಅಮಾವಾಸ್ಯೆ" ಶಾಸ್ತ್ರ ಸಹ ಕಂಡುಬರುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅಂದಿನ ಚಿತ್ತಾರಗಿತ್ತೀರು ಕೊಡೆಯನ್ನು ಸಹ ಹಸೆಗೋಡೆ ಚಿತ್ತಾರದಲ್ಲಿ ಇತ್ತೀಚಿನ ಶತಮಾನಗಳಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ.

31. ಸೂರ್ಯ – ಚಂದ್ರ : ಹಸೆ ಗೋಡೆಯಲ್ಲಿ ಸೂರ್ಯಚಂದ್ರರನ್ನು ಚಿತ್ರಿಸುವುದು ಪ್ರಮುಖವಾಗಿ ಕಂಡುಬರುತ್ತದೆ. ಇಡಕಲು ಚಿತ್ತಾರದಲ್ಲಿ ಸಹ ಕಡ್ಡಾಯವಾಗಿ ಸೂರ್ಯಚಂದ್ರರನ್ನು ಚಿತ್ರಿಸುತ್ತಾರೆ.ಶಕ್ತಿಯ ಸಂಕೇತವಾಗಿಯೂ ,ನಿಸರ್ಗ ಆರಾಧಕರಾದ ಬುಡಕಟ್ಟು ಜನ ಸಂಸ್ಕೃತಿಯಲ್ಲಿ ಸೂರ್ಯ ಚಂದ್ರ ಆರಾಧನೆಗೆ ಪ್ರಮುಖ ಸ್ಥಾನವಿದೆ.

32. ಚಕ್ಕಲ್‌ಮುಕಳಿ ಚಿನ್ನಾಣಿ : ಚಕ್ಕಳ ಮಕ್ಕಳ ಹಾಕಿ ಕೂತುಕೊಳ್ಳುವುದು ಎನ್ನುವ ಒಂದು ಬಂಗಿ ಇದೆ. ಅದೇ ಬಂಗಿಯ ಶೈಲಿಯನ್ನು ಅನುಕರಿಸಿ ಹಸೆ ಚಿತ್ತಾರ ವಿನ್ಯಾಸದಲ್ಲಿಯೂ ರೂಢಿಸಲಾಗಿದೆ. ಮದುವೆಯಲ್ಲಿ ವರನನ್ನು ಹಾಸಿ ಕೂರಿಸುವ ಶಾಸ್ತ್ರದಲ್ಲಿ ಚಕ್ಕಲ್ ಮುಕ್ಕಳಿ ಹಾಕಿಕೊಂಡು ಕೂರಿಸುವ ಶಾಸ್ತ್ರವು ಸಹ ಇದೆ. ಇದನ್ನೇ ಸಾಂಪ್ರದಾಯಿಕವಾಗಿ ರೂಢಿಯಲ್ಲಿ ಬಿಡಿಸಿರಬಹುದು.ಈಗ ಈ ಬಗೆ ಚಿತ್ತಾರ ಬಿಡಿಸುವುದು ಕಡಿಮೆ.

33.ದಂಡಿಗೆ ಕೋಲು : ಪಲ್ಲಕ್ಕಿ ಅಥವಾ ದಂಡಿಯನ್ನು ಹೊರಲು ಬೇಕಾಗುವ ಆಧಾರವಾದ ಕೋಲನ್ನು ಸಹ ಹಸೆಗೋಡೆ ಚಿತ್ತಾರದಲ್ಲಿ ಚಿತ್ರಿಸಲಾಗುತ್ತದೆ .

34. ಸೀತೆ ಮುಡಿ. ಹಸೆ ಚಿತ್ತಾರದಲ್ಲಿ ಸೀತೆ ಮುಡಿ ಎಂದು ಚಿತ್ರಿಸುವ ವಿನ್ಯಾಸ ಸಹ ಇದೆ.

35. ಗೊಂಬೆ ಸಾಲು : ಸರಳ ರೇಖೆಗಳನ್ನು ಓರೆಯಾಗಿ ಛೇದಿಸಿ 2 ತ್ರಿಭುಜಗಳ ಆಕೃತಿಯನ್ನು ಮೂಡಿಸಿ ಬಣ್ಣ ತುಂಬುತ್ತಾರೆ. ಇದನ್ನು ಗೊಂಬೆ ಸಾಲು ಎನ್ನುತ್ತಾರೆ. ಇದು ಮದುವೆಯ ಸಂದರ್ಭದಲ್ಲಿ ವಾಲಗದೋರು ಬಳಸುವ ಡೋಲುಗಳನ್ನು ನೆಟ್ಟಗೆ ನಿಲ್ಲಿಸಿದಂತೆಯು ಸಹ ಕಾಣುತ್ತದೆ. ಎರಡು ಗೊಂಬೆಗಳು ಅಥವಾ ಡೋಲುಗಳ ನಡುವೆ ವಜ್ರಾಕೃತಿ ಮೂಡುತ್ತದೆ.

36. ಗಿಡಬುಡಕ್ಕೆ (ಬುಡಬುಡುಕೆ) : ಸಾಂಪ್ರದಾಯಿಕವಾಗಿ ಶಿವನ ವಾದ್ಯವಾದ ಗಿಡಬುಡಕೆಯನ್ನು ಸಹ ಚಿತ್ತಾರದಲ್ಲಿ ರೂಪಿಸುವುದು ಕಂಡುಬರುತ್ತದೆ.

37. **ಲಿಂಗನ ಗುಡಿ/ ಶಿವನ ಗುಡಿ :** ಸಾಂಪ್ರದಾಯಿಕವಾಗಿ ಕೆಲವರು ಹಸೆ ಚಿತ್ತಾರದಲ್ಲಿ ಶಿವನ ಗುಡಿಯಂತೆ ಚಿತ್ರಿಸುವುದು ಸಹ ಇದೆ.

38. **ಮುತ್ತಿನ ಬೊಟ್ಟು :** ಸ್ತ್ರೀಯರು ಧರಿಸುವ ಮುತ್ತಿನ ಬಟ್ಟಿನ ರಚನೆಯ ಆಕೃತಿಯನ್ನು ಸಹ ಹಸೆ ಚಿತ್ರದಲ್ಲಿ ಕಾಣಬಹುದು. ಅದನ್ನು ಮುತ್ತಿನ ಬಟ್ಟು ಎಂದೇ ಕರೆಯುತ್ತಾರೆ.

39. ವಸ್ತ್ರ ಚಿತ್ರ : ವಧು–ವರರಿಗೆ ತೊಡಿಸುವ ಬಾಸಿಂಗವನ್ನು ಇಡುವ ಹತ್ತಿ ಬಟ್ಟೆಯ ವಸ್ತ್ರವನ್ನು ಬಳಸುತ್ತಾರೆ. ವಸ್ತ್ರದ ಮೇಲೆ ಸಹ ಚಿತ್ತಾರ ಬರೆಯುವುದು ಸಂಪ್ರದಾಯ. ಚಿತ್ತಾರ ಬರೆದ ವಸ್ತ್ರವನ್ನು ಸಹ ಕೆಲವು ಮಾದರಿಯ ಹಸೆಗೋಡೆ ಚಿತ್ತಾರದಲ್ಲಿ ಬಿಡಿಸುವುದು ಸಾಂಪ್ರದಾಯಿಕ ರೂಢಿ ಇದೆ.

40. ಪಟ : ತೇರಿನ ಚಿತ್ತಾರದಲ್ಲಿ ಪಟ ಮಾದರಿಯ ಚಿತ್ತಾರ ಬಿಡಿಸುತ್ತಾರೆ.ತೇರಿನ ಮೇಲ್ಭಾಗದಲ್ಲಿ ಕಂಡುಬರುತ್ತದೆ.

ಇವೆಲ್ಲ ಸಾಂಪ್ರದಾಯಕವಾಗಿ ಕಂಡುಬರುವ ಹಸೆಗೋಡೆ ಚಿತ್ತಾರದ ಒಂದಿಷ್ಟು ಮೂಲಭೂತ ಅಂಶಗಳು.ಇವಿಲ್ಲದೆ ಮಧುವೆಯ ಶಾಸ್ತ್ರದ ಹಸೆಚಿತ್ತಾರ ಪೂರ್ಣವೆನಿಸದು. ಹೊಸ ನಾವಿನ್ಯ ಹಸೆಚಿತ್ತಾರ ಬರೆದರೂ ಸಹ ಈ ಸಾಂಪ್ರದಾಯಿಕ ಮೂಲಭೂತ ಅಂಶಗಳು ಇರಲೇಬೇಕು ಎನ್ನುವ ರೂಢನಂಬಿಕೆಯಿದೆ. ಇವಲ್ಲದೆ ಪ್ರಾದೇಶಿಕವಾಗಿ ತಮ್ಮದೇ ಆದ ಕಲಾಭಿವ್ಯಕ್ತಿಯ ಭಾಗವಾಗಿ ಕೆಲವು ಚಿತ್ತಾರಗಿತ್ತಿಯರು ಸಾಂಪ್ರದಾಯಿಕ ಪರಿಧಿಯಲ್ಲಿ ಕೆಲವು ನಾವಿನ್ಯ ವಿನ್ಯಾಸಗಳನ್ನು ಸಹ ಕಂಡುಕೊಂಡು ಬಿಡಿಸುವುದು ಕೆಲವು ಕಡೆ ಕಂಡುಬರುತ್ತದೆ.

ಜನಪದರ ಚಿತ್ತಾರದಲ್ಲಿ ಸ್ತ್ರೀ ಅಭಿವ್ಯಕ್ತಿಗೆ ಸ್ವಾತಂತ್ರ್ಯ ಇತ್ತು. ತಮ್ಮದೇ ಆದ ನೆಲಮೂಲದ ಅನುಭವದ ಅನುಭಾವಿ ದೃಷ್ಟಿಕೋನದಿಂದ ಹಸೆಚಿತ್ತಾರ ವಿನ್ಯಾಸ ಮಾಡಿರುವುದು ಕಂಡುಬರುತ್ತದೆ. ಹಸೆ ಚಿತ್ತಾರವು ಕೇವಲ ರೇಖೆಗಳ ವಿನ್ಯಾಸವಲ್ಲ. ಅದು ಸ್ತ್ರೀ–ಪುರುಷರ ಸಾಮರಸ್ಯ ಸಂಬಂಧಗಳು, ಸಂಭ್ರಮದ ಕ್ಷಣಗಳು, ದೈವಿಕ ಭಾವನೆಗಳು, ಫಲವಂತಿಕೆಯ ಆಚರಣೆಯ ಒಳ ಸೂಕ್ಷ್ಮತೆಗಳು, ನೆಲ ಮೂಲದಿಂದ ಕಂಡುಕೊಂಡ ಜ್ಞಾನ ಪರಿಸರ ಪ್ರೇಮ, ನಿಸರ್ಗದೊಂದಿಗಿನ ಅನನ್ಯ ಬದುಕು ಸಹ ಸ್ತ್ರೀ ಭಾವಕೋಶದಿಂದ ವ್ಯಕ್ತವಾಗಿ ರೂಪುಗೊಂಡಿರುವ ವಿಶಿಷ್ಟ ಚಿತ್ತಾರ ಕಲಾ ಸಂಯೋಜನೆಯಾಗಿದೆ.

ಶಿವಮೊಗ್ಗ ಭಾಗದಲ್ಲಿ ಕಂಡುಬರುವ ಹಸೆಚಿತ್ತಾರ ವಿನ್ಯಾಸಗಳಲ್ಲಿ ಮುಖ್ಯವಾಗಿ ದೀವರ ಮದುವೆ ಶಾಸ್ತ್ರಗಳೊಂದಿಗೆ ತಳುಕು ಹಾಕಿಕೊಂಡಿದೆ.ಹೆಚ್ಚಿನ ವಿನ್ಯಾಸ ವೈವಿಧ್ಯತೆ ದೀವರಲ್ಲಿ ಕಂಡುಬರುತ್ತದೆ. ಸ್ತ್ರೀ ಸೌಂದರ್ಯ ಪ್ರಜ್ಞೆಯನ್ನು ಸಾರುವ ಜೊತೆಗೆ ನೆಲಮೂಲದ ಅನುಭವದೊಂದಿಗೆ ಗ್ರಹಿಸಿದ ಬದುಕಿನ ಅನುಭಾವ ಸಂಗತಿಗಳು ಸಹ ವಿಶಿಷ್ಟ ಸಾಂಕೇತಿಕ ರೀತಿಗಳಲ್ಲಿ ರೇಖೆಗಳಲ್ಲಿ ಮೂಡಿವೆ. ಲೈಂಗಿಕತೆ ಮತ್ತು ಫಲವಂತಿಕೆಯ ಅಭಿವ್ಯಕ್ತಿಯಿದೆ. ಹಲವು ರೇಖಾ ವಿನ್ಯಾಸಗಳ ಮುಂಡಿಗೆಯೊಳಗೆ ದಂಡಿಗೆ ಚಿತ್ರಿಸುವುದನ್ನು ಸಹ ಹಲವು ಬಗೆಯಲ್ಲಿ ಗ್ರಹಿಸಬಹುದು. ಪಪ್ಪಳೀ ಅರೆ ಪಪ್ಪಳಿಗಳಲಿ ಮನುಷ್ಯನ

ಸುಖ ದುಃಖಗಳ ಏರಿಳಿತವನ್ನು ಸಾಂಕೇತಿಕರಿಸಿ ಚಿತ್ರೀಕರಿಸುತ್ತಾರೆ. ಮೊಟ್ಟೆ ಕೋಳಿಯನ್ನು, ಅಥವಾ ಕಾವು ಕೊಡುತ್ತಿರುವ ಕೋಳಿಯನ್ನು ಬಿಡಿಸುವ ಮೂಲಕ ಸಂತಾನೋತ್ಪತ್ತಿಯ ಬಗ್ಗೆ ಸೂಚ್ಯವಾಗಿ ವಧುವರರಿಗೆ ತಿಳಿಸುವ ಆಶಯ ಕಾಣಬಹುದು. ಕೆಲವರು ಕೋಳಿ ಹುಂಜಗಳನ್ನು ಸಹ ಚಿತ್ರಿಸುವುದು ಗಂಡು–ಹೆಣ್ಣಿನ ಪ್ರಣಯದ ಸಂಕೇತವಾಗಿದೆ ಎಂದು ಗ್ರಹಿಸಬಹುದು.

ಹಸೆಗೋಡೆ ಚಿತ್ತಾರದಲ್ಲಿ ವಿವಿಧ ಬಗೆಯ ನಮೂನೆಗಳು ಸಾಂಪ್ರದಾಯಿಕವಾಗಿ ಹಿಂದಿನಿಂದ ರೂಢಿಗೆ ಬಂದಿದ್ದರೂ ಸಹ ಇಂದು ಹೆಚ್ಚಾಗಿ ಮುಂಡಿಗೆ ಇರುವ ಮಾದ್ನಕೈಯಿರುವ ಚಿತ್ತಾರವನ್ನೇ ಹೆಚ್ಚಾಗಿ ಬಿಡಿಸುತ್ತಾರೆ. ಚಚ್ಚೌಕಾಕಾರದ ಚಿತ್ತಾರವನ್ನು ಬಹುತೇಕ ಕಡೆ ಬಿಡಿಸುತ್ತಾರೆ. ಗೋಪುರ ಆಕಾರ ಚಿತ್ತಾರ, ತೇರು ಚಿತ್ತಾರ ಸಹ ಪ್ರಚಲಿತದಲ್ಲಿವೆ. ವಿಶ್ವ ಭಾಷೆಯೆಂದು ಕರೆಯಲಾಗುವ ಚಿತ್ತಾರ ಕರೆಯಲ್ಲಿ ಹಸೆ ಚಿತ್ತಾರ ಪುರಾತನವಾದದ್ದು. ಭಾಷೆಯ ಹಂಗಿಲ್ಲದೆ ಮದುವೆಯ ಸಂದರ್ಭವನ್ನು ಚಿತ್ತಾರದ ಮೂಲಕವೇ ಕಟ್ಟಿಕೊಡುವ ಚಿತ್ತಾರಗಿತ್ತಿಯರ ಕೌಶಲ್ಯ ಮತ್ತು ಬುದ್ಧಿವಂತಿಕೆಯನ್ನು ಮೆಚ್ಚಲೇಬೇಕು. ಸಾಂಪ್ರದಾಯಿಕವಾಗಿ ಸ್ತ್ರೀಯರೇ ಹಸೆಗೋಡೆ ಚಿತ್ತಾರ ಬರೆಯುವುದು ರೂಢಿ. ಆದರೆ ಈಗೀಗ ಗಂಡಸರು ಸಹ ಹಸೆಗೋಡೆ ಚಿತ್ತಾರ ಬಿಡಿಸುವುದನ್ನು ಕಾಣಬಹುದು. ಅಲ್ಲದೆ ಪುರುಷ ಕಲಾವಿದರು ರಾಜ್ಯಮಟ್ಟದಲ್ಲಿ ದೇಶವಿದೇಶಗಳಲ್ಲಿ ಹಸೆ ಚಿತ್ತಾರ ಪ್ರದರ್ಶನ ಸಹ ನಡೆಸುತ್ತಿರುವುದು ಕಂಡು ಬರುತ್ತದೆ. ಆಧುನಿಕತೆಯ ಈ ಸಂದರ್ಭದಲ್ಲಿ ಸ್ತ್ರೀ–ಪುರುಷರು ಸರಿ ಸಮಾನರು ಎಂದು ಹೇಳುತ್ತಿರುವ ಇಂದಿನ ದಿನಮಾನಗಳಲ್ಲಿ ಸ್ತ್ರೀಯರ ಕಲಾ ಅಭಿವ್ಯಕ್ತಿ ಆಗಿರುವ ಹಸೆ ಚಿತ್ತಾರ ಈಗೀಗ ಪುರುಷರ ಕಲೆಯಾಗಿಯೂ, ಉದ್ಯಮಶೀಲಾ ಕಲೆಯಾಗಿಯೂ ಬೆಳೆಯುತ್ತಿದ್ದು ಹೊಸ ಪಲ್ಲಟಗಳಿಗೆ ತೆರೆದುಕೊಂಡಿದೆ. ವಿವಿಧ ರೀತಿಯ ಆಮಂತ್ರಣ ಪತ್ರಿಕೆಗಳಲ್ಲಿ, ಜವಳಿ ಉದ್ಯಮದಲ್ಲಿಯೂ ಹಸೆ ಚಿತ್ತಾರವನ್ನು ಕಾಣಬಹುದು.

ಮದುವೆ ಶಾಸ್ತ್ರಕ್ಕಾಗಿ ಹಸೆಚಿತ್ತಾರ ಮತ್ತು ವೈದಿಕ ಪರಂಪರೆಯ ಮದುವೆ ಶಾಸ್ತ್ರ

ಮದುವೆ ಶಾಸ್ತ್ರಕ್ಕಾಗಿಯೇ ಬರೆಯುವ ಹಸೆಗೋಡೆ ಚಿತ್ತಾರ ಪರಂಪರೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಯಾವ ಹಸೆಗೋಡೆ ಚಿತ್ತಾರದಲ್ಲಿಯೂ ಪುರಾತನಕಾಲದಿಂದ ಇಂದಿವವರೆಗೂ ಚಿತ್ತಾರಗಿತ್ತಿಯರು ಬಿಡಿಸುವ ಶಾಸ್ತ್ರಬದ್ಧ ಹಸೆಗೋಡೆ ಚಿತ್ತಾರದಲ್ಲಿ ಪುರೋಹಿತರನ್ನು ಚಿತ್ರಿಸುವುದಿಲ್ಲ. ಮಹಾರಾಷ್ಟ್ರದ ವರ್ಲಿ ಚಿತ್ರಕಲೆಯಲ್ಲಿಯೂ ಸಹ ಮದುವೆ ಶಾಸ್ತ್ರದ ಚಿತ್ರದಲ್ಲಿ ಪುರೋಹಿತರನ್ನು ಚಿತ್ರಿಸುವುದಿಲ್ಲ.ಪುರಾತನ ಕಾಲದಿಂದ ಇಂದಿನವರೆಗೂ ಮದುವೆ ಶಾಸ್ತ್ರಕ್ಕಾಗಿಯೇ ಬರೆಯುವ ಹಸೆ ಗೋಡೆ ಚಿತ್ತಾರದಲ್ಲಿ ಪುರೋಹಿತರ ಚಿತ್ತಾರ ಬಿಡಿಸದಿರುವುದು ಹಲವು ಕಾರಣಗಳಿಗಾಗಿ ಗಮನಾರ್ಹ ಅಂಶವಾಗಿದೆ. ಶಿವ – ಪಾರ್ವತಿ, ಸೂರ್ಯ ಚಂದ್ರರನ್ನು ,ದಿಬ್ಬಣದ ಜನ , ಓಲಘದವರನ್ನೂ ಚಿತ್ರಿಸುತ್ತಾ ಬಂದಿರುವ ಚಿತ್ತಾರಗಿತ್ತಿಯರು ಎಲ್ಲಿಯೂ ,ಯಾವ ಸಮುದಾಯವೂ ಪುರೋಹಿತರನ್ನು ಯಾರೂ ಚಿತ್ರಿಸುವ ಪದ್ಧತಿಯಿಲ್ಲ. ಹಾಗಾಗಿ ಹಿಂದೆ ಬುಡಕಟ್ಟು ಜನಸಂಸ್ಕೃತಿಯ ಮದುವೆಗಳಲ್ಲಿ , ವೈದಿಕ ಶಾಸ್ತ್ರೋಕ್ತ ಮದುವೆ ಪದ್ದತಿ ಇಲ್ಲದಿರುವುದು , ವೈದಿಕ ಪುರೋಹಿತರನ್ನು ಕರೆಸುವ ಪದ್ದತಿ ಇಲ್ಲದಿರುವುದು ಕಂಡುಬರುತ್ತದೆ.ಅಲ್ಲದೇ ಹಸೆಗೋಡೆ ಚಿತ್ತಾರ ಬರೆಯುವ ಪದ್ದತಿ ವೈದಿಕ ಪರಂಪರೆಯ ಪ್ರಭಾವಕ್ಕೆ ಒಳಗಾಗುವ ಮುನ್ನವೇ ಕರ್ನಾಟಕದಲ್ಲಿ ಆಚರಣೆಯಲ್ಲಿದ್ದು ಇದು ಅತೀ ಪುರಾತನವಾದ ನೆಲಮೂಲದ ಸಂಪ್ರದಾಯಿಕ ಆಚರಣೆಯ ಮೂಲದ ಚಿತ್ರ ಕಲೆಯೆಂದು ಸಾಕ್ಷೀಕರಿಸುತ್ತದೆ.

ಇತ್ತೀಚಿನ ಶತಮಾನಗಳಲ್ಲಿ ವೈದಿಕ ಆಚಣೆಗಳ ಪ್ರಚಾರ,ನೂರಾರು ಸಂಪ್ರದಾಯಗಳ ಸೃಷ್ಟಿ,ಭಯ,ಭಕ್ತಿ, ನಂಬಿಕೆಗಳನ್ನು ಬೇರೂರುವಂತೆ ಮಾಡಿದ ಪರಿಣಾಮ ದೇಶದ ಬುಡಕಟ್ಟು ,ತಳಸಮುದಾಯಗಳ ಮೇಲೆ ವೈದಿಕ ಪ್ರಭಾವ ಬೆಳೆದ ಮೇಲೆ ಪುರೋಹಿತರ ಅವಲಂಬನೆ ಮದುವೆಗಳಲ್ಲಿ ಮತ್ತಿತರ ಕಾರ್ಯಗಳಲ್ಲಿ ಜಾರಿಗೆ ಬಂದಿದೆ ಎಂದು ಹೇಳಬಹುದು. ಕರ್ನಾಟಕದಲ್ಲಿನ ನೂರಾರು ಸಮುದಾಯಗಳಲ್ಲಿ , ಪ್ರಧಾನವಾಗಿ ಹಸೆ ಚಿತ್ತಾರವನ್ನು ಮದುವೆಗೆ ಕಡ್ಡಾಯವಾಗಿ ಬರೆಯುತ್ತಾ ಪರಂಪರೆಯಿಂದ ಉಳಿಸಿಕೊಂಡು ಬಂದಿರುವ

ದೀವರಾಗಲಿ ,ಇತರೆ ಸಮುದಾಯದವರೇ ಆಗಲಿ ಮದುವೆಯ ಬಹುಭಾಗದ ಆಚರಣೆಗಳಲ್ಲಿ ವೈದಿಕ ಪುರೋಹಿತರ ಅವಲಂಬನೆ ಇಲ್ಲ. ಇತ್ತೀಚಿನ ದಶಕಗಳಲ್ಲಿ ಮಾಂಗಲ್ಯ ಧಾರಣೆಗೆ ಮಾತ್ರ ಹೆಚ್ಚಾಗಿ ಬ್ರಾಹ್ಮಣ ಪುರೋಹಿತರನ್ನು ,ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸ್ವಾಮಿಗಳನ್ನು ಕರೆಸುವ ಪದ್ದತಿ ಕಂಡುಬರುತ್ತದೆ. ಈಗಲೂ ಕೆಲವೆಡೆ ವಿರಳವಾಗಿ ಆಯಾ ಸಮುದಾಯದವರು ತಮ್ಮದೇ ಸಮುದಾಯದಲ್ಲಿನ ಹಿರಿಯರು,ಸಂಬಂದಿಕರ ಪುರೋಹಿತ ವೃತ್ತಿಯವರನ್ನೂ ಕರೆಸಿ ಮಾಂಗಲ್ಯ ಧಾರಣೆಶಾಸ್ತ್ರ ಮಾಡಿಸುವುದೂ ಸಹ ಕಂಡುಬರುತ್ತದೆ.ಈಗೀಗ ತಳಸಮುದಾಯಗಳಲ್ಲೂ ಪೌರೋಹಿತ್ಯ ಕಲಿಯುತ್ತಿದ್ದಾರೆ. ಉಳಿದಂತೆ ಮದುವೆಯ ಬಹುಭಾಗ ಆಚರಣೆ ವಿಧಿ ವಿಧಾನಗಳನ್ನು ಅವರೇ ತಮ್ಮ ಸಂಬಂಧಿಕರ ಮೂಲಕವೇ ಮಾಡಿಕೊಳ್ಳುವರು.

ಮದುವೆಗೆ ಶಾಸ್ತ್ರಬದ್ದವಾಗಿ ಪರಂಪರಾಗತವಾಗಿ ಬರೆಯುತ್ತಾ ಬಂದಿರುವ ಹಸೆ ಚಿತ್ತಾರ ಬರೆಯುವ ಪದ್ದತಿ ವೈದಿಕ ಪುರೋಹಿತ ಪದ್ದತಿ ಅನುಸರಿಸುವ ಮೊದಲೇ ಇತ್ತು ಎಂದು ಹಸೆ ಚಿತ್ತಾರದ ಹಲವು ಸಂಗತಿಗಳು ಹಾಗೂ ಹಸೆಗೋಡೆ ಶಾಸ್ತ್ರವೇ ಸಾಕ್ಷೀಕರಿಸುತ್ತದೆ. ಅಲ್ಲದೆ ಹಸೆ ಚಿತ್ತಾರದ ಪರಂಪರೆ ಆದಿ ರೇಖಾ ಶೈಲಿಯ ಸಂಪ್ರದಾಯಿಕ ಚಿತ್ರಕಲೆಯಾಗಿದ್ದು ನೆಲಮೂಲದ ಬುಡಕಟ್ಟು ಜನಸಂಸ್ಕೃತಿಯ ಪ್ರಾಚೀನ ಸಂಪ್ರದಾಯ ಎಂದು ಸಹ ಈ ಅಂಶಗಳು ಸಾಕ್ಷೀಕರಿಸುತ್ತವೆ. ದೀವರ ಸಮುದಾಯದಲ್ಲಿ ಹಸೆಚಿತ್ತಾರ ಬರೆಯದೇ ಮದುವೆ ಶಾಸ್ತ್ರಗಳೇ ನಡೆಯುವುದಿಲ್ಲ.ಹಿಂದೆ ವೈದಿಕ ಪುರೋಹಿತರಿಲ್ಲದೆ ಸರಳ ಮದುವೆಗಳು ನಡೆಯುತ್ತಿದ್ದವು.ಇಂದಿನ ಕಾಂಕ್ರೀಟ್ ಮನೆಗಳ ಯುಗದ ಈಗಲೂ ಹಸೆಗೋಡೆ ಚಿತ್ತಾರ ಬರೆಯುವ ಸಂಪ್ರದಾಯ ಕಡ್ಡಾಯವಾಗಿ ಪಾಲಿಸಲಾಗುತ್ತಿದೆ. ಹಸೆಗೋಡೆ ಚಿತ್ತಾರ ಪ್ರಧಾನವಾಸರಳ ರೇಖೆ, ಓರೆ ರೇಖೆ,ತ್ರಿಭುಜ ಮತ್ತಿತರ ಜ್ಯಾಮಿತಿಯ ಅಂಶಗಳ ಸಂಯೋಜನೆಯಷ್ಟೇ ಆಗಿರದೆ ನಿಸರ್ಗದೊಂದಿಗೆ ಬದುಕುವ ನೆಲಮೂಲದ ಬುಡಕಟ್ಟು ಜನಸಂಸ್ಕೃತಿಯ ಪ್ರತಿಬಿಂಬವೂ ,ರೂಢಿ ನಂಬಿಕೆಗಳು ಸಹ ಹಸೆಚಿತ್ತಾರದಲ್ಲಿದೆ.

ಕರ್ನಾಟಕದ ದೇಶೀ ಚಿತ್ರಕಲೆ ಹಸೆ ಚಿತ್ತಾರ ರವಿರಾಜ್ ಸಾಗರ್

ಫಲವಂತಿಕೆಯ ಆಚರಣೆಗಳು ಮತ್ತು ಹಸೆ ಚಿತ್ತಾರ

ಬಹುತೇಕ ಬುಡಕಟ್ಟು ಜನಸಂಸ್ಕೃತಿಯಲ್ಲಿ ಫಲವಂತಿಕೆಯ ಆಚರಣೆಗಳು ವೈವಿಧ್ಯತೆಯಿಂದ ಕಂಡುಬರುತ್ತದೆ. ಬುಡಕಟ್ಟು ಜನಜೀವನ ಪರಂಪರೆ ಹೊಂದಿರುವ ದೀವರು ಸಹ ಮದುವೆ ಆಚರಣೆಗಳಲ್ಲಿ ಫಲವಂತಿಕೆಯ ನಂಬುಗೆಗಳ ಇವೆ.ಮದುವೆಯ ಸಮಯದಲ್ಲಿ ವಧುವರರನ್ನು ಕೋರೂಟಕ್ಕೆ ಕರೆಸುವ ಮೂಲಕ ಊರಿನ ಸಮುದಾಯದ ಆಶೀರ್ವಾದ ಪಡೆಯುತ್ತಾರೆ. ಮದುವೆ ಆಗುವವರೆಗೂ ಗಂಡು ಹೆಣ್ಣನ್ನು ಪರಸ್ಪರ ನೋಡುವ ಹಾಗಿರದ ಅಂದಿನ ದಿನಗಳಲ್ಲಿ ಮದುವೆಗೆ ಮಾನಸಿಕವಾಗಿ ತಾಯಾರಾಗಲು ಹಸೆಗೋಡೆ ಚಿತ್ತಾರಕ್ಕೆ ಎಳೆ ಹೊಡೆಸುವ ಮೂಲಕ ಮುದುವೆ ಕಾರ್ಯಕ್ಕೆ ಚಾಲನೆ ನೀಡುತ್ತಿದ್ದರು.

ಹಸೆಗೋಡೆ ಚಿತ್ತಾರದಲ್ಲಿ ವಿಶೇಷವಾಗಿ ಮಾದ್ನಕೈ ಬಿಡಿಸುವುದು ವಾಡಿಕೆ.ಗಂಡು ಹೆಣ್ಣುಗಳ ಮಾನಸಿಕ ಮಿಲನದ ಸಂಕೇತದಂತೆ ನಿಲಿಕೊಬ್ಬು, ಬೊಂಬೆ ಸಾಲುಗಳನ್ನು,ಕೌಳಿಮಟ್ಟಿ ಗೂಡಿನ ಹಕ್ಕಿ,ಪೀಟಿ, ಕೋಳಿಗಳನ್ನು ಫಲವಂತಿಕೆಯ ಆರ್ಥ ಸಂಕೇತದಂತೆ ಹಸೆಚಿತ್ತಾರದಲ್ಲಿ ಚಿತ್ರಿಸುವುದು ಕಂಡುಬರುತ್ತದೆ. ಏಣಿ ,ಬಾಚಣಿಗೆ ಮತ್ತಿತರ ಸ್ತ್ರೀ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿ ಚಿತ್ತಾರಗಳನ್ನು ಬರೆಯುವ ರೂಡಿಯೂ ಇದೆ.ಹಲವು ಚೌಕಗಳ ಸರಣಿಗಳನ್ನು ಎರಡು ಮೂರು ಸಾಲುಗಳಂತೆ ,ವಂಶವಾಹಿನಿಗಳಂತೆ ಚಿತ್ರಿಸುವಿಕೆಯ ಅಂಡಿಕೆ ಸಾಲು ಬರೆವ ಪದ್ದತಿ ಸಹ ಇದೆ.ಶಿವ ಪಾರ್ವತಯನ್ನು ಚಿತ್ತಾರದ ಮಧ್ಯಭಾಗದಲ್ಲಿ ಫಲ್ಲಕ್ಕಿಯಲ್ಲಿ ಚಿತ್ರಿಸಿ ಆರಾಧಿಸುವಿಕೆ ,ಹಸೆಗೋಡೆ ಸನ್ನಿದಿಯನ್ನು ದೇವರ ಕೋಣೆಗೆ ನೀಡಿದಷ್ಟೇ ಫವಿತ್ರ ಜಾಗವೆಂಬ ನಂಬಿಕೆಯೊಂದಿಗೆ ಪೂಜಿಸುವ ಸಂಪ್ರದಾಯ ಈಗಲೂ ಕಾಣಬಹುದು.

ಭೂತಾಯಿ ಸೀಮಂತ ಮಾಡುವ ಭೂಮಣ್ಣಿ ಹಬ್ಬದಲ್ಲಿ ಬರೆಯುವ ಭೂಮಿಬುಟ್ಟಿ ಚಿತ್ತಾರ ,ಆಚರಣೆಗಳು ಸಹ ಫಲವಂತಿಕೆಯ ಆಚರಣೆಯ

ಸಂಕೇತವೇ ಆಗಿದೆ.ಮದುವೆಗೆ ಬರೆಯುವ ಚಕ್ಕಳಮುಕ್ಕಳಿ ಚಿನ್ನಾಣಿ ಚಿತ್ತಾರ ,ಆರತಿಚಿತ್ತಾರಗಳು ಫಲವಂತಿಕೆಯ ಆಚರಣೆಗಳ ಸಂಪ್ರದಾಯಿಕತೆಯೇ ಆಗಿದೆ.

ಮದುವೆ ಶಾಸ್ತ್ರಕ್ಕಾಗಿ ಹಾಡುವ ಒಂದು ಹಾಡಿನಲ್ಲಿನ ಕೆಲವು ಸಾಲುಗಳನ್ನು ಗಮನಿಸಿದಾಗ ದೀವರ ಚಿತ್ತಾರಗಿತ್ತಿಯರಿಗೆ ತಮ್ಮ ಹಸೆಗೋಡೆಚಿತ್ತಾರದ ಮೇಲೆ ಇರುವ ಅಭಿಮಾನ ಮತ್ತು ಅವರ ಹಸೆಚಿತ್ತಾರ ಪರಂಪರೆ ಬಗ್ಗೆ ಗುರುತಿಸಬಹುದು.

ಎಳೆಯಾ ಹೊಡೆದೀನಿ

ನೋಡುಬಾರೆ ಮದ್ನಿಗಿತ್ತೀ

ನಾ ನಾಕೂರೆ ಮೆಚ್ಚಿದಾ /ದೀವರ ಚಿತ್ತಾರಗಿತ್ತೀ/

ಗಂಡನ ಹೆಸರೇಳೆ ಸುವ್ವೀ ಸುವ್ವೀ //

ನಡುಮನೆಯಾ ಮೂಡಣ ಗ್ವಾಡ್ಯಾಗೇ

ಶಿವಪಾರ್ವತಿ ಮೂಡ್ಯಾರೆ

ಮದುವೆ ಹಬ್ಬದ ಸಡಗರ ನೋಡಿ /ಹರಸಿದರೆ/

ಗಂಡನ ಹೆಸರೇಳೆ ಸುವ್ವೀ ಸುವ್ವೀ //

ಅರಸನಾ ಮನೆಯ ಬಣ್ಣದ ಚಿತ್ತಾರಕ್ಕಿಂತ

ನಮ್ಮೂರ ಕೇರೀ ಹಸೆಗೋಡೆ ಚೆಂದಾ

ಸೂರ್ಯಚಂದ್ರರೂ ಬಂದೂ /ಹರಸಿದರೆ/


ಹಸನಾಗಲಿ ಬಾಳು ಗಂಡನಾ ಹೆಸರೇಳೆ ಸುವ್ವೀ ಸುವ್ವೀ //

ಈ ಹಾಡಿನಲ್ಲಿ ಬರುವ " ಅರಸನ ಮನೆಯಾ ಬಣ್ಣದ ಚಿತ್ತಾರಕ್ಕಿಂತಾ ನಮ್ಮೂರ ಕೇರಿ ಹಸೆಗೋಡೆ ಚಿತ್ತಾರ ಚೆಂದಾ"ಎನ್ನುವ ಸಾಲಿನಲ್ಲಿ ಹಳ್ಳಿ ಚಿತ್ತಾರಗಿತ್ತಿಯರಿಗೆ ಹಸೆಚಿತ್ತಾರದ ಮೇಲಿರುವ ಅಭಿಮಾನ ವ್ಯಕ್ತವಾಗಿದೆ. ಪರಂಪರೆಯಿಂದ ದೀವರ ಹೆಣ್ಣುಮಕ್ಕಳು ಚಾಚೂ ತಪ್ಪದೆ ಹಸೆಚಿತ್ತಾರವನ್ನು ಹಲವು ಹಬ್ಬಗಳ ಆಚರಣೆಯ ಮೂಲಕಲೆಯಾಗಿ ಶಾಸ್ತ್ರಬದ್ದವಾಗಿ ಉಳಿಸಿಕೊಂಡು ಬಂದಿರುವುದು ಕೇವಲ ಸಂಪ್ರದಾಯಕಷ್ಟೇ ಅಲ್ಲದೆ ಅವರಿಗೆ ತಮ್ಮ ಹಸೆಚಿತ್ತಾರ ಪರಂಪರೆಯ ಮೇಲಿರುವ ಹೆಮ್ಮೆ, ಕಲಾಭಿರುಚಿ, ಸೌಂದರ್ಯಪ್ರಜ್ಞೆಯೂ ಸಹ ಕಾರಣವಾಗಿದೆ. ರಾಜರ ಮನೆಗಳ ಮದುವೆಗಿಂತ ಕಡಿಮೆಯಿಲ್ಲದಂತೆ ತಮ್ಮ ಮಕ್ಕಳ ಮದುವೆಯನ್ನೂ ಸಡಗರ ಸಂಭ್ರಮದೊಂದಿಗೆ ,ಗೃಹ ಅಲಂಕಾರದೊಂದಿಗೆ ಶಾಸ್ತ್ರೋಕ್ತವಾಗಿ ಶಿವ ಪಾರ್ವತಿಯರ ಆಶೀರ್ವಾದದೊಂದಿಗೆ ಮದುವೆ ಮಾಡುವ ಆಶಯವಿರುವುದು ಗಮನಿಸಬಹುದು.


ಸಂಪ್ರದಾಯಿಕ ಹಸೆ ಚಿತ್ತಾರದಲ್ಲಿ ಮುಖ್ಯವಾಗಿ ಕಂಡುಬರುವ ಮೂಲಭೂತ ಅಂಶಗಳ ಬಿಡಿ ಚಿತ್ರಗಳು




ಎಳೆ




ನಿಲಿ



ನಿಲಿಕೊಚ್ಚು




ಬಾಸಿಂಗ ನಿಲಿ




ಜೆಲ್ಲೆ ಸಾಲು



ಚೆಂಡು ಹೂ ಸಾಲು



ಪಪ್ಪುಳಿ




ಅರೆ ಪಪ್ಪುಳಿ



ಪೀಟಿ



ಮಾದ್ನ ಕೈ



ಮುಂಡಿಗೆ



ಸೂರ್ಯ– ಚಂದ್ರ

ದಂಡಿಗೆ

ಶಿವ ಪಾರ್ವತಿ ,ಓಲಘದವರು

– ದಂಡಿಗೆ ಹೊತ್ತವರು



ಮಾವಿನ ಎಲೆ,ಕುಂಭ

ಕುಂಭಸಾಲು




ಗರಗಸ ಸಾಲು



ಮೊಗ್ಗೆ ಸಾಲು

ಗೊಂಬೆ ಸಾಲು





ಬುಟ್ಟಿ ಚಿತ್ತಾರಗಳು

ಹಸೆಚಿತ್ತಾರದಲ್ಲಿ ಬುಟ್ಟಿಚಿತ್ತಾರಗಳು ಅತಿವಿಶಿಷ್ಟ ಸ್ವರೂಪದ್ದಾಗಿದೆ.ಆಚರಣೆಯ ಮೂಲದ ಕಲೆಯಾದ ಬುಟ್ಟಿಚಿತ್ತಾರ ಕೌಶಲ ಅತಿಮಹತ್ವದ ಕರಕುಶಲ ಕಲೆಯಾಗಿದೆ. ರಾಜ್ಯದಲ್ಲಿ ಬಿದಿರಿನಿಂದ ಬುಟ್ಟಿಹೆಣೆಯುವಿಕೆ ಎಲ್ಲಕಡೆ ಕಂಡುಬರುತ್ತದೆ. ಹಬ್ಬಗಳಿಗೆ ಬುಟ್ಟಿಗಳನ್ನು ಗೋಮಯದಿಂದ ಸಾರಿಸುವುದು, ಕೆಮ್ಮಣ್ಣು ಬಳಿಯುವುದು ಹಲವೆಡೆ ಹಿಂದಿನಂದ ಕಂಡುಬರುತ್ತದೆ. ಕೆಲವೆಡೆ ಹಬ್ಬಗಳಿಗೆ ಬೊಟ್ಟುಗಳನ್ನು ಇಡುವಿಕೆ ಇದೆ. ಆದರೆ ಬುಟ್ಟಿಗಳಿಗೆ ವೈವಿಧ್ಯಮಯ ವಿನ್ಯಾಸದ ಚಿತ್ತಾರ ಬರೆಯುವಿಕೆ ಕಂಡುಬರುವುದನ್ನು ಮಲೆನಾಡಿನಲ್ಲಿ ಈಗಲೂ ಕಾಣಬಹುದು.



ಮಲೆನಾಡಿನಲ್ಲಿ ಭೂಮಿಹುಣ್ಣಿಮೆ ಆಚರಣೆ ರೈತಾಪಿ ಸಮುದಾಯಗಳಲ್ಲಿ ಅತಿ ವಿಶಿಷ್ಟವಾದದ್ದಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಎಳ್ಳಮವಾಸೆಗೆ ಭೂಮಿಗೆ ಚರಗ ಚೆಲ್ಲುವ ಪದ್ಧತಿಯಿದೆ. ಮಲೆನಾಡಿನಲ್ಲಿ ಭೂಮಿಹುಣ್ಣಿಮೆಗೆ ಫಲಹೊತ್ತ ಭೂಮಿತಾಯಿಗೆ ಸೀಮಂತ ಆಚರಣೆ ,ಚರಗ ಚೆಲ್ಲುವ ಫಲವಂತಿಕೆಯ ನಂಬಿಕೆಗಳ ನಿಸರ್ಗ ಆರಾಧನಾ ಪದ್ದತಿ ಆಶ್ವಯುಜ ಮಾಸದ ಭೂಮಿಹುಣ್ಣಿಮೆಯಂದು (ಸೀಗೆಹುಣ್ಣಿಮೆ) ಕಂಡುಬರುತ್ತದೆ. ಮಲೆನಾಡಿನಲ್ಲಿ ಹಲವು ಸಮುದಾಯಗಳು ವೈವಿಧ್ಯಮಯ ಆಚರಣೆ ವಿಧಿ ವಿಧಾನಗಳಲ್ಲಿ ಭೂಮಿ ಹುಣ್ಣಿಮೆ ಆಚರಿಸುತ್ತಾರೆ.ಶಿವಮೊಗ್ಗದ ದೀವರು ಜನಾಂಗದವರು ಆಚರಿಸುವ ಹಬ್ಬಗಳಲ್ಲಿ ಭೂಮಿಹುಣ್ಣಿಮೆ ಹಬ್ಬ ತುಂಬಾ ವಿಭಿನ್ನವಾದುದು.

ಮತ್ತು ವೈಶಿಷ್ಟಪೂರ್ಣವಾದುದು. ಏಕೆಂದರೆ ಅವರು ಚರಗ ಚೆಲ್ಲಲು ಬರೆಯುವ ಭೂಮಣ್ಣಿ ಬುಟ್ಟಿ ಚಿತ್ತಾರಗಳು ಆಕರ್ಷಕವೂ ವಿಶಿಷ್ಟವೂ ಆಗಿದೆ.ಹೆಚ್ಚಾಗಿ ಶಿವೊಗ್ಗದ ದೀವರು ಸಮುದಾಯ ಹಾಗು ಶಿವಮೊಗ್ಗದ ಸೊರಬ ಭಾಗದ ಕರೆಒಕ್ಕಲಿಗರು, ಅಲ್ಲಲ್ಲಿ ಮಡಿವಾಳರು ಸಹ ಚರಗ ಚೆಲ್ಲಲು ಬುಟ್ಟಿ ಚಿತ್ತಾರ ಬರೆಯುವ ರೂಡಿ ಇದೆ. ಇತರೆ ಸಮುದಾಯಗಳಲ್ಲಿ ಬುಟ್ಟಿಗಳಿಗೆ ಕೆಮ್ಮಣ್ಣು ಬಳಿದು ಬೊಟ್ಟುಗಳನ್ನು ಇಡುತ್ತಾರೆ.

ಮಹಾನವಮಿಯ ನಂತರ ಆರೇಳು ದಿವಸಕ್ಕೆ ಬರುವ ಹುಣ್ಣಿಮೆಯೇ ಭೂಮಿಹುಣ್ಣಿಮೆ. ಈ ದಿವಸ ಭೂಮಿ ಹುಣ್ಣಿಮೆಯನ್ನು ಆಚರಿಸುತ್ತಾರೆ. ಇದಕ್ಕೆ ಬಯಕೆ ಹಬ್ಬವೆಂದೂ ಕರೆಯುತ್ತಾರೆ. ಗರ್ಭಿಣಿಯರಾದ ಹೆಣ್ಣುಮಕ್ಕಳಿಗೆ ಸೀಮಂತ ಕಾರ್ಯವನ್ನು ಮಾಡುವಂತೆ ಗರ್ಭಧರಿಸಿ (ಹೊಡೆ) ನಿಂತ ಭತ್ತದ ಸಸಿಗಳಿಗೆ ಸೀಮಂತ ಮಾಡುತ್ತಾರೆ. ಭೂಮಿಯು ಸಹ 'ಮಾತೃ ದೇವತೆ' ಎಂಬ ದಾರ್ಶನಿಕ ಕಲ್ಪನೆ ಇವರದು. ಈ ಹಬ್ಬದಲ್ಲಿ ಬಿದಿರಿನಿಂದ ತಯಾರಿಸಿದ ಎರಡು ಬುಟ್ಟಿಗಳಿರುತ್ತವೆ. ಒಂದನೆಂಯುದು ಭೂಮಣ್ಣಿಬುಟ್ಟಿ, ಎರಡನೆಯದು ಹಚ್ಚಂಬಲಿ ಬುಟ್ಟಿ. (ಹಸಿರು ಸೊಪ್ಪುಗಳಿಂದ ತಯಾರಿಸಿದ ಅಂಬಲಿ ತುಂಬಿದ ಬುಟ್ಟಿ) ಈ ಬುಟ್ಟಿಗಳಿಗೆ ಬರೆಯುವ ಚಿತ್ತಾರವನ್ನು ಭೂಮಣ್ಣಿ ಬುಟ್ಟಿ ಚಿತ್ತಾರ ಎಂದು ಕರೆಯುವರು. ಅಲ್ಲದೇ ಮನೆಯಲ್ಲಿ ಅಕ್ಕಿ ಕೇರುವ ಬಿದಿರಿನಿಂದ ಮಾಡಿದ ಮರಗಳಿಗೆ ,ಅಕ್ಕಿ ಗೂಡುಗಳಿಗೆ ,ಫಳತ್ತಕ್ಕೆ ಮತ್ತಿತರ ಬುಟ್ಟಿಗಳಿಗೆ ಬಿಡುವಿನ ವೇಳೆ ಚಿತ್ತಾರ ಬರೆಯುವ ರೂಢಿಯಿದೆ.



ದೀವರ ಸಮುದಾಯದಲ್ಲಿನ ಭೂಮಿಹುಣ್ಣಿಮೆ ಹಬ್ಬ ಮತ್ತು ಭೂಮಣ್ಣಿ ಬುಟ್ಟಿ ಚಿತ್ತಾರ

ನೆಲಮೂಲದ ನಿಸರ್ಗ ಆರಾಧನೆಯ ಪರಂಪರೆಯ ಭಾಗವಾಗಿ ಗಮನಸೆಳೆಯುವ ಈ ವಿಶಿಷ್ಟ ಹಬ್ಬಕ್ಕೆ ಸಂಪೂರ್ಣ ನೈಸರ್ಗಕ ಬಿದಿರಿನ ಬುಟ್ಟಿ, ನೈಸರ್ಗಿಕ ಬಣ್ಣಗಳನ್ನೇ ಇಂದಿಗೂ ಬಳಸುತ್ತಾರೆ. ನಾಲ್ಕು ಮೂಲೆಗಳ ಒಂದು ದೊಡ್ಡಬುಟ್ಟಿಯನ್ನು, ದುಂಡನೆ ಆಕಾರದ ಸಣ್ಣಬುಟ್ಟಿಯನ್ನು ಜೋಡಿಯಾಗಿ ಆಯ್ಕೆಮಾಡಿಕೊಳ್ಳಲಾಗುತ್ತದೆ.ಸಾಮಾನ್ಯವಾಗಿ ಭೂಮಣ್ಣಿ ಬುಟ್ಟಿ ದೊಡ್ಡದಾಗಿರುತ್ತದೆ. ಇದು ಒಂದು ಅಡಿ, ಎತ್ತರ ನಾಲ್ಕು ಅಡಿ ಸುತ್ತಳತೆ ಇರುತ್ತದೆ. ಚಿಕ್ಕ ಬುಟ್ಟಿ ಎಂಟು ಇಂಚು, ಎತ್ತರ ಎರಡು ಅಡಿ, ಎಂಟು ಇಂಚು ಸುತ್ತಳತೆ ಇರುತ್ತದೆ.ಭೂಮಿಹುಣ್ಣಿಮೆ ಹಬ್ಬಕ್ಕೆಂದೇ ಜೋಡಿ ಭೂಮಣ್ಣಿ ಬುಟ್ಟಿಗಳಿಗೆ ಮಹಾನವಮಿ ದಿನದಂದು ಗೋಮಯವನ್ನು ಬಳಿದು ಅದರ ಮೇಲೆ ಕೆಮ್ಮಣ್ಣು ಬಳಿದು ಆರಿಸಿ ಸಿದ್ದಮಾಡಿಟ್ಟುಕೊಂಡು ಆ ಬುಟ್ಟಿಗಳಿಗೆ ಅಂದು ಪೂಜಿಸುತ್ತಾರೆ. ಮಹಾನವಮಿ ಮುಗಿದು ಏಳು ದಿನಗಳ ನಂತರ ಭೂಮಣ್ಣಿ ಹಬ್ಬ ಬರುತ್ತದೆಯಾದ್ದರಿಂದ ಹಂತ ಹಂತವಾಗಿ ಚಿತ್ರ ಬಿಡಿಸಲು ಸಿದ್ದತೆ ನಡೆಸುತ್ತಾರೆ.

ಚಿತ್ತಾರ ಬಿಡಿಸಲು ಬೇಕಾದ ಕುಂಚವನ್ನು ಪುಂಡಿನಾರಿನಿಂದ ತಾವೇ ತಾಯಾರಿಸಿ, ಬಿಳುಪಿರುವ ಉತ್ತಮ ಅಕ್ಕಿಯನ್ನು ನೆನೆಸಿ ಸಣ್ಣಗೆ ತಿರಿಸಿ ಬಿಳಿ ಬಣ್ಣವನ್ನು ತಯಾರಿಸಿಕೊಂಡು ಹಾಗು ಕಾಡು ಅರಿಷಿಣ ಅಥವಾ ಗುರಿಗೆ ಎಳ್ಳಿನಿಂದ ಹಳದಿ ಬಣ್ಣವನ್ನೂ ತಾವೇ ತಾಯಾರಿಸಿಕೊಂಡೇ ಈ ಚಿತ್ತಾರವನ್ನೂ ಇಂದಿಗೂ ಕಡ್ಡಾಯವಾಗಿ ಎಲ್ಲ ದೀವರು ಸಮುದಾಯದ ರೈತ ಮಹಿಳೆಯರು ಮನೆಯಲ್ಲಿ ಬಿಡಿಸುತ್ತಾರೆ.ಈ ಚಿತ್ತಾರವನ್ನು ಬಿಡಿಸಲು ಇಂದಿನ ಯಾವ ಆಧುನಿಕ ಬಣ್ಣವನ್ನೂ ಇತ್ತೀಚಿನವರೆಗೂ ಬಳಸುತ್ತಿರಲಿಲ್ಲ. ಈಗೀಗ ಬಿಡುವಿರದ ಬದುಕಿಗೆ ರೈತಾಪಿ ಜನಗಳು ಸಹ ಸಿಲುಕಿದ್ದು ಕೆಲವರು ಆಧುನಿಕ ಬಣ್ಣದಲ್ಲಿ ಚಿತ್ತಾರ ಬಿಡಿಸುವುದು ಕಂಡುಬರುತ್ತಿದೆ.

ಅತಿ ಮುಖ್ಯವಾಗಿ ಈ ಚಿತ್ತಾರದ ಬುಟ್ಟಿಗಳನ್ನು ಭೂಮಿಹುಣ್ಣಿಮೆಯಂದು ಬೆಳಗ್ಗೆ ಹೊಲಗಳಿಗೆ ಚರಗ ಚೆಲ್ಲಲು ಹಾಗು ಅಂದು ಹೊಲದಲ್ಲಿ ಕುಟುಂಬದ ಸದಸ್ಯರೆಲ್ಲರೂ ಸೇರಿ ಊಟ ಮಾಡಲು ಬೇಕಾದ ಬಗೆಬಗೆಯ ತಿನಿಸುಗಳೆಲ್ಲವನ್ನೂ ಆ ಬುಟ್ಟಿಯಲ್ಲಿ ತುಂಬಿಕೊಂಡು ಹೊತ್ತೊಯ್ಯಲು ಮಾತ್ರವೇ ಬಳಸುತ್ತಾರೆ. ಅಂದು ಹೊಲದಲ್ಲಿ ಕುಟುಂಬದ ಎಲ್ಲ ಸದಸ್ಯರು ಸೇರಿಕೊಂಡು ಹೊಲಕ್ಕೆ ಎಡೆ ನೀಡಿ ,ದೇವರ ಕಾಗೆಗಳನ್ನು ಕರೆದು ಅವಕ್ಕೂ ಒಂದು ಎಡೆ ನೀಡುವುದಲ್ಲದೆ ,ಹೊಲದ ಸುತ್ತಲಿನ ಇಲಿಗಳಿಗಾಗಿಯೂ ಒಂದು ಎಡೆಯನ್ನು ಹೊಲದ ಒಂದು ಬದಿಯಲ್ಲಿ ಇಟ್ಟು ನಂತರವೇ ಎಲ್ಲರೂ ಸಡಗರ ಸಂಭ್ರಮದಿಂದ ಹೊಲದ ಸಸಿಗಳಿಗೆ ಪೂಜೆ ಮಾಡಿ, ಭೂಮಿತಾಯಿಯ ಸೀಮಂತವೆಂದೇ ಸಂಭ್ರಮಿಸುತ್ತ ಸಸಿಗಳಿಗೆ ತಾಳಿ, ಇನ್ನಿತರೆ ಬಂಗಾರವನ್ನು ಹಾಕಿ ,ಮಾವಿನ ತೋರಣ ಕಟ್ಟಿ ಸಿಂಗರಿಸಿ ವಿಶೇಷವಾಗಿ ಆಚರಿಸುತ್ತಾರೆ. ಈ ಹಬ್ಬದ ಹೊರತು ಮತ್ತ್ಯಾವ ಕೆಲಸಕ್ಕೂ ಆ ಚಿತ್ತಾರದ ಬುಟ್ಟಿಯನ್ನು ಬಳಸದೆ ಮುಂದಿನ ಹಬ್ಬಕ್ಕೆ ಜೋಪಾನ ಮಾಡಿಡುತ್ತಾರೆ. ಮುಂದೆ ದೀಪಾವಳಿ ಹಬ್ಬದ ಶಾಸ್ತ್ರಕ್ಕೆ ಅದೇ ಬುಟ್ಟಿಯನ್ನು ಬಳಸಿ ಹಸುಗಳಿಗೆ ಕಟ್ಟುವ ಅಡಿಕೆಕಾಯಿ ಹಾರ, ಚಪ್ಪೆರೊಟ್ಟಿ ಹಾರ ಹಾಕಿ ಪೂಜೆಗೆ ಇಡಲು ಇದೇ ಚಿತ್ತಾರದ ಬುಟ್ಟಿಯನ್ನು ಬಳಸುವ ವಾಡಿಕೆ ಇದೆ.

. ಬುಟ್ಟಿ ಚಿತ್ತಾರವನ್ನು ಬರೆಯುವ ಕಲಾವಿದೆಯರು ಎರಡು ರೀತಿಯಲ್ಲಿ ಚಿತ್ರ ಬರೆಯುತ್ತಾರೆ. ಸುತ್ತೆಳೆ ಚಿತ್ತಾರ ಮತ್ತು ಮೂಲೆ ಎಳೆ ಚಿತಾರ. ಸುತ್ತೆಳೆ ಚಿತ್ತಾರದಲ್ಲಿ ಹನ್ನೆರಡು ಎಳೆಗಳಿರುತ್ತವೆ. ಮೂಲೆ ಎಳೆ ಚಿತ್ತಾರದಲ್ಲಿ ಎಂಟು ಎಳೆಗಳಿರುತ್ತವೆ. ದೊಡ್ಡ ಬುಟ್ಟಿಯಲ್ಲಿ ಮಧ್ಯೆ ಎಂಟು ಮನೆಗಳಿರುತ್ತವೆ. ಸಣ್ಣ ಬುಟ್ಟಿಯಲ್ಲಿ ನಾಲ್ಕು ಮನೆಗಳು ಮಾತ್ರ ಇರುತ್ತವೆ. ಬುಟ್ಟಿಯ ಮೇಲೆ ಬರೆಯುವ ಚಿತ್ರಗಳನ್ನು ಎರಡು ಭಾಗವಾಗಿ ಮಾಡಿಕೊಳ್ಳಬಹುದು. ಕೃಷಿ ಚಟುವಟಿಕೆಗೆ ಸಂಬಂಧಿಸಿದ ಚಿತ್ರಗಳು ಮತ್ತು ಬಯಕೆ ಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು. ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಚಿತ್ರಗಳಲ್ಲಿ ಗೊಣಬೆ, ಕರಬಾನದ ಗಡಿಗೆ, ಭತ್ತದ ಸಸಿ, ಏಣಿ, ಗಾಡಿ, ಎತ್ತು,

ಕಣಕಪ್ಪಿನ ಹೂವು ಇತ್ಯಾದಿ ಚಿತ್ರಗಳು. ಬಯಕೆಗೆ ಸಂಬಂಧಿಸಿದ ಚಿತ್ರಗಳಲ್ಲಿ ಕೌಳಿಮಟ್ಟಿ, ಸೀತೆ ಮುಡಿ, ಜೋಗಿ ಜಡೆ, ರಂಜಲ ಹೂವಿನದಂಡೆ ಇತ್ಯಾದಿ ಚಿತ್ರಗಳು. ಎಳೆಗಳ ಮಧ್ಯೆ ಜೋಡೆಳೆನಿಲಿ, ಬಾಸಿಂಗದ ನಿಲಿ ಬರೆದು ಎಳೆಗಳು ಸೇರುವ ಮೂಲೆಗಳಲ್ಲಿ ಪಕ್ಷಿ ಬರೆಯುತ್ತಾರೆ. ದೊಡ್ಡ ಬುಟ್ಟಿಯಲ್ಲಿ ಕರಬಾನದ ಗಡಿಗೆ, ಕೌಳಿಮಟ್ಟಿ, ಸೀತೆಮುಡಿ, ಜೋಗಿಜಡೆ ಮತ್ತು ಬುಟ್ಟಿ ಹೊತ್ತ ಮನುಷ್ಯ ಚಿತ್ರಗಳಿರುತ್ತವೆ. ಹಚ್ಚಂಬಲಿ ಬುಟ್ಟಿಯಲ್ಲೂ ಬರೆಯುತ್ತಾರೆ. ಹುಣ್ಣಿಮೆ ಹಿಂದಿನ ರಾತ್ರಿ ಹಬ್ಬ 'ಅಡುವ' ಕೆಲಸ ಪ್ರಾರಂಭಿಸುತ್ತಾರೆ. ಸ್ನಾನ ಮಾಡಿ ಅಡುಗೆಮನೆ ಮತ್ತು ಅಡುಗೆ ಒಲೆ ಇಡಕಲುಗಳನ್ನು ಸಗಣಿಯಿಂದ ಸಾರಿಸಿ ಸ್ವಚ್ಛ ಮಾಡುತ್ತಾರೆ. ರಾತ್ರಿ ವೇಳೆಗೆ ಅಡುಗೆ ಮಾಡಲು ಪ್ರಾರಂಭಿಸುತ್ತಾರೆ. ಮೊಟ್ಟ ಮೊದಲು ಅಮಟೆಕಾಯಿ, ಹುಳಿಕಂಚಿಕಾಯಿ, ಸಿಹಿಕಂಚಿಕಾಯಿ ,ಹುಣಸೆ ಕಾಯಿ, ಜೊತೆಗೆ ಎಲ್ಲಾ ರೀತಿಯ ಧಾನ್ಯ, ಹಸಿರು ತರಕಾರಿ ಸೇರಿಸಿ ಉಪ್ಪು ಹಾಕದೆ ಚರಗ ತಾಯಾರಿಸುತ್ತಾರೆ. ನಂತರ ಅಡುಗೆ ತಾಯಾರಿಸುತ್ತಾರೆ.ಚಿತ್ರಾನ್ನ, ಮೊಸರನ್ನ, ಸೌತೆಕಾಯಿಂದ ಸಿಹಿಕಡಬು, ಸಪ್ಪೆಕಡಬು, ಅತಿರಸದ ಕಜ್ಜಾಯ, ಹೋಳಿಗೆ, ಕರ್ಜಿಕಾಯಿ, ವಡೆ, ಕುಚ್ಚುಂಡೆ, ಬಾಳೆಹಣ್ಣಿನ ಕಜ್ಜಾಯ, ಪಾಯಸ, ಕೆಸವಿನ ಚೇಪಿನ ಪಲ್ಯ, ಹೀರೆಕಾಯಿ ಹುಳಿ ಮುಂತಾದ ಪದಾರ್ಥಗಳನ್ನು ಬೆಳತನಕ ತಯಾರು ಮಾಡುತ್ತಾರೆ. ಅಷ್ಟರಲ್ಲಿ ಬೆಳಗಾಗುತ್ತದೆ. ಹಚ್ಚಂಬಲಿ ಬುಟ್ಟಿ ಚರಗ ತುಂಬಿಕೊಂಡು ಇಡಕಲು ಕೆಳಗೆ ಇಟ್ಟು ಪೂಜೆ ಮಾಡಿ ಸೂರ್ಯೋದಯದೊಳಗೆ ಹಚ್ಚಂಬಲಿ ಬುಟ್ಟಿ ಹೊತ್ತುಕೊಂಡು ತಮ್ಮ ಜಮೀನುಗಳಿಗೆ ಹೋಗಿ

" ಹಚ್ಚಂಬಲಿ ಹರಿಬೆಸೊಪ್ಪು

ಹಿತ್ಲಾಗೆ ಇರೊ, ಹೀರೆಕಾಯಿ

ಹೋಯ್.. ಹೋಯ್.. ಹೋಯ್.. " ಎಂದು ಕೂಗುತ್ತಾ

ಗದ್ದೆಗಳಿಗೆ ಚರಗ ಎರಚುತ್ತಾ ಹೋಗುತ್ತಾರೆ. ತಮಗೆ ಸೇರಿದ ಎಲ್ಲಾ ಗದ್ದೆಗಳಿಗೆ ಹಚ್ಚಂಬಲಿ ಎರಚಿ ಮನೆಗೆ ಹೋಗುತ್ತಾರೆ. ಸುಮಾರು 10 ಗಂಟೆಗೆ ಮನೆಯವರೆಲ್ಲರೂ ಸ್ನಾನ ಮಾಡಿ ಶುಚಿಯಾದ ಬಟ್ಟೆಯನ್ನು ಧರಿಸಿಕೊಂಡು ಮನೆಯ ಹಿರಿಯ ಮಹಿಳೆ ರಾತ್ರಿಯೆಲ್ಲಾ ತಯಾರು ಮಾಡಿದ ತಿಂಡಿ ಪದಾರ್ಥಗಳನ್ನು ದೊಡ್ಡ ಬುಟ್ಟಿಗೆ ತುಂಬಿ ಇಡಕಲು ಕೆಳಗೆ ಇಟ್ಟು ಪೂಜೆ ಮಾಡಿ ಮನೆಯ ಯಜಮಾನ ಬುಟ್ಟಿಯನ್ನು ಹೊತ್ತುಕೊಂಡು ಗದ್ದೆಗೆ ಹೋಗುತ್ತಾರೆ. ಮನೆಯವರೆಲ್ಲರೂ ಹೊಲಕ್ಕೆ ಹೋಗುತ್ತಾರೆ. ಹೊಲದಲ್ಲಿ ಒಂದು ಒಳ್ಳೆಯ ಸ್ಥಳ ನೋಡಿ ಪೂಜೆಗೆ ತಯಾರು ಮಾಡಿರುತ್ತಾರೆ.

ಪೂಜೆ ಮಾಡುವ ಮತ್ತು ಭೂಮಣ್ಣಿ ಬುಟ್ಟಿ ಇಡುವ ಜಾಗಕ್ಕೆ ಸಗಣಿ ನೀರು (ಗೋಮಯ) ಪ್ರೋಕ್ಷಣೆ ಮಾಡುತ್ತಾರೆ. ಒಂದು ಮಟ್ಟವಾದ ಜಾಗದಲ್ಲಿ ಬುಟ್ಟಿ ಇಡುತ್ತಾರೆ. ಸಸಿಯ ಎರಡು ಕಡೆ ಲಕ್ಕಿ ಗೂಟಗಳನ್ನು ನೆಟ್ಟು ಸಸಿಯ ಬುಡವನ್ನು ಲಕ್ಕಿಗೂಟಕ್ಕೆ ಸೇರಿಸಿ ಕಟ್ಟಿರುತ್ತಾರೆ. ಚಿಕ್ಕದಾಗಿ ಮಾವಿನ ತೋರಣ ಮಾಡಿ ಮನೆಯ ಹಿರಿಯ ಮಹಿಳೆ ಹೂವು ಮತ್ತು ಬೆಂಡೋಲೆ, ತಾಳಿಸರ ಇಟ್ಟು ಶೃಂಗಾರ ಮಾಡುತ್ತಾಳೆ. ಬುಟ್ಟಿಯಲ್ಲಿರುವ ಎಲ್ಲಾ ಪದಾರ್ಥವನ್ನು ಸ್ವಲ್ಪ ಸ್ವಲ್ಪ ಹಾಕಿ ಸಸಿ ಎಡೆ, ಗುಳಿಎಡೆ, ಇಲಿಎಡೆ ಎಂಬುದಾಗಿ ಮೂರು ಎಡೆಯಿಟ್ಟು ಹಾಲು ಹಣ್ಣು ತುಪ್ಪ ಹಾಕಿ ಸಸಿಗೆ ನೈವೇದ್ಯವಿಟ್ಟು ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ. ನಂತರ ಮನೆಯ ಯಜಮಾನ ಗೂಳಿ ಎಡೆಯನ್ನು ಕೈಯಲ್ಲಿ ಹಿಡಿದುಕೊಂಡು ಹೋ ಹೋ ಎಂದು ಕಾಗೆಗಳನ್ನು ಕರೆಯುತ್ತಾ ಭತ್ತದ ಗದ್ದೆಯಲ್ಲಿ ಓಡಾಡುತ್ತಾನೆ. ಕಾಗೆ ಒಂದು ಎಡೆಯಲ್ಲಿರುವ ಯಾವುದಾದರೂ ತಿಂಡಿಯನ್ನು ಕಚ್ಚಿಕೊಂಡು ಹೋದರೆ ಗುಳಿ ಮುಟ್ಟಿತು ಎಂದು ಎಲ್ಲರೂ ಸಂತೋಳವಾಗಿ ಕೂತು ಊಟ ಮಾಡುತ್ತಾರೆ. ಇಲಿ ಎಡೆಯನ್ನು ಇಲಿಗಳ ಬಿಲಗಳಿರುವ ಕಡೆ ಇಟ್ಟು ಬರುತ್ತಾನೆ. ಸಸಿ ಎಡೆಯ ಒಂದು ಕಡಬನ್ನು ಗುಂಪಾಗಿರುವ ಸಸಿಗಳನ್ನು ಬುಡಸಹಿತ ಕಿತ್ತು ಬುಡದಲ್ಲಿ ಕಡಬನ್ನು ಇಟ್ಟು ಪುನಃ ಸಸಿಗಳನ್ನು ಅಲ್ಲಿಯೇ ಇಡುತ್ತಾರೆ. ಬೆಳೆ ಬೆಳೆದು ಕೊಯ್ಲು ಮಾಡುವಾಗ ಆ ಸಸಿಯ ಬುಡವನ್ನು ಕಿತ್ತು ಆ ಕಡಬನ್ನು ತೆಗೆಯುತ್ತಾರೆ. ಕಡುಬಿನಲ್ಲಿ ಹುಳು ಆಗಿದ್ದರೆ ಫಸಲು ಹುರಸಲು (ಹೆಚ್ಚು) ಆಗುತ್ತದೆ ಎಂಬ ನಂಬಿಕೆ.

ಕರ್ನಾಟಕದ ಬೇರೆ ಬೇರೆ ಸಮುದಾಯಗಳಲ್ಲಿ ಬುಟ್ಟಿಚಿತ್ತಾರಗಳು

ರಾಜ್ಯದ ಬೇರೆ ಬೇರೆ ಸಮುದಾಯಗಳಲ್ಲಿಯೂ ಬುಟ್ಟಿಯನ್ನು ಅಲಂಕರಿಸುವಿಕೆಯ ಸಂಪ್ರದಾಯಗಳಿವೆ.ಗೋಮಯ ಬಳಿಯುವಿಕೆ,ಕೆಮ್ಮಣ್ಣು ಸಾರಿಸುವಿಕೆ,ಜೇಡಿ/ಸೇಡಿ ಬಳಿಯುವಿಕೆ ಕಾಣಬಹುದು. ಕೆಲವು ಕಡೆ ಚರಗ ಚೆಲ್ಲಲು ಬುಟ್ಟಿಗಳಿಗೆ ಬಣ್ಣದ ಬೊಟ್ಟುಗಳನ್ನಿಡುವ ಸಂಪ್ರದಾಯಗಳಿವೆ. ಕರಾವಳಿ ತೀರದಲ್ಲಿ ,ಮಲೆನಾಡು ಪ್ರದೇಶದಲ್ಲಿ ಹೆಚ್ಚಾಗಿ ಈ ಸಂಪ್ರದಾಯಗಳು ಕಂಡುಬರುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿಯೂ ಬುಟ್ಟಿಗಳಿಗೆ ಬಣ್ಣ ಬಳಿಯುವ ರೂಢಿ ಇದೆ. ಆದರೆ ಶಿವಮೊಗ್ಗದ ಸಾಗರ,ಸೊರಬ,ತೀರ್ಥಹಳ್ಳಿ, ಹೊಸನಗರದಲ್ಲಿ ಮಾತ್ರ ಕಂಡುಬರುವ ದೀವರ ಸಮುದಾಯದ ಆಚರಣೆ ಮೂಲದ ಚಿತ್ತಾರದ ಬುಟ್ಟಿಗಳಲ್ಲಿನ ಭೂಮಣ್ಣಿ ಬುಟ್ಟಿ ಚಿತ್ತಾರ ವಿನ್ಯಾಸಗಳ ವೈವಿಧ್ಯತೆ ಬೇರೆಲ್ಲೂ ಕಂಡುಬರುವುದಿಲ್ಲ. ಶಿವಮೊಗ್ಗದಲ್ಲಿ ಕರೆಒಕ್ಕಲಿಗರು ,ಮಡಿವಾಳರು ಕೆಲವೆಡೆಯ ಕುಟುಂಬಗಳು ಬುಟ್ಟಿಚಿತ್ತಾರ ಬಿಡಿಸುವ ಸಂಪ್ರದಾಯ ರೂಢಿಸಿಕೊಂಡಿರುವುದು ಕಂಡುಬರುತ್ತದೆ.ದೀವರಲ್ಲಿ ಭೂಮಣ್ಣಿ ಬುಟ್ಟಿ ಚಿತ್ತಾರ ಬರೆಯುವುದು ಭೂಮಿಹುಣ್ಣಿಮೆ ಹಬ್ಬದ ಕಡ್ಡಾಯ ಸಂಪ್ರದಾಯವಾಗಿದೆ.

ಭೂಮಣ್ಣಿ ಬುಟ್ಟಿಗೆ ಬಳಸುವ ನೈಸರ್ಗಿಕ ಬಣ್ಣಗಳ ತಾಯಾರಿಕೆ

ಹಸೆ ಚಿತ್ರ ಕಲಾವಿದೆಯರು (ಚಿತ್ತಾರಗಿತ್ತಿಯರು) ಬುಟ್ಟಿ ಚಿತ್ರಗಳನ್ನು ಬರೆಯುವಾಗ ಮುಖ್ಯವಾಗಿ ನಾಲ್ಕು ಬಣ್ಣಗಳನ್ನು ಬಳಸುತ್ತಾರೆ. ಈ ಬಣ್ಣಗಳು ತಮ್ಮ ಪರಿಸರದಲ್ಲಿಯೇ ದೊರಕುವ ನೈಸರ್ಗಿಕ ವಸ್ತುಗಳಿಂದ ತಾಯಾರಿಸುವುದು ಸಂಪ್ರದಾಯವಾಗಿದೆ. ಮುಖ್ಯವಾಗಿ ಬಿಳಿ, ಕೆಂಪು, ಕಪ್ಪು ಮತ್ತು ಹಳದಿ ಬಣ್ಣಗಳನ್ನು ತಾಯಾರಿಸಿಕೊಂಡು ಭೂಮಣ್ಣಿ ಬುಟ್ಟಿ ಚಿತ್ತಾರ ಬರೆಯುವರು.

ಕೆಂಪುಬಣ್ಣ

ಕೆಂಪು ಬಣ್ಣ ಮತ್ತು ಬಿಳಿ ಬಣ್ಣದ ಜೇಡಿ ಮಣ್ಣು ನದಿಗಳ ಪಕ್ಕದಲ್ಲಿ ತೇವವಿರುವ ಕಡೆ ,ಬೆಟ್ಟದಲ್ಲಿ ಇರುತ್ತದೆ. ವರ್ಷಕ್ಕೊಮ್ಮೆ ಅದನ್ನು ತಂದು ಉಂಡೆ ಕಟ್ಟಿ ಒಣಗಿಸಿ ಬುಟ್ಟಿ ತುಂಬಿ ಇಟ್ಟುಕೊಳ್ಳುತ್ತಾರೆ.ಗುಡ್ಡಗಳ ಜಾಗಗಳಲ್ಲಿ ಕೆಲವು ಕಡೆ ಕೆಮ್ಮಣ್ಣು ಸಿಗುತ್ತದೆ. ಅದನ್ನು ತಂದು ಒಣಗಿಸಿ ಉಂಡೆಕಟ್ಟಿ ಬುಟ್ಟಿಯಲ್ಲಿ ಹಾಕಿ ಇಟ್ಟುಕೊಳ್ಳುತ್ತಾರೆ. ವರ್ಷಕ್ಕೊಮ್ಮೆ ಮನೆಗಳಲ್ಲಿ ಮದುವೆ, ಚೌಳ, ವಿಶೇಷವಾದ ಹಬ್ಬ, ದೀಪಾವಳಿ, ಗೌರಿಹಬ್ಬಗಳ ಸಂದರ್ಭದಲ್ಲಿ ಮನೆಯ ಗೋಡೆಗಳಿಗೆ ಜೇಡಿ ಕೆಮ್ಮಣ್ಣು ಬಳಿಯುತ್ತಾರೆ. ಅದಕ್ಕಾಗಿ ಕೆಮ್ಮಣ್ಣು ಮತ್ತು ಜೇಡಿ ಸದಾಕಾಲ ಸಂಗ್ರಹ ಮಾಡಿ ಇಟ್ಟುಕೊಂಡಿರುತ್ತಾರೆ. ಈ ಎರಡು ಬಣ್ಣದ ಮಣ್ಣನ್ನು ಚಿತ್ತಾರ ಬರೆಯಲು ಬಳಸುತ್ತಾರೆ. ಭೂಮಣ್ಣಿ ಬುಟ್ಟಿಗೆ ಕೆಮ್ಮಣ್ಣಿನಿಂದ ಕೆಂಪುಬಣ್ಣ ಬಳಿಯುವಿಕೆ ಪ್ರದಾನವಾಗಿ ಕಂಡುಬರುತ್ತದೆ. ಭೂಮಣ್ಣೀ ಬುಟ್ಟೀ ಚಿತ್ತಾರ ಬರೆಯುವ ಪರಂಪರೆಯನ್ನು ದೀವರ ಸಮುದಾಯದಲ್ಲಿ ಕಡ್ಡಾಯವಾಗಿ ಇಂದಿಗೂ ಪಾಲಿಸಲಾಗುತ್ತಿದೆ.ಬೇರೆ ಬೇರೆ ಬುಡಕಟ್ಟು ಜನಸಂಸ್ಕೃತಿಯ ಸಮುದಾಯಗಳಲ್ಲು ಅಲ್ಲಲ್ಲಿ ಕಂಡುಬರುತ್ತದೆ, ಆದರೆ ವಿನ್ಯಾಸಗಳು ತೀರಾ ಸರಳವಾಗಿವೆ. ಕೆಲವು ಕಡೆ ಬೊಟ್ಟುಗಳಿಗೆ ಸೀಮಿತವಾಗಿದೆ.

ಅಕ್ಕಿಯಿಂದ ಬಿಳಿ ಮತ್ತು ಕಪ್ಪು ಬಣ್ಣ

ಮಲೆನಾಡಿನಲ್ಲಿ ಮಾತ್ರ ಕಾಣಸಿಗುವ ದೀವರು ತಮ್ಮ ಜಮೀನುಗಳಲ್ಲಿ ಬೆಳೆಯುವ ಭತ್ತದ ತಳಿಗಳಾದ ನೆರೆಗುಳಿ ಹೊನಸು, ಸೋಮಸಾಲೆ, ತೊಗರಿ, ವಾಳ್ಯಾ ಇವುಗಳಲ್ಲಿ ಯಾವುದಾದರೂ ಒಂದು ತಳಿಯ ಭತ್ತದ ಅಕ್ಕಿಯನ್ನು ಚೆನ್ನಾಗಿ ತೊಳೆದು ಮೂರು ದಿವಸಗಳ ಕಾಲ ನೀರಿನಲ್ಲಿ ನೆನಸಿ ಮೂರು ದಿನಗಳ ನಂತರ ಅಕ್ಕಿಯನ್ನು ತೆಗೆದು ನುಣ್ಣಗೆ ಅರೆಯುತ್ತಾರೆ. ಅಕ್ಕಿಹಿಟ್ಟಿನ ಪೇಸ್ಟ್ ಮಾಡಿಕೊಳ್ಳುತ್ತಾರೆ, ಬ್ರೆಶ್ (ಕುಂಚ) ಮಾಡಿಕೊಳ್ಳುವುದು. ಪುಂಡಿ ಎಂಬ

ಜಾತಿಯ ಗಿಡದ ನಾರಿನಿಂದ ಕುಂಚ (ಬ್ರೆಶ್) ತಯಾರಿಸಿಕೊಂಡು ಕುಂಚದ ಹಿಂಭಾಗಕ್ಕೆ ಬೆರಳಿನಿಂದ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಭತ್ತದ ಹುಲ್ಲಿನ ಕೊಳವೆಯನ್ನು ಹಾಕಿ ಕೊಳವೆ ಸರಿದಾಡದಂತೆ ಹಿಂಭಾಗಕ್ಕೆ ಗಂಟು ಹಾಕುತ್ತಾರೆ. ಹಿಂದಿನಿಂದ ಇದೇ ರೀತಿಯ ನೈಸರ್ಗಿಕ ಕುಂಚಗಳಿಂದ ಚಿತ್ತಾರವನ್ನು ಬರೆಯುತ್ತಾರೆ. ಈಗ ಆಧುನಿಕ ಕುಂಚ ಬಳಕೆ ಅಲ್ಲಲ್ಲಿ ಕಂಡುಬರುತ್ತದೆ.

ಕಪ್ಪು ಬಣ್ಣ

ಪೂರ್ವಕಾಲದ ಭತ್ತದ ತಳಿಗಳಾದ ನೆರೆಗುಳಿ, ಕರೆಇಸಡಿ, ಹೊನಸು, ವಾಳ್ಯಾ ಇತ್ಯಾದಿ ಜಾತಿಯ ಯಾವುದಾದರೂ ಒಂದು ಭತ್ತದ ತಳಿಯ ಅಕ್ಕಿಯನ್ನು ಕಪ್ಪಾಗುವವರೆಗೆ ಹುರಿದು ನೀರು ಹಾಕಿ ನುಣ್ಣಗೆ ಅರೆಯಬೇಕು. ಹೆಚ್ಚು ಕಪ್ಪಾಗಲು ಮತ್ತು ನಯವಾಗಲು ಗುಡ್ಡೆಗೇರು ಕಾಯಿಗಳನ್ನು ಕುಯ್ದು ಅವುಗಳಿಂದ ಹಗಣ (ಗೇರುತುಪ್ಪ) ಹೊರಡಿಸಿ, ಹುರಿದ ಅಕ್ಕಿಗೆ ಸೇರಿಸಿ ಪುನಃ ಅರೆಯುತ್ತಾರೆ. ಇದು ಕಪ್ಪು ಬಣ್ಣವಾಗುತ್ತದೆ.ಪ್ರಾದೇಶಿಕವಾಗಿ ತಮ್ಮದೇ ಲಭ್ಯ ನೈಸರ್ಗಿಕ ಸಂಪನ್ಮೂಲ ಬಳಸಿ ಕಪ್ಪುಬಣ್ಣ ಸಿದ್ದಪಡಿಸಿಕೊಳ್ಳುವರು.

ಹಳದಿ ಬಣ್ಣ

ಮಲೆನಾಡಿನ ದಟ್ಟವಾದ ಕಾಡುಗಳಲ್ಲಿ "ಗುರಿಗೆ" ಎಂಬ ಜಾತಿಯ ಮರಗಳಿವೆ. ಇವು ತುಂಬಾ ಎತ್ತರವಾಗಿ ಬೆಳೆಯುತ್ತವೆ. ಗುರಿಗೆ ಮರಗಳಂತೆ ಮುರುಗ, ಉಪ್ಪಾಗೆ, ಗುರಿಗೆ ಇವುಗಳು ಒಂದೇ ಗುಂಪಿಗೆ ಸೇರಿದ ಸಸ್ಯಗಳಾದರೂ ಬೇರೆ ಬೇರೆಯಾಗಿರುತ್ತವೆ. ಸುಮಾರು 80–100 ಅಡಿ ಎತ್ತರ ಬೆಳೆಯುತ್ತವೆ. ಮರದ ತುಂಬಾ ಸಣ್ಣ ಸಣ್ಣ ಕೊಂಬೆಗಳು ಮರಗಳ ಕೆಳಗೆ ಜೋತಿರುತ್ತವೆ. ತುಂಬಾ ಅಪರೂಪದ ಸುಂದರವಾದ ಸಸ್ಯಗಳು. ಉಪ್ಪಾಗೆ ಮತ್ತು ಗುರಿಗೆ ಬೀಜಗಳಿಂದ ಎಣ್ಣೆ ತೆಗೆಯುತ್ತಾರೆ. ಉಪ್ಪಾಗೆ ಬೀಜಗಳಿಂದ ಎಣ್ಣೆ ತೆಗೆದಾಗ ಮಳೆಗಾಲ, ಚಳಿಗಾಲಗಳಲ್ಲಿ ತುಪ್ಪದ ಹಾಗೆ ಗಟ್ಟಿಯಾಗಿ, ಮರಳಿನ ಹಾಗೆ ಹರಳು ಹರಳಾಗಿ ಬಿಳಿಯಾಗಿರುತ್ತದೆ. ಗುರಿಗೆ ಬೀಜದಿಂದ ಎಣ್ಣೆ ತೆಗೆದಾಗ

ಗಟ್ಟಿಯಾಗಿ ಹಳದಿಯಾಗಿ ಮರಳಿನಂತೆ ಹರಳು ಹರಳಾಗಿರುತ್ತದೆ. ಈ ಸಸ್ಯಗಳು ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಹೂವು ಬಿಟ್ಟು ಕಾಯಾಗಿ ಜೂನ್–ಜುಲೈ ತಿಂಗಳುಗಳಲ್ಲಿ ಹಣ್ಣಾಗುತ್ತವೆ. ಹಣ್ಣು ಬಲಿತ ಮೇಲೆ ಅವಾಗಿಯೇ ನೆಲಕ್ಕೆ ಬೀಳುತ್ತವೆ. ಮಹಿಳೆಯರು ಬೆಳಿಗ್ಗೆ 6 ಗಂಟೆಗೆ ಕಾಡಿಗೆ ಹೋಗಿ ಬಿದ್ದ ಗುರಿಗೆ ಹಣ್ಣುಗಳನ್ನು ಬುಟ್ಟಿಯಲ್ಲಿ ಆರಿಸಿಕೊಂಡು ಬಂದು ಗುರಿಗೆ ಹಣ್ಣಿನ ಬೀಜಗಳನ್ನು ಸಂಗ್ರಹಿಸಿಕೊಂಡು ಎಣ್ಣೆ ತಯಾರಿಸುತ್ತಾರೆ. ಈ ಎಣ್ಣೆಯಿಂದ ಗೌರಿಹಬ್ಬಕ್ಕೆ ಬಂದ ಹೆಣ್ಣು ಮಕ್ಕಳಿಗೆ ಚಕ್ಕಲಿ, ಉದ್ದಿನವಡೆ, ಕಜ್ಜಾಯ (ಕಾಯ್ಗುರಿಗೆ), ಅತಿರಸದ ಕಜ್ಜಾಯ, ಕುಚ್ಚುಂಡೆ, ಕರ್ಜಿಕಾಯಿ ಮುಂತಾದ ಪದಾರ್ಥಗಳನ್ನು ತಯಾರಿಸುತ್ತಾರೆ.

ತುಂಬಾ ದಿವಸಗಳ ಕಾಲ ಗುರಿಗೆ ಎಣ್ಣೆಯಿಂದ ಮಾಡಿದ ತಿಂಡಿಗಳನ್ನು ಇಟ್ಟುಕೊಳ್ಳಬಹುದು. ಒಳ್ಳೆಣ್ಣೆ ಮತ್ತು ಇತರೆ ಎಣ್ಣೆಯಿಂದ ಈ ಪದಾರ್ಥಗಳನ್ನು ತಯಾರಿಸಿ ಬಹಳ ದಿವಸ ಇಟ್ಟುಕೊಳ್ಳಲು ಬರುವುದಿಲ್ಲ. ಕನುಗು ಬಂದು ಹಾಳಾಗುತ್ತವೆ. ಮಳೆಗಾಲದಲ್ಲಿ ಗುರಿಗೆ ಹಣ್ಣು ನೆಲಕ್ಕೆ ಬಿದ್ದವುಗಳನ್ನು ಆರಿಸಿಕೊಂಡು ಬಂದು ಒಡೆದು ಬೀಜ ತೆಗೆದು ನೀರಿನಲ್ಲಿ ತೊಳೆದು ಬಿಸಿಲು ಅಥವಾ ನೆರಳಲ್ಲಿ ಒಣಗಿಸಿ ನಂತರ ಒನಕೆಯಿಂದ ಒಳ್ಳಿಗೆ ಹಾಕಿಕೊಂಡು ಕುಟ್ಟುತ್ತಾರೆ. ಕೇರಿದಾಗ ಬರುವ ಹಳದಿ ಪುಡಿಯನ್ನು ಜರಡಿಯಲ್ಲಿ ಸಾಣಿಸಿ ಬರುವ ಪುಡಿಯನ್ನು ತೆಳುವಾದ ಬಟ್ಟೆಯಿಂದ ವಸ್ತ್ರಕಾಯ ಮಾಡಿ ಬರುವ ನಯವಾದ ಹಳದಿ ಪುಡಿಯನ್ನು ನೀರು ಸೇರಿಸಿ ಅಂಟಾಗುವವರೆಗೆ ಅರೆಯುತ್ತಾರೆ. ಈ ರೀತಿ ಹಳದಿ ಬಣ್ಣ ತಯಾರಿಸಿಕೊಳ್ಳುತ್ತಾರೆ.

ಭೂಮಣ್ಣಿ ಹಬ್ಬದ ಆಚರಣೆ ಮತ್ತು ಚಿತ್ತಾರದ ಬುಟ್ಟಿ ಅಲಂಕಾರ

" ಹಚ್ಚಂಬಲಿ ಹರ್ವೇ ಸೊಪ್ಪು ,ಹಿತ್ಲಗುನ್ ಹಿರೇಕಾಯ್ ಹೋಯ್ ..ಹೊಯ್,, ಹೋಯ್.. " ಎನ್ನುತ್ತ ತಲೆಮೇಲೆ ವಿಶೇಷ ಚಿತ್ತಾರಗಳಿಂದ ಅಲಂಕರಿಸಿದ ಬಣ್ಣದ ಬುಟ್ಟಿ ಹೊತ್ತೊಕೊಂಡು ಬೆಳಬೆಳಗ್ಗೆ ಉಷೆಕಾಲದಲ್ಲೇ ಹಾಡುತ್ತ ಕೂಗುವುದನ್ನು ಆಶ್ವಯುಜ ಮಾಸದ ಸೀಗೆ ಹುಣ್ಣಿಮೆಯಂದು

ಮಲೆನಾಡಿನ ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳ ದೀವರು ಜನಾಂಗದ ಹೊಲಗದ್ದೆಗಳಲ್ಲಿ ಕಾಣಬಹುದು. ನೆಲಮೂಲದ ನಸರ್ಗ ಆರಾಧನೆಯ ಪರಂಪರೆಯ ಭಾಗವಾಗಿ ಗಮನಸೆಳೆಯುವ ಈ ವಿಶಿಷ್ಟ ಆಚರಣೆಯನ್ನು ಮಲೆನಾಡಿನ ರೈತಾಪೀ ಜನ ಭೂಮಣ್ಣಿ ಹಬ್ಬವೆಂದೆ ಕರೆಯುತ್ತಾರೆ. ಈ ಹಬ್ಬಕ್ಕೆ ಜೋಡಿ ಬುಟ್ಟಿಗಳನ್ನು ಬಳಸುವ ವಾಡಿಕೆಯಿದ್ದು ಭೂಮಿಬುಟ್ಟಿಯಲ್ಲಿ ಚಿತ್ತಾರಗಳನ್ನು ಹೆಂಗಸರು ಮಾತ್ರ ಬರೆಯುವುದು ಮತ್ತೊಂದು ವಿಶೇಷ.



ತುಂಬು ಗರ್ಬಿಣಿಗೆ ಸೀಮಂತ ಮಾಡುವಂತೆ, ಒಡಲೊಳಗೆ ಪೈರು ಹೊತ್ತ ಭತ್ತದ ಗದ್ದೆಗಳಿಗೆ,ತೋಟಕ್ಕೆ ಸೀಮಂತ ಮಾಡಲೆಂದು ಬಗೆಬಗೆಯ ಸೊಪ್ಪು ತರಕಾರಿಗಳಾದಿಯಾಗಿ ವಿವಿಧ ಸಿಹಿ ತಿನಸನ್ನು ಭೂತಾಯಿಗೆ ಚರಗ ಚೆಲ್ಲುವುದೇ ಭೂಮಣ್ಣಿ ಹಬ್ಬದ ವಿಶೇಷ ಆಚರಣೆ. ಚರಗವನ್ನು ತುಂಬಿಕೊಂಡು ಹೋಗಲು ಬಳಸುವ ಬುಟ್ಟಿಯೇ ಭೂಮಿಬುಟ್ಟಿ. ರಾಜ್ಯದ ಬಹುತೇಕ ಕಡೆ ಭೂತಾಯಿಗೆ ಚರಗ ಚೆಲ್ಲುವ ಆಚರಣೆಯಿದೆ. ಆದರೆ ಚರಗ ಚೆಲ್ಲಲೆಂದೇ ವಿಶಿಷ್ಟ ವಿನ್ಯಾಸದ ರೇಖೆಗಳ ಆಕರ್ಷಕವಾದ ಚಿತ್ತಾರ ಬಿಡಿಸಿದ ಜೋಡಿ ಬುಟ್ಟಿ ಬಳಸುವುದು ಮಲೆನಾಡಿನ ದೀವರು ಜನಾಂಗದಲ್ಲಿ ಮಾತ್ರವೇ ಕಡ್ಡಾಯವಾಗಿ ಕಾಣಸಿಗುತ್ತದೆ. ಸೊರಬ ಸಾಗರ ಭಾಗದ ಕರೆಒಕ್ಕಲಿಗರು ,ಮಡಿವಾಳರು ಸಹ ಅಲ್ಲಲ್ಲಿ ಬುಟ್ಟಿ ಚಿತ್ತಾರ ಬರೆಯುವ ಪದ್ದತಿ ರೂಡಿಸಿಕೊಂಡಿದ್ದಾರೆ. ಆ ಹಬ್ಬ ಮುಗಿದ ನಂತರ ಮತ್ತೆಂದೂ ಬುಟ್ಟಿ ಚಿತ್ತಾರವನ್ನು ಬಿಡಿಸುವುದಿಲ್ಲ. ಆ ಬುಟ್ಟಿಗಳನ್ನು ಅಟ್ಟದ ಮೇಲೆ ಜೋಪಾನವಾಗಿಟ್ಟು ಮುಂದೆ

ಬರುವ ಹಬ್ಬಕ್ಕೇ ಅವನ್ನು ಮತ್ತೆ ಬಳಸುತ್ತಾರೆ. ಮುಂದಿನ ಭೂಮಣ್ಣಿ ಹಬ್ಬಕ್ಕೆ ಮತ್ತೆ ಹೊಸದಾಗಿ ಬಿಡಿಸುವುದು ವಾಡಿಕೆ.

ಈ ಭೂಮಿ ಬುಟ್ಟಿ ಚಿತ್ತಾರ ಕಲೆಯು ವರ್ಲಿ ಕಲೆಯಂತೆಯೇ ಒಂದಿಷ್ಟು ಲಕ್ಷಣಗಳಲ್ಲಿ ಕಂಡರೂ ಇದು ವರ್ಲಿ ಮೂಲದ್ದಲ್ಲ ಎನ್ನಲು ಹಲವು ಸಾಂಸ್ಕೃತಿಕ ಆಧಾರ ನೀಡಬಹುದು. ವರ್ಲಿ ಜನಾಂಗ ಭೂಮಣ್ಣಿ ಹಬ್ಬ,ಹೊಲಕ್ಕೆ ಚರಗ ಚೆಲ್ಲುವ ಹಬ್ಬ ಮಾಡುವುದಿಲ್ಲ. ಬುಟ್ಟಿ ಚಿತ್ತಾರ ಬರೆಯುವುದಿಲ್ಲ. ಬುಟ್ಟಿ ಚಿತ್ತಾರವು ಭೂತಾಯಿಯ ಸೀಮಂತ ಆಚರಣೆಯ ಪರಂಪರೆಯ ಭಾಗವಾಗಿ ಹಲವಾರು ವಿಶಿಷ್ಟ ಅರ್ಥ ರವಾನಿಸುವ ಮಲೆನಾಡಿನ ಕೃಷಿ ಬದುಕನ್ನು ಅನಾವರಣಗೊಳಿಸುವ ಚಿತ್ರಗಳು ಇಲ್ಲಿ ಕಾಣಬಹುದು. ಓದು ಬರಹ ಕಲಿಯದ ಕಾಡಿನ ವಾಸಿಗಳಾದ ದೀವರ ಮಹಿಳೆಯರು ಮಾತ್ರವೇ ಬಿಡಿಸುವ ಪದ್ದತಿಯನ್ನು ಪುರಾತನ ಕಾಲದಿಂದ ರೂಢಿಸಿಕೊಂಡಿದ್ದಾರೆ. ಇಂದಿಗೂ ಶಿವಮೊಗ್ಗದಲ್ಲಿ ದೀವರ ಕುಟುಂಬದ ಲಕ್ಷಾಂತರ ಮಹಿಳೆಯರು ಸಾಂಪ್ರದಾಯಿಕ ಬುಟ್ಟಿಚಿತ್ತಾರ ಕಲಾವಿದೆಯರಾಗಿದ್ದಾರೆ. ದೀವರ ಬುಟ್ಟಿಚಿತ್ತಾರ ಎಂದೆ ಮಲೆನಾಡಿನಲ್ಲಿ ಕರೆಯುವ ರೂಢಿ ಕಂಡುಬರುತ್ತದೆ. ಕರ್ನಾಟಕದ ಮಲೆನಾಡಿನಲ್ಲಿ ಸೊರಬದ ಕರೆಒಕ್ಕಲಿಗರಲ್ಲಿ ಮಡಿವಾಳರಲ್ಲಿ ಅಲ್ಲಲ್ಲಿ ರೂಢಿಯಿದೆ. ಬುಟ್ಟಿಚಿತ್ತಾರದ ಸೊಗಸಾದ ಚಿತ್ರಗಳು ಇಂದಿನ ಚಿತ್ರಕಲಾ ಶಿಕ್ಷಿತರನ್ನು ಸಹ ಗಮನಸೆಳೆದಿದ್ದು ಕೆಲವೆಡೆ ಇಂದಿನ ಯುವ ಕಲಾವಿದರು ಈ ಮಾದರಿಗಳನ್ನು ಬಳಸಿದ್ದನ್ನೂ ನೀವು ಗಮನಿಸಿರಬಹುದು.ಬುಟ್ಟಿ ಚಿತ್ತಾರದಲ್ಲಿ ದೀವರ ಕೃಷಿಪದ್ದತಿಯನ್ನು ಬುಟ್ಟಿಯಲ್ಲೇ ಚಿತ್ತಾರಗಿತ್ತಿಯರು ಅನಾವರಣಗೊಳಿಸುವುದು ವಿಶೇಷವಾದುದ್ದಾಗಿದೆ.ದೀವರ ಚಿತ್ತಾರಗಿತ್ತಿಯರು ಪುರಾತನ ಕಾಲದಿಂದ ಹಸೆಚಿತ್ತಾರವನ್ನು ಶಾಸ್ತ್ರಬದ್ದವಾಗಿ ಆಚರಣೆಯ ಭಾಗವಾಗಿ ಬಿಡಿಸುತ್ತಾ ಉಳಿಸಿಕೊಂಡು ಬಂದಿರುವುದಕ್ಕೆ ಭೂಮಣ್ಣಿ ಹಬ್ಬದ ಬುಟ್ಟಿಚಿತ್ತಾರಗಳು ಮಹತ್ವದ ಆಧಾರಗಳಾಗಿವೆ.

ಭೂಮಣ್ಣೀ ಬುಟ್ಟಿಚಿತ್ತಾರ ಬರೆಯುವಾಗ ದೀವರ ಹೆಣ್ಣುಮಕ್ಕಳು ಹಾಡುವ ಒಂದು ಹಾಡು ಹೀಗಿದೆ.

ಮುತ್ತಿನಂತ ಗದ್ದೆ, ಬಿತ್ತಿ ಬಂದೇ ಹರನೇ

ಮಳೆ ಇಲ್ಲೋ ಏ ಸುವ್ವೀ..

ಬಿತ್ತಿ ಬಂದೇ ಹರನೇ ಮಳೆ ಇಲ್ಲ / ಬಂಗಿನ ಕಡಿಗೆ/

ಮುತ್ತಿನಂತ ಮಳೆಯಾ ಕರೆದೊಯ್ಯೋ ಶಿವನೇ ಏ ಸುವ್ವೀ..

ಭೂಮಣ್ಣಿ ಹಬ್ಬಕೆ ನಮ್ಮನಾರೂ ಕರಸಣ್ಣಾ

ನಾವು ನಾಲ್ವರು ಮಿಂದೇ ಮಡಿವುಟ್ಟು ಏ ಸುವ್ವೀ..

ನಾವು ನಾಲ್ವರು ಮಿಂದೆ /ಮಡಿ ಉಟ್ಟು ನಾವೀಗ/

ಭೂಮೀಗೆ ಆರುತಿಯ ಬೆಳಗೀವೂ ಏ ಸುವ್ವೀ.

ಹಸುರ ಸೀರೆ ವಯ್ಯೋ ಮೊಸರು ಬುತ್ತಿ ವಯ್ಯೋ

ಹಸುಮಗ ನೀ ಒಯ್ಯೋ ಭೂಮಿಕೌಗೇ ಬವಿಕೇಯೋ. ಏ ಸುವ್ವೀ

ಹಸುಮಗನೆ ನೀ ಒಯ್ಯೋ /ಬವಿಕೆ ಭೂಮಿಕೆವ್ವಾ/

ಬಸುರಾಗ್ಯಳೇ ಗದ್ದೆ ಬಯಲಾಗೇ ಏ ಸುವ್ವೀ//

ಹೀಗೇ ಮುಂದುವರಿಯುವುದು. ಇನ್ನೂ ಹಲವಾರು ಹಾಡುಗಳನ್ನು ಹಾಡುತ್ತಾ ಚಿತ್ತಾರ ಬಿಡಿಸುವ ರೂಢಿಯಿದೆ. ಇದು ರೇಣುಕ ದ್ಯಾವಪ್ಪ ಮಂಡಳಲೆ ಅವರು ಹಾಡಿದ ಭೂಮಣ್ಣಿ ಹಾಡು.

ಭೂಮಣ್ಣಿ ಬುಟ್ಟಿ ಚಿತ್ತಾರದ ವಿಧಗಳು ಮತ್ತು ಆಚರಣೆಗಳು

ಮಲೆನಾಡಿನ ಕೃಷಿ ಬದುಕಿನ ಚಿತ್ರಣವನ್ನು , ರೈತಾಪಿ ಜನಗಳ ಹಲವಾರು ಕೃಷಿ ಸಲಕರಣೆಗಳನ್ನು, ಭತ್ತದ ಸಸಿಗಳು,ಬಾಳೆಗಿಡ,ಅಡಿಕೆ ಮರ, ಭತ್ತದ ಗೊಣಬೆ ಮತ್ತಿತರ ಚಿತ್ತಾರಗಳನ್ನು ಈ ಬುಟ್ಟಿಮೇಲೆ ಬರೆಯುತ್ತಾರೆ. ಬಹುಪಾಲು ಸರಳ ರೇಖೆಗಳಲ್ಲಿ ಬಿಡಿಸುವ ಈ ಚಿತ್ರಗಳ ಜಾಮಿತಿಯ ಅರಿವು , ಬೇರಾವ ಚಿತ್ರಕಲೆ ತಿಳಿಯದ ಅವರ ಕಲ್ಪನೆ,ನೆಲಮೂಲದ ಅನುಭವದ ಚಿತ್ತಾರ ಗ್ರಹಿಕೆ,ಕೌಶಲ ಒಂದಿಷ್ಟು ಸೋಜಿಗ ಹುಟ್ಟಿಸುವುದಲ್ಲದೆ ಆಕರ್ಷಕ ಚಿತ್ರ ವಿನ್ಯಾಸವಿದೆ. ಇಲ್ಲಿ ಬರೆಯುವ ಪ್ರತಿ ಎಳೆ,ಮೂಲೆ, ಪಪ್ಪುಳಿ, ಬೊಂಬೆ ಸಾಲು, ಚೆಂಡೂವಿನ ಸಾಲು , ಕೊಚ್ಚುಗಳಿಗೆ ಅವರದೇ ನೆಲಮೂಲದ ಜ್ಞಾನದ ವಿಶೇಷ ಅರ್ಥವಿದ್ದು ನಿಸರ್ಗ ಆರಾಧನೆ ಪ್ರಧಾನವಾಗಿ ಕಾಣಬಹುದು.

ಭೂಮಣ್ಣೀ ಬುಟ್ಟಿ ಚಿತ್ತಾರದಲ್ಲಿ ಎರಡು ಬಗೆಯ ಚಿತ್ರಗಳಿರುತ್ತವೆ.

1. ಸುತ್ತಳೆ ಚಿತ್ತಾರ – ಇಲ್ಲಿ 12 ಎಳೆಗಳಿರುತ್ತವೆ

2. ಮೂಲೆ ಎಳೆ ಚಿತ್ತಾರ – ಇಲ್ಲಿ ಎಂಟು ಎಳೆಗಳಿದ್ದು ದೊಡ್ಡ ಬುಟ್ಟಿಯಲ್ಲಿ 8 ಮನೆಗಳು ,ಸಣ್ಣಬುಟ್ಟಿಯಲ್ಲಿ 4 ಮನೆಗಳು ಇರುತ್ತವೆ.ಇಲ್ಲಿ ಕೃಷಿ ಚಟುವಟಿಕೆಗೆ ಸಂಬಂದಿಸಿದ ಚಿತ್ರಗಳು ಪ್ರಧಾನವಾಗಿದ್ದು ಬಯಕೆ ಶಾಸ್ತ್ರಕ್ಕೆ ಸಂಬಂದಿಸಿದ ಚಿತ್ರಗಳು ಇರುತ್ತವೆ.ಗೊಣಬೆ,ಸಸಿ,ಏಣಿ,ಗಾಡಿ,ಎತ್ತು, ಬಯಕೆ ಶಾಸ್ತ್ರಕ್ಕೆ ಸಂಬಂದಿಸಿದ ಹೂವಿನ ದಂಡೆ, ಕೌಳಿಮಟ್ಟಿ ಸೀತೆ ಮುಡಿ,ಜೋಗಿ ಜಡೆ ಬಿಡಿಸುತ್ತಾರೆ. ಜೋಡೆಳೆ ನೇಲಿ ,ಬಾಸಿಂಗ ನಲಿ ,ಎಳೆ ಬಿಡಿಸಿ ನಡುವೆ ಪಪ್ಪಳಿ ಬಿಡಿಸುತ್ತಾರೆ.ಪ್ರತಿ ಚಿತ್ರಕ್ಕೂ ಉದ್ದೇಶಿತ ಅರ್ಥವಿದೆ. ರೈತರ ಸಾಂಪ್ರದಾಯಿಕ ಕೃಷಿ ಸಲಕರಣೆಗಳನ್ನು ಚಿತ್ರಿಸುವುದು ವಿಶೇಷ. ಎಲ್ಲ ಚಿತ್ರಗಳು ಬಹುತೇಕ ಸರಳ ರೇಖೆಗಳಲ್ಲೇ

ಚಿತ್ರಿಸುವುದು ಈ ಭೂಮಿ ಬುಟ್ಟಿಚಿತ್ರಕಲೆಯ ವಿಶೇಷತೆಯಾಗಿದೆ. ಕೆಲವು ಭಾಗದಲ್ಲಿ ಬುಟ್ಟಿಚಿತ್ತಾರ ಬರೆದು ಮಾರಾಟ ಮಾಡುವ ಚಿತ್ರಕಲಾ ಹವ್ಯಾಸಿಗರು ಇದ್ದಾರೆ. ಇದೇ ಮಾದರಿಯ ಹಸೆಗೋಡೆ ಚಿತ್ತಾರ ಮಾದರಿಯನ್ನೂ ಸಹ ಸಂಪ್ರದಾಯದಾಚೆ ವಿಸ್ತರಿಸಿಕೊಂಡ ಕಲಾವಿದರು ತಮ್ಮ ಕಲೆಯ ಮೂಲಕ ಬದುಕು ಕಟ್ಟಿಕೊಳ್ಳಲು ಯತ್ನಿಸಿದವರು ಇದ್ದಾರೆ.

ಭೂಮಣ್ಣಿ ಬುಟ್ಟಿ ಚಿತ್ತಾರದಲ್ಲಿ ಕಂಡುಬರುವ ಮೂಲಭೂತ ಅಂಶಗಳು

ಮುಖ್ಯವಾಗಿ ಭೂಮಣ್ಣಿ ಹಬ್ಬವು ಭೂತಾಯಿಗೆ ಸೀಮಂತ ಮಾಡುವ ಹಬ್ಬವಾಗಿದ್ದು ಪ್ರಧಾನವಾಗಿ ನಿಸರ್ಗ ಆರಾಧನೆ , ಭೂತಾಯಿಗೆ ಕೃತಜ್ಞತಾ ಸಮರ್ಪಣೆ ಕಂಡುಬರುತ್ತದೆ.ಹಾಗಾಗಿ ಚರಗ ಚೆಲ್ಲುವ ಭೂಮಣ್ಣಿಬುಟ್ಟಿಗಳನ್ನು ಅಲಂಕರಿಸುವಾಗ ಕೃಷಿಸಲಕರಣೆಗಳನ್ನು,ಭತ್ತದ ಗೊಣಬೆಗಳನ್ನು ಪ್ರಮುಖವಾಗಿ ಚಿತ್ರಿಸಲಾಗುತ್ತದೆ. ಫಲವಂತಿಕೆ ಆಚರಣೆಗಳಲ್ಲಿ ನಂಬುಗೆಯುಳ್ಳ ದೀವರ ಸಮುದಾಯದಲ್ಲಿ ಭೂಮಿಹುಣ್ಣಿಮೆ ಆಚರಣೆಗೂ ಚರಗಚೆಲ್ಲುವ ಬುಟ್ಟಿಗೆ ಹಸೆಚಿತ್ತಾರ ಕಡ್ಡಾಯ. ದೀವರ ಕೆಲವು ಬಳಿಗಳನ್ನು ಹೊರತು ಪಡಿಸಿ ಬಹುತೇಕ ಮಲೆನಾಡಿನ ದೀವರ ಎಲ್ಲಾ ಬಳಿಗಳಲ್ಲೂ ಬುಟ್ಟಿಚಿತ್ತಾರದ ಬುಟ್ಟಿಗಳಲ್ಲೇ ಫಲಹೊತ್ತ ಭೂಮಿಗೆ ಚರಗ ಚೆಲ್ಲುತ್ತಾರೆ. ಇಂತಹ ವಿಶಿಷ್ಟ ಆಚರಣೆಯ ಭೂಮಣ್ಣಿ ಬುಟ್ಟಿಯಲ್ಲಿ ಕಂಡುಬರುವ ಮೂಭೂತ ಆಂಶಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.(ಹಿಂದಿನ ಪುಟಗಳಲ್ಲಿ ಮದುವೆಶಾಸ್ತ್ರಕ್ಕೆ ಸಂಬಂದಿಸಿದ ಹಸೆಗೋಡೆ ಚಿತ್ತಾರದ ಮೂಲಭೂತ ಅಂಶಗಳನ್ನು ವಿವರಿಸಲಾಗಿದೆ. ಅದರಲ್ಲಿನ ಕೆಲವು ಅಂಶಗಳೆ ಭೂಮಣ್ಣಿ ಬುಟ್ಟಿಯಲ್ಲೂ ಬರುತ್ತವೆ.)ಅಲ್ಲದೆ ಸುತ್ತೆಳೆ,ಜೋಡೆಳೆ, ಕೃಷಿ ಸಲಕರಣೆಗಳು, ಏಣಿ, ಒಕ್ಕಲುತನ,ಭತ್ತದ ಸಸಿ ,ತೆನೆಹೊತ್ತ ಭತ್ತದ ಸಸಿ, ವಿವಿಧ ಪೈರುಗಳು, ಬಾಳೆಗೊನೆ ಅಡಿಕೆಮರ,ಮತ್ತಿತರೆ ಕೃಷಿ ಚಟುವಟಿಕೆಯ ಸಲಕರಣೆಗಳ ಚಿತ್ತಾರಗಳಿರುವುದು ಕಡ್ಡಾಯ.ಜೊತೆಗೆ ನಲಿಕೊಚ್ಚು, ಗೊಂಬೆಸಾಲು,ಚೆಂಡುಹೂ ಸಾಲು,ಬೆಟ್ಟಸಾಲು,ಪಪ್ಪಳಿ,ಅರೆಪಪ್ಪಳಿ ಮತ್ತಿತರ ಹಸೆಚಿತ್ತಾರದ ಮೋಟಿಫ್ಗಳೇ ಭೂಮಣ್ಣಿಬುಟ್ಟಿ ಚಿತ್ತಾರದಲ್ಲೂ ಪ್ರಧಾನವಾಗಿರುವ

ಮೂಲಭೂತ ಅಂಶಗಳಾಗಿವೆ.ನಾಲ್ಕು ಮೂಲೆಯನ್ನು ಹೊಂದಿರುವ ಬುಟ್ಟಿಗಳನ್ನು ಆಯ್ಕೆ ಮಾಡಿಕೊಳ್ಳುವುದು ರೂಢಿ.

ಸಂಪ್ರದಾಯದ ಆಳದ ಅರಿವಿಲ್ಲದ ಈಗಿನ ಕೆಲವು ಯುವ ಚಿತ್ತಾರಗಿತ್ತಿಯರು ಭೂಮಣ್ಣಿ ಬುಟ್ಟಿಯನ್ನು ಅಲಂಕಾರಕ್ಕಾಗಿ ಅಲಂಕರಿಸುವ ಸಂಪ್ರದಾಯ ಸಹ ಕಂಡುಬರುತ್ತಿದೆ. ಬುಟ್ಟಿಯ ಮೇಲೆ ರಂಗೋಲಿ ಬರೆಯುವಿಕೆಯೂ ಕಂಡುಬರುತ್ತದೆ. ಆದರೆ ಅದು ಸಾಂಪ್ರದಾಯಿಕ ಭೂಮಣ್ಣಿ ಬುಟ್ಟಿ ಎನಿಸದು.ಭೂಮಣ್ಣಿ ಬುಟ್ಟಿ ಚಿತ್ತಾರ ಬರೆಯುವಿಕೆಗೆ ಸಹ ವಿಧಿ ವಿಧಾನಗಳಿದ್ದು ಮಹಾನವಮಿಯ ಹಿಂದಿನವಾರ ಬುಟ್ಟಿಗಳನ್ನು ಸ್ವಚ್ಚಗೊಳಿಸಿ ವಿಶೇಷವಾಗಿ ಮಹಾನವಮಿ ದಿನದಂದು ಪೂಜಿಸಲಾಗುತ್ತದೆ.

ಕೆಲವರು ಕೆಂಪುಬಣ್ಣದಲ್ಲಿ ಬುಟ್ಟಿ ಬರೆದರೆ ,ಕೆಲವರು ಕಪ್ಪು,ಹಳದಿ ಬಣ್ಣದಲ್ಲಿ ಸಂಪ್ರದಾಯದಂತೆ ಬುಟ್ಟಿ ಚಿತ್ತಾರ ವಿನ್ಯಾಸ ಮಾಡುತ್ತಾರೆ.ಬುಟ್ಟಿಗಳ ಮೇಲೆಯೂ ರೈತಾಪಿ ಬದುಕಿನ ಚಿತ್ರಣ ಅಭಿವ್ಯಕ್ತ ಪಡಿಸುವ, ಭೂತಾಯಿಗೆ ಕೃತಜ್ಞತೆ ಸಲ್ಲಿಸಬೇಕು ಎನ್ನುವ ಪರಿಕಲ್ಪನೆಯ ಅಭಿವ್ಯಕ್ತಿಯೇ ಅತಿವಿಶಿಷ್ಟವಾದದ್ದು.ಇದು ಮಲೆನಾಡಿನ



ದೀವರಲ್ಲಿ ಮಾತ್ರ ಕಂಡುಬರುವ ವಿಶೇಷ ಸಂಪ್ರದಾಯಿಕ ಕರಕುಶಲ ಕಲೆಯೇ ಆಗಿದೆ. ಮಲೆನಾಡಿನ ಸುತ್ತೆಲ್ಲ ದೀವರ ಬುಟ್ಟಿಚಿತ್ತಾರ ಎಂದೇ ಕರೆಯುವುದು ವಾಡಿಕೆ. ಭೂಮಣ್ಣಿ ಬುಟ್ಟಿ ಚಿತ್ತಾರ ಪರಂಪರೆ ದೀವರಲ್ಲಿ ಮಾತ್ರ ಕಡ್ಡಾಯವಾಗಿ ಕಂಡುಬರುವುದರಿಂದ ಪುರಾತನವಾದ ಹಸೆಚಿತ್ತಾರ ದೀವರ ಜನಸಮುದಾಯದ ಸಾಂಪ್ರದಾಯಿಕ ಕಲೆಯೆಂದು ಹೇಳಬಹುದಾಗಿದೆ.ಇಂದಿಗೂ ಶಿವಮೊಗ್ಗದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭೂಮಣ್ಣಿ ಬುಟ್ಟಿ ಚಿತ್ತಾರ ಬರೆಯುವ ದೀವರ ಚಿತ್ತಾರಗಿತ್ತಿಯರನ್ನು ಕಾಣಬಹುದು.

ನಿಸರ್ಗ ಆರಾಧನೆ,ಫಲವಂತಿಕೆ ಮತ್ತು ಭೂಮಣ್ಣಿ ಬುಟ್ಟಿ ಚಿತ್ತಾರ

ಭೂಮಣ್ಣಿ (ಭೂಮಿಹುಣ್ಣಿಮೆ)ಹಬ್ಬದ ಪ್ರಮುಖ ಆಶಯವೇ ನಿಸರ್ಗ ಆರಾಧನೆ.ಫಲಹೊತ್ತ ಭೂತಾಯಿಗೆ ಸೀಮಂತ ಮಾಡುವ ಆಚರಣೆಯ ಭಾಗವಾಗಿಯೇ ಹೊಲಕ್ಕೆ ಚರಗ ಚೆಲ್ಲುವುದು ಬಹುತೇಕ ಕರ್ನಾಟಕದ ಎಲ್ಲಾ ಭಾಗದ ರೈತಾಪಿ ಸಮುದಾಯಗಳಲ್ಲಿದೆ. ಎಲ್ಲಾ ಕಡೆಯೂ ಫಲವಂತಿಕೆಯ ನಂಬುಗೆಗಳಿವೆ. ಆದರೆ ಮಲೆನಾಡಿನ ದೀವರು ಸಮುದಾಯವು ಭೂಮಿಹುಣ್ಣಿಮೆ ಸಮಯದಲ್ಲಿ ಹೊಲಕ್ಕೆ ಚರಗ ಚೆಲ್ಲುವಾಗ ಅವರು ಅನುಸರಿಸುವ ವಿಧಿವಿಧಾನಗಳು ಭೂಮಣ್ಣಿ ಬುಟ್ಟಿ ಚಿತ್ತಾರ ಬರೆಯುವಿಕೆ ಅತಿ ವಿಶಿಷ್ಟವಾದದ್ದು. ಅವರ ನಿಸರ್ಗ ಪ್ರೇಮ ,ನಿಸರ್ಗ ಆರಾಧನೆ, ನಂಬುಗೆಗಳು ಭೂಮಣ್ಣಿ ಬುಟ್ಟಿಯ ಚಿತ್ತಾರದಲ್ಲೂ ವ್ಯಕ್ತವಾಗುತ್ತದೆ. ಬುಟ್ಟಿಚಿತ್ತಾರದ ತುಂಬೆಲ್ಲ ಭತ್ತದ ತೆನೆ,ಬಾಳೆಗೊನೆ,ಅಡಿಕೆ ಮರ, ಭತ್ತದ ರಾಶಿ, ಗೊಣಬೆ, ಚೆಂಡು ಹೂ ಸಾಲು ,ಕೃಷಿ ಸಲಕರಣೆಗಳನ್ನು ಚಿತ್ರಿಸುವ ಚಿತ್ತಾರಗಿತ್ತಿಯ ಉದ್ದೇಶವೇ ನಿಸರ್ಗ ಆರಾಧನೆಯ ಅಭಿವ್ಯಕ್ತಿ. ಭೂತಾಯಿಗೆ,ನಿಸರ್ಗಕ್ಕೆ ಕೃತಜ್ಞತಾ ಸಮರ್ಪಣೆ ಮಾಡುವಿಕೆಯ ಆಚರಣೆ ಮೂಲದ ಕಲೆಯಾಗಿದೆ ಎಂಬುದು ಗಮನಾರ್ಹ ಅಂಶವಾಗಿದೆ.

ಈಗ ಎಲ್ಲಾ ರೈತಾಪಿ ಸಮುದಾಯದಲ್ಲಿ ಒಂದು ಬುಟ್ಟಿಯಲ್ಲಿ, ಅಥವಾ ಈಗೀಗ ಯಾವುದೋ ಪ್ಲಾಷ್ಟಿಕ್, ಬುಟ್ಟಿಯಲ್ಲೂ ಚರಗ ಚೆಲ್ಲಿ ಬರುತ್ತಿದ್ದಾರೆ. ಆದರೆ ದೀವರು ಸಮುದಾಯ ನಂಬಿಕೊಂಡು ಬಂದಿರುವ ನಿಸರ್ಗ ಆರಾಧನೆಯ ಬದ್ಧತೆ ಈಗಲೂ ಸಂಪ್ರದಾಯದಂತೆ ಮುಂದುವರಿದಿದೆ. ಆಚರಣೆಯ ಬಗ್ಗೆ ವಿವರಗಳನ್ನು ಹಿಂದಿನ ಪುಟಗಳಲ್ಲಿಯೇ ಸಂಪೂರ್ಣ ವಿವರಿಸಿದ್ದೇನೆ. ನಿಸರ್ಗವನ್ನು ಬಗೆದು ತಿನ್ನುತ್ತಿರುವ ಇಂದಿನ ಆಧುನಿಕ ಗಣಿಕಾರಿಕೆಯ ಮಾಲೀಕರಿಗೇಕೆ ನೆಲದ ಮೇಲೆ ಇಂತಹ ಕೃತಜ್ಞಾತಾ ಮನೋಭಾವದ ಆಚರಣೆಗಳು ನಂಬುಗೆಗಳು ಹುಟ್ಟಲಿಲ್ಲ ಎಂಬುದರ ಬಗ್ಗೆ ವಿವೇಚಿಸಿದರೆ ಅಂದಿನ ನಮ್ಮ ಪೂರ್ವಜರ ನಿಸರ್ಗ ಆರಾಧನೆಗಳ ಹೆಚ್ಚುಗಾರಿಕೆ ಅರ್ಥವಾಗುತ್ತದೆ.

ಅಂದಿನ ಅನಕ್ಷರಸ್ಥರಿಗೇಕೆ ನಿಸರ್ಗ ಪ್ರೀತಿ ,ಆರಾಧನೆ ಮುಖ್ಯವಾಯಿತು. ಇಂದು ನಮಗೇಕೆ ಅದರ ಅರಿವಿಲ್ಲ ಎಂಬುದರ ಬಗ್ಗೆಯೂ ನಾವೂ ಅರಿಯಬೇಕಿದೆ. ಭೂಮಿ ಪೂಜೆಯ ಮಹತ್ವ ಅರಿತು ಭೂಮಾಲಿನ್ಯ ತಡೆಯಲು, ಭೂಮಿಗೆ ಕೃತಜ್ಞತೆ ಸಲ್ಲಿಸಲು ಇಂತಹ ಆಚರಣೆಗಳನ್ನು ಮತ್ತಷ್ಟು ಮುನ್ನಲೆಗೆ ತರಬೇಕಿದೆ. ಭೂಮಣ್ಣಿ ಬುಟ್ಟಿ ಚಿತ್ತಾರಗಳ ಮೂಲಕ ಅಂತಹ ಜಾಗೃತಿಗಳನ್ನು ಸಹ ಅಭಿವ್ಯಕ್ತಗೊಳಿಸಬೇಕಿದೆ. ಮಲೆನಾಡಿನ ವಿವಿಧ ತರಕಾರಿ ಕಾಯಿಪಲ್ಲೆಗಳನ್ನು ಬೇಯಿಸಿ ಹಚ್ಚಂಬಲಿ ಮಾಡಿ ಚಿತ್ತಾರ ಬಿಡಿಸಿ ಅಲಂಕರಿಸಿದ ಭೂಮಣ್ಣಿ ಬುಟ್ಟಿಯಲ್ಲೇ ತೆಗೆದುಕೊಂಡು ಹೋಗಿ ಬೆಳಗ್ಗೆ ಉಷೆ ಕಾಲದಲ್ಲೇ ಎದ್ದು ಈಗಲೂ ಭೂಮಿಗೆ ಚರಗ ಚೆಲ್ಲುವ ಪದ್ಧತಿ ದೀವರಲ್ಲಿ ಮುಂದುವರಿದಿದೆ. ಹಸೆಚಿತ್ತಾರದ ಭೂಮಿಬುಟ್ಟಿಗಳು ಈಗಿನ ಆಧುನಿಕರಿಗೆ ನಿಸರ್ಗ ಆರಾಧನೆಯ ಮಹತ್ವವನ್ನು ಮತ್ತೆ ಮತ್ತೆ ಸಾರಿ ಹೇಳುತ್ತಿವೆ.

ಭೂಮಣ್ಣೀ ಬುಟ್ಟಿ ಚಿತ್ತಾರದ ಮೇಲೆ ಮಲೆನಾಡಿನ ಕೃಷಿ ಬದುಕಿನ ಚಿತ್ರಣವನ್ನು , ರೈತಾಪಿ ಜನಗಳ ಹಲವಾರು ಕೃಷಿ ಸಲಕರಣೆಗಳನ್ನು, ಭತ್ತದ ಸಸಿಗಳು,ಬಾಳೆಗಿಡ,ಅಡಿಕೆ ಮರ, ಭತ್ತದ ಗೊಣಬೆ ಮತ್ತಿತರ ಚಿತ್ತಾರಗಳನ್ನು ಈ ಬುಟ್ಟಿಮೇಲೆ ಬಿಡಿಸುತ್ತಾರೆ. ಬಹುಪಾಲು ಸರಳ ರೇಖೆಗಳಲ್ಲಿ ಬಿಡಿಸುವ ಈ ಚಿತ್ರಗಳ ಜಾಮಿತಿಯ ಅರಿವು , ಬೇರಾವ ಚಿತ್ರಕಲೆ ತಿಳಿಯದ ಬಹುತೇಕ ಅಂದಿನಂದ ಅನಕ್ಷರಸ್ಥ ದೀವರ ಮಹಿಳೆಯರೇ ಬಿಡಿಸುತ್ತಿದ್ದ ಅವರ ಚಿತ್ತಾರದ ಪರಿಕಲ್ಪನೆ,ನೆಲಮೂಲದ ಅನುಭವದ ಚಿತ್ತಾರ ಗ್ರಹಿಕೆ, ಕೌಶಲ ಒಂದಿಷ್ಟು ಸೋಜಿಗ ಹುಟ್ಟಿಸುವುದಲ್ಲದೆ ಆಕರ್ಷಕ ಚಿತ್ರ ವಿನ್ಯಾಸವಿದೆ. ಇಲ್ಲಿ ಬರೆಯುವ ಪ್ರತಿ ಎಳೆ,ಮೂಲೆ, ಪಪ್ಪುಳಿ, ಬೊಂಬೆ ಸಾಲು, ಚೆಂಡೂವಿನ ಸಾಲು , ಕೊಚ್ಚುಗಳಿಗೆ ಶಾಸ್ತ್ರಬದ್ಧ ವಿಶಿಷ್ಟ ಅರ್ಥಗಳಿದ್ದು ನಿಸರ್ಗ ಆರಾಧನೆಯ ಆಚರಣೆಯ ಮೂಲ ಕಲೆಯಾಗಿ ನಾವು ಈಗಲೂ ಕಾಣಬಹುದಾಗಿದ್ದು ಇಂತಹ ಆಚರಣೆ ಮೂಲದ ಕಲೆಗಳನ್ನು ಉಳಿಸಿ ಬೆಳೆಸಿ ಪ್ರೋತ್ಸಾಹಿಸಬೇಕಿದೆ.

ಅಲಂಕಾರಕ್ಕಾಗಿ ಆಚರಣೆಗಾಗಿ ಬರೆಯುವ ಇತರೆ ಚಿತ್ತಾರಗಳು

ಗೋಡೆ ಚಿತ್ತಾರ ಮತ್ತು ಬಾಗಿಲು ಚಿತ್ತಾರಗಳು

ಹಬ್ಬಗಳಿಗಾಗಿ ಆಚರಣೆಯ ಭಾಗವಾಗಿ ಹಸೆಗೋಡೆ ಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರವಷ್ಟೇ ಅಲ್ಲದೆ ಮನೆಯ ಗೋಡೆ ಮತ್ತು ಬಾಗಿಲನ್ನು ಅಲಂಕಾರ ಮಾಡುವರು.ಕರ್ನಾಟಕ ಮಲೆನಾಡಿನ ಭಾಗದಲ್ಲಿ ಮಣ್ಣಿನ ಗೋಡೆಗಳಿದ್ದ ಕಾಲದಲ್ಲಿ ಬಾಗಿಲು ಮತ್ತು ಗೋಡೆಗಳನ್ನು ಚಿತ್ತಾರದಿಂದ ಅಲಂಕರಿಸುತ್ತಿದ್ದರು. ಆದರೆ ಕಾಂಕ್ರೇಟು ಮನೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಗೋಡೆ ಚಿತ್ತಾರ ಮತ್ತು ಬಾಗಿಲು ಚಿತ್ತಾರ ಅಪರೂಪವಾಗುತ್ತಿವೆ. ಆದರೆ ಶಿವಮೊಗ್ಗ ಭಾಗದ ದೀವರು ಮಾತ್ರ ಮದುವೆ ಶಾಸ್ತ್ರದ ವಿಧಿ ವಿಧಾನವಾಗಿ ಹಸೆಗೋಡೆ ಚಿತ್ತಾರವನ್ನು, ಭೂಮಣ್ಣಿ ಚಿತ್ತಾರವನ್ನು ಕಡ್ಡಾಯವಾಗಿ ಉಳಿಸಿಕೊಂಡು ಬಂದಿದ್ದಾರಾದರೂ ಬಾಗಿಲು ಚಿತ್ತಾರ ಮತ್ತು ಗೋಡೆ ಚಿತ್ತಾರ ಕಡ್ಡಾಯವೇನಿಲ್ಲ. ಹಾಗಾಗಿ ಆಸಕ್ತರ ಮನೆಯಲ್ಲಿ ಮಾತ್ರ ಈಗ ಗೋಡೆ ಚಿತ್ತಾರ, ಬಾಗಿಲು ಚಿತ್ತಾರಗಳು ಕಂಡುಬರುತ್ತದೆ.ಬಾಗಿಲು ಚಿತ್ತಾರ ಮತ್ತು ಗೋಡೆ ಚಿತ್ತಾರಗಳಲ್ಲಿ ಜೋಡೆಳೆ ಸಾಲು ಪ್ರಧಾನವಾಗಿ ಕಂಡುಬರುತ್ತದೆ.ಅವು ಚೌಕಗಳ ರಚನೆಗಳ ಸಾಲುಗಳಾಗಿರುತ್ತವೆ.ಅಂಡಿಕೆ ಎಂದು ಸಹ ಕರೆಯುವರು.ಇವು ಕುಂಭಗಳ ಮೇಲೆ ಕುಂಬಗಳನಿಟ್ಟು ಬರೆದಂತೆ ಹೋಲುತ್ತವೆ.

ಗೋಡೆ ಚಿತ್ತಾರಗಳಲ್ಲಿ ಕಿಟಕಿಚಿತ್ತಾರಗಳು ಆಕರ್ಷಕವಾಗಿರುತ್ತವೆ.ಚೌಕ ,ಆಯತ,ವಿವಿಧ ತ್ರಿಭುಜಗಳ ಜ್ಯಾಮಿತಿಯ ರಚನೆಗಳನ್ನು ಬಳಸಿಯೇ ಸಂಕೀರ್ಣವೂ ,ಸರಳವೂ ಆದ ವಿನ್ಯಾಸದ ಬಹಬಗೆಯ ಕಿಟಕಿಚಿತ್ತಾರ ಬರೆಯುವ ರೂಡಿ ಅಲ್ಲಲ್ಲಿ ಕಂಡುಬರುತ್ತದೆ. ಮಲೆನಾಡು ಬುಡಕಟ್ಟು ಜನ ಸೌಂದರ್ಯಪ್ರಜ್ಞೆಗೆ ಒತ್ತುನೀಡಿದ್ದರು ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ಅಕ್ಷರ ಕಲಿಯದಿದ್ದರೂ ಮಲೆನಾಡಿನ ಬಹುತೇಕ ದೀವರ ಹೆಣ್ಣುಮಕ್ಕಳಿಗೆ ಹಸೆಚಿತ್ತಾರ ಕಲೆ ರಕ್ತಗತ ಕಲೆಯಂತೆ ಆಗಿದೆ. ಕೆಲವು ಕರೆಒಕ್ಕಲಿಗ ಹೆಣ್ಣುಮಕ್ಕಳು,ಹಾಲಕ್ಕಿಗರು ಅಲ್ಲಲ್ಲಿ ಬರೆಯುವುದು ಕಾಣಬಹುದು.ರಾಜ್ಯದ ಸಾಕಷ್ಟು ಭಾಗದಲ್ಲಿ ಅನಕ್ಷರಸ್ಥ

ಹೆಣ್ಣುಮಕ್ಕಳು ಸಾಂಪ್ರದಾಯಿಕ ಚಿತ್ತಾರಗಳನ್ನು ಹಿಂದೆ ಗೋಡೆ ಬಾಗಿಲುಗಳ ಮೇಲೆ ಬರೆಯುತ್ತಿದ್ದರು.


ನಮ್ಮ ರಾಜ್ಯದಲ್ಲಿಯಷ್ಟೇ ಅಲ್ಲದೆ ನಮ್ಮ ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲೂ ಒಂದೊಂದು ವಿನ್ಯಾಸದ ಸಾಂಪ್ರದಾಯಿಕ ಚಿತ್ತಾರಗಳಿವೆ. ವಿಶಿಷ್ಟ ವಿನ್ಯಾಸದ ನೆಲಮೂಲದ ಆಚರಣೆ ಮೂಲದ ಗೋಡೆಚಿತ್ತಾರ ,ಬಾಗಿಲು ಚಿತ್ತಾರಗಳಿವೆ. ರಾಜಸ್ತಾನದ ಮಾಂಡಲ, ಮಹಾರಷ್ಟ್ರದ ವರ್ಲಿ, ಬಿಹಾರದ ಮಧುಬನಿ, ಒರಿಸ್ಸಾದ ಸೊರಾ ,ಗೋವಾದ ಕಾವಿ ಚಿತ್ರಕಲೆಗಳಲ್ಲೂ ಸಹ ಅಲಂಕಾರಕ್ಕಾಗಿ ಬರೆಯುವ ಚಿತ್ತಾರ ಮಾದರಿಗಳಿವೆ. ಕರ್ನಾಟಕದಲ್ಲಿ ಶಿವಮೊಗ್ಗ,ಉತ್ತರ ಕನ್ನಡ ಜಿಲ್ಲೆಯಲ್ಲಿ ,ಮಲೆನಾಡು ಹಾಗೂ ಕರಾವಳಿಯ ಕೆಲವು ಭಾಗದ ಬುಡಕಟ್ಟುಗಳಲ್ಲಿ ಹೆಚ್ಚಾಗಿ ಗೋಡೆ ಚಿತ್ತಾರ,ಬಾಗಿಲು ಚಿತ್ತಾರ ಕಂಡುಬರುತ್ತದೆ. ಮಣ್ಣಿನ ಗೋಡೆಗಳ ಗೃಹ ಅಲಂಕಾರಕ್ಕೆ ಹಬ್ಬಗಳಲ್ಲಿ,ಮದುವೆಗಳಲ್ಲಿ ಗೋಡೆ,ಬಾಗಿಲು ಅಲಂಕಾರಕ್ಕೆ ಸಾಂಪ್ರದಾಯಿಕ ರೇಖಾ ಚಿತ್ತಾರ ಬರೆಯುವಿಕೆ ರೂಢಿಯಲ್ಲಿತ್ತು.

ಬಾಗಿಲು ಚಿತ್ತಾರ (ಗೋಡೆ ಚಿತ್ತಾರ)

ಅಂದು ಹೆಚ್ಚಾಗಿ ಮಣ್ಣಿನ ಗೋಡೆಗಳು ಇದ್ದ ಕಾಲ.ಆಗಿನ ಹೆಂಗಸರು ಮನೆಯ ಅಲಂಕಾರಕ್ಕಾಗಿ ಬಾಗಿಲುಗಳಲ್ಲಿ ಗೋಡೆಗಳ ಮೇಲೆ ಕಿಟಕಿಗಳ ಮೇಲೆ ಚಿತ್ತಾರ ಬಿಡಿಸುವುದು ರೂಢಿ ಇತ್ತು. ಈಗ ಸಿಮೆಂಟ್ ಮನೆಗಳು ಬಂದಿವೆ. ಆದರೂ ಸಹ ಕೆಲವು ಸಮುದಾಯಗಳಲ್ಲಿ ಹೆಣ್ಣುಮಕ್ಕಳು ಗೋಡೆ,ಬಾಗಿಲು ಚಿತ್ರ ಬಿಡಿಸುವುದನ್ನು ಬಿಟ್ಟಿಲ್ಲ.ಕಾಂಕ್ರೀಟ್ ಮನೆ, ಮಣ್ಣಿನ ಗೋಡೆಯೇ ಆಗಿರಲಿ ದೀವರಲ್ಲಿ ಈಗಲೂ ಗೋಡೆ ಚಿತ್ತಾರ ಇರುವುದನ್ನು ಕಾಣಬಹುದು.ಹಿಂದೆಲ್ಲ ಸೆಗಣಿ ಸಾರಿಸಿ ಕೆಮ್ಮಣ್ಣು ಬಳಿದು ಅದರ ಮೇಲೆ ಚಿತ್ತಾರ ಬಿಡಿಸಿದ್ದರು. ಈಗ ಹೆಚ್ಚಾಗಿ ಕಾಂಕ್ರೀಟ್ ಗೋಡೆಗಳು ಇರುವುದರಿಂದ ಇಂದಿನ ಆಧುನಿಕ ಬಣ್ಣಗಳನ್ನು ಕೆಲವರು ನೈಸರ್ಗಿಕ ಬಣ್ಣಗಳಿಂದಲೂ ಗೋಡೆ

ಚಿತ್ತಾರ ಮತ್ತು ಬಾಗಿಲು ಚಿತ್ತಾರ ಕಿಟಕಿ ಚಿತ್ತಾರ ಬಿಡಿಸುವುದು ಕಂಡುಬರುತ್ತಿದೆ. ಬಾಗಿಲು ಚಿತ್ತಾರಗಳಿಗೆ ಹೆಚ್ಚಾಗಿ ಹಳದಿ ಬಣ್ಣವನ್ನು ಬಳಸುತ್ತಾರೆ.

ಬಾಗಿಲು ಚಿತ್ತಾರದಲ್ಲಿ ಕೆಲವು ವಿಧಗಳನ್ನು ಗುರುತಿಸಬಹುದು.ಒಂದು ಬಟ್ಟು ಒಂದು ಗಡಿಗೆ ಎರಡು ಬಟ್ಟು ಒಂದು ಗಡಿಗೆ ಮೂರು ಬಟ್ಟು ಒಂದು ಗಡಿಗೆ ಮೂರು ಬಟ್ಟೊ ಎರಡು ಗಡಿಗೆ ಚಿತ್ತಾರಗಳಿವೆ.ಈಗಿನ ಕೆಲವು ಚಿತ್ರಕಲಾವಿದರು ಬಾಗಿಲು ಚಿತ್ತಾರದಲ್ಲಿಯೂ ಸಹ ಚಲನಶೀಲತೆ ತಂದು ಹೊಸ ವಿನ್ಯಾಸದಲ್ಲಿ ಮಾಡುತ್ತಿರುವುದು ಕಂಡುಬರುತ್ತದೆ. ದೀವರ ಸ್ತ್ರೀಯರು ಮಾತ್ರ ಸಾಂಪ್ರದಾಯಿಕವಾಗಿ ರೇಖಾ ವಿನ್ಯಾಸಗಳಿಂದ ಚೌಕಗಳಿಂದ ಕೂಡಿದ ಬಾಗಿಲು ಚಿತ್ತಾರವನ್ನೇ ಬಿಡಿಸುತ್ತಾರೆ.



ಕಣ್ಣು ತುಂಬುವಾಗ ಅಥವಾ ಚೌಕವನ್ನು ತುಂಬುವಾಗ ಜೇಡಿ ಮಣ್ಣಿನಿಂದ, ಕೆಮ್ಮಣ್ಣಿನಿಂದ ,ಕಪ್ಪಿನಿಂದ ತುಂಬುವುದು ಸಹ ಕಂಡುಬರುತ್ತದೆ. ಬಾಗಿಲು ಚಿತ್ತಾರದ ಕೆಳ ಅಂಚಿನಲ್ಲಿ ಗೂಡಿನ ಹಂಕಿ ಗೂಡಿನ ಹಕ್ಕಿಗಳು ಗಿಡಗಳನ್ನು ಬರೆಯುತ್ತಾರೆ.ಇಲ್ಲಿ ಒಂದು ಬುಟ್ಟ ಎಂದರೆ ಒಂದು ಚೌಕವನ್ನು ತುಂಬಿರುವುದು. ಒಂದು ಗಡಿಗೆ ಎಂದರೆ ಪೂರ್ಣ ಚಿತ್ರ.ಎಲ್ಲಾ ಕಣ್ಣುಗಳು ಅಥವಾ ಚೌಕಗಳನ್ನು ತುಂಬಿದಾಗ ದೂರದಿಂದ ನೋಡಿದರೆ ಸಾಮಾನ್ಯವಾಗಿ ಒಂದು ಗಡಿಗೆಯ , ಅಥವಾ ಕುಂಭದ ರೂಪವನ್ನು ಸಾಮಾನ್ಯವಾಗಿ ಹೊಂದಿದಂತೆ ತೋರುತ್ತದೆ.ಎರಡು ಚೌಕವನ್ನು ತುಂಬಿದ್ದಕ್ಕೆ ಎರಡು ಬುಟ್ಟಾವೆಂದು ಮೂರು ಚೌಕವನ್ನು ಕ್ರಮವಾಗಿ ತುಂಬಿದರೆ ಮೂರು ಬುಟ್ಟವೆಂದು ಕರೆಯುತ್ತಾರೆ.

ಕಿಟಕಿಗಳಿಗೂ ಸಹ ಇದೇ ಮಾದರಿಯ ಚಿತ್ತಾರ ಬರೆಯುತ್ತಾರೆ ಆದರೆ ಅದು ಬಾಗಿಲಿಗಿಂತ ಚಿಕ್ಕ ರಚನೆ ಸೂಕ್ಷ್ಮ ವಿನ್ಯಾಸ ಹೊಂದಿರುತ್ತದೆ.ಬಾಗಿಲು ಹಾಗೂ ಕಿಟಕಿಗಳ ಮಧ್ಯದ ಜಾಗದಲ್ಲಿ ವಂಕಿಗಿಡ ಕಟ್ಟಿ ಜೋಗಿ ಜಡೆ ಸಹ ಬಿಡಿಸುತ್ತಾರೆ. ಬಾಗಿಲಿಗೆ ಗಂಧದ ಬಟ್ಟಿನ ಚಿತ್ತಾರ ಬಿಡಿಸುವುದು ಸಹ ಕಂಡುಬರುತ್ತದೆ.

ಇಡುಕಲು ಚಿತ್ತಾರ

ಬಹುತೇಕ ತಳಸಮುದಾಯಗಳಿಗೆ ಹಾಗೂ ದೀವರ ಮನೆ ದೇವರ ಕೋಣೆ ಎಂದರೆ ಅದು ಇಡುಕಲು.ಪ್ರತ್ಯೇಕ ದೇವರ ಕೋಣೆ ಇತ್ತೀಚೆಗೆ ದೀವರ ಮನೆಯಲ್ಲಿ ಕಂಡುಬರುತ್ತಿದೆ. ಆದರೂ ಸಹ ಇಡುಕಲು ಪ್ರತ್ಯೇಕವಾಗಿ ಇದ್ದೇ ಇರುತ್ತದೆ. ಮಲೆನಾಡಿನ ಕೆಲವು ಸಮುದಾಯದಲ್ಲೂ ಇಡುಕಲು ಕಾಣಸಿಗುತ್ತವೆ. ಇದು ಕಲ್ಲಿನ ಮೇಲ್ಭಾಗದ ಗೋಡೆಗೆ ಚಿತ್ತಾರ ಬರೆಯುವುದು ಸಾಂಪ್ರದಾಯಿಕ ರೂಢಿ.ಅಡುಗೆಮನೆಯ ಕೋಣೆಯ ಗೋಡೆಯ ಉತ್ತರಭಾಗದಲ್ಲಿ ಇಡುಕಲು ಇರುತ್ತದೆ. ಇಡುಕಲು ಎಂದರೆ ಕಲ್ಲು ಮಣ್ಣಿನಿಂದ ಮಾಡಿದ ವಿಶಿಷ್ಟ ವಿನ್ಯಾಸದ ಆಯತಾಕಾರದ ಎತ್ತರವಾದ ಕಟ್ಟೆ. ಇಡುವ ಕಲ್ಲು ಇಡುಕಲು ಎಂದು ಸರಳವಾಗಿ ಹೇಳಬಹುದು. ಏಕೆಂದರೆ ಹಿಂದೆ ಅಗಲವಾದ ಕಲ್ಲು ತಂದು ಅದರ ಮೇಲೆ ಇರಿಕೆ ಮಾಡಿ ಹಾಕಿ ಕಂಚಿನ ಹಂಡೆ, ಕೊಡಗಳನ್ನು ನೀರು ತುಂಬಿ ಇಡುತ್ತಿದ್ದರು.ಹಾಗಾಗಿ ರೂಡಿಗತವಾಗಿ ಇಡುಕಲು ಎಂದು ಕರೆಯಲಾಗಿದೆ. ಎಡಭಾಗದಲ್ಲಿ ನೀರಿನ ಹಂಡೆ, ಬಲಭಾಗದಲ್ಲಿ ಕೊಡವನ್ನು ಇಟ್ಟು ಪೂಜಿಸುವ ರೂಢಿ ಇದೆ. ಮುಖ್ಯವಾಗಿ ಯಾವುದೇ ದೇವರ ಫೋಟೋ ವಿಗ್ರಹವನ್ನು ಪೂಜಿಸುವ ಮೊದಲು ದೀವರುಗಳನ್ನು ಮೊದಲು ಪೂಜಿಸುವುದು ಇಡುಕಲನ್ನು. ವಿಗ್ರಹಾರಾಧನೆ ಬರುವುದಕ್ಕಿಂತ ಮೊದಲು ಇದ್ದ ಪುರಾತನ ಪದ್ಧತಿ ಇದು. ಹಿರಿಯರನ್ನು ನೆನೆದು ಪೂಜೆ ಮಾಡುತ್ತಾರೆ.ಇಂತಹ ವಿಶಿಷ್ಟ ದೇವರ ಕೋಣೆ ಇಡುಕಲ್ಲಿನ ಮೇಲೆ ಹಾಗೂ ಇಡುಕಲಿನ ಮೇಲ್ಭಾಗದ ಗೋಡೆಯಲ್ಲಿ ಚಿತ್ತಾರ ಬರೆಯುವುದು ಸಹ ಸಾಂಪ್ರದಾಯಿಕ ರೂಢಿ.

ಇಡುಕಲು ಚಿತ್ತಾರವು ಸರಳವಾಗಿರುತ್ತವೆ.ಇಲ್ಲಿ ಕೆಮ್ಮಣ್ಣು ಮತ್ತು ಜೇಡಿ ಮಣ್ಣಿನಲಿ ಹಸ್ತದ ಆಕೃತಿಯ ಚಿತ್ತಾರಗಳನ್ನು ಸಹ ಬಿಡಿಸುತ್ತಾರೆ. ಇದನ್ನು ಚಟ್ಟು ಅನ್ನುತ್ತಾರೆ. ಇಲ್ಲಿ ಸೂರ್ಯ ಚಂದ್ರ ವೆಂಕಿ ಗಿಡ ಬಿಡಿಸುವರು.ಕಟ್ಟೆಯ ಎದುರು ಭಾಗದಲ್ಲಿ ಮೂರು ಕಡೆ ವಿಭೂತಿ ಕುಂಕುಮ ಅರಿಶಿನ ಇಡುತ್ತಾರೆ.ಇಲ್ಲಿ ಮುಖ್ಯವಾಗಿ ತೊಂಡೆಚಪ್ಪರ ಪಪ್ಪಳಿ.ಅರೆಪಪ್ಪಳಿ ಅಡಿಕೆಗೊನೆ,ಕೋಳಿ, ನವಿಲು ಮುಂತಾದ ಚಿತ್ರಗಳು ಬಿಡಿಸಲಾಗುತ್ತದೆ.ಮುಖ್ಯವಾಗಿ ವೆಂಕಿಗಿಡ ಬರೆಯಲಾಗುತ್ತದೆ ವೆಂಕಿ ಗಿಡ ಅಂದರೆ ತುಳಸಿ ಗಿಡ.ಆಗಿದೆ. ಶಂಕು ಗೆರೆ ,ಚೌಕ ಆಕೃತಿಗಳು ಸಹ ಬರೆಯುವ ರೂಢಿ ಇದೆ.

ಪಳತದ ಚಿತ್ತಾರ

ಮಲೆನಾಡಿನ ಭಾಗದಲ್ಲಿ ಭತ್ತವನ್ನು ಸಂಗ್ರಹಿಸಿಡಲು ಮರದಿಂದ ಮಾಡಿದ ಪಳತವನ್ನು ಬಳಸುತ್ತಿದ್ದರು.ಈ ಪಳತದ ಮೇಲೆಯೂ ಸಹ ಸುಗ್ಗಿ ಪೂಜೆ ಮಾಡುವಾಗ ,ಬತ್ತದ ಪೂಜೆ ಮಾಡುವಾಗ ಚಿತ್ರವನ್ನು ಬರೆದು ಸಿಂಗರಿಸುತ್ತಿದ್ದರು.ಪಳತದ ಮೇಲೆ ಬರೆಯುವ ಚಿತ್ತಾರ ಮಾದರಿಯನ್ನೇ ಪಳತ ಚಿತ್ತಾರ ಎಂದು ಕರೆದಿರುವ ರೂಢಿ ಇದೆ.

ಪಳತದ ಮೇಲೆ ಸೂರ್ಯ ಚಂದ್ರ ಚಿತ್ತಾರ ಬರೆಯುವುದು ,ಕೂಡಿಸುವ ಚಿಹ್ನೆಯಂತಹ ರಚನೆಗಳ ಚಿತ್ತಾರ ಬರೆಯುವುದು ಸಂಪ್ರದಾಯಿಕಾಯಕವಾಗಿ ಕಂಡುಬರುತ್ತಿತ್ತು. ಪಳತದ ಭತ್ತ ಹೆಚ್ಚಾಗಲಿ ,ವೃದ್ದಿಸಲಿ ,ಹಾಳಾಗದಿರಲಿ, ಎನ್ನುವ ನಂಬುಗೆಯಿಂದ ಚಿತ್ತಾರ ಬರೆಯುತ್ತಿದ್ದರು. ಈಗ ಪಳತಗಳೇ ಇಲ್ಲದ ಕಾಲಘಟ್ಟದಲ್ಲಿ ಬಹುತೇಕ ಎಲ್ಲಿಯೂ ಪಳತ ಚಿತ್ತಾರ ಕಂಡುಬರುವುದಿಲ್ಲ.

ಚಾಪೆ ಚಿತ್ತಾರ

ಒಂದು ಮಲೆನಾಡಿನಲ್ಲಿ ಈಚಲ ಮರದ ಗರಿಗಳಿಂದ ಚಾಪೆ ಹೆಣೆಯುವುದು ವಿಶಿಷ್ಟವಾಗಿತ್ತು. ಮದುವೆಯಲ್ಲಿ ಮದುಮಕ್ಕಳಿಗೆ ಮತ್ತು ಬೀಗರುಗಳಿಗೆ ಬಣ್ಣಬಣ್ಣದ ಚಾಪೆ ಹಾಸುವುದು ವಿಶಿಷ್ಟ ರೂಢಿಯಾಗಿತ್ತು. ಸಾಮಾನ್ಯವಾಗಿ ದಿನಬಳಕೆಗೆ, ಜಾತ್ರೆಗಳಿಗೆ ಬಣ್ಣದ ಚಾಪೆಯನ್ನು ಹೆಣೆಯುವುದು ಸಹ ರೂಢಿಯಲ್ಲಿತ್ತು. ಆದರೆ ಮದುವೆಗಳಿಗಾಗಿ ಸಣ್ಣ ಈಚಲ ಗರಿಗಳಲ್ಲಿ ವಿಶೇಷ ಚಾಪೆಗಳನ್ನು ಮದುವೆಗಾಗಿ ವಿಶಿಷ್ಟ ವಿನ್ಯಾಸದಲ್ಲಿ ಬಣ್ಣದಿಂದ ಸಿಂಗರಿಸುತ್ತಿದ್ದರು. ಇದನ್ನು ಚಾಪೆ ಚಿತ್ತಾರ ಎಂದು ಕರೆಯುವ ರೂಢಿ ಇತ್ತು.ಸ್ತ್ರೀಯರ ವಿಶಿಷ್ಟ ಕರಕುಶಲ ಕಲೆಯಾಗಿರುವ ಚಾಪೆ ಹೆಣೆಯುವುದು ಅವರ ಕಲಾ ಅಭಿವ್ಯಕ್ತಿಯು ಸಹ ಆಗಿದೆ.ಇಂದು ಈಚಲು ಚಾಪೆಗಳ ಬಳಕೆ ವಿರಳವಾಗಿದ್ದು ಚಾಪೆಚಿತ್ತಾರ ಕಾಣಸಿಗುವುದು ವಿರಳವಾಗಿದೆ. ಚಾಪೆಗೆ ಹಸೆ ಎಂದೂ ಸಹ ಮಲೆನಾಡಿನಲ್ಲಿ ಕರೆಯಲಾಗುತ್ತದೆ. ಚಾಪೆಗೆ ಹಸೆಚಿತ್ತಾರದಂತೆ ಬಣ್ಣಹಾಕುವಿಕೆಯೂ ಸಹ ರೂಢಿಯಲ್ಲಿತ್ತು.ಹಸೆ ಹೆಣೆಯುವುದನ್ನು ಸಹ ಹಸೆಕಲೆ ಎಂದೂ ಕರೆಯುವ ರೂಢಿ ಇತ್ತು. ಹಸೆ ಹೆಣೆಯುವುದು ಮಲೆನಾಡಿನ ಕೆಲವು ಸ್ತ್ರೀಯರ ಉಪಕಸುಬು ಸಹ ಆಗಿತ್ತು.


ಮಲೆನಾಡಿನ ಬಾಗಿಲು ಚಿತ್ತಾರಗಳು ಮತ್ತು ವರ್ಲಿಕಲೆ

ಗೋಡೆ ಚಿತ್ತಾರ ಮತ್ತು ಬಾಗಿಲು ಚಿತ್ತಾರಗಳನ್ನು ಬರೆಯುವ ಪರಂಪರೆಯಲ್ಲಿ ಮಹಾರಾಷ್ಟ್ರದ ವರ್ಲಿಕಲೆ ಹಾಗೂ ಕರ್ನಾಟಕದ ಹಸೆ ಚಿತ್ತಾರ ಕಲೆಗಳು ಪ್ರದಾನವಾಗಿ ಇಂದಿಗೂ ಉಳಿದುಕೊಂಡು ಬಂದಿದೆ. ಆದರೆ ದೀವರ ಗೋಡೆ ಚಿತ್ತಾರಗಳಿಗೂ ವರ್ಲಿ ಚಿತ್ತಾರಗಳಿಗೂ ವಿನ್ಯಾಸದಲ್ಲಿ ಬಹಳ ವ್ಯತ್ಯಾಸಗಳಿವೆ. ವರ್ಲಿಯಲ್ಲಿ ಗೋಡೆ ಮತ್ತು ಬಾಗಿಲುಗಳಲ್ಲಿ ಗಂಡು ಹೆಣ್ಣುಗಳ ಸಾಲು ಚಿತ್ತಾರ,ನದಿ,ಮರಗಿಡಗಳು,ಜನಜೀವನ ಚಿತ್ರಿಸುವ ಚಿತ್ತಾರಗಳು ಪ್ರಧಾನವಾಗಿ ಕಂಡುಬಂದರೆ ದೀವರು ಸಮುದಾಯದ ಬಾಗಿಲು, ಗೋಡೆ ಚಿತ್ತಾರಗಳಲ್ಲಿ

ರೇಖೆಗಳು,ಚೌಕಗಳೇ ಪ್ರಧಾನವಾಗಿರುವ ಅಂಡಿಕೆಗಳೆಂದು ಕರೆಯುವ ಚೌಕಗಳ ಸರಪಳಿ ಸಾಲಿನಂತ ಚಿತ್ತಾರ ಪ್ರಧಾನವಾಗಿ ಕಂಡುಬರುತ್ತದೆ. ಹಾಗೆಯೇ ಹಾಲಕ್ಕಿಗರು,ಗಾವೊಕ್ಕಲಿಗರು ಬರೆಯುವ ಗೋಡೆಚಿತ್ತಾರಗಳಲ್ಲೂ ನಿಸರ್ಗಚಿತ್ತಾರಗಳ ರಚನೆಗಳು ಕಂಡುಬರುತ್ತವೆ. ಸರಳ ವಿನ್ಯಾಸದವಾಗಿರುತ್ತವೆ. (ವಸೀ ನೋಡಿ ಹಸೆಚಿತ್ತಾರ ವೈವಿಧ್ಯತೆ ಅಧ್ಯಾಯದಲ್ಲಿನ ಚಿತ್ರಗಳನ್ನು ನೋಡಿ) ಕೆಲವು ದೇವಸ್ಥಾನಗಳಲ್ಲಿ ,ಮಠಗಳ ಗೋಡೆ ಬಾಗಿಲುಗಳಲ್ಲಿ ಕಂಡುಬರುವ ಕಾವಿ ಚಿತ್ರಕಲೆಗೂ ಹಸೆಚಿತ್ತಾರ ಕಲೆಗೂ ವ್ಯಾತ್ಯಾಸವಿದೆ. ಕಾವಿಬಣ್ಣ ಮಾತ್ರವೆ ಪ್ರದಾನವಾಗಿ ಬಳಸುವ ಕಾವಿ ಕಲೆ ಧಾರ್ಮಿಕ ಅಭಿವ್ಯಕ್ತಿ ರೂಪದಲ್ಲಿರುತ್ತವೆ.ಪುರಾಣದ ದೇವರನ್ನು ಕಾವಿ ಚಿತ್ರಕಲೆಯಲ್ಲಿ ಚಿತ್ರಿಸುತ್ತಾರೆ. ಹಸೆಚಿತ್ತಾರದ ಬಾಗಿಲು ,ಗೋಡೆ ಚಿತ್ತಾರಗಳು ಕೆಂಪು,ಹಳದಿ ಬಿಳಿ,ಹಸಿರು ಬಣ್ಣಗಳನ್ನು ಬಳಸುವಿಕೆ ಕಾಣಬಹುದು. ಹಾಗೂ ಯಾವುದೇ ದೇವರನ್ನು ಚಿತ್ರಿಸುವುದಿಲ್ಲ.

ತಿರುಗೆ ಮಣೆ ಚಿತ್ತಾರ

ಮಲೆನಾಡಿನಲ್ಲಿ ಹಬ್ಬಗಳಿಗೆ ಕಳಸ ಇಡಲು ತಿರುಗೆ ಮಣೆ ಬಳಸುತ್ತಾರೆ. ಗೌರಿ ಹಬ್ಬದಲ್ಲಿ ತಿರುಗೆಮಣೆಗೆ ಆದ್ಯತೆ .ಮದುವೆಗಳಲ್ಲಿಯೂ ಹಸೆಮಣೆ, ತಿರುಗೆ ಮಣೆ ಬಳಕೆ ಈಗಲೂ ಮಲೆನಾಡಿನಲ್ಲಿ ಕಾಣಬಹುದು. ತಿರುಗೆ ಮಣೆ ಮರದ ಹಲಗೆಯಿಂದ ಮಾಡಿದ್ದಾಗಿದ್ದು ವಿವಿಧ ಬಗೆಯ ವಿನ್ಯಾಸದ ತಿರುಗೆ ಮಣೆಗಳಿಗೆ ಹಳ್ಳಿಗಳಲ್ಲಿ ಇನ್ನೂ ಸಂಪ್ರದಾಯಿಕ ಮಹತ್ವವಿದೆ. ಸರಳ ರೇಖಾ ವಿನ್ಯಾಸವನ್ನೇ ಮರದ ಹಲಗೆಗಳ ಮೇಲೆ ಕೆತ್ತುವ ಮೂಲಕ ತಿರುಗೆ ಮಣೆ ಮಾಡಲಾಗುತ್ತದೆ. ಈಗ ಮರದ ಪ್ಲೈವುಡ್‌ಗಳ ಮೇಲೂ ಹಸೆಚಿತ್ತಾರ ಪ್ರಯೋಗವನ್ನು ಕೆಲವು ಹವ್ಯಾಸಿ ಕಲಾವಿದರು ಮಾಡುತ್ತಿದ್ದಾರೆ. ಚಿತ್ರಸಿರಿಯ ಚಂದ್ರಶೇಖರ್



ಸಿರಿವಂತೆ ಅವರು ಈ ಬಗೆಯ ವಿಭಿನ್ನ ಪ್ರಯತ್ನವನ್ನೂ ಮಾಡಿ ಸೈ ಎನಿಸಿಕೊಂಡಿದ್ದಾರೆ.ಹಿಂದೆ ಈಬಗೆಯ ಚಿತ್ರಗಳನ್ನು ಇಡುಕಲಿನಲ್ಲೂ ಬರೆಯುತ್ತಿದ್ದರು.ಮರದ ಹಲಗೆ ಮೇಲೆ ಬರೆಯುವ ಪದ್ದತಿ ಇತ್ತು.

ವಸ್ತ್ರ ಚಿತ್ತಾರ

ವಸ್ತ್ರ ಚಿತ್ತಾರ ವಿನ್ಯಾಸ ಇತ್ತೀಚೆಗೆ ಹೆಚ್ಚು ನಾವಿನ್ಯಯುತವಾಗಿ ಬೆಳೆದಿದೆ.ಹಿಂದೆ ಮದುವೆಗೆ ಬಳಸುವ ಖಾದಿಯ ಬಿಳಿವಸ್ತ್ರದ ಮೇಲೆ ಶಾಸ್ತ್ರಕ್ಕೆ ಬರೆಯುತ್ತಿದ್ದರು. ಈಗ ಆಧುನಿಕ ಕಲಾವಿದರು ಕೆಲವರು ಸೀರೆಗಳ ಮೇಲೆಯೂ ಹಸೆಚಿತ್ತಾರ ವಿನ್ಯಾಸ ಮಾಡುತ್ತಿದ್ದಾರೆ. ಜವಳಿ ಉದ್ಯಮ ವಲಯ ಹಸೆಚಿತ್ತಾರದ ಮೋಟಿಫ್ಗಳನ್ನು ಸೀರೆಗಳಲ್ಲಿ,ವಿವಿಧ ವಸ್ತ್ರವಿನ್ಯಾಸಗಳಲ್ಲಿ ಬಳಸಲಾಗುತ್ತಿದೆ. ಹಾಗಾಗಿಯೇ ಈಗ ಹಸೆಚಿತ್ತಾರ ಉದ್ಯಮವಲಯದಲ್ಲೂ ಸಾಕಷ್ಟು ಬೇಡಿಕೆ ಪಡೆದುಕೊಂಡಿದೆ.

ಹಸೆಚಿತ್ತಾರ ಈಗ ಕೆಲವು ಕಲಾವಿದರಿಗೆ ಅನ್ನದ ಕಲೆಯಾಗಿ ಸಹ ಭರವಸೆ ಮೂಡಿಸಿದೆ. ಚಂದ್ರಶೇಖರ ಸಿರಿವಂತೆ, ಗೌರಮ್ಮ ಸಿರಿವಂತೆ,ರಾಧಾ ಸುಳ್ಳೂರು,ಕುಸುಮ ಅಣ್ಣಪ್ಪ ಅವರು ಸೀರೆಗಳ ಮೇಲೆಯೇ ನೇರವಾಗಿ ಹಸೆಚಿತ್ತಾರ ಬಿಡಿಸಿ ವಿಶಿಷ್ಟ ವಿನ್ಯಾಸದ ಹಸೆಚಿತ್ತಾರದ ಸೀರೆಗಳನ್ನು ಮಾರುತ್ತಿದ್ದಾರೆ.ಹೆಗ್ಗೋಡಿನ ಚರಕ ಸಂಸ್ಥೆಯು ಈನಿಟ್ಟಿನ ಹಲವು ಪ್ರಯೋಗ ಮಾಡಿದೆ. ಜವಳಿ ಉದ್ಯಮದಲ್ಲಿ ಹಸೆಚಿತ್ತಾರಕ್ಕೆ ಭವಿಷ್ಯವಿದೆ.ಮಹಿಳಾ ಸ್ವಾವಲಂಬನೆಗೆ ಕರಕುಶಲ ಕಲೆಯಾಗಿಯೂ ಪೋಷಿಸಬಹುದು. ಜಪಾನ್ ಅಮೇರಿಕಾ ಮತ್ತಿತರೆ ದೇಶಗಳೂ ಈಗ ಹಸೆಚಿತ್ತಾರ ವಿನ್ಯಾಸಗಳ ಬಗ್ಗೆ ಶಿವಮೊಗ್ಗಕ್ಕೆ ಬಂದು ಅದ್ಯಯುನ ಮಾಡಿ ಜವಳಿ ಉಧ್ಯಮಕ್ಕೆ ಬಳಸಿಕೊಂಡಿದ್ದಾರೆ.ಹಸುವಂತೆ ಈಶ್ವರ ನಾಯ್ಕರು ಬಣ್ಣದ ಛತ್ರಿಗಳ ಮೇಲೆಯೂ ಹಸೆಚಿತ್ತಾರ ಮೂಡಿಸಿದ್ದಾರೆ. ವಸ್ತ್ರ ಚಿತ್ತಾರವನ್ನುಉದ್ಯಮವಾಗಿಸುವ ಆವಕಾಶಗಳವೆ.

ಕರ್ನಾಟಕ ದೇಶೀ ಚಿತ್ರ ಕಲಾ ಪರಂಪರೆಯ ಅಸ್ಮಿತೆಯಾಗಿ

ಹಸೆ ಚಿತ್ತಾರ

ಮಹಾರಾಷ್ಟ್ರದಲ್ಲಿ ವರ್ಲಿಚಿತ್ರಕಲೆ,ಬಿಹಾರದಲ್ಲಿ ಮಧುಬನಿ, ಒರಿಸ್ಸಾದಲ್ಲಿ ಸೊರಾ ಕಲೆ ಇದ್ದಂತೆ ಕರ್ನಾಟಕದಲ್ಲಿ ಹಸೆ ಚಿತ್ತಾರ ಕಲೆ,ಭೂಮಣ್ಣಿ ಬುಟ್ಟಿ ಚಿತ್ತಾರ ಕಲೆ ನೆಲಮೂಲದ ಚಿತ್ರಕಲೆಯಾಗಿದೆ. ವಾರ್ಲಿ ಚಿತ್ರಕಲೆಗಿಂತ ಸಾಕಷ್ಟು ವಿಭಿನ್ನತೆ,ಅಂತಸತ್ವ ಹೊಂದಿರುವ ಕರ್ನಾಟಕದ ಮಲೆನಾಡಿನಲ್ಲಿ ಕಂಡುಬರುವ ಹಸೆಚಿತ್ತಾರ ವೈವಿಧ್ಯತೆ ಭಾರತದ ಯಾವ ಭಾಗದಲ್ಲು ಕಂಡುಬರುವುದಿಲ್ಲ. ಕರ್ನಾಟಕದ ಮಲೆನಾಡಿನಲ್ಲಿ ಮಾತ್ರ ಕಂಡುಬರುವ ದೀವರ ಹಸೆಚಿತ್ತಾರ, ದೀವರ ಭೂಮಣ್ಣಿ ಬುಟ್ಟಿ ಚಿತ್ತಾರ ವಿನ್ಯಾಸಗಳಂತೂ ಮತ್ತಷ್ಟು ವೈವಿದ್ಯಮಯವಾಗಿದ್ದು ಇತ್ತೀಚಿನ ದಶಕಗಳಲ್ಲಿ ಸಂಪ್ರದಾಯದಾಚೆ ಹಲವಾರು ಸಂಘಸಂಸ್ಥೆಗಳು, ಕಲಾವಿದರುಗಳು ಜನಪ್ರಿಯಗೊಳಿಸಿದ್ದಾರೆ. ರಾಷ್ಟ್ರ ,ಅಂತರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಹಸೆಚಿತ್ತಾರ ಪ್ರದರ್ಶನವನ್ನು ಪ್ರತಿವರ್ಷ ಹಲವಾರು ಕಲಾವಿದರು ,ಸಂಘಸಂಸ್ಥೆಗಳ ನೆರವಿನೊಂದಿಗೆ ಏರ್ಪಡಿಸಿದ್ದಾರೆ. ಕರ್ನಾಟಕದ ಈಶ್ವರ ನಾಯ್ಕ ಹಸುವಂತೆ,ಗಡೇಮನೆ ಲಕ್ಷ್ಮಮ್ಮ, ಸಿರಿವಂತೆಯ ಚಂದ್ರಶೇಖರ, ರಾಧಾ ಸುಳ್ಳೂರು, ಕುಸುಮಾ ಅಣ್ಣಪ್ಪ,ಮುಂತಾದವರು ಅಂತರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ನೆಲೆಮೂಲದ ಹಸೆಚಿತ್ತಾರಕಲೆಯನ್ನು ಪಸರಿಸಿದ್ದಾರೆ. ಅಮೆರಿಕಾ,ಆಸ್ಟ್ರೇಲಿಯಾ, ಜಪಾನ್,ಶ್ರೀಲಂಕಾ, ಅರಬ್ ರಾಷ್ಟ್ರಗಳೂ ಸೇರಿದಂತೆ ಕರ್ನಾಟಕದ ಹಸೆಚಿತ್ತಾರವನ್ನು ಮೆಚ್ಚಿಕೊಂಡಿದ್ದಾರೆ.ಎಂ ಎಲ್ ಸೋಮವರದ ,ರಾಧಾಕೃಷ್ಣ ಬಂದಗದ್ದೆಯವರು ,ಹೊಸ ತಲೆಮಾರಿನ ಹಲವು ಕಲಾವಿದರು ಈ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.

ಹಸೆಚಿತ್ತಾರ ಪರಂಪರೆ ಕರ್ನಾಟಕ ನೆಲಮೂಲದ ಜನಪದರ ಚಿತ್ತಾರಗಿತ್ತಿಯರ ಜ್ಞಾನ ಪರಂಪರೆಯಿಂದ ತಲೆಮಾರಿನಿಂದ ತಲೆಮಾರಿಗೆ ವಿಶಿಷ್ಟ ವಿನ್ಯಾಸ

ಪಡೆದಿದೆ.ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ವಿನ್ಯಾಸದ ಸಾಂಪ್ರದಾಯಿಕ ಚಿತ್ತಾರಗಳಿವೆ. ಅವೆಲ್ಲವೂ ಕರ್ನಾಟಕದ ದೇಶೀ ಚಿತ್ತಾರ ಪರಂಪರೆಯನ್ನು ಸಾರುತ್ತವೆ.ಅವೆಲ್ಲವೂ ಇತರೆ ಜಾನಪದ ಕಲಾ ಪರಂಪರೆಯಷ್ಟೆ ಅನನ್ಯವಾದುದಾಗಿದೆ .ಡಾ.ಮೋಹನ್ ಚಂದ್ರಗುತ್ತಿ ಅವರು ಸಂಶೋಧನಾ ಕೃತಿಯಲ್ಲಿ ಹಸೆಚಿತ್ತಾರ ಕುರಿತು ಸಾಕಷ್ಟು ಆಧಾರ ಒದಗಿಸಿದ್ದಾರೆ. ಡಾ.ನಾ.ಡಿಸೋಜಾ ಅವರು ತಮ್ಮ ಹಲವಾರು ಕೃತಿಗಳಲ್ಲಿ ಹಸೆಚಿತ್ತಾರ ಕುರಿತು ,ದೀವರ ಚಿತ್ತಾರಗಿತ್ತಿಯರ ಕೌಶಲ್ಯದ ಕುರಿತು ಬರೆದಿದ್ದಾರೆ. ಕರ್ನಾಟಕ ಚಿತ್ರಕಲಾ ಸಂಸ್ಕೃತಿ ಪರಂಪರೆಯ ಅಸ್ಮಿತೆಯಾಗಿ ಹಸೆಚಿತ್ತಾರ ಉಳಿಸಿಕೊಳ್ಳಬೇಕು ಎನ್ನುವ ಪ್ರಜ್ಞಾವಂತಿಕೆ,ಕಳಕಳಿಯಿದ್ದಾಗ ಮಾತ್ರ ಇಂತಹ ಕಲೆಯನ್ನು ಪೋಷಿಸಲು ಸಾಧ್ಯ. ರಾಜ್ಯ ಮಟ್ಟದಲ್ಲಿ ವರ್ಷಕೊಮ್ಮೆ ಹಸೆಚಿತ್ತಾರ ,ಬುಟ್ಟಿ ಚಿತ್ತಾರ ಸ್ಪರ್ಧೆಯನ್ನು ದೀವರ ಸಮುದಾಯದ ಸಂಘಟನೆಗಳು ಏರ್ಪಡಿಸುತ್ತಿವೆ. ಚಿತ್ತಾರಗಿತ್ತಿಯರನ್ನು ಪುರಸ್ಕರಿಸುವುದು, ತರಬೇತಿ, ಉಪನ್ಯಾಸ ಏರ್ಪಡಿಸುವುದು ಸಹ ಆಗೀಗ ಮಾಡಿಕೊಂಡು ಬರುತ್ತಿದ್ದಾರೆ.

ಲಲಿತಕಲಾ ಅಕಾಡೆಮಿ,ಜಾನಪದ ಅಕಾಡೆಮಿಗಳು ಸಹ ಹಸೆಚಿತ್ತಾರಕ್ಕೆ ಈತ್ತೀಚೆಗೆ ಪ್ರೋತ್ಸಾಹ ನೀಡುತ್ತಿವೆ. ಹಲವು ದೀವರ ಯುವಕ ಯುವತಿಯರು ರಾಜ್ಯ,ಅಂತರಾಜ್ಯ,ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಹಸೆ ಚಿತ್ತಾರ ಪ್ರದರ್ಶನ ಮಾಡಿ ತಮ್ಮ ಕಲೆಯತ್ತ ಗಮನಸೆಳೆಯುವಂತೆ ಮಾಡಿದ್ದಾರೆ. ಕರ್ನಾಟಕದಲ್ಲಿ ಚೆನ್ನಪಟ್ಟಣದ ಬೊಂಬೆಗಳಿಗೆ, ಬೀದರಿನ ಬಿದಿರಿ ಕಲೆಗೆ ,ನೀಡಿದ ಆಧ್ಯತೆಯಂತೆ ಶಿವಮೊಗ್ಗದ ಮಲೆನಾಡಿನ ಹಸೆಚಿತ್ತಾರಕ್ಕೆ ಇನ್ನಷ್ಟು ಪ್ರೋತ್ಸಾಹ ಅಗತ್ಯವಿದೆ.

ರಾಜ್ಯ ,ರಾಷ್ಟ್ರ ,ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದ ಹಸೆಚಿತ್ತಾರ

ಈಗಾಗಲೇ ನಮ್ಮ ಹಸೆ ಚಿತ್ತಾರ ಕಲಾವಿಧರಾದ ಹಸುವಂತೆ ಈಶ್ವರ ನಾಯ್ಕ, ಗಡೇಮನೆ ಲಕ್ಮಮ್ಮ, ಸಿರಿವಂತೆ ಚಂದ್ರಶೇಖರ ,ರಾಧಾ ಸುಳ್ಳೂರು, ಮುಂತಾದವರು ದೇಶ ವಿದೇಶಗಳಲ್ಲಿ ಹಸೆಚಿತ್ತಾರ ಪ್ರದರ್ಶನ ನೀಡಿ ಮಾರಾಟವನ್ನೂ ಮಾಡಿ ಜಾಗತಿಕವಾಗಿ ಗಮನಸೆಳೆದಿದ್ದಾರೆ. ಹಸುವಂತೆ ಈಶ್ವರ ನಾಯ್ಕರು ಹಸೆ ಚಿತ್ತಾರದಲ್ಲಿ ವಿಶಿಷ್ಟ ವಿನ್ಯಾಸಗಳನ್ನು ಪ್ರಯೋಗಕ್ಕಿಳಿಸಿ

ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಮೇರಿಕಾ ,ಆಸ್ಟ್ರೇಲಿಯಾ, ಜಪಾನ್ ಸಿಂಗಪುರ ಮುಂತಾದ ಹಲವು ದೇಶಗಳಲ್ಲಿ ಹಸೆಚಿತ್ತಾರ ಪ್ರದರ್ಶನ ,ತರಬೇತಿ ನೀಡಿದ್ದಾರೆ. ಗಡೇಮನೆ ಲಕ್ಮಮ್ಮ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಸಿರಿವಂತೆ ಚಂದ್ರಶೇಖರ ಮತ್ತು ಪತ್ನಿ ಗೌರಮ್ಮ ಇವರು ಜಪಾನ್,ಸಿಂಗಾಪೂರ ಮತ್ತಿತರ ಕಡೆ ಹಸೆ ಚಿತ್ತಾರ ಪ್ರದರ್ಶನ ನೀಡಿ ಅಂತರಾಷ್ಟ್ರೀಯ ಕಲಾವಿದರಿಂದ ಮೆಚ್ಚುಗೆಗಳಿಸಿದ್ದಾರೆ.

ಇತ್ತೀಚೆಗೆ ಹೊಸನಗರ ಮೂಲದ ಕಲಾವಿದ ಅರುಣಕುಮಾರ್ ಅವರು, ದೇಶೀ ಕಲಾ ಅಭಿವೃದ್ಧಿ ಕೇಂದ್ರ ಬೆಂಗಳೂರಿನ ಗೀತಾ ಭಟ್ ಅಂತ ಕಲಾ ಪ್ರವೃತ್ತಿಯವರು ಸಹ ಹಸೆ ಚಿತ್ತಾರಗಿತ್ತಿಯರನ್ನು ಕರೆಸಿ ಚಿತ್ತಾರ ಬಿಡಿಸಿ ಅವನ್ನು ದೇಶ ವಿದೇಶದಲ್ಲಿ ಪ್ರಚುರಪಡಿಸುವ ಪ್ರಯತ್ನ ಮಾಡಿದ್ದಾರೆ ರಾಧಾ ಸುಳ್ಳೂರು ಹಸೆ ಚಿತ್ತಾರವನ್ನು ಉದ್ಯಮಶೀಲತೆಯತ್ತ ಕೊಂಡೊಯ್ದಿದ್ದಾರೆ. ಹಾಗೆಯೇ ಸಾಗರದ ಚರಕ ಸಂಸ್ಥೆ, ರಾಧಾಕೃಷ್ಣ ಬಂದಗದ್ದೆ ಮುಂತಾದವರೂ ಸಹ ಹಸೆ ಚಿತ್ತಾರದಲ್ಲಿ ನಾವಿನ್ಯ ಪ್ರಯೋಗ ಮಾಡುತ್ತಾ ನಮ್ಮ ಮಲೆನಾಡಿನ ಹಸೆ ಚಿತ್ತಾರ ಪರಂಪರೆಯನ್ನು ಹೆಮ್ಮೆಯ ಪರಂಪರೆಯಾಗಿಸುವಲ್ಲಿ ಗಮನಸೆಳೆದಿದ್ದಾರೆ. ಅತಿ ಮುಖ್ಯವಾಗಿ ದೀವರು ಸಮುದಾಯದಲ್ಲಂತೂ ಪ್ರತಿ ಹೆಣ್ಣುಮಕ್ಕಳೂ ಅಕ್ಷರ ಕಲಿಯದಿದ್ದರೂ ಹಸೆ ಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರ ಬಿಡಿಸುವುದನ್ನು ಕಲಿಯುವುದು ಕಡ್ಡಾಯ ಎನ್ನುವ ಅಲಿಖಿತ ಸಾಂಪ್ರದಾಯಿಕ ನಿಯಮವೇ ಇದೆ. ಹಾಗಾಗಿ ದೀವರು ಸಮುದಯಾದ ಬಹುತೇಕ ಎಲ್ಲಾ ಹೆಂಗಸರು ಸಹ ಚಿತ್ತಾರಗಿತ್ತಿಯರು ಎಂಬುದು ಗಮನಿಸಬೇಕಾದ ಪ್ರಮುಖ ಅಂಶ . ಹಾಗಾಗಿ ಅತಿ ಹೆಚ್ಚಿನ ಸಂಖ್ಯೆಯ ಹಸೆ ಚಿತ್ತಾರ ಕಲಾವಿದರಿರುವುದೂ ಸಹ ಶಿವಮೊಗ್ಗದಲ್ಲಿ ಎನ್ನುವುದು ಶಿವಮೊಗ್ಗದ ಹೆಮ್ಮೆಯ ಸಂಕೇತವೆಂದೆ ದಾಖಲಿಸಲೇಬೇಕು.

ಇತ್ತೀಚೆಗೆ ಹಸೆಚಿತ್ತಾರವನ್ನು ಹಲವು ದೇಶಗಳ ಕಲಾವಿದರು ಆಸಕ್ತಿಯಿಂದ ಕಲಿತು ತಮ್ಮ ದೇಶಗಳ ಜವಳಿ ಉಧ್ಯಮದಲ್ಲಿ ಅಳವಡಿಸಿಕೊಂಡಿದ್ದಾರೆ.ಡಿಜಿಟಲ್

ಹಸೆಚಿತ್ತಾರ ರಚಿಸಿದ್ದಾರೆ. ಹಸೆಚಿತ್ತಾರದಲ್ಲಿ ಆಂಗ್ಲ ವರ್ಣ ಮಾಲೆಗಳನ್ನು ಬರೆಯುವ ,ವಿಲಾಸಿ ಮನೆಗಳ ಗೃಹ ಅಲಂಕಾರ ಮಾಡುವ ಹೊಸ ಹೊಸ ಪ್ರಯೋಗಗಳಿಗೆ ಹಲವು ದೇಶಗಳ ಕಲಾವಿದರು ಮುಂದಾಗಿದ್ದು ಕರ್ನಾಟಕ ನೆಲಮೂಲದ ಹಸೆಚಿತ್ತಾರ ನಿದಾನವಾಗಿ ವಿಶ್ವಮನ್ನಣೆ ಪಡೆದು ಸಂಪ್ರದಾಯಿಕ ಕಲೆಯ ಪರದೆ ಕಳಚಿಕೊಂಡು ಜಾಗತೀಕರಣವಾಗುತ್ತಿದೆ.

ಕರ್ನಾಟಕದ ವಿವಿಧ ಜಾತಿಗಳ ಸಂಪ್ರದಾಯಿಕ ಆಚರಣೆಗಳಲ್ಲಿ

ಹಸೆ ಚಿತ್ತಾರದ ಪ್ರಭಾವ

ಕರ್ನಾಟಕದ ಹಲವು ಭಾಗಗಳಲ್ಲಿನ ಬೇರೆ ಬೇರೆ ಜಾತಿಯ ಜನಸಮುದಾಯದಲ್ಲಿನ ಆಚರಣೆ ಸಂಪ್ರದಾಯಗಳಲ್ಲಿ ಒಂದಿಷ್ಟು ಬೇರೆ ಬೇರೆ ವಿನ್ಯಾಸದ ಹಸೆಚಿತ್ತಾರ ಮಾದರಿಯ ಚಿತ್ತಾರ ಬರೆಯುವುದು ಸಹ ಕಂಡುಬರುತ್ತದೆ.ಮದುವೆಗೆ ಹಸೆ ಶಾಸ್ತ್ರ ಬಹುತೇಕ ಎಲ್ಲಾ ಹಿಂದೂ ಜಾತಿಗಳಲ್ಲಿಯೂ ಒಂದಿಷ್ಟು ಬಿನ್ನ ವಿಧಿ ವಿಧಾನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.ವಿವಿಧ ಹಬ್ಬಗಳಲ್ಲಿ ಗೃಹ ಅಲಂಕಾರದ ಭಾಗವಾಗಿಯೂ ದೇಶೀ ಚಿತ್ರಕಲಾ ವೈವಿಧ್ಯತೆ ಕಂಡುಬರುತ್ತದೆ. ರಾಜ್ಯಾಧ್ಯಾಂತ ಎಲ್ಲಾ ಸಮುದಾಯಗಳಲ್ಲೂ ಹಸೆಚಿತ್ತಾರ ಕಂಡುಬರದಿದ್ದರೂ ಬೇರೆ ಬೇರೆ ಸಾಂಪ್ರದಾಯಿಕ ಚಿತ್ತಾರ ಮಾದರಿಗಳು ಅಲ್ಲಲ್ಲಿ ವಿರಳವಾಗಿ ಕಂಡುಬರುತ್ತದೆ.ರಾಜ್ಯದ ಹಲವೆಡೆ ಜನಜೀವನದ ಸಂಸ್ಕೃತಿಯಲ್ಲಿ ಬೆರೆತಿವೆ.

ಶಿವಮೊಗ್ಗದಲ್ಲಿ ಬಹುಸಂಖ್ಯೆಯಲ್ಲಿ ದೀವರು ಸಮುದಾಯದ ಪ್ರತಿ ಕುಟುಂಬ ಸೇರಿದಂತೆ ಲಕ್ಷಾಂತರ ಮಹಿಳೆಯರ ರಕ್ತಗತ ಕಲೆಯಂತೆ ಸಾಂಪ್ರದಾಯಿಕ ಚಿತ್ತಾರ ಕಲೆಯಾಗಿರುವ ಹಸೆಚಿತ್ತಾರ ಮದುವೆಯಲ್ಲಿ,ಭೂಮಣ್ಣಿ ಹಬ್ಬದಲ್ಲಿ ಬುಟ್ಟಿ ಚಿತ್ತಾರ ಬಿಡಿಸುವಿಕೆ, ದೀಪಾವಳಿ,ಬಲೀಂದ್ರ ಪೂಜೆ, ಮಹಾನವಮಿಯಲ್ಲಿ ಹಸೆಚಿತ್ತಾರ ಬಿಡಿಸುವುದು ಸಾಂಪ್ರದಾಯಿಕ ರೂಢಿಪದ್ಧತಿಯಾಗಿದ್ದು ಈಗಲೂ ಕಡ್ಡಾಯ ರೂಢಿಯಲ್ಲಿದೆ. ದೀವರ

ಸಮುದಾಯಗಳ ಸಂಘಟನೆಗಳು ಜಿಲ್ಲಾಹಂತ ,ರಾಜ್ಯಹಂತದ ಹಸೆಚಿತ್ತಾರ ಸ್ಪರ್ಧೆ,ತರಬೇತಿ ಸಹ ಏರ್ಪಡಿಸಲಾಗುತ್ತಿದೆ.

ಮಲೆನಾಡಿನ ಕೆಲವೆಡೆ ಹಾಗೂ ಕರಾವಳಿ ಭಾಗದಲ್ಲಿ ಚದುರಿದಂತೆ ನಾಮದಾರಿಗಳು, ಕರೆ ಒಕ್ಕಲಿಗರು,ಮಡಿವಾಳರು,ಗೊಂಡರು,ಹಾಲಕ್ಕಿ ಒಕ್ಕಲಿಗರು,ಮೊಘವೀರರು,ಹಸಲರು,ಕೆಲವು ಹವ್ಯಕ ಕುಟುಂಬಗಳು ಸಹ ಬೇರೆ ಬೇರೆ ವಿನ್ಯಾಸದ ಸಾಂಪ್ರದಾಯಿಕ ಚಿತ್ತಾರ ಪರಂಪರೆ ಅನುಸರಿಸಿದ್ದು ಹಲಿ,ಹಸಗರ ,ಶೇಡಿ,ಕಾವಿ,ಮಂಡಲ ಎನ್ನುವ ಹೆಸರಿನಲ್ಲಿ ಹಬ್ಬಗಳಲ್ಲಿ, ಮದುವೆಗಳಲ್ಲಿ ಬಿಡಿಸುವ ರೂಢಿ ಕಂಡುಬರುತ್ತದೆ. ಆದರೆ ಕೃಷಿ ಭೂಮಿ ಇದ್ದರು ಸಹ ಶಿವಮೊಗ್ಗದ ಇತರೆ ಸಮುದಾಯಗಳು ದೀವರಂತೆ ಭೂಮಣ್ಣಿ ಬುಟ್ಟಿಗೆ ಚಿತ್ತಾರ ಬರೆಯುವ ಸಂಪ್ರದಾಯ ಬೇರೆ ಸಮುದಾಯಗಳಲ್ಲಿ ಇಲ್ಲ. ಕೆಲವೆಡೆ ಬುಟ್ಟಿಗಳಿಗೆ ಗೋಮಯ ಬಳಿದು ಬೊಟ್ಟುಗಳನ್ನಿಡುವ ಸಂಪ್ರದಾಯವಿದೆ.

ಮದುವೆಗೆ ,ಗೃಹ ಅಲಂಕಾರಕ್ಕೆ ಅಲ್ಲಲ್ಲಿ ವಿರಳವಾಗಿ ಹಸೆಚಿತ್ತಾರವನ್ನು ದೀವರ ಚಿತ್ತಾರಗಿತ್ತಿಯರಿಂದ ಬರೆಸುವುದು, ಕೆಲವರು ಕಲಿತು ಬಿಡಿಸುವುದು ಕಂಡುಬರುತ್ತದೆ. ಕೆಲವು ಸಮುದಾಯದವರು ದೀವರ ಚಿತ್ತಾರಗಿತ್ತಿಯರಿಗೆ ವೀಳ್ಯ ನೀಡಿ ಹಸೆ ಚಿತ್ತಾರ ಬಿಡಿಸಲು ಆಹ್ವಾನಿಸುವ ಸಂಪ್ರದಾಯ ಈಗಲೂ ಅಲ್ಲಲ್ಲಿ ಕಂಡುಬರುತ್ತದೆ. ರಾಜ್ಯದಲ್ಲಿರುವ ಎಲ್ಲಾ ಕರೆ ಒಕ್ಕಲಿಗರಾಗಲೀ,ಹಾಲಕ್ಕಿಗಳಾಗಲೀ ಹಸಲರು ,ಹವ್ಯಕರಾಗಲೀ ಹಸೆ ಚಿತ್ತಾರ ಪರಂಪರೆ ಅನುಸರಿಸಿಲ್ಲ. ಆದರೆ ಶಿವಮೊಗ್ಗ,ಉತ್ತರಕನ್ನಡ ಜಿಲ್ಲೆ,ಕರಾವಳಿ ಭಾಗದಲ್ಲಿ ಮಾತ್ರ ಅನುಸರಿಸಿದ್ದಾರೆ. ಆದರೆ ದೀವರು ಸಮುದಾಯ ರಾಜ್ಯದಲ್ಲಿ ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ಮಾತ್ರ ವಾಸವಾಗಿದ್ದು ಮದುವೆಗೆ ,ಭೂಮಣ್ಣಿ ಹಬ್ಬಕ್ಕೆ ಕಡ್ಡಾಯ ಸಂಪ್ರದಾಯವಾಗಿ ಈಗಲೂ ಅನುಸರಿಸುತ್ತಿದ್ದಾರೆ.ಹಾಗಾಗಿ ದೀವರ ಹಸೆಚಿತ್ತಾರ ,ದೀವರ ಬುಟ್ಟಿಚಿತ್ತಾರ ಎಂದೆ ಮಲೆನಾಡಿನಲ್ಲಿ ಕರೆಯುವ ರೂಢಿ ಇದೆ. ಮಹಾರಾಷ್ಟ್ರದಲ್ಲೂ ಪ್ರಧಾನವಾಗಿ ವಾರ್ಲಿ ಜನಾಂಗ ಬಿಡಿಸುವ ಚಿತ್ತಾರವನ್ನು ಆ ಸಮುದಾಯದ ಹೆಸರಿನೊಂದಿಗೆ ಹೊಂದಿಕೊಂಡಂತೆ ವರ್ಲಿಕಲೆಯೆಂದೆ ಕರೆಯಲಾಗಿರುವಂತೆ ಮಲೆನಾಡಿನ

ಹಸೆಚಿತ್ತಾರವನ್ನು ದೀವರ ಹಸೆಚಿತ್ತಾರ ಎಂದು ಕರೆಯುವ ರೂಢಿ ಹಳ್ಳಿಗಳಲ್ಲಿ ಕಂಡುಬರುತ್ತದೆ. ಕೆಲವು ಕಡೆ ದೇವಸ್ಥಾನಗಳಲ್ಲಿ,ಮಠಗಳಲ್ಲಿ ಕಾವಿಚಿತ್ರಕಲೆ ಮಂಡಲ ಕಂಡುಬರುತ್ತದೆ. ಅದು ಹಸೆಚಿತ್ತಾರಕ್ಕಿಂತ ವಿಭಿನ್ನವಾದದ್ದಾಗಿದೆ.

ಉತ್ತರ ಕರ್ನಾಟಕ ಕೆಲವು ಭಾಗದಲ್ಲಿ ಮದುವೆಗೆ ,ಹಬ್ಬಗಳಿಗೆ, ಗೃಹಪ್ರವೇಶಕ್ಕೆ ಗೋಡೆ ಚಿತ್ರ ಬರೆಯುವ ಸಂಪ್ರದಾಯಗಳಿವೆ. ಅವು ವಿನ್ಯಾಸದಲ್ಲಿ ಸರಳವಾಗಿವೆ. ಕೆಲವು ಕಡೆ ರಂಗೋಲಿಯನ್ನೇ ಗೋಡೆ ಚಿತ್ರಗಳಾಗಿ ಅನುಕರಿಸಲಾಗಿದೆ. ಆಯಾ ಜಾತಿಗಳ ರೂಢಿಗತ ಸಂಪ್ರದಾಯವಾರು ಕೆಲವು ವಿಭಿನ್ನತೆಗಳಿವೆ. ಬಹುಸಂಖ್ಯೆಯಲ್ಲಿ ವೈವಿಧ್ಯಮಯ ವಿನ್ಯಾಸದ ಹಸೆಚಿತ್ತಾರ ಸಂಪ್ರದಾಯ ಇಂದಿಗೂ ಕಾಣಸಿಗುವುದು ಮಲೆನಾಡಿನ ಶಿವಮೊಗ್ಗದ ಸಾಗರ,ಸೊರಬ ಹೊಸನಗರ ತೀರ್ಥಹಳ್ಳಿ ಪ್ರದೇಶಗಳಲ್ಲಿ ವಾಸಿಸುವ ದೀವರ ಮಹಿಳೆಯರಲ್ಲಿ ಮಾತ್ರ.ಅವರಿಗೆ ಪರಂಪರೆಯಿಂದ ರಕ್ತಗತ ಕಲೆಯಂತೆ ಬಂದಿದೆ.

ಈಗೀಗ ಪುರುಷ ಕಲಾವಿಧರೂ ಹಸೆಚಿತ್ತಾರ ಕಲಿತಿದ್ದಾರೆ. ಈಶ್ವರ ನಾಯ್ಕ ಹಸುವಂತೆ, ಚಂದ್ರಶೇಖರ ಸಿರಿವಂತೆ ,ಸಾಗರದ ರಾಧಾಕೃಷ್ಣ ಬಂದಗದ್ದೆಯಂತವರು ,ರವಿರಾಜ್ ಸಾಗರ್ ಮಂಡಗಳಲೆ,ವಿಶ್ವ ಹೆಚ್ಚೆ, ಹಸೆ ಚಿತ್ತಾರ ಬರೆಯುವುದನ್ನು ಕಲಿತು ಪ್ರಚಾರ ಮಾಡುತ್ತಿರುವುದು ಕಂಡುಬರುತ್ತದೆ. ರಾಜ್ಯದ ಅಲ್ಲಲ್ಲಿ ಕೆಲವು ಚಿತ್ರಕಲಾವಿದರು ಹಸೆ ಚಿತ್ತಾರ ಕಲಿತು ಹೊಟೆಲ್, ಶಾಲೆಗಳು, ಸರ್ಕಾರಿ ಕಛೇರಿಗಳು ಮತ್ತಿತರ ಕಡೆ ಅಲಂಕಾರಿಕವಾಗಿ ಗೋಡೆ ಚಿತ್ತಾರ ಬರೆಯುತ್ತಿರುವುದು ಕಂಡುಬರುತ್ತದೆ. ಆದರೆ ಕೆಲವರು ಅದನ್ನು ವರ್ಲಿ ಕಲೆಯೆಂದೇ ಕರೆಯುತ್ತಿರುವುದು ವಿಪರ್ಯಾಸ. ವರ್ಲಿಗಿಂತ ವಿಶಿಷ್ಟ ವಿನ್ಯಾಸದ್ದು ,ಅಂತಃಸತ್ವವುಳ್ಳದ್ದು ಕರ್ನಾಟಕದ ಹಸೆಚಿತ್ತಾರ. ಪರಂಪರೆಯಿಂದ ದೀವರು ವಿಶಿಷ್ಟ ವಿನ್ಯಾಸದಲ್ಲಿ,ವಿಶೇಷ ಆಯಾಮಗಳಲ್ಲಿ,ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೊಂದಿಗೆ ಕಡ್ಡಾಯವಾಗಿ ಆಚರಣೆಯ ಭಾಗವಾಗಿ ರೂಡಿಸಿಕೊಂಡು ಬಂದಿದ್ದು ರಾಜ್ಯದ ಇನ್ನಿತರೆ ಇತರೆ ಸಮುದಾಯದಲ್ಲಿ ಎಲ್ಲಾ ಕುಟುಂಬಗಳಲ್ಲಿ ಕಡ್ಡಾಯವಾಗಿ ರೂಡಿಸಿಕೊಂಡು ಬಂದದ್ದು ಕಂಡುಬರುವುದಿಲ್ಲ. ದೀವರ

ಹೆಣ್ಣುಮಕ್ಕಳು ಪ್ರಯತ್ನಪೂರ್ವಕವಾಗಿ ಕಲಿಯದೇ ತಲೆಮಾರಿನಿಂದ ತಲೆಮಾರಿಗೆ ರಕ್ತಗತವಾದ ಕಲೆಯಂತೆ ಲೀಲಾಜಾಲವಾಗಿ ಬಿಡಿಸುವುದೇ ವಿಶೇಷ.

ಈಗಲೂ ಮಲೆನಾಡಿನ ಕೆಲವೆಡೆ ಬೇರೆ ಬೇರೆ ಸಮುದಾಯದವರು ಮದುವೆ ಸಮಾರಂಭಕ್ಕೆ, ಗೋಡೆಗಳಿಗೆ ಹಸೆಚಿತ್ತಾರ ಬಿಡಿಸಲು ದೀವರ ಹೆಣ್ಣುಮಕ್ಕಳಿಗೆ ವೀಳ್ಯನೀಡಿ ಆಹ್ವಾನಿಸುವ ಪದ್ದತಿ ರೂಢಿಯಲ್ಲಿದೆ. ಹಿಂದೆ ಹಾಗೂ ಈಗಲೂ ಕೆಲವು ಇತರೆ ಸಮುದಾಯಗಳ ಕುಟುಂಬಗಳು ಹೆಣ್ಣು ಸಿಗದೆ ಅಥವಾ ಇನ್ಯಾವುದೋ ಕಾರಣಕ್ಕೆ ಅಂತರ್ಜಾತಿ ಸಂಬಂಧಗಳು ಏಪ್ಪಟ್ಟು ದೀವರ ಕನ್ಯೆಯರನ್ನು ಮದುವೆಯಾಗುವ ಸಂಧರ್ಬದಲ್ಲಿ ಕಡ್ಡಾಯವಾಗಿ ದೀವರ ಹಸೆಗೋಡೆ ಚಿತ್ತಾರ ಶಾಸ್ತ್ರ ಪಾಲಿಸಿಯೇ ಮದುವೆ ಮಾಡಿಕೊಡುವ ನಿಯಮ ವಿಧಿಸಲಾಗುತ್ತಿತ್ತು. ಅಷ್ಟರ ಮಟ್ಟಿಗೆ ದೀವರು ಹಸೆಗೋಡೆ ಚಿತ್ತಾರ ಬರೆಯುವ ಶಾಸ್ತ್ರವನ್ನು ಮದುವೆಯ ಕಡ್ಡಾಯ ವಿಧಿ ವಿಧಾನವಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ.ಇತ್ತೀಚೆಗೆ ಮಲೆನಾಡಿನ ಭಾಗದಲ್ಲಿ ಕೆಲವು ಇತರೆ ಸಮುದಾಯದ ಹವ್ಯಾಸಿ ಚಿತ್ರ ಕಲಾವಿದರೂ ಹಸೆ ಚಿತ್ತಾರ ಬರೆಯಲು ರೂಢಿಮಾಡಿಕೊಂಡಿರುವುದು ಕಂಡುಬರುತ್ತದೆ. ಆದರೆ ದೀವರ ಮನೆಯ ಪ್ರತಿ ಹೆಣ್ಣುಮಕ್ಕಳು ಕಡ್ಡಾಯವಾಗಿ ಹಸೆಚಿತ್ತಾರ ಬರೆಯುವುದನ್ನು ಕಲಿತು ಪ್ರತಿ ಭೂಮಣ್ಣೀ ಹಬ್ಬಕ್ಕೆ (ಭೂಮೀ ಹುಣ್ಣಿಮೆ) ಬುಟ್ಟಿಯಲ್ಲಿ ಚಿತ್ತಾರ ಬಿಡಿಸಿ ಹೊಲಕ್ಕೆ ಚರಗ ಚೆಲ್ಲಲು ಬಳಸುವ ಆಚರಣೆ ತಲೆತಲಾಂತರಗಳಿಂದ ಉಳಿಸಿಕೊಂಡು ಬರಲಾಗಿದೆ.ಭೂಮಿಬುಟ್ಟಿ ಚಿತ್ತಾರ ಇದು ದೀವರಲ್ಲಿ ಮಾತ್ರ ಕಂಡುಬರುತ್ತದೆ. ಸೊರಬದ ಕೆಲವು ಊರುಗಳಲ್ಲಿ ಕರೆಒಕ್ಕಲಿಗರು ಇದನ್ನು ಅನುಸರಿಸಿದ್ದು ಕಂಡುಬರುತ್ತದೆ.

ಮದುವೆಗಳಿಗೆ ಹಸೆಗೋಡೆ ಚಿತ್ತಾರ ಬರೆಯುವ ಚಿತ್ತಾರಗಿತ್ತಿಯರು ಲಕ್ಷಾಂತರ ಸಂಖ್ಯೆಯಲ್ಲಿ ದೀವರ ಮನೆಯ ಪ್ರತಿ ಕುಟುಂಬದಲ್ಲೂ ಇದ್ದರು. ಈಗಿನ ಶಿಕ್ಷಿತ ಹೆಣ್ಣುಮಕ್ಕಳಲ್ಲಿ ,ನೌಕರಸ್ತ ಕುಟುಂಬಗಳ ಮನೆಯಲ್ಲಿ ಕೆಲವು ಕಡೆ ಈ ಸಂಪ್ರದಾಯ ಪಾಲಿಸುತ್ತಾರಾದರೂ ಚಿತ್ತಾರ ಬರೆಯುವ ಕಲೆ

ಕಲಿಯಲು ಆಸಕ್ತಿ ತೋರುತ್ತಿರುವುದು ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಆದರೆ ಗ್ರಾಮೀಣ ಭಾಗದ ಪ್ರತಿ ದೀವರ ಕುಟುಂಬದಲ್ಲಿ ಮದುವೆ, ಭೂಮಣ್ಣೀ ಹಬ್ಬ, ಬೂರೇ ಹಬ್ಬ (ಬಲೀಂದ್ರ ಪೂಜೆ) , ದೀಪಾವಳಿಗೆ, ಮಹಾನವಮಿಗೆ ಬುಟ್ಟಿಚಿತ್ತಾರ,ಬಾಗಿಲು ತೋರಣ, ಗೋಡೆ ಚಿತ್ತಾರ ಬರೆಯುವ ರೂಢಿ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಶಿಕ್ಷಣ ಪಡೆದುಕೊಂಡ ದೀವರ ಕೆಲವು ಚಿತ್ತಾರ ಕಲಾವಿದೆಯರು ಹಾಗು ಕಲಾವಿದರ ಆಸಕ್ತಿ, ಪ್ರಯೋಗ ಶೀಲತೆಯಿಂದಾಗಿ ಜಾಗತಿಕವಾಗಿ ತೆರೆದುಕೊಳ್ಳುವತ್ತ ಸಾಗಿ ಹೊಸ ದಿಕ್ಕಿಗೆ ತೆರೆದುಕೊಂಡಿದೆ.

ಇಂದು ನಮ್ಮ ದೇಶದಲ್ಲಿ ಮಹಾರಾಷ್ಟ್ರದ ಜನಪದರ ವರ್ಲಿಕಲೆ,ಬಿಹಾರದ ಮಧುಬನಿ ಚಿತ್ರಕಲೆಯಿದ್ದಂತೆ, ನಮ್ಮ ರಾಜ್ಯದ ಪ್ರಮುಖ ಜಾನಪದ ಕಲೆಗಳಾದ ದೊಡ್ಡಾಟ,ಸಣ್ಣಾಟ,ಬಯಲಾಟಗಳು, ಕರಾವಳಿ ಮತ್ತು ಮಲೆನಾಡಿನ ಯಕ್ಷಗಾನ, ಡೊಳ್ಳುಕುಣಿತ ಮತ್ತಿತರ ಜಾನಪದ ಕಲಾ ಪ್ರಕಾರಗಳನ್ನು ಗುರುತಿಸುವಂತೆ ಶಿವಮೊಗ್ಗದಲ್ಲಿ ಹೆಚ್ಚಾಗಿ ಕಾಣಸಿಗುವ ವೈವಿಧ್ಯಮಯ ವಿನ್ಯಾಸದ ಹಸೆಚಿತ್ತಾರ ,ಬುಟ್ಟಿ ಚಿತ್ತಾರ,ಗೋಡೆ ಚಿತ್ತಾರಗಳು ಪ್ರಮುಖ ಸಂಪ್ರದಾಯಿಕ ಚಿತ್ರಕಲೆಗಳಾಗಿವೆ. ,

ಕರ್ನಾಟಕ ಹಲವಾರು ಸಮುದಾಯಗಳು ರೂಢಿಸಿಕೊಂಡು ಬಂದ ಸಾಂಪ್ರದಯಿಕ ಚಿತ್ರಕಲೆಗಳಿಗೂ ಮಲೆನಾಡಿನ ಹಸೆಚಿತ್ತಾರ ಕಲೆಗಳ ನಡುವೆ ಹೋಲಿಕೆ ,ಸಹಸಂಬಂಧಗಳ ಜೊತೆಗೆ ಹಲವು ವ್ಯತ್ಯಾಸಗಳು ಸಹ ಇವೆ. ಎಲ್ಲವೂ ಜಾನಪದೀಯ ಮೂಲದ ರೇಖಾ ವಿನ್ಯಾಸದ ಸಂಯೋಜನೆಗಳೆ ಆಗಿದ್ದು ಪರಸ್ಪರ ಸಾಮ್ಯತೆಗಳನ್ನೂ ಸಹ ಗಮನಿಸಬಹುದು. ಪ್ರದೇಶವಾರು ಜಾತಿ ಸಂಪ್ರದಾಯವಾರು ಹಲವು ವ್ಯತ್ಯಾಸಗಳಿವೆ. ಆದರೆ ಮಲೆನಾಡಿನ ವಿನ್ಯಾಸ ವೈವಿಧ್ಯತೆಯ ಹಸೆಚಿತ್ತಾರ ಕರ್ನಾಟಕದ ಎಲ್ಲಾ ಭಾಗದ ಸಮುದಾಯಗಳಲ್ಲಿ ಕಂಡುಬರುವುದಿಲ್ಲ. ಮೇಲು ನೋಟಕ್ಕೆ ಹಸೆಚಿತ್ತಾರ ರಂಗೋಲಿಯಂತೆ ಕಂಡರೂ ಹಸೆ ಚಿತ್ತಾರ ಪುರಾತನವಾದುದು. ಆದಿಮ ಚಿತ್ರಕಲಾ ಮೂಲದ್ದು . ದೀವರ ಹಸೆ ಚಿತ್ತಾರದಲ್ಲಂತೂ ವಿನ್ಯಾಸದಲ್ಲಿ ಸಾಕಷ್ಟು

ವೈವಿಧ್ಯತೆಯಿದೆ. ಹಸೆ ಚಿತ್ತಾರ ರಂಗೋಲಿಯಂತಲ್ಲ. ಇದು ಗೋಡೆಗೆ ಮತ್ತು ಬುಟ್ಟಿಗಳಿಗೆ ನೈಸರ್ಗಿಕ ತೈಲ ಬಣ್ಣಗಳಿಂದ ಹಿಂದಿನಿಂದ ನೈಸರ್ಗಿಕ ಕುಂಚ ಬಳಸಿಯೇ ಬಿಡಿಸುವ ಅಭಿವ್ಯಕ್ತಿಯಾಗಿದೆ. ಇದು ಆಚರಣೆಗಳ ಮೂಲದ ಕಲೆಯಷ್ಟೇ ಅಲ್ಲ ಸಂಪ್ರದಾಯಿಕ ರೂಢಿ ನಂಬಿಕೆಗಳ ಅಭಿವ್ಯಕ್ತಿ , ಸ್ತ್ರೀ ಸೌಂದರ್ಯ ಪ್ರಜ್ಞೆಯ ಕಲೆಯೂ ಆಗಿದೆ.

ನೆಲಮೂಲದ ಸಂಪ್ರದಾಯಿಕ ಆಚರಣೆಗಳ ಕಲೆಯಾದ್ದರಿಂದ ಇದರೊಳಗೆ ಬೇರೆ ಬೇರೆ ಶೈಲಿಯ ಚಿತ್ರಕಲೆಗಳಾಗಲೀ ,ಆಧುನಿಕತೆಯಾಗಲೀ ಹೆಚ್ಚಾಗಿ ಪ್ರಭಾವ ಬೀರಿಲ್ಲ.ಸಾಂಪ್ರದಯಿಕ ಚಿತ್ರಕಲೆಗಳು ಆದಿಮ ಬಂಡೆ ಚಿತ್ರಕಲಾ ಮಾದರಿಗಳ ಕಾಲದಿಂದ ವಿಕಾಸವಾದ ನೆಲಮೂಲದ ಸಾಂಪ್ರದಾಯಿಕ ಚಿತ್ರಕಲಾ ಅಭಿವ್ಯಕ್ತಿಯಾಗಿದೆ. ಈಗಲೂ ಚಿತ್ತಾರ ಬರೆಯುವಾಗ ಸಾಂಪ್ರದಾಯಿಕ ಹಾಡುಗಳನ್ನು ಹಾಡುವ ಚಿತ್ತಾರಗಿತ್ತಿಯರು ಅಲ್ಲಲ್ಲಿ ಕಂಡುಬರುತ್ತಾರೆ. ದೇಶದ ಹಲವೆಡೆ ಕಂಡುಬರುವ ಸಂಪ್ರದಾಯಿಕ ಚಿತ್ತಾರಗಳಂತೆ ಕರ್ನಾಟಕದಲ್ಲೂ ಹಲವು ಬಗೆಯ ನಂಬಿಕೆ ,ರೂಢಿ ,ಸಂಪ್ರದಾಯಗಳ ಚಿತ್ರಕಲೆಗಳು ಆಯಾ ಜಾತಿ ಸಂಪ್ರದಾಯವಾರೂ ಸಹ ಒಂದಿಷ್ಟು ವಿಭಿನ್ನ ವಿನ್ಯಾಸ ನಂಬಿಕೆಗಳಡಿ ಇಂದಿಗೂ ಉಳಿದುಕೊಂಡಿರುವುದನ್ನು ಗಮನಿಸಬಹುದು.

ಸ್ತ್ರೀಯರ ಕರಕುಶಲ ಕಲೆಯಾಗಿ ಹಸೆ ಚಿತ್ತಾರದ ಬೆಳವಣಿಗೆ

ಹಿಂದಿನಿಂದಲೂ ಗೃಹಕಾರ್ಯಗಳಿಗೆ ಸೀಮಿತವಾಗಿದ್ದ ಸ್ತ್ರೀಯರೂ ತಮ್ಮ ಹಲವಾರು ಕೆಲಸಗಳ ಜೊತೆಗೆ ದೈನಂದಿನ ಏಕತಾನತೆಯಿಂದ ಹೊರಬರಲು ಹಾಗು ತಮಗೆ ಉಪಯುಕ್ತವಾದ ಹಲವಾರು ಕರಕುಶಲ ಕಲೆಗಳನ್ನು ತಮ್ಮದೇ ನೆಲಮೂಲದ ಜ್ಞಾನದಿಂದ ಕಂಡುಕೊಂಡಿದ್ದಾರೆ. ಹಸೆ ಚಿತ್ತಾರ, ಬುಟ್ಟಿಚಿತ್ತಾರ ಸಹ ಪ್ರಮುಖ ಕರಕುಶಲ ಕಲೆಗಳಲ್ಲಿ ಒಂದಾಗಿದೆ. ಈಚಲ ಗರಿಗಳಿಂದ ಬಣ್ಣ ಬಣ್ಣದ ಹಸೆ ಹೆಣೆಯುವುದು ಸ್ತ್ರೀಯರ ಪ್ರಮುಖ ಕರಕುಶಲಕಲೆಗಳಲ್ಲೊಂದು. ಅಂತೆಯೇ ಪುರಾತನ ಕಾಲದಿಂದ ರೂಢಿಸಿಕೊಂಡು ಬಂದ ಬುಟ್ಟಿ ಚಿತ್ತಾರ, ಹಸೆಗೋಡೆ ಚಿತ್ತಾರ,ಬಾಗಿಲು ಗೋಡೆ ಚಿತ್ತಾರಗಳು ಸಹ ಅತಿ ಸೂಕ್ಷ್ಮ

ರೇಖಾ ವಿನ್ಯಾಸದ ಕಲೆಗಳಾಗಿದ್ದು ಅನಕ್ಷರಸ್ಥರಾದರೂ ಸ್ತ್ರೀಯರ ಕೈಚಳಕ ,ಸೂಕ್ಷ್ಮತೆ ಬೆರಗು ಮೂಡಿಸುತ್ತದೆ. ಗೋಡೆಗಳ ಮೇಲಷ್ಟೇ ಅಲ್ಲದೆ,ಬಣ್ಣ ಬಣ್ಣದ ಹಾಳೆಗಳ ಮೇಲೆ, ಮರದ ಹಲಗೆಗಳ ಮೇಲೆ,ವಸ್ತ್ರಗಳ ಮೇಲೆ ಸಹ ಹಸೆ ಚಿತ್ತಾರ ಬಿಡಿಸುವ ಕಲೆ ಅತಿ ವಿಶಿಷ್ಟವಾದದ್ದಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಹಲವು ದೀವರ ಶಿಕ್ಷಿತ ಯುವಕ ಯುವತಿಯರು ರಾಜ್ಯ,ಅಂತರಾಜ್ಯ,ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಹಸೆ ಚಿತ್ತಾರ ಪ್ರದರ್ಶನ ಮಾಡಿ ತಮ್ಮ ಕರಕುಶಲ ಕಲೆಯತ್ತ ಗಮನಸೆಳೆಯುವಂತೆ ಮಾಡಿದ್ದಾರೆ.ದೀವರ ಗಡೇಮನೆ ಲಕ್ಷ್ಮಕ್ಕ ಈಗಾಗಲೇ ಹಸೆ ಚಿತ್ತಾರ ಕಲೆಗೆ ಲಲಿತಕಲಾ ಅಕಾಡೆಮಿ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಗೌರವ ಪುರಸ್ಕಾರ ,ವಿವಿಧ ಸಂಘಟನೆಗಳ ಪುರಸ್ಕಾರ ಪಡೆದಿದ್ದಾಳೆ. ಪುರುಷರು ಸಹ ಈಗೀಗ ಈ ಕಲೆ ಕಲಿತು ಪ್ರದರ್ಶನ ಏರ್ಪಡಿಸುತ್ತಿದ್ದಾರೆ. ಹಸುವಂತೆ ಈಶ್ವರ ನಾಯ್ಕರು, ಸಿರಿವಂತೆ ಚಂದ್ರಶೇಖರ, ಗೌರಮ್ಮ ದಂಪತಿಗಳು ಈ ನಿಟ್ಟಿನಲ್ಲಿ ಹಲವು ಹೊಸ ಪ್ರಯೋಗ ಮಾಡಿ ಹಸೆ ಚಿತ್ತಾರವನ್ನು ದೀವರ ವಿಶಿಷ್ಟ ಕರಕುಶಲ ಕಲೆಯಾಗಿ ಬೆಳೆಸುತ್ತಿದ್ದಾರೆ. ದೀವರ ಸಂಘಟನೆಗಳು ಸಹ ಈ ನಿಟ್ಟಿನ ಪ್ರಯತ್ನ ಮಾಡುತ್ತಿದೆ. ಚಿತ್ತಾರ ಚಾವಡಿ, ಸೃಜನ ಶಿಕ್ಷಣ ಸಂಶೋಧನಾ ಟ್ರಸ್ಟ್, ಚಿತ್ರ ಸಿರಿ ,ಚಿತ್ತಾರ ಟ್ರಸ್ಟ್, ಕರ್ನಾಟಕ ರಾಜ್ಯ ಹಸೆ ಚಿತ್ತಾರ ಪರಿಷತ್ತು, ಮತ್ತಿತರ ಸಂಘಟನೆಗಳು ದೀವರ ಹಸೆಚಿತ್ತಾರ ಕಲೆಯನ್ನು ಪ್ರೋತ್ಸಾಹಿಸುವಲ್ಲಿ ಕಾರ್ಯೋನ್ಮುಖವಾಗಿವೆ.

ಆಧುನಿಕತೆ ಮತ್ತು ಹಸೆಚಿತ್ತಾರ

ಆಧುನಿಕತೆಯನ್ನು ವೇಗವಾಗಿ ಒಪ್ಪಿಕೊಂಡ ಭಾರತದ ಬಹುತೇಕ ಸಮುದಾಯಗಳು ತಮ್ಮ ಹಲವು ಮೂಢನಂಬಿಕೆಗಳನ್ನು ತೊರೆದು ಸಂಸ್ಕೃತಿ ಪರಂಪರೆ,ಆಚರಣೆಗಳಲ್ಲಿ ಹಲವನ್ನು ಕೈಬಿಟ್ಟಿದ್ದಾರೆ. ಇಂದಿನ ಶಿಕ್ಷಿತ ಯುವ ಜನಾಂಗ ಹಬ್ಬ ಆಚರಣೆಗಳತ್ತ ಅಷ್ಟೇನು ಆಸಕ್ತಿ ,ಭಯ ಭಕ್ತಿ ಇಟ್ಟುಕೊಂಡಿಲ್ಲ. ಸಾಕಷ್ಟು ಜಾತಿ ಸಮುದಾಯಗಳ ಮದುವೆ, ಹಬ್ಬದ ಆಚರಣೆಗಳ ವಿಧಿ ವಿದಾನಗಳಲ್ಲಿ ಹಿಂದಿನಷ್ಟು ಕಟ್ಟುಪಾಡುಗಳಿಲ್ಲ. ಇಂದು ನಗರಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ, ಅರಣ್ಯವಾಸಿ ಬುಡಕಟ್ಟುಗಳಲ್ಲಿ ಹಲವು ಸಾಂಸ್ಕೃತಿಕ,ಧಾರ್ಮಿಕ ಪಲ್ಲಟಗಳು ಕಂಡುಬರುತ್ತಿದೆ. ಬದುಕುವ ಶೈಲಿ, ದೈನಂದಿನ ಬದುಕು, ಆಚರಣೆಗಳುಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಬಹು ಸಂಸ್ಕೃತಿಯ ಭಾರತದ ಬಹುತೇಕ ಜಾತಿ ಕುಲವರ್ಗಗಳ ಆಚರಣೆಗಳು, ನಂಬಿಕೆಗಳು, ಮದುವೆ ಶಾಸ್ತ್ರಗಳಲ್ಲಿ ಸಾಂಸ್ಕೃತಿಕ ಫಲ್ಲಟಗಳು ,ಪಾಶ್ಚಾತೀಕರಣ ಕೊಡುಕೊಳ್ಳುವಿಕೆ ಕಂಡುಬರುತ್ತಿದೆ. ಇಂದಿಗೂ ಬುಡಕಟ್ಟು ಜನಸಂಸ್ಕೃತಿಯ ಪರಂಪರೆಯಲ್ಲಿ ಸಂಪ್ರದಾಯಿಕ ಚಿತ್ತಾರಗಳು ಕಂಡುಬಂದರೂ ವಿಧಿವಿಧಾನಗಳು,ಬಣ್ಣ ಬಳಕೆ ಬದಲಾಗಿದೆ. ಮಲೆನಾಡಿನ ಕೆಲವರು ಮಾತ್ರ ಇಂದಿಗೂ ಉಳಿಸಿಕೊಂಡು ಮುಂದುವರಿಸಿದ್ದಾರೆ. ಈಗಿನ ಶಿಕ್ಷಿತ ಮಹಿಳೆಯರು ಹಸೆಚಿತ್ತಾರ ಬಿಡಿಸುವುದು ಕಡಿಮೆಯಾಗುತ್ತಿದೆ.

ಆಧುನಿಕತೆ ತಂದ ಬದಲಾವಣೆಗಳಿಗೆ ಹಸೆಚಿತ್ತಾರ ಒಂದಿಷ್ಟು ಆಯಾಮಗಳಲ್ಲಿ ಒಳಗಾಗಿದೆ. ದೀವರ ಹಸೆ ಚಿತ್ತಾರದಲ್ಲೂ ಆಧುನಿಕತೆಯ ಗಾಳಿ ಬೀಸಿದೆ. ಈವರೆಗೂ ಕೆಂಪು,ಬಿಳಿ, ಹಳದಿ,ಕಪ್ಪು ಬಣ್ಣಗಳನ್ನು ಕುಂಚಗಳನ್ನು ನೈಸರ್ಗಿಕ ಸಂಪನ್ಮೂಲಗಳಿಂದಲೇ ತಾಯಾರಿಸುತಿದ್ದ ದೀವರು ಈಗ ಆಧುನಿಕ ಬಣ್ಣಗಳು,ಆಧುನಿಕ ಬ್ರಶ್ ಬಳಸುತ್ತಾರೆ. ವಿವಿಧ ಆಧುನಿಕ ಕಾರ್ಡ ಬೋರ್ಡುಗಳ ಮೇಲೆ, ವಸ್ತ್ರಗಳ ಮೇಲೂ ಹಸೆಚಿತ್ತಾರ ಬಿಡಿಸುತ್ತಾರೆ. ಆಕ್ರಲಿಕ್ ಪೇಂಯಿಟ್ಸ್,

ಆಯಿಲ್ ಪೇಯಿಂಟ್ಸ್‌ಗಳಲ್ಲಿಯೂ ಹಸೆಚಿತ್ತಾರ ಬಿಡಿಸುತ್ತಿದ್ದಾರೆ. ಕಂಪ್ಯೂಟರೀಕೃತ ಸಾಫ್ಟವೇರ್ ಬಳಸಿ ಡಿಜಿಟಲ್ ಹಸೆ ಚಿತ್ತಾರ ಬಿಡಿಸುವ ಪ್ರಯೋಗವನ್ನು ನಾನು ಸಹ ಸ್ವತಃ ಆಸಕ್ತಿ ವಹಿಸಿ ಮುಂದುವರಿಸಿದ್ದೇನೆ. ಹಸೆ ಚಿತ್ತಾರ ಮಾದರಿ ಇನ್ವಿಟೇಶನ್, ಕಾರ್ಡ್ಸ್, ಮತ್ತಿತರ ಪ್ರಯೋಗ ಮಾಡುತಿದ್ದೇನೆ. ಆಧುನಿಕ ಡಿಜಿಟಲ್ ಯುಗ,ಸಾಮಾಜಿಕ ಜಾಲತಾಣಗಳ ಮೂಲಕ ಹಸೆಚಿತ್ತಾರ ಜಗತ್ತಿನ ಹಲವು ಕಲಾವಿದರನ್ನು ತಲುಪಿ ಆಕರ್ಷಿಸಿದೆ. ಜಪಾನ್ ,ಅಮೇರಿಕಾ,ದುಬೈ,ಆಸ್ಟ್ರೇಲಿಯಾ ಮತ್ತಿತರ ದೇಶಗಳ ಕಲಾವಿದರು ಶಿವಮೊಗ್ಗಕ್ಕೆ ಬಂದು ಹಸೆಚಿತ್ತಾರ ತರಭೇತಿ ಪಡೆದು ಹೋದ ಉದಾಹರಣೆಗಳಿವೆ. ವಿದೇಶಗಳಲ್ಲೂ ಮಲೆನಾಡ ಹಸೆಚಿತ್ತಾರ ತರಭೇತಿ,ಪ್ರದರ್ಶನ ಆಗೀಗ ಏರ್ಪಡಿಸಲಾಗುತ್ತಿದೆ. ಬೇರೆ ಬೇರೆ ಉದ್ಯಮಗಳಲ್ಲಿ ಹಸೆಚಿತ್ತಾರ ಬಳಕೆ ಕಂಡುಬರುತ್ತಿದೆ.

ಹಿಂದಿನಿಂದಲೂ ನಿರ್ಲಕ್ಷ್ಯೆಗೆ ಒಳಗಾಗಿದ್ದ ಹಸೆಚಿತ್ತಾರ ಕಲೆ

ನಮ್ಮ ರಾಜ್ಯದ ವಿಶಿಷ್ಟ ಕಲೆ ಸಂಸ್ಕೃತಿಯನ್ನು ಬಿಂಬಿಸುವಾಗ ನೆಲಮೂಲದ ಜನಪದರ ಪ್ರದರ್ಶನ ಕಲೆಗಳಿಗೆ ಮಾನ್ಯತೆ ನೀಡಿದ್ದರೂ ನೆಲಮೂಲದ ಚಿತ್ರಕಲೆಗೆ ಹಿಂದಿನಿಂದಲೂ ಹೆಚ್ಚಿನ ಒತ್ತು ನೀಡಲೇ ಇಲ್ಲ. ಮೈಸೂರಿನ ಅರಮನೆಯಲ್ಲಿ ದೇಶ ವಿದೇಶಗಳ ಚಿತ್ರಕಲಾಮಾದರಿಗಳಿದ್ದರೂ ನಮ್ಮದೇ ರಾಜ್ಯದ ಹಸೆಚಿತ್ತಾರ,ಬುಟ್ಟಿಚಿತ್ತಾರ ಮಾದರಿಗಳಿಲ್ಲ. ಅಂದಿನ ರಾಜಪ್ರಭುತ್ವ ಸಣ್ಣ ಸಮುದಾಯಗಳ ನೆಲಮೂಲದ ಚಿತ್ರಕಲೆಯ ಪ್ರೋತ್ಸಾಹಕ್ಕೆ ಸೂಕ್ತ ಮನ್ನಣೆಯನ್ನೇನೂ ನೀಡಿಲ್ಲ .ಸ್ವಾತಂತ್ರ್ಯ ನಂತರವೂ ಸಣ್ಣ ಸಮುದಾಯಗಳ ಕಲೆಯನ್ನು ಪ್ರೋತ್ಸಾಹಿಸಲು ಪ್ರಬಲವರ್ಗ ಕೇಂದ್ರಿತ ಕಲೆಗಳಿಗೆ ಸಿಕ್ಕಷ್ಟು ಅವಕಾಶ ಸಿಕ್ಕಿಲ್ಲ. ಆಧುನಿಕವಾಗಿ ಈ ಚಿತ್ರಕಲೆ ಹೊಸತೇನನ್ನೂ ಪಡೆಯದೆ ,ಉದ್ದೇಶದಲ್ಲಿ ಬದಲಾಗದೆ ಅಂದಿನಿಂದ ಇಂದಿಗೂ ಭೂಮಿ ಹುಣ್ಣಿಮೆಯಂದು ಮಲೆನಾಡಿನ ದೀವರು ಮಾಡುವ ಭೂಮಿ ಪೂಜೆಯ ಸಂಧರ್ಬದಲ್ಲಿ ಮಾತ್ರವೇ ಬಳಸುವ ಬುಟ್ಟಿಚಿತ್ರವಾಗಿಯೇ ಉಳಿದಿದೆ.

ಇಂದು ವರ್ಲಿಕಲೆಯೆಂದೇ ದೇಶಾಧ್ಯಾಂತ ಬಿಂಬಿತವಾಗಿರುವ ವರ್ಲಿ ಬುಡಕಟ್ಟು ಸಮುದಾಯದ ಚಿತ್ರ ಕಲೆಯನ್ನೇ ಹೋಲುವ ವರ್ಲಿಗಿಂತ

ವಿನ್ಯಾಸದಲ್ಲಿ , ಸಾಕಷ್ಟು ವ್ಯತ್ಯಾಸ ಹೊಂದಿರುವ ಬುಟ್ಟಿಚಿತ್ತಾರ, ಹಾಗು ಹಸೆ ಚಿತ್ತಾರ ಕಲೆಯು ಕರ್ನಾಟಕದ ವಿಶೇಷ ಚಿತ್ರಕಲಾ ಪರಂಪರೆಯಾಗಿ ಬಿಂಬಿತವಾಗದೆ ಮಲೆನಾಡಿನ ಎಲೆಮರೆಯಲ್ಲೇ ಉಳಿಯುವಂತಾಗಿದ್ದು ಚಿತ್ರಕಲಾ ಅಕಾಡಮಿಗಳು ಸರ್ಕಾರ ಈ ಬಗ್ಗೆ ಆಸಕ್ತಿವಹಿಸಿ ನೆಲಮೂಲದ ಚಿತ್ರಕಲೆಯನ್ನು ಪ್ರೋತ್ಸಾಹಿಸಿ ಪೋಷಿಸಬೇಕಿದೆ.

ನಮ್ಮಲ್ಲಿರುವ ವಿವಿಧ ಬಗೆಯ ಅಕಾಡೆಮಿ ವಲಯದಲ್ಲಿಯಾಗಲಿ,ಇತಿಹಾಸ ಸಂಶೋಧಕರ ವಲಯದಲ್ಲಾಗಲಿ ಹೆಚ್ಚಿನ ದಾಖಲೀಕರಣವಾಗಲೀ ಚರ್ಚೆಯ ಕಾರ್ಯಗಳಾಗಲಿ ಆಗಿಲ್ಲ ಎನ್ನುವುದೇ ವಿಪರ್ಯಾಸ. ಇತಿಹಾಸಕಾರರ ಹಲವು ಪುಸ್ತಕಗಳನ್ನು ಹುಡುಕಿದರೂ ಹಸೆಚಿತ್ತಾರದ ಕುರಿತಾಗಿ ಅಷ್ಟಾಗಿ ಉಲ್ಲೇಖಗಳಿಲ್ಲ. ಇನ್ನು ರಾಜ ಮಹಾರಾಜರ ಕಾಲದ ಶಾಸನಗಳಲ್ಲಿ,ಅರಮನೆಗಳಲ್ಲಿ ಬುಡಕಟ್ಟು ಚಿತ್ತಾರ ಕಲೆಗಳಿಗೆಲ್ಲ ಪ್ರಾಮುಖ್ಯತೆ ನೀಡಿಯೇ ಇಲ್ಲವಾದ್ದರಿಂದ ಮಲೆನಾಡಿನ ಭಾಗದ ಆಳರಸರುಗಳ ಕಾಲದ ದಾಖಲೆಗಳಲ್ಲೂ ಹಸೆ ಚಿತ್ತಾರದ ಕುರಿತು ಮಾಹಿತಿ ಈವರೆಗೆ ಸಿಕ್ಕಿಲ್ಲ. ಹಾಗಂತ ನಾವು ದಾಖಲೆಗಳೆ ಸಿಗದ ಐತಿಹಾಸಿಕ ಸತ್ಯಗಳನ್ನು ಹಾಗೆಯೇ ಹೂತು ಹೋಗಲು ಬಿಡಬಾರದು. ನಮಗೆ ಈಗ ಲಭ್ಯವಾಗಬಹುದಾದ ದಾಖಲೆಗಳ ಆಧಾರದಲ್ಲೇ ಹಸೆಚಿತ್ತಾರ ಪರಂಪರೆಯ ಕುರಿತು ಶೋಧಿಸಿ ತಿಳಿಯಬೇಕಾಗಿದೆ. ಇಂದಿನ ಹಲವು ಬಗೆಯ ಆಧುನಿಕ ಚಿತ್ರಕಲಾ ಮಾದರಿಗಳಿಗೆ, ವಿವಿಧ ಬಗೆಯ ಜನಪದರ ಕಲೆಗಳಿಗೆ ಸಿಕ್ಕಷ್ಟೇ ಪ್ರಾಮುಖ್ಯತೆ ಹಸೆ ಚಿತ್ತಾರಕ್ಕೂ ಸಿಗಬೇಕಾಗಿದೆ. ಹಾಗಾಗಿ ಜನಪದರ ಆಚರಣೆ ಸಂಸ್ಕತಿ ಮೂಲಗಳನ್ನೇ ನಮಗೆ ಮೂಲಾಧಾರಗಳನ್ನಾಗಿ ಆಧರಿಸಿ ಸಂಪ್ರದಾಯಿಕ ಚಿತ್ರಕಲೆಗಳ ಕುರಿತಾಗಿ ಹೆಚ್ಚು ಹೆಚ್ಚು ಶೋಧಿಸಿ ಪ್ರಚುರಪಡಿಸಬೇಕಾಗಿದೆ.

ಸಣ್ಣ ಬುಡಕಟ್ಟು ಪರಂಪರೆಯ ಜನಜೀವನ ಸಂಸ್ಕೃತಿಯ ಸಮುದಾಯಗಳ ಜನಪದರು ತಮ್ಮ ಮದುವೆ ಹಬ್ಬಗಳ ಆಚರಣೆಯ ಭಾಗವಾಗಿ ರೂಢಿಸಿಕೊಂಡು ಬಂದ ಚಿತ್ತಾರ ಕಲೆಯಾದ್ದರಿಂದ ಶಿಷ್ಟ ಸಾಹಿತ್ಯ ಶಿಷ್ಟ ಚಿತ್ರಕಲೆ ,ಯಕ್ಷಗಾನ, ದೊಡ್ಡಾಟ, ಸಣ್ಣಾಟ,ಡೊಳ್ಳುಕುಣಿತ ಮತ್ತಿತರ ಬಗೆಯ

ಕಲೆಗಳಿಗೆ ಸಿಕ್ಕಷ್ಟು ವ್ಯಾಪಕ ಪ್ರಚಾರ ಹಸೆ ಚಿತ್ತಾರಕ್ಕೆ ದೊರೆತಿಲ್ಲ. ಸಾಂಪ್ರದಾಯಿಕ ಚೌಕಟ್ಟಿನಾಚೆ ತೆರೆದುಕೊಳ್ಳದಿದ್ದರಿಂದಲೂ ,ಆಳುವ ವರ್ಗಗಳ ಕೃಪಾಕಟಾಕ್ಷಕ್ಕೂ ಬೀಳದಿರುವ ಕಾರಣಕ್ಕೂ ಸಹ ಹಸೆಚಿತ್ತಾರ ಬುಡಕಟ್ಟು ಸಮುದಾಯದವರ ಚಿತ್ತಾರ ಕಲೆಯಾಗಿ ನಡುಮನೆಯಲ್ಲಿಯೇ ಉಳಿದಿದೆ.

ರಾಜಾಶ್ರಯ ಮತ್ತು ಆಳುವವರ್ಗಗಳ ನಿರ್ಲಕ್ಷೆಯಲ್ಲಿ ಹಸೆಚಿತ್ತಾರ

ಅಂದಿನ ರಾಜಪ್ರಭುತ್ವ ಕಾಲದಲ್ಲಿ ಕರ್ನಾಟಕದ ಹಲವಾರು ರಾಜ ಮಹಾರಾಜರುಗಳು ದೇಶ ವಿದೇಶದ ಸಂಸ್ಕೃತಿ,ಚಿತ್ರಕಲೆಗೆ, ಸಾಹಿತ್ಯಕ್ಕೆ ಮನ್ನಣೆ ನೀಡಿದರೂ ನಮ್ಮ ನೆಲಮೂಲದ ಹಸೆಚಿತ್ತಾರ ಕಲೆಗೆ ಪ್ರೋತ್ಸಾಹ ನೀಡಿದ್ದಾಗಿ ಕಂಡುಬರುತ್ತಿಲ್ಲ. ಮೈಸೂರು ಅರಸರ ಕಾಲದಲ್ಲಿ ಚಿತ್ರಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದ್ದಾರೆ. ಅರಮನೆಯಲ್ಲಿ ದೇಶ ವಿದೇಶಗಳ ವೈವಿಧ್ಯಮಯ ಚಿತ್ರ ಗ್ಯಾಲರಿಗಳಿವೆ. ಆದರೆ ನಮ್ಮ ಹಸೆಚಿತ್ತಾರ ಅಲ್ಲಿ ಕಂಡುಬರುವುದಿಲ್ಲ. ನಮ್ಮದೇ ನೆಲಮೂಲದ ಹೆಮ್ಮೆಯ ಚಿತ್ತಾರ ಕಲೆಯನ್ನು ನಿರ್ಲಕ್ಷಿಸಿರುವುದು ಕಂಡುಬರುತ್ತದೆ. ನಮ್ಮದೇ ಮಲೆನಾಡಿನ ಅರಸರು ಸಹ ಈ ಬಗ್ಗೆ ಗಮನವಹಿಸಿದ್ದಾಗಿ ಕಂಡುಬರುತ್ತಿಲ್ಲ. ನಮ್ಮದೇ ರಾಜಮನೆತನಗಳು ದೇಶ ವಿದೇಶಗಳ ಚಿತ್ರ ಕಲೆಗಳಿಗೆ ರಾಜಾಶ್ರಯ ಮನ್ನಣೆ ನೀಡಿದ್ದಾರೆ. ಆದರೆ ನಮ್ಮದೇ ನೆಲಮೂಲದ ಅತಿ ವಿಶಿಷ್ಟ ವಿನ್ಯಾಸದ ಹಸೆ ಚಿತ್ತಾರಕ್ಕೆ ಯಾವ ರಾಜರುಗಳ ಕಾಲದಲ್ಲು ರಾಜಾಶ್ರಯ ಸಿಕ್ಕಿದ್ದಾಗಿ ದಾಖಲೆಗಳಿಲ್ಲ. ಯಾವ ಅರಮನೆಗಳಲ್ಲು ಹಸೆ ಚಿತ್ತಾರ ಕಂಡುಬರುವುದಿಲ್ಲ. ತಳ ಸಮುದಾಯಗಳ ಹಸೆ ಚಿತ್ತಾರವನ್ನು ನಿರ್ಲಕ್ಷಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬ್ರಿಟೀಷರ ಕಾಲದಲ್ಲೂ ಹಸೆಚಿತ್ತಾರದ ಸೊಗಸನ್ನು ಗುರುತಿಸಿರುವುದು ಕಂಡುಬರುವುದಿಲ್ಲ.

ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಸರ್ಕಾರಗಳು ಶಿಷ್ಟ ಸಾಹಿತ್ಯ ಕಲೆಗಳಿಗೆ, ಜನಪದರ ಇತರೆ ಕಲೆಗಳಿಗೆ ನೀಡಿದಷ್ಟು ಪ್ರೋತ್ಸಾಹ ಹಸೆ ಚಿತ್ತಾರಕ್ಕೆ ನೀಡಿಲ್ಲ. ಇತ್ತೀಚೆಗೆ ಕೆಲವು ಅಕಾಡೆಮಿಗಳಲ್ಲಿ, ಲಲಿತ ಕಲಾ ಅಕಾಡೆಮಿಯಲ್ಲಿ ಕೆಲವು ತರಬೇತಿಗಳನ್ನು ನೀಡಲಾಗಿದೆ. ಹಸೆಚಿತ್ತಾರ ಕಲಾವಿದೆ

ರನ್ನು ಗುರುತಿಸಿ ಗೌರವಿಸಲಾಗಿದೆ. ಕರಕುಶಲ ಕಲಾ ವಸ್ತು ಪ್ರದರ್ಶನಗಳಲ್ಲಿ ಹಸೆ ಚಿತ್ತಾರ, ಬುಟ್ಟಿ ಚಿತ್ತಾರ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ. ವಯಕ್ತಿಕ ಶ್ರಮದಿಂದ ಸಿರಿವಂತೆ ಚಂದ್ರಶೇಖರ,ಹಸುವಂತೆ ಈಶ್ವರ ನಾಯ್ಕ ,ರಾಧಾ ಸುಳ್ಳೂರು ,ರಾಧಾಕೃಷ್ಣ ಬಂದಗದ್ದೆ ಮತ್ತಿತರರು ರಾಜ್ಯ, ರಾಷ್ಟ್ರ ,ಅಂತರಾಷ್ಟ್ರೀಯ ಚಿತ್ರಕಲಾ ಪ್ರದರ್ಶನ , ಕರಕುಶಲ ವಸ್ತು ಪ್ರದರ್ಶನ ಕಾರ್ಯಕ್ರಮಗಳಲ್ಲಿ ಅವಕಾಶ ಗಿಟ್ಟಿಸಿ ವಿಶ್ವದ ಚಿತ್ರಕಲಾವಿದರ ಪ್ರಶಂಸೆಗೆ ಒಳಗಾದದ್ದು ಹಸೆ ಚಿತ್ತಾರದ ಹೆಚ್ಚುಗಾರಿಕೆ.

ಅಕಾಡೆಮಿಗಳಿಂದ ಪ್ರೋತ್ಸಾಹ ನಿರೀಕ್ಷೆ

ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದೇಶದ ವಿವಿಧ ಜನಪದ ಕಲೆ,ಸಂಸ್ಕತಿ ಸಂರಕ್ಷಣೆ,ಪ್ರೋತ್ಸಾಹಕ್ಕೆ ಹಲವು ಯೋಜನೆಗಳನ್ನು ರೂಪಿಸಿದೆ. ಪ್ರತಿ ವರ್ಷ ನೂರಾರು ಕೋಟಿರೂಗಳನ್ನು ಸರ್ಕಾರದ ಬೊಕ್ಕಸದಿಂದ ವ್ಯಯಿಸಲಾಗುತ್ತಿದೆ. ಆದರೆ ಬಹುತೇಕ ಪ್ರೋತ್ಸಾಹಕ ಯೋಜನೆಗಳು ಸಂಘಟಿತ ಸಂಘ ಸಂಸ್ಥೆಗಳು, ಪ್ರಬಲ ಜಾತಿ ಸಮುದಾಯಗಳ ಕಲೆಗಳಿಗೆ ಹೆಚ್ಚು ವಿನಿಯೋಗವಾಗುತ್ತದೆ. ವಿಶ್ವ ವಿದ್ಯಾನಿಲಯಗಳಲ್ಲಿ ಅಧ್ಯಯನಗಳಿಗೂ ಹೆಚ್ಚು ಪ್ರಚಾರ ಪಡೆದಿರುವ ಕಲೆಗಳಿಗೆ ಹೆಚ್ಚು ಮಾನ್ಯತೆ ನೀಡಲಾಗುತ್ತಿದೆ.ಹಾಗು ಅವುಗಳನ್ನೇ ಪ್ರಮುಖ ವಿಶಿಷ್ಟ ಕಲೆಗಳಂತೆ ಬಿಂಬಿಸಲಾಗುತ್ತದೆ. ಇಂದು ನಮ್ಮ ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾನಿಲಯವೇ ಇದೆ. ಆದರೆ ಅಲ್ಲಿ ಇತರೆ ಜಾನಪದ ಕಲೆಗೆ ಸಿಕ್ಕ ಮಾನ್ಯತೆ ಗುರುತಿಸುವಿಕೆ ಹಸೆ ಚಿತ್ತಾರಕ್ಕೆ ಇನ್ನೂ ಸಿಗಬೇಕಾಗಿದೆ. ಜಾನಪದ ಅಕಾಡೆಮಿ, ಲಲಿತಕಲಾ ಅಕಾಡೆಮಿಗಳು ಹಸೆಚಿತ್ತಾರ ಕಲೆಗೆ ವಿಶೇಷ ಪ್ರೋತ್ಸಾಹಕ ಯೋಜನೆ ರೂಪಿಸಬೇಕಿದೆ. ಹಸೆ ಚಿತ್ತಾರ ಸ್ತ್ರೀ ಕರಕುಶಲ ಕಲೆಯಾಗಿ ಉದ್ಯಮಶೀಲತೆಯತ್ತ ಬೆಳೆಯಲು ವಿಶೇಷ ಪ್ರೋತ್ಸಾಹಕ ಯೋಜನೆಗಳ ಅಗತ್ಯವಿದೆ. ಶಾಲಾಕಾಲೇಜುಗಳಲ್ಲಿ ಪಠ್ಯವಾಗಿಸಬೇಕಿದೆ. ಜಾನಪದ ಸಾಹಿತ್ಯ,ಶಿಷ್ಟಸಾಹಿತ್ಯ, ಶಾಸ್ತ್ರೀಯ ಸಂಗೀತ,ಶಿಲ್ಪಕಲೆ, ಯಕ್ಷಗಾನ ,ಬಯಲಾಟ,ಡೊಳ್ಳುಕುಣಿತ,ನಾಟಕ ಮತ್ತಿತರ ಎಲ್ಲಾ ಕಲೆಗಳಿಗೆ ನೀಡಿದ ಪ್ರೋತ್ಸಾಹ ಯೋಜನೆಗಳನ್ನು ತಳ ಸಮುದಾಯಗಳು ಈವರೆಗೆ ಕಾಪಾಡಿಕೊಂಡು ಬಂದ

ಪುರಾತನ ಕಲೆಯಾದ ಹಸೆಚಿತ್ತಾರಕ್ಕೂ ನೀಡಬೇಕಾಗಿ ಚಿತ್ತಾರ ಕಲಾವಿದ,ಕಲಾವಿದೆಯರು ನಿರೀಕ್ಷೆಯಲ್ಲಿದ್ದಾರೆ.

ವಿಶೇಷವಾಗಿ ಮಹಿಳಾ ಕರಕುಶಲ ಕಲೆಯಾಗಿ ಹಸೆ ಚಿತ್ತಾರಕ್ಕಿರು ಸಾಂಸ್ಕೃತಿಕ ಹಿನ್ನಲೆ,ವಿನ್ಯಾಸ ವೈಶಿಷ್ಟತೆ, ಅಂತಃಸತ್ವ ,ಉದ್ಯಮಶೀಲತೆಯ ಗುಣ ಆದಾರವಾಗಿಟ್ಟುಕೊಂಡು ಇತರೆ ಜನಪದ ಕಲೆಗಳಿಗೆ ನೀಡಿದ ಮಾನ್ಯತೆ ,ಪ್ರೋತ್ಸಾಹಕ ಯೋಜನೆ ರೂಪಿಸುವುದು ಅಗತ್ಯ.

ಹಸೆ ಚಿತ್ತಾರ ಪ್ರೋತ್ಸಾಹಕ್ಕೆ ಸರ್ಕಾರ ಮತ್ತು ಅಕಾಡೆಮಿಗಳು ಮಾಡಬೇಕಾದ ಕೆಲವು ಕಾರ್ಯಯೋಜನೆಗಳು

ಹಸೆ ಚಿತ್ತಾರ ಹಿಂದಿನಿಂದಲೂ ಆಳುವ ವರ್ಗಗಳ ಪ್ರೋತ್ಸಾಹ ಕಾಣದ ಕಲೆಯಾಗಿ ಉಳಿದಿದೆ. ಸಾಂಪ್ರದಾಯಿಕತೆಯತ್ತ ವಿಸ್ತರಿಸಿಕೊಂಡು ಉದ್ಯಮಶೀಲತೆಯತ್ತಲೂ ತೆರೆದುಕೊಂಡ ಚಿತ್ತಾರ ಕಲೆಗೆ ಈಗಲಾದರೂ ಸರ್ಕಾರಿ ವ್ಯವಸ್ಥೆಯಲ್ಲಿ ಇತರೆ ಜನಪದರ ಕಲೆಗೆ ದೊರೆತಂತೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕಾಗಿದೆ.

- ಹಸೆ ಚಿತ್ತಾರ ಆದ್ಯಯನಕ್ಕೆ ,ಕಲಾ ಅಭ್ಯಾಸಕ್ಕೆ ವಿಶೇಷ ಪ್ರೋತ್ಸಾಹಕ ಯೋಜನೆ ರೂಪಿಸಬೇಕು.ವರ್ಷಪೂರ್ತಿ ಹಸೆಚಿತ್ತಾರ ಪ್ರದರ್ಶನಕ್ಕೆ ಹಸೆಚಿತ್ರಕಲಾ ಭವನ ನಿರ್ಮಿಸಬೇಕು.

- ಹಸೆ ಚಿತ್ತಾರ ಕಲಾವಿದೆಯರು ಕಲಾವಿದರಿಗೆ ಇತರೆ ಕಲಾವಿದರಿಗೆ ನೀಡಿದಂತೆ ಮಾನ್ಯತೆ ನೀಡುವ ,ಪ್ರೋತ್ಸಾಹಕ ಯೋಜನೆಗಳನ್ನು ರೂಪಿಸಬೇಕು.

- ವಿವಿಧ ಅಕಾಡೆಮಿಗಳಲ್ಲಿ ಹಸೆ ಚಿತ್ತಾರಕ್ಕೆ ಪ್ರತ್ಯೇಕ ಕಾಯ್ದಿರಿಸಿದ ಬಜೆಟ್ ನೀಡಬೇಕು. ವಿವಿಧ ಕಲೆಗಳಿಗೆ ಪ್ರತ್ಯೇಕ ಅಕಾಡೆಮಿ ಸ್ಥಾಪಿಸಿರುವಂತೆ ಪ್ರತ್ಯೇಕವಾಗಿ ಹಸೆಚಿತ್ತಾರ ಅಕಾಡೆಮಿ ಸ್ಥಾಪಿಸಬೇಕು.

- ಉದ್ಯಮಶೀಲ ಗುಣವಿರುವ ಹಸೆಚಿತ್ತಾರಕ್ಕೆ ವಿಶೇಷ ಕರಕುಶಲ ಕಲೆಯಾಗಿ ಪರಿಗಣಿಸಿ ಹಸೆಚಿತ್ತಾರ ಕಲೋದ್ಯಮಕ್ಕೆ ಪ್ರೋತ್ಸಾಹಕ ಯೋಜನೆ ರೂಪಿಸಬೇಕು.

- ಪ್ರತಿ ವರ್ಷ ಹಸೆ ಚಿತ್ತಾರ ಕಲಾವಿದರಿಗೆ ಇತೆರೆ ಕಲೆಗಳ ಕಲಾವಿದರಿಗೆ ಪ್ರತ್ಯೇಕವಾಗಿ ನೀಡುವಂತೆ ಪ್ರಶಸ್ತಿ ಪುರಸ್ಕಾರ,ಪೆಲೋಶಿಪ್ ನೀಡಬೇಕು

- ಹಸೆಚಿತ್ತಾರ ಕಲಾವಿದರಿಗೆ ಪದ್ಮ ಪ್ರಶಸ್ತಿಯೂ ಸೇರಿದಂತೆ ಕೇಂದ್ರ ಸರ್ಕಾರದ ಪ್ರಶಸ್ತಿಗಳು, ಪ್ರೋತ್ಸಾಹಕ ಯೋಜನೆಗಳು ದೊರೆಯಬೇಕು.

- ಪ್ರಧಾನವಾಗಿ ಪುರಾತನ ಕಾಲದಿಂದ ದೀವರು ಸಮುದಾಯ ಹಸೆ ಚಿತ್ತಾರವನ್ನು ಮಲೆನಾಡಿನಲ್ಲಿ ಸಾಂಪ್ರದಾಯಿಕವಾಗಿ ವಿಶಿಷ್ಟ ವಿನ್ಯಾಸದಲ್ಲಿ ನಾವಿನ್ಯತೆಯೊಂದಿಗೆ ಪೋಷಿಸಿಕೊಂಡು ಬಂದಿದ್ದು ಹಸೆಚಿತ್ತಾರಕ್ಕೆ ಜಿಯೋಗ್ರಾಫಿಕಲ್ ಇಂಡಿಕೇಶನ್ ಟ್ಯಾಗ್ ಮಾನ್ಯತೆ ದೊರೆಯಲು ಕ್ರಮ ಕೈಗೊಳ್ಳಬೇಕು.

- ಶಾಲೆ ಕಾಲೇಜು ಪಠ್ಯದಲ್ಲಿ ,ಚಿತ್ತಕಲಾ ಪಠ್ಯದಲ್ಲಿ ಹಸೆ ಚಿತ್ತಾರ ಅಭ್ಯಾಸ ಸೇರಿಸಬೇಕು.

ಅಧ್ಯಾಯ – 4

ಹಸೆಚಿತ್ತಾರದಲ್ಲಿ ನಾವಿನ್ಯತೆ ಮತ್ತು ಹಸೆಚಿತ್ತಾರ ಕಲಾವಿದರು

ನಾವಿನ್ಯತೆ ಎಲ್ಲ ಕಾಲದಲ್ಲೂ ಎಲ್ಲೆಡೆಯಲ್ಲೂ ಎಲ್ಲ ಕಲೆ, ಶಾಸ್ತ್ರಗಳಲ್ಲೂ ಕಂಡುಬರುತ್ತದೆ. ಸದಾ ಹೊಸತನದ ಹುಡುಕಾಟ ಮಾನವನ ಹುಟ್ಟುಗುಣ.ಕಲೆಯಲ್ಲಿ ,ಸಂಸ್ಕೃತಿಯಲ್ಲಿ ಸದಾ ಕೊಡುಕೊಳ್ಳುವಿಕೆ ಇದ್ದೇ ಇರುತ್ತದೆ. ಹಸೆಚಿತ್ತಾರದಲ್ಲೂ ಸಹ ಕಲಾವಿದರು ತಮ್ಮದೇ ಆದ ಸೃಜನಶೀಲತೆಯನ್ನು ಸಂಪ್ರದಾಯದ ಪರಿದಿಯೊಳಗೂ ಸಹ ಮಾಡುತ್ತಲೆ ಬಂದಿದ್ದಾರೆ. ಇಂದಿನ ಆಧುನಿಕತೆಯ ಭರಾಟೆಯ ಜನಜೀವನ,ಕಲೆಯಲ್ಲಾಗಿರುವ ಬದಲಾವಣೆ,ಬಣ್ಣ,ತಂತ್ರಜ್ಞಾನದಲ್ಲಾಗಿರುವ ಆವಿಷ್ಕಾರವನ್ನು ಬಳಸಿಕೊಂಡು ಇಂದಿನ ಹಸೆಚಿತ್ತಾರ ಕಲಾವಿದರು ಮತ್ತಷ್ಟು ನಾವಿನ್ಯತೆಗೆ,ಉದ್ಯಮಶೀಲತೆಗೂ ತೆರೆದುಕೊಂಡು ಸಂಪ್ರದಾಯದ ಪರಿಧಿಯಾಚೆ ಜಗತ್ತಿಗೆ ಪರಿಚಯಿಸುವ ಕಾರ್ಯ ಮಾಡುತ್ತಿರುವುದು ಹೊಸ ಆಶಾದಾಯಕ ಬೆಳವಣಿಗೆ. ಹಸೆಚಿತ್ತಾರಕ್ಕೀಗ ಜಾಗತಿಕ ಕಲಾ ಮೌಲ್ಯ ಸೃಷ್ಟಿಯಾಗುತ್ತಿದ್ದು ಜನಪ್ರಿಯವೂ ಆಗುವಲ್ಲಿ ಹಸೆಚಿತ್ತಾರಕ್ಕಿರುವ ಅಂತಃಶಕ್ತಿ, ಹಸೆಚಿತ್ತಾರ ಕಲಾವಿದರ ಆಸಕ್ತಿ, ಶ್ರಮ,ನಾವಿನ್ಯತೆಯೇ ಕಾರಣವಾಗಿದೆ.

ಸಂಪ್ರದಾಯಿಕ ಹಸೆಚಿತ್ತಾರದಲ್ಲಿ ನಾವಿನ್ಯತೆ ಸೃಷ್ಟಿಸುವಾಗ

ನೆನಪಿಡಬೇಕಾದ ಅಂಶಗಳು

ಹಸೆಚಿತ್ತಾರ ತಲೆಮಾರಿನಿಂದ ತಲೆಮಾರಿಗೆ ಪ್ರದೇಶದಿಂದ ಪ್ರದೇಶಕ್ಕೆ ಒಂದಿಷ್ಟು ಹೊಸತನ್ನು ಒಳಗೊಳ್ಳುತ್ತಲೇ ವಿಶಿಷ್ಟಗೊಳ್ಳುತ್ತ ಇಂದಿನ ಆಧುನಿಕ ಬದುಕಿನಲ್ಲೂ ತನ್ನ ಅಸ್ತಿತ್ವ ಉಳಿಸಿಕೊಂಡಿದೆಯೆಂದರೆ ಅದು ಮಲೆನಾಡಿನ ದೀವರ ಚಿತ್ತಾರಗಿತ್ತಿಯರಿಗೆ ಸಲ್ಲಬೇಕಾದ ಗೌರವ. ಕರ್ನಾಟಕದಲ್ಲಿ ಬೇರೆ ಬೇರೆ ಕೆಲವು ಇತರೆ ಬುಡಕಟ್ಟಿನ ಚಿತ್ತಾರಗಿತ್ತಿಯರೂ ಸಹ ಹಲಿ ,ಹಸಗರ ಶೇಡಿ ಚಿತ್ತಾರ ಬರೆಯುವ ಸಂಪ್ರದಾಯದಲ್ಲೂ ನಾವಿನ್ಯತೆ ಸೃಜಿಸುತ್ತಾ ಬಂದಿದ್ದಾರೆ.

ಆದರೆ ಎಲ್ಲೂ ಸಂಪ್ರದಾಯಿಕ ಶೈಲಿ ಬಿಟ್ಟುಕೊಟ್ಟಿಲ್ಲ. ಆಧುನಿಕ ಶಿಷ್ಟ ಚಿತ್ರಕಲಾ ಶೈಲಿಯ ಅಂಧಾನುಕರಣೆ ಮಾಡಿಲ್ಲ. ದೀವರ ಹೆಣ್ಣುಮಕ್ಕಳ ರಕ್ತಗತ ಕಲಾನಾವಿನ್ಯತೆಗೆ ವೈವಿಧ್ಯಮಯ ತೇರು ಹಸೆಚಿತ್ತಾರ, ಮಂಡಿಗೆ ಇರುವ ಹಸೆ ಚಿತ್ತಾರ, ಮಂಡಿಗೆ ಇಲ್ಲದ ಹಸೆಚಿತ್ತಾರ,ಚಚ್ಚೌಕ ಹಸೆಚಿತ್ತಾರ, ಚಕ್ಕಳ್‌ಮುಕುಳಿ ಚಿನ್ನಾಣಿ (ಚಕ್ಕಲ್ ಬಕ್ಕಲ್) ಹಸೆಚಿತ್ತಾರ, ಬುಟ್ಟಿ ಚಿತ್ತಾರ,ಬಾಗಿಲು ಚಿತ್ತಾರ ಇನ್ನೂ ಮುಂತಾದ ವೈವಿಧ್ಯಮಯ ರಚನೆಗಳು ಸಹ ಸದಾ ಒಂದಿಷ್ಟು ನಾವಿನ್ಯತೆಗೂ ತೆರೆದುಕೊಂಡೆ ಸಾಂಪ್ರದಾಯಿಕವಾಗಿ ಸಾಗಿ ಬೆಳೆದು ಬಂದಿವೆ.ಆದರೆ ಇವೆಲ್ಲವೂ ಕೆಲವು ಸಾಂಪ್ರದಾಯಿಕ ಆಚರಣೆಗಳ ಚೌಕಟ್ಟಿಗೆ ,ನಂಬಿಕೆಗೆ ಬಲವಾಗಿ ಒಳಪಟ್ಟಿರುವುದು ಸಹ ವಿಶೇಷ.ತಲೆಮಾರಿನಿಂದಲು ಹಲವು ಚಿತ್ತಾರಗಿತ್ತಿಯರು ತಮ್ಮದೇ ಆದ ನಾವಿನ್ಯತೆಯನ್ನು ಹಸೆಚಿತ್ತಾರದಲ್ಲಿ ಮೂಡಿಸುತ್ತಲೇ ಬಂದಿದ್ದಾರೆ.ಬದಲಾವಣೆ ಸಹಜ ಆದರೆ ಇದು ಸಾಂಪ್ರದಾಯಿಕ ಚಿತ್ರಕಲೆಯಾದ್ದರಿಂದ ಒಂದಿಷ್ಟು ಮೂಲಭೂತ ಅಂಶಗಳ ಪಾಲನೆ,ನಂಬುಗೆಗಳನ್ನು ಗೌರವಿಸುವಿಕೆ ಅಗತ್ಯ.

ಹಿಂದಿನ ಕಲಾವಿದರು ತಮ್ಮ ಸಮುದಾಯಗಳ ಮದುವೆ ಹಬ್ಬಗಳ ಆಚರಣೆಗಳ ಚೌಕಟ್ಟು ವಿಧಿವಿಧಾನಗಳ ಪರಿಧಿಯಲ್ಲೇ ಹೊಸತನ್ನು ಸೃಷ್ಟಿಸುತ್ತಿದ್ದರು.ಮದುವೆಯ ಸಂಪ್ರದಾಗಳನ್ನು ಸಾಂಕೇತಿಸಿ ಹಸೆ ಶಾಸ್ತ್ರಕ್ಕಾಗಿ ಗೋಡೆ ಮೇಲೆ ಚಿತ್ರಿಸುವಾಗ ದೇಶೀ ರೇಖಾ ಶೈಲಿಯಲ್ಲೇ ಎಲ್ಲವನ್ನೂ ಬರೆಯುತ್ತಿದ್ದರು.ಅವರು ಆಧುನಿಕ ಶಿಷ್ಟ ಚಿತ್ರಕಲೆಯ ಪ್ರಭಾವಕ್ಕೆ ಒಳಗಾಗದೆ ,ಎಲ್ಲಿಯೂ ಬೇರೆ ಬೇರೆ ಶೈಲಿಗಳ ಸಂಮಿಶ್ರಣ ಮಾಡದೆ ತಮ್ಮದೇ ಸ್ವಂತ ನೆಲಮೂಲ ದೇಶೀ ಚಿತ್ತಾರ ಶೈಲಿಯನ್ನೇ ಈವರೆಗೂ ಕಾಪಾಡಿಕೊಂಡು ಬಂದಿದ್ದಾರೆ.ಈಗೀಗ ಆಧುನಿಕ ಬಣ್ಣ,ಕುಂಚಗಳನ್ನು ಬಳಸುತ್ತಿದ್ದರೂ ಸಹ ಚಿತ್ತಾರದಲ್ಲಿ ದೇಶೀ ರೇಖಾ ಶೈಲಿಯನ್ನೇ ಉಳಿಸಿಕೊಂಡಿದ್ದಾರೆ. ಹಸೆ ಚಿತ್ತಾರದ ಹೆಚ್ಚುಗಾರಿಕೆ ಇರುವುದೇ ಅದರ ಅಂತಃಸತ್ವದಲ್ಲಿ. ಸಂಕೀರ್ಣ ರೇಖಾಶೈಲಿ,ಜ್ಯಾಮಿತಿಯ ಆಂಶಗಳಲಿ ಚಿತ್ರಿಸುವುದರಲ್ಲಿ. ಹಸೆಚಿತ್ತಾರದಲ್ಲಿ ಶಿಷ್ಟಚಿತ್ರಕಲೆಗಳಂತೆ ಸಾದೃಶ್ಯತೆ, ಬಾವಬದ್ದತೆ, ಅತೀ ವರ್ಣಬಳಕೆ,ಲಾವಣ್ಯ

ಯೋಜನೆ ಪ್ರಮಾಣಬದ್ದತೆಗೆ ಒಳಪಡುವಿಕೆಯ ಹಂಗಿಲ್ಲದೆ ಕಾಡುಕೋಗಿಲೆಯ ಹಾಡಿನಂತೆ ನವಿರಾಗಿ ಸೊಗಸಾಗಿ ತನ್ನದೇ ವಿಶಿಷ್ಟ ಹಾದಿಯಲ್ಲಿ ಸಾಗುತ್ತದೆ. .

ಹಸೆ ಚಿತ್ತಾರ ಪ್ರಧಾನವಾಗಿ ರೂಪಚಿತ್ರವೇ ಹೊರತು ಭಾವಚಿತ್ರವಲ್ಲ. ವಿವಾಹ, ದಾಂಪತ್ಯ ಬದುಕಿನ ಮಜಲುಗಳನ್ನು ಅಮೂರ್ತ ಚಿಂತನೆಯಲ್ಲಿ ಸರಳ ರೇಖೆಗಳಲ್ಲಿ ಚಿತ್ರಿಸುವುದು ಹಸೆಚಿತ್ತಾರದ ಅಂತಃಸತ್ವ . ಅದು ಮೂರ್ತದಿಂದ ಅಮೂರ್ತದತ್ತ ಕೊಂಡೊಯ್ಯುತ್ತದೆ . ಭಾರತದ ಚಿತ್ರಕಲೆಯಲ್ಲಿ ಅತಿಯಾಗಿ ಪ್ರಭಾವಿಸಿರುವ ಬೌದ್ದರ ಶೈಲಿಯಾಗಲಿ ,ಮೋಘಲ್ ಶೈಲಿಯಾಗಲಿ, ರಜಪೂತರ ಶೈಲಿಯಾಗಿ , ಪಶ್ಚಾತ್ಯ ಚಿತ್ರಕಲಾ ಶೈಲಿಗಳ ಯಾವ ಪ್ರಭಾವಕ್ಕೂ ಒಳಗಾಗದೆ ಇದೂವರೆಗೆ ತನ್ನದೇ ಅಂತಃಸತ್ವವನ್ನೇ ಮೈಗೂಡಿಸಿಕೊಂಡು ಮಲೆನಾಡಿನ ಸಹ್ಯಾದ್ರಿ ತಪ್ಪಲಿನ ಬುಡಕಟ್ಟು ಜನಜೀವನ ಸಂಸ್ಕೃತಿಯ ಭಾಗವಾಗಿಯೇ ಉಳಿದ ಹೆಗ್ಗಳಿಕೆ ಹಸೆಚಿತ್ತಾರದ್ದು. ಹಾಗಾಗಿ ನಾವು ಹಸೆಚಿತ್ತಾರದ ವಿವಿಧ ಪ್ರಕಾರಗಳಲ್ಲಿ ನಾವಿನ್ಯತೆ ,ಉದ್ಯಮಶೀಲತೆ ತರುವಾಗ ಅದರ ಪಾವಿತ್ರತೆ, ಸಾಂಪ್ರದಾಯಿಕೆ ಅಂತಸತ್ವ ಕಾಪಾಡುವುದು ಸಹ ಹಸೆಚಿತ್ತಾರಕ್ಕೆ ನಾವು ತಂದುಕೊಂಡುವ ಶ್ರೇಷ್ಠತೆಯೇ ಆಗಿದೆ. ಮದುವೆ ಹಬ್ಬಗಳಿಗೆ ಬಳಸುವ ಹಸೆ ಗೋಡೆ ಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರರ ಸಾಂಪ್ರದಾಯಿಕ ಪಾವಿತ್ರತೆಯನ್ನು ಉಳಿಸಿಕೊಂಡೇ ,ಚಿತ್ತಾರದ ಬೌದ್ದಿಕತೆ, ಬೌತಿಕತೆಯ ಮೂಲಭೂತ ಅಂಶಗಳನ್ನು ,ವಿಧಿ ವಿಧಾನ ಪಾಲಿಸಿಕೊಂಡೇ ಹೊಸತನ್ನು ಸೃಷ್ಟಿಸುತ್ತಾ ಸಾಗಬೇಕಿದೆ. ಸಾಂಪ್ರದಾಯಿಕ ಹಬ್ಬ ಮದುವೆಗಳಲ್ಲದೆ ಉದ್ಯಮಶೀಲ ಬಳಕೆಗೆ ,ಕರಕುಶಲ ಕಲೆಯಾಗಿ, ಜವಳಿ ಉದ್ಯಮಕ್ಕೆ ಬಳಸುವಾಗ, ಗೃಹ ಅಲಂಕಾರಕ್ಕೆ, ಸೌಂದರ್ಯ ಪ್ರಜ್ಞೆಯ ಭಾಗವಾಗಿ ಬಳಸುವಾಗ ಆಧುನಿಕತೆಯನ್ನು ಒಳಗೊಳ್ಳುತ್ತಲೇ ಹಸೆಚಿತ್ತಾರದ ಪ್ರಧಾನ ಮೂಲಾಂಶಗಳನ್ನು ಉಳಿಸಿಕೊಂಡು ದೇಶೀ ಚಿತ್ರವಾದರಿಯಾಗಿಯೇ ಹಸೆಚಿತ್ತಾರವನ್ನು ಜಾಗತೀಕರಣದ ಕಲೋದ್ಯಮದಲ್ಲಿಯೂ ಬೆಳೆಸಬೇಕಿದೆ. ಶಿಷ್ಟ ಚಿತ್ರಕಲೆಯ ಮಿಶ್ರಣ ಮಾಡದೆ ಅದರ ಹಂಗಿನಾಚೆ ಹಸೆಚಿತ್ತಾರದ್ದೇ ಆದ ಪ್ರತ್ಯೇಕ ಹೆಜ್ಜೆಗುರುತು ಮೂಡಿಸಬೇಕಿದೆ.

ಹಸೆ ಚಿತ್ತಾರ ಕಲೆಯಂತಹ ಅಪ್ಪಟ ದೇಶೀ ಚಿತ್ತಾರದಲ್ಲಿ ನಾವಿನ್ಯತೆ ,ಚಲನಶೀಲತೆ ತರುವ ಭರದಲ್ಲಿ ಹಸೆ ಚಿತ್ತಾರದ ಮೂಲ ಸಾಂಪ್ರದಾಯಿಕ ಆಶೋತ್ತರ ,ಅಂತಃಸತ್ವ ಅರಿಯದೆ ಮನಬಂದಂತೆ ಶಿಷ್ಟ ಚಿತ್ರಕಲೆಯ ಮಾದರಿಗಳನ್ನು ಮಿಶ್ರಣ ಮಾಡಿ ಹಸೆಚಿತ್ತಾರದ ಅಸ್ಮಿತೆಗೆ ದಕ್ಕೆ ತರುವ ಮುನ್ನ ನಮ್ಮ ಹಸೆಚಿತ್ತಾರ ಕಲಾವಿದರು ವಿವೇಚಿಸುವ ಅಗತ್ಯವಿದೆ. ಇಂದಿನ ಕೆಲವು ಯುವ ಕಲಾವಿದರು ಹಸೆಚಿತ್ತಾರದ ಮೂಲಾಂಶಗಳನ್ನು ಶ್ರೇಷ್ಟತೆಯನ್ನು ಅರಿಯದೆಯೋ ,ಅರಿತೋ ಹಸೆಯಲ್ಲಿ ರಂಗೋಲಿ ಮಾದರಿ ,ಶಿಷ್ಟ ಚಿತ್ರಕಲೆಗಳನ್ನು ಸಂಮಿಶ್ರಣ ಮಾಡಿ ಬಳಸುವುವಿಕೆ ಕಂಡುಬರುತ್ತಿದ್ದು ಈವರೆಗೆ ಕಾಪಾಡಿಕೊಂಡು ಬಂದಿದ್ದ ಹಸೆಚಿತ್ತಾರದ ಸಾಂಪ್ರದಾಯಿಕ ಪಾವಿತ್ರತೆ, ಅಂತಸತ್ವಕ್ಕೆ ದಕ್ಕೆ ತರುವ ಅಪಾಯವಿದೆ. ಕಾಲಾನಂತರ ಹಸೆಚಿತ್ತಾರ ತನ್ನ ಶ್ರೇಷ್ಟತೆಯನ್ನು ಶಿಷ್ಟ ಚಿತ್ತಾರದ ಎದುರು ಕಳೆದುಕೊಳ್ಳುವ ಅಪಾಯಕಾರಿ ಬೆಳವಣಿಗೆಗಳು ಆಗುವ ಮುನ್ನ ಇಂದಿನ ಹಸೆಚಿತ್ತಾರವನ್ನು ಸಾಂಪ್ರದಾಯಿಕ ದೇಶಿ ಶೈಲಿಯಲ್ಲಿಯೇ ಮುಂದಿನ ತಲೆಮಾರಿಗೆ ಮುನ್ನಡೆಸಲು ಕಲಾವಿದರು ಗಂಬೀರವಾಗಿ ವಿವೇಚಿಸಬೇಕಿದೆ.

ಹಸೆಚಿತ್ತಾರ ಈಗ ಗೋಡೆಗಳಿಗೆ ಸೀಮಿತವಾಗದೆ ,ಬಿದಿರಿನ ಬುಟ್ಟಿಗಳಿಗೆ, ಪ್ಲಾಸ್ಟಿಕ್ ಮತ್ತು ಗಾಜಿನ ಬಾಟಲಿಗಳ ಮೇಲೆ ಮಡಿಕೆಗಳ ಮೇಲೆ ,ಮರದ ಹಲಗೆಗಳ ಮೇಲೆ ,ವಸ್ತ್ರಗಳ ಮೇಲೆ , ಪ್ಲೈವುಡ್, ಕಾರ್ಡ ಬೋರ್ಡ ಮೇಲೆ ವಿಸ್ತರಿಸಿಕೊಂಡಿರುವುದು ಆಶಾದಾಯಕ ಬೆಳವಣಿಗೆ. ಆದರೆ ಸಂಪ್ರದಾಯದಾಚೆ ತೆರೆದುಕೊಂಡು ಸೌಂದರ್ಯ ಪ್ರಜ್ಞೆ, ನಾವಿನ್ಯತೆಯತ್ತ ವಿಸ್ತರಿಸಿಕೊಂಡು ಜನಪ್ರಿಯ ಕಲೆಯಾಗಿ ಬೆಳೆಯುವಾಗ ಶಿಷ್ಟಚಿತ್ರಕಲೆಯ ಎರವಲು ಪಡೆದು ತನ್ನ ಶ್ರೇಷ್ಟತೆಗೆ ದಕ್ಕೆ ತಂದುಕೊಳ್ಳದಂತೆ ಎಚ್ಚರವಹಿಸಬೇಕಿದೆ. ಈಗ ಜವಳಿ ಉದ್ಯಮದಲ್ಲಿ, ಇನ್ವಿಟೇಶನ್ ಕಾರ್ಡ ,ಮುದ್ರಣ ಮಾಧ್ಯಮ ಮತ್ತಿತರ ಕಡೆ ಉದ್ಯಮಕ್ಕೆ ಬಳಕೆ ಆಗುತ್ತಿದ್ದು ಬಹುತೇಕ ಮೂಲ ಹಸೆಚಿತ್ತಾರದ ಮೋಟಿಫ್‌ಗಳಲ್ಲಿಯೇ ಚಿತ್ರಿಸುತ್ತಿದ್ದಾರೆ.ಅಲ್ಲಲ್ಲಿ ಕೆಲವು ದೋಷಗಳು ಕಂಡುಬರುತ್ತಿವೆ. ಹಸೆಚಿತ್ತಾರದ ಅಂತಃಸತ್ವದ ಅರಿವಿಲ್ಲದ ಕೆಲವು ಕಲಾವಿದರು ಶಿಷ್ಟಚಿತ್ರಕಲೆಯೊಂದಿಗೆ ಸಂಮಿಶ್ರಣ ಮಾಡಿ ಕಲಬೆರಕೆ ಮಾಡುತ್ತಿರುವುದು ಸೂಕ್ತ ಬೆಳವಣಿಗೆಯಲ್ಲ.ಎಲ್ಲೇ ಬಳಸಲಿ

ದೇಶೀ ಶೈಲಿ ಹಸೆಚಿತ್ತಾರದ ಲಕ್ಷಣಗಳನ್ನು ಉಳಿಸಿಕೊಂಡೇ ಮುಂದಿನ ತಲೆಮಾರಿಗೆ ಪಸರಿಸಬೇಕಾಗಿದೆ.

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹಸೆ ಚಿತ್ತಾರ ಕಲಾವಿದರು


ಈಗಾಗಲೇ ನಮ್ಮ ಹಸೆ ಚಿತ್ತಾರ ಕಲಾವಿದರಾದ ಗೌರಮ್ಮ ಹುಚ್ಚಪ್ಪ ಮಾಸ್ತರ್ , ಹಸುವಂತೆ ಈಶ್ವರ ನಾಯ್ಕ, ಗಡೇಮನೆ ಲಕ್ಕ್ಮಮ್ಮ,ಸಿರಿವಂತೆ ಚಂದ್ರಶೇಖರ ,ರಾಧಾ ಸುಳ್ಳೂರು, ಕುಸುಮ ಅಣ್ಣಪ್ಪ ,ವಿಶ್ವ ಹೆಚ್ಚೆ, ಮುಂತಾದವರು ದೇಶ ವಿದೇಶಗಳಲ್ಲಿ ಹಸೆಚಿತ್ತಾರ ಪ್ರದರ್ಶನ ನೀಡಿ ಮಾರಾಟವನ್ನೂ ಮಾಡಿ ಜಾಗತಿಕವಾಗಿ ಗಮನಸೆಳೆದಿದ್ದಾರೆ. ಹಸುವಂತೆ ಈಶ್ವರ ನಾಯ್ಕರು ಹಸೆ ಚಿತ್ತಾರದಲ್ಲಿ ವಿಶಿಷ್ಟ ವಿನ್ಯಾಸಗಳನ್ನು ಪ್ರಯೋಗಕ್ಕಿಳಿಸಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಗಡೇಮನೆ ಲಕ್ಮಮ್ಮ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಸಿರಿವಂತೆ ಚಂದ್ರಶೇಖರ ಮತ್ತು ಪತ್ನಿ ಗೌರಮ್ಮ ಇವರು ಜಪಾನ್, ಸಿಂಗಾಪೂರ ಮತ್ತಿತರ ಕಡೆ ಹಸೆ ಚಿತ್ತಾರ ಪ್ರದರ್ಶನ ನೀಡಿ ಅಂತರಾಷ್ಟ್ರೀಯ ಕಲಾವಿದರಿಂದ ಮೆಚ್ಚುಗೆಗಳಿಸಿದ್ದಾರೆ. ಇತ್ತೀಚೆಗೆ ಹೊಸನಗರ ಮೂಲದ ಕಲಾವಿಧ ಅರುಣಕುಮಾರ್ ಅವರು, ದೇಶೀ ಕಲಾ ಅಭಿವೃದ್ಧಿ ಕೇಂದ್ರ ಬೆಂಗಳೂರಿನ ಗೀತಾ ಭಟ್ ಅಂತ ಕಲಾ ಪ್ರವೃತ್ತಿಯವರು ಸಹ ಹಸೆ ಚಿತ್ತಾರಗಿತ್ತಿಯರನ್ನು ಕರೆಸಿ ಚಿತ್ತಾರ ಬಿಡಿಸಿ ಅವನ್ನು ದೇಶ ವಿದೇಶದಲ್ಲಿ ಪ್ರಚುರಪಡಿಸುವ ಪ್ರಯತ್ನ ಮಾಡಿದ್ದಾರೆ.

ಇಂದಿನ ಯುವ ಕಲಾವಿದರು ಹಸೆ ಚಿತ್ತಾರವನ್ನು ಉದ್ಯಮಶೀಲತೆಯತ್ತ ಕೊಂಡೊಯ್ದಿದ್ದಾರೆ. ಹಾಗೆಯೇ ಸಾಗರದ ಚರಕ ಸಂಸ್ಥೆ, ರಾಧಾಕೃಷ್ಣ ಬಂದಗದ್ದೆ ಮುಂತಾದವರೂ ಸಹ ಹಸೆ ಚಿತ್ತಾರದಲ್ಲಿ ನಾವಿನ್ಯ ಪ್ರಯೋಗ ಮಾಡುತ್ತಾ ನಮ್ಮ ಮಲೆನಾಡಿನ ದೀವರ ಹಸೆ ಚಿತ್ತಾರ ಪರಂಪರೆಯನ್ನು ಹೆಮ್ಮೆಯ ಪರಂಪರೆಯಾಗಿಸುವಲ್ಲಿ ಗಮನಸೆಳೆದಿದ್ದಾರೆ. ಅತಿ ಮುಖ್ಯವಾಗಿ ದೀವರು ಸಮುದಾಯದಲ್ಲಂತೂ ಪ್ರತಿ ಹೆಣ್ಣುಮಕ್ಕಳೂ ಅಕ್ಷರ ಕಲಿಯದಿದ್ದರೂ ಹಸೆ

ಚಿತ್ತಾರ ,ಭೂಮಣ್ಣಿ ಬುಟ್ಟಿ ಚಿತ್ತಾರ ಬಿಡಿಸುವುದನ್ನು ಕಲಿಯುವುದು ಕಡ್ಡಾಯ ಎನ್ನುವ ಅಲಿಖಿತ ಸಾಂಪ್ರದಾಯಿಕ ನಿಯಮವೇ ಇದೆ. ಹಾಗಾಗಿ ದೀವರು ಸಮುದಯಾದ ಬಹುತೇಕ ಎಲ್ಲಾ ಹೆಂಗಸರು ಸಹ ಚಿತ್ತಾರಗಿತ್ತಿಯರು ಎಂಬುದು ಗಮನಿಸಬೇಕಾದ ಪ್ರಮುಖ ಅಂಶ .ಅತಿ ಹೆಚ್ಚಿನ ಸಂಖ್ಯೆಯ ಹಸೆ ಚಿತ್ತಾರ ಕಲಾವಿದರಿರುವುದೂ ಸಹ ಶಿವಮೊಗ್ಗದಲ್ಲಿ ಎನ್ನುವುದು ಶಿವಮೊಗ್ಗದ ಹೆಮ್ಮೆಯ ಸಂಕೇತವೆಂದೆ ದಾಖಲಿಸಲೇಬೇಕು. ಶಿವಮೊಗ್ಗದ ಹಲವಾರು ಹಸೆಚಿತ್ರ ಕಲಾವಿದರು ರಾಷ್ಟ್ರೀಯ ,ಅಂತರಾಷ್ಟ್ರೀಯ ಮನ್ನಣೆ ಪಡೆದಿದ್ದಾರೆ.

ಹುಚ್ಚಪ್ಪ ಮಾಸ್ತರ್ ಮತ್ತು ಗೌರಮ್ಮ ದಂಪತಿಗಳು

ಬುಡಕಟ್ಟು ಜನ ಸಂಸ್ಕೃತಿ ಪರಂಪರೆಯ ದೀವರ ಸಾಂಪ್ರದಾಯಿಕ ನಡುಮನೆಯ ಗೋಡೆಯಲಿ ಮಾತ್ರ ಕಂಡುಬರುತ್ತಿದ್ದ ಹಸೆ ಚಿತ್ತಾರವನ್ನು ಹಿಂದಿನ ಕಲಾವಿದರು ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಲು ಹಿಂಜರಿದಿದ್ದರು. ಕರ್ನಾಟಕದ ರಾಜಮಹಾರಾಜರು ಏರ್ಪಡಿಸುತ್ತಿದ್ದ ಕಲಾಪ್ರದರ್ಶನಗಳಲ್ಲಿ ಆಗಲಿ, ಆಳುವ ಸರ್ಕಾರಗಳ ಅಕಾಡೆಮಿಗಳ ಕಲಾಪ್ರದರ್ಶನಗಳಲ್ಲಿ ಆಗಲಿ ಹಸೆ ಚಿತ್ತಾರಕ್ಕೆ ಮಾನ್ಯತೆ ಸಿಕ್ಕಿರಲಿಲ್ಲ.ರಾಜ್ಯದ ಅದೆಷ್ಟೋ ಸಂಸ್ಕೃತಿ ಚಿಂತಕರಿಗೆ ಕಲಾವಿದರಿಗೆ ಹಸೆಚಿತ್ತಾರದ ಬಗ್ಗೆ ಮಾಹಿತಿ ತಿಳಿದಿರಲಿಲ್ಲ. ಭಾರತೀಯ ದೇಸಿ ಚಿತ್ರಕಲೆಗಳು ಕುರಿತು ಕೃತಿ ರಚಿಸಿದ್ದ ಶಿವರಾಮ ಕಾರಂತರು ಕೃತಿಯಲ್ಲಿ ಸಹ ಕರ್ನಾಟಕ ನೆಲಮೂಲದ ಹಸೆ ಚಿತ್ತಾರ ಕುರಿತು



ಮಾಹಿತಿಯಿಲ್ಲ. ಕನ್ನಡ ಸಂಸ್ಕೃತಿ ,ಚಿತ್ರಕಲೆ ಕುರಿತು ಸಾಕಷ್ಟು ಪುಸ್ತಕಗಳು ಬಂದಿದ್ದರೂ ಸಹ ಅವುಗಳಲ್ಲಿ ಹಸೆಚಿತ್ತಾರ ಕುರಿತು ವಿವರಗಳಿಲ್ಲ. ಹಸೆ ಚಿತ್ತಾರವನ್ನು ಶಿಷ್ಟ ಚಿತ್ರಕಲಾ ಜಗತ್ತಿನಲ್ಲಿ ಪ್ರದರ್ಶಿಸಲು ಹಿಂಜರಿಯುತ್ತಿದ್ದ

ಕಾಲಘಟ್ಟದಲ್ಲಿ ರಾಜ್ಯಮಟ್ಟದಲ್ಲಿ ಮೊದಲು ಹಸೆ ಚಿತ್ತಾರದ ವೈಶಿಷ್ಟಗಳನ್ನು ಕಲಾಲೋಕಕ್ಕೆ ಪರಿಚಯಿಸಿದ ಹೆಗ್ಗಳಿಕೆ ಶ್ರೀಮತಿ ಗೌರಮ್ಮ ಹುಚ್ಚಪ್ಪ ಮಾಸ್ತರದು.

ಜಾನಪದ ಹಾಡುಗಾರರು ,ಜಾನಪದ ವಿದ್ವಾಂಸರೂ ಆಗಿದ್ದ ಸಾಗರದ ಕುಗ್ವೆ ಗ್ರಾಮದ ಹುಚ್ಚಪ್ಪ ಮಾಸ್ತರರು ರಾಜ್ಯದ ಹಲವಾರು ವಿದ್ವಾಂಸರು ಸಾಹಿತಿಗಳ ಒಡನಾಟ ಇಟ್ಟುಕೊಂಡ ನಂತರ ಅವರ ಶ್ರೀಮತಿಯಾದ ಗೌರಮ್ಮ ಅವರ ಮೂಲಕ ಮೊದಲಬಾರಿಗೆ ಹಸೆಚಿತ್ತಾರ ಪ್ರದರ್ಶನಕ್ಕೆ ಮುಂದಾದರು.ಹಲವು ಕಡೆ ತರಬೇತಿ ,ಉಪನ್ಯಾಸ ಏರ್ಪಡಿಸಿದರು.

ಪ್ರದರ್ಶನ ಮತ್ತು ಪುರಸ್ಕಾರಗಳು

1987ರಲ್ಲಿ ಕರ್ನಾಟಕ ಕರಕುಶಲ ಮಂಡಳಿ ಮತ್ತು ಕೇಂದ್ರ ಕರಕುಶಲ ಮಂಡಳಿಯವರ ಸಂಯುಕ್ತ ಆಶ್ರಯದಲ್ಲಿ ಹಸೆ ಚಿತ್ತಾರ,ಕರಕುಶಲ ಕಾರ್ಯಕ್ರಮದಲ್ಲಿದಲ್ಲಿ ಭಾಗವಹಿಸಿದ್ದರು.1998 ಫೆಬ್ರುವರಿಯಲ್ಲಿ ದೆಹಲಿಯಲ್ಲಿ ನಡೆದ ಕಮಲಾದೇವಿ ಚಟ್ಟೋಪಾಧ್ಯಾಯರ ಸ್ಮರಣಾರ್ಥ ನಡೆದ ವಸ್ತು ಪ್ರದರ್ಶನದಲ್ಲಿ ಚಿತ್ತಾರ ಕಲೆ ಪ್ರದರ್ಶನ ಮಾಡಿದ್ದರು.ಹತ್ತೊಂಬತ್ತು ನೂರ ತೊಂಬತ್ತೆಂಟು 1999 ರಲ್ಲಿ ಒಂದು ವರ್ಷಗಳ ಕಾಲ ಭಾರತ ಸರ್ಕಾರದ ಜವಳಿ ಮಂತ್ರಾಲಯ ಕರಕುಶಲ ಆಯುಕ್ತರು ತಾಳಗುಪ್ಪದಲ್ಲಿ ನಡೆಸಿದ ಕರಕುಶಲ ತರಬೇತಿ ಕಾರ್ಯಗಾರದಲ್ಲಿ ಮುಖ್ಯ ಶಿಕ್ಷಕಿಯಾಗಿ ಕಾರ್ಯ ನಿರ್ವಹಣೆ ಮಾಡಿದರು.1998ರಲ್ಲಿ ಕನ್ನಡ ವಿ.ವಿ ಹಂಪಿ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಶಿರಸಿಯಲ್ಲಿ ನಡೆದ ಬುಡಕಟ್ಟು ಮಹಿಳೆಯರ ವಿಚಾರಸಂಕಿರಣದಲ್ಲಿ ಮಹಿಳೆಯರ ಹಸೆಚಿತ್ತಾರ ಕಲೆ ಪ್ರದರ್ಶನ ನಡೆಸಿದರು.1998ರಲ್ಲಿ ಡಿಸೆಂಬರ್‌ನಲ್ಲಿ ಭಾರತ ಸರ್ಕಾರದ ಜವಳಿ ಮಂತ್ರಾಲಯ ಅಭಿವೃದ್ಧಿ ಆಯುಕ್ತರು ಶಿವಮೊಗ್ಗದಲ್ಲಿ ನಡೆಸಿದ ಕಾರ್ಯಗಾರದಲ್ಲಿ ಹಸೆ ಚಿತ್ತಾರ ಮತ್ತು ಬುಟ್ಟಿ ಚಿತ್ತಾರ ಭತ್ತ ಮತ್ತು ಹಿಟ್ಟಂಡೆ ಹುಲ್ಲಿನ ಕರಕುಶಲ ವಸ್ತುಗಳ ಪ್ರದರ್ಶನ ಮಾಡಿದರು.ಇವರಿಗೆ 2005ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವರು

ಗೌರವ ಪುರಸ್ಕಾರ ನೀಡಿದೆ. 2011 ರಲ್ಲಿ ಬೆಂಗಳೂರಿನ ಆಶ್ವಾಸನ ಫೌಂಡೇಶನ್ ಗೌರವ ಪುರಸ್ಕಾರ ನೀಡಿದೆ.

ಚಿತ್ತಾರ ಚಾವಡಿಯ ಹಸುವಂತೆ ಈಶ್ವರ ನಾಯ್ಕ

ಹಸುವಂತೆ ಗ್ರಾಮದ ಈಶ್ವರ ನಾಯ್ಕರು ಹಸೆ ಚಿತ್ತಾರಕ್ಕೆ 1998ರಲ್ಲಿಯೇ ರಾಷ್ಟ್ರ ಪ್ರಶಸ್ತಿಯ ಗರಿ ತಂದುಕೊಟ್ಟಿದ್ದಾರೆ. ರಾಜ್ಯಮಟ್ಟದ ಹಲವು ಪ್ರಶಸ್ತಿಗಳನ್ನೂ ಪಡೆದು ಹಲವು ಸಂಘಸಂಸ್ಥೆಗಳ ಪುರಸ್ಕಾರ ಪಡೆದು ದೀವರು ಸಮುದಾಯದ ಬುಡಕಟ್ಟು ಪರಂಪರೆಯ ಹಸೆ ಚಿತ್ತಾರಕ್ಕೆ ಪರಂಪರೆಯ ಪರಿಧಿಯಾಚೆ ಜನಮನ್ನಣೆ ದೊರಕಿಸಿಕೊಟ್ಟಿದ್ದಾರೆ. ಚಿತ್ತಾರ ಚಾವಡಿ ತಂಡದ ಮೂಲಕ ರಾಜ್ಯ ಮಟ್ಟದಲ್ಲಿ ,ರಾಷ್ಟ್ರ ಮಟ್ಟದಲ್ಲಿ ,ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ತರಬೇತಿ ,ಹಸೆ ಚಿತ್ತಾರ ಪ್ರದರ್ಶನ ಏರ್ಪಡಿಸಿದ್ದಾರೆ. ಇವರು ತಮ್ಮ ತಾಯಿ ಮೈಲಮ್ಮಳಿಂದ ಚಿತ್ತಾರ ಬರೆಯುವುದನ್ನು ಕಲಿತು ಅದರಲ್ಲಿ ತಮ್ಮದೇ ಆದ ನಾವಿನ್ಯ ವಿನ್ಯಾಸಗಳನ್ನು ಸೃಜಿಸಿ ಚಲನಶೀಲತೆ ಮೆರೆದಿದ್ದಾರೆ. ಹಸೆ ಚಿತ್ತಾರಕ್ಕೆ ಉದ್ಯಮಶೀಲತೆ ತಂದು ಜನಪ್ರಿಯಗೊಳಿಸಿದ್ದಾರೆ.



ಹಸುವಂತೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಭಾಗಕ್ಕೆ ಸೇರುತ್ತದೆ. ಇಲ್ಲಿ ಬಹುಸಂಖ್ಯಾತ ದೀವರ ಮನೆಯಲ್ಲಿ ಹಸೆ ಚಿತ್ತಾರ ಕಂಡುಬರುತ್ತದೆ. ತಾಳಗುಪ್ಪ ಸಮೀಪದ ಹಸುವಂತೆಯ ಚೌಡನಾಯ್ಕ ,ಮೈಲಮ್ಮ ದಂಪತಿಯ ಮಗನಾದ ಈಶ್ವರ ನಾಯ್ಕ ಅವರು ಹಸೆ ಚಿತ್ತಾರದಲ್ಲಿ ರಾಷ್ಟ್ರಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಅಂತರಾಷ್ಟ್ರೀಯ ಮಟ್ಟಕ್ಕೆ ಹಸೆ ಚಿತ್ತಾರವನ್ನು ಪರಿಚಯಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.ಇವರು ತಮ್ಮ ಜೀವನದ ಹೆಚ್ಚಿನ ಸಮಯವನ್ನು ಹಸೆ ಚಿತ್ತಾರ ಬರೆಯುವುದಕ್ಕೆ ಮೀಸಲಿಟ್ಟಿದ್ದಾರೆ.ಇವರ ಹೆಂಡತಿ

ಸರಸ್ವತಿ ಹಾಗೂ ಮಕ್ಕಳಾದ ತೇಜಸ್ವಿನಿ,ನಂದಿತಾ ಸಹ ಹಸೆ ಚಿತ್ತಾರ ಬಿಡಿಸಿ ಹಲವು ಕಾರ್ಯಕ್ರಮಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಇವರ ಇಡೀ ಕುಟುಂಬವೇ ದೀವರ ಹಸೆ ಚಿತ್ತಾರ ಕಲಾವಿದರ ಕುಟುಂಬವಾಗಿದೆ.

ರಾಷ್ಟ್ರ ,ಅಂತರಾಷ್ಟ್ರೀಯ ತರಬೇತಿ ಪ್ರದರ್ಶನಗಳು

ಸಾಮಾನ್ಯ ಹಳ್ಳಿಗರಾದ ಇವರು ಹಸೆ ಚಿತ್ತಾರದಿಂದಾಗಿ ವಿಶ್ವದ ಹಲವು ರಾಷ್ಟ್ರಗಳನ್ನು ಸುತ್ತಿದ ಇವರು ಹಸೆಚಿತ್ತಾರಕ್ಕೆ ಅಂತರಾಷ್ಟ್ರೀಯ ಮನ್ನಣೆ ತಂದುಕೊಟ್ಟಿದ್ದಾರೆ.ಇವರು ಬಿಡಿಸಿದ ಚಿತ್ರಗಳು ನಮ್ಮ ರಾಜ್ಯದ ರಾಜ್ಯ ಭವನದಿಂದ ರಾಷ್ಟ್ರಪತಿ ಭವನ ,ಅಮೆರಿಕ ಇಂಗ್ಲೆಂಡ್ ಆಸ್ಟ್ರೇಲಿಯಾದ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನ ಆಗಿವೆ.ಸರ್ಕಾರದ ಹಲವು ಅಕಾಡೆಮಿಗಳಲ್ಲಿ ಹಸೆ ಚಿತ್ತಾರ ಪ್ರದರ್ಶನ ಮಾಡಿದ್ದಾರೆ. ಗುರುಶಿಷ್ಯ ಪರಂಪರೆಯ ಯೋಜನೆಯಡಿಯಲ್ಲಿ ಈ ಕಲೆಯನ್ನು ಹಲವು ಮಹಿಳೆಯರಿಗೆ ತರಬೇತಿ ನೀಡಿದ್ದಾರೆ.ಆರಾಧನಾ ಚಿತ್ರ ಎನ್ನುವ ಕಲಾಕೃತಿಗೆ 1998 ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ.2005ರಲ್ಲಿ ರಾಷ್ಟ್ರೀಯ ಕರಕುಶಲ ಕಾರ್ಯಗಾರದಲ್ಲಿ ಭಾಗವಹಿಸಿದ್ದಾರೆ.2007ರಲ್ಲಿ ಕೇರಳದಲ್ಲಿ ರಾಷ್ಟ್ರೀಯ ಕಲೆ ಮತ್ತು ಕರಕುಶಲ ಕಾರ್ಯದಲ್ಲಿ ಭಾಗವಹಿಸಿದ್ದಾರೆ



ಸುವರ್ಣ ಕರ್ನಾಟಕ ಕಲಾಮೇಳದಲ್ಲಿ ಸಹ ಭಾಗವಹಿಸಿದ್ದರು.ಇವರು ಬಿಡಿಸಿದ ಕಲಾ ಸಂಗ್ರಹಗಳು ಹ್ಯಾಂಡಲ್ ಮೆಟ್ರಿಯಲ್ ಕೆನಡಾ, ಯು.ಎ,

ರಾಬರ್ಟ್ ಬೆಟ್ಮನ್ ಫೇವರ್ ನ್ಯಾಷನಲಿಸ್ಟಿಕ್ ಪೇಂಟರ್ ಕೆನಡ, ಮಾಧ್ಯಮ ಬೆಂಗಳೂರು , ಮದ್ರಾಸ್ ಕ್ರಾಫ್ಟ್ ಫೌಂಡೇಶನ್ ದಕ್ಷಿಣ ಚೆನ್ನೈ ಕ್ರಾಫ್ಟ್ ಕೌನ್ಸಲ್ ಆಫ್ ಕರ್ನಾಟಕ ಬೆಂಗಳೂರು .ರಾಜಭವನ ಬೆಂಗಳೂರು ,ರಾಯಲ್ ಅಂತೆ ಮ್ಯೂಸಿಯಂ ಟೊರೆಂಟೊ ಮುಂತಾದ ಹಲವು ಕಡೆ ಪ್ರದರ್ಶನ ಮಾಡಿದ್ದಾರೆ.1999 ಚಿತ್ತಾರ ಚಾವಡಿಯಲ್ಲಿ ತರಬೇತಿ ಆರಂಭಿಸಿ ಹಲವು ತರಬೇತಿ ನೀಡಿದ್ದಾರೆ. 2001 ಒಂದು ವರ್ಷದ ತರಬೇತಿಯನ್ನು ತಾಳಗುಪ್ಪದಲ್ಲಿ ಆರಂಭಿಸಿದರು.2003,2009, 2011ರಲ್ಲಿ ಕಾರ್ಯಕುಶಲ ಆಯುಕ್ತರು ಭಾರತ ಸರ್ಕಾರ ಇವರ ಸಹಾಯದಿಂದ ತರಬೇತಿ ನೀಡಿದ್ದಾರೆ. ಇಡೀ ಕುಟುಂಬದೊಂದಿಗೆ ಹಸೆಚಿತ್ತಾರ ಬಿಡಿಸುತ್ತಾ ಹಸೆಚಿತ್ತಾರ ಕಲೆಗೆ ಚಲನಶೀಲತೆ ತಂದಿದ್ದಾರೆ.ಯುವ ಕಲಾವಿದರಿಗೆ ತರಬೇತಿ ನೀಡುತ್ತಿದ್ದಾರೆ.

ಪ್ರಶಸ್ತಿ ಗೌರವಗಳು

ಇವರು ಬಿಡಿಸಿದ ಆರಾಧನಾ ಹಸೆಚಿತ್ತಾರಕ್ಕೆ 1998ರಲ್ಲಿ ಇವರಿಗೆ ರಾಷ್ಟ್ರ ಪ್ರಶಸ್ತಿ ದೊರೆಯಿತು.2001–02 ರಲ್ಲಿ ರೋಟರಿಕ್ಲಬ್ ಸೆಂಟ್ರಲ್ ಬೆಂಗಳೂರು ಕರ್ನಾಟಕದಿಂದ 2002ರ ಸಾಲಿನಲ್ಲಿ ವೃತ್ತಿಪರ ಸೇವೆಗೆ ಪಡೆದರು.ಕಲಾಮಣಿ ಪ್ರಶಸ್ತಿ ಇಂಟರ್ನ್ಯಾಷನಲ್ ಸುರಜ್ಕುಂಡ್ ಮೇಳ 2005,ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತಿತರ ಹಲವು ಸಂಘಸಂಸ್ಥೆಗಳ ಪುರಸ್ಕಾರ ಪಡೆದಿದ್ದಾರೆ.

ಶ್ರೀಮತಿ ಲಕ್ಷ್ಮಿ ರಾಮಪ್ಪ ಗಡೆಮನೆ



ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಗಡೇಮನೆ ಗ್ರಾಮದವರಾದ ಶ್ರೀಮತಿ ಲಕ್ಷ್ಮಿ ರಾಮಪ್ಪ ಇವರು ಕರ್ನಾಟಕದ ಹಸೆ ಚಿತ್ತಾರ ಕಲೆಯನ್ನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಲು ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಗೃಹಿಣಿಯಾಗಿ ಕೃಷಿಕರಾಗಿದ್ದು ಹೆಚ್ಚಿನ ವಿಧ್ಯಾಭ್ಯಾಸವಿಲ್ಲದಿದ್ದರೂ ಸೂಕ್ಷ್ಮ ವಿನ್ಯಾಸದ ಹಸೆ ಚಿತ್ತಾರ ಕಲಾವಿದೆ.ಎಲ್ಲಾ ದೀವರ ಹೆಣ್ಣುಮಕ್ಕಳಂತೆ ಸಾಂಪ್ರದಾಯಿಕ ಹಸೆ ಚಿತ್ತಾರ ಬರೆಯುವುದನ್ನು ಕಲಿತ ಇವರು ತಮ್ಮ ತಾಯಿಂದ ನೋಡುತ್ತಲೇ ಕಲಿತಿದ್ದಾರೆ. ದೀವರ ಹೆಣ್ಣುಮಕ್ಕಳಿಗೆ ಸಾಮಾನ್ಯವಾಗಿ ಚಿತ್ತಾರ ರಕ್ತದ ಕಲೆ ಎಂದೇ ಹೇಳಬಹುದು.ಇವರು 1955 ಏಪ್ರಿಲ್ 20ರಂದು ಜನಿಸಿದ್ದು ರಾಜ್ಯ ಮಟ್ಟದಲ್ಲಿ ರಾಷ್ಟ್ರಮಟ್ಟದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ಮತ್ತು ತರಬೇತಿ ನೀಡಿದ್ದಾರೆ.ಮಲೆನಾಡಿನ ರೈತಾಪಿ ವರ್ಗದ ಜಾನಪದ ಗೀತೆಗಳನ್ನು ಹಾಡುವಲ್ಲಿಯೂ ಸಹ ಇವರು ಎತ್ತಿದ ಕೈ.

ತರಬೇತಿ ಮತ್ತು ಪ್ರದರ್ಶನಗಳು

ತಾಲೂಕು ಜಿಲ್ಲೆ ರಾಜ್ಯ ರಾಷ್ಟ್ರಹಂತದಲ್ಲಿ ಸಾಕಷ್ಟು ತರಬೇತಿಗಳನ್ನು ನೀಡಿದ್ದಾರೆ. ಹಸೆ ಚಿತ್ತಾರ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.ಮುಖ್ಯವಾಗಿ 1999 ರಲ್ಲಿ ನೀನಾಸಂ ಸಂಸ್ಥೆಯಿಂದ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಒಂದುವಾರ ವಿವಿಧ ಜಿಲ್ಲೆಯ ಶಿಬಿರಾರ್ಥಿಗಳಿಗೆ ತರಬೇತಿ

ನೀಡಿದ್ದಾರೆ.2000ನೇ ಸಾಲಿನಲ್ಲಿ ಹೊನ್ನೆಮರಡುವಿನಲ್ಲಿ ಒಂದು ವರ್ಷ ಹಲವಾರು ಮಹಿಳೆಯರಿಗೆ ತರಬೇತಿ ನೀಡಿದ್ದಾರೆ.2002ರಲ್ಲಿ ಸಾಗರದ ಸ್ಥಳೀಯರಿಗೆ ಬೀಮನಕೇರಿ ಶಾಲೆ, ಹೊನಕೇರಿ ಶಾಲೆ ಇನ್ನಿತರ ಕಡೆಗಳಲ್ಲಿ ಶಾಲಾ ಮಕ್ಕಳಿಗೆ ತರಬೇತಿ ನೀಡಿದ್ದಾರೆ.2007ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಶಾಲಾ ಮಕ್ಕಳಿಗೆ ತರಬೇತಿ ನೀಡಿದ್ದಾರೆ.2011ರಲ್ಲಿ ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ ಸರ್ಕಾರ ಸಂಸ್ಥೆಗಳ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಹೆಬ್ಬಾಳದಲ್ಲಿ 2000ಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ತರಬೇತಿ ನೀಡಿದ್ದಾರೆ.2012ರಲ್ಲಿ ಹಂಪಿ ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯದಲ್ಲಿ ಚಿತ್ತಾರದ ವಿವಿಧ ಬಗೆಯ ಪ್ರಕಾರಗಳನ್ನು ಪ್ರದರ್ಶನ ಮಾಡಿದ್ದಾರೆ.2013 ರಿಂದ 18 ರವರೆಗೆ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಮಾಸ್ ಕಮ್ಯುನಿಕೇಷನ್ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಚಿತ್ತಾರ ತರಬೇತಿಯನ್ನು ಹೇಳಿದ್ದಾರೆ.2014ರಲ್ಲಿ ಹಂಪಿ ವಿಶ್ವವಿದ್ಯಾಲಯ ಚಿತ್ರಕಲಾ ಪರಿಷತ್ ಬೆಂಗಳೂರು ವಿಶ್ವವಿದ್ಯಾಲಯ ಕಲಾಮಂದಿರ ವಿದ್ಯಾರ್ಥಿಗಳಿಗೆ ಇಂದಿರಾ ಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಸಂಸ್ಥೆಯಲ್ಲಿ ತರಬೇತಿ ನೀಡಿದ್ದಾರೆ.

2015ರಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕು ಚಿತ್ರಕಲಾ ಶಿಕ್ಷಕರ ಸಂಘ ಇವರು ಬೆಂಗಳೂರು ಇವರ ಸಹಯೋಗದೊಂದಿಗೆ ಆಯೋಜಿಸಿದ ಚಿತ್ತಾರದಲ್ಲಿ ನಿರ್ದೇಶಕರಾಗಿ ತಾಲೂಕಿನ ಚಿತ್ರಕಲಾ ಶಿಕ್ಷಕರಿಗೆ ತರಬೇತಿ ನೀಡಿದ್ದಾರೆ.2016ರಲ್ಲಿ ಮೇಲುಕೋಟೆಯಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯಿಂದ ದೃಶ್ಯ ಕಲಾವಿದರ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿ ಚಿತ್ತಾರ ಪ್ರದರ್ಶನ ಮಾಡಿದ್ದಾರೆ.ಜಾನಪದ ವಿಶ್ವವಿದ್ಯಾಲಯದಲ್ಲಿ ಗೊಟಗೋಡಿಯಲ್ಲಿ ಚಿತ್ರಕಲಾ ವಿಷಯದಲ್ಲಿ ಎಂ.ಎ ಪದವಿ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಸಹ ಸೇವೆ ಸಲ್ಲಿಸಿದ್ದಾರೆ.ಸಿಪ್ರಿಯ ಸಂಸ್ಥೆ ಬೆಂಗಳೂರು ಜೊತೆಗೂಡಿ ಹಲವಾರು ಶಿಬಿರ ಏರ್ಪಡಿಸಿದ್ದಾರೆ.

ರಾಷ್ಟ್ರ,ಅಂತರಾಷ್ಟ್ರ ಮಟ್ಟದ ತರಬೇತಿ ಮತ್ತು ಪ್ರದರ್ಶನಗಳು

ಇವರು ದೇಶದಲ್ಲಿ ಅಲ್ಲದೆ ವಿದೇಶಗಳಲ್ಲಿಯೂ ಸಹ ಹಸೆಚಿತ್ತಾರ ಪ್ರದರ್ಶನ ನಡೆಸಿದ್ದಾರೆ.ವಿದೇಶಗಳಾದ ಜಪಾನ್ ,ಅಮೆರಿಕ ,ಈಕ್ವೆಡಾರ್ ,ಮೆಕ್ಸಿಕೊ ಸ್ವಿಟ್ಜರ್ಲ್ಯಾಂಡ್ ಇನ್ನು ಮುಂತಾದ ದೇಶಗಳ ಕಲಾವಿದರಿಗೆ ಚಿತ್ತಾರ ಕಲೆಯನ್ನು ಪರಿಚಯಿಸಿ ತರಬೇತಿ ನೀಡಿದ್ದಾರೆ.ಅಪ್ಪಟ ಮಲೆನಾಡಿನ ದೀವರ ಹಸೆ ಚಿತ್ತಾರ ಕಲೆಯನ್ನು ದೇಶದ ವಿವಿಧ ರಾಜ್ಯಗಳಲ್ಲಿ ಸಹ ಪ್ರದರ್ಶನ ಮತ್ತು ತರಬೇತಿ ನೀಡಿದ್ದಾರೆ.ಕಲ್ಕತ್ತಾ ನವದೆಹಲಿ ಕುಪ್ಪಂ ಚೆನ್ನೈನಲ್ಲಿ ಜರುಗಿದ ಕಲಾಮೇಳದಲ್ಲಿ ಪ್ರದರ್ಶನ ನೀಡಿದ್ದಾರೆ.2011ರಲ್ಲಿ ನಡೆದ ಜಪಾನ್ ಹಬ್ಬದಲ್ಲಿ ಸುಮಾರು 170 ರಿಂದ 150 ವಿದ್ಯಾರ್ಥಿಗಳಿಗೆ ಹಾಗೂ 20ರಿಂದ 25 ಶಿಕ್ಷಕರಿಗೆ ನೈಸರ್ಗಿಕವಾಗಿ ಮಾಡಿದ ಕುಂಚ ಮತ್ತು ನೈಸರ್ಗಿಕವಾಗಿ ತಯಾರಿಸಿದ ಬಣ್ಣದಲ್ಲಿ ತರಬೇತಿ ನೀಡಿದ್ದಾರೆ.ಹಾಗೂ ಜಪಾನಿನ 200 ಜನ ಸಾರ್ವಜನಿಕರಿಗೆ ತರಬೇತಿ ನೀಡಲಾಗಿದೆ. 2011ರಲ್ಲಿ ರವೀಂದ್ರ ಕಲಾಕ್ಷೇತ್ರ ಬೆಂಗಳೂರಿನಲ್ಲಿ ತರಬೇತಿ ನೀಡಲಾಗಿದೆ.2012ರಲ್ಲಿ ವೀಲರ್ಸ್ ವೀಲ್ ಆಯೋಜಿಸಿರುವ ಲೆಕ್ಚರ್ ಡೆಮಾನ್ ಸ್ಟೇಷನ್ ನಲ್ಲಿ ಇಟಲಿಯ ಪ್ರೊ ಆಲ್ಬರ್ಟ್ ಅವರಿಗೆ ತರಬೇತಿ ನೀಡಿದ್ದಾರೆ.2012ರಲ್ಲಿ ಫಾರ್ಮ್ ಹೌಸ್ ನಲ್ಲಿ ಜಪಾನ್ ದೇಶದ ಸುಮಾರು 18 ರಿಂದ 20 ಜನರಿಗೆ ಲೆಕ್ಚರ್ ಡೇಮಾನ್ ಸ್ಟೇಷನ್ ನೀಡಿದ್ದಾರೆ.2013ರಲ್ಲಿ ಕಲಾಪೂರ್ಣಿಮದಲ್ಲಿ ಸುಮಾರು 50 ಜನರಿಗೆ ತರಬೇತಿ ನೀಡಿದ್ದಾರೆ.1999 ರಲ್ಲಿ ರಮಾದೇವಿ ಅವರು ರಾಜ್ಯಪಾಲರಾಗಿದ್ದಾಗ ರಾಜಭವನದ ಗೋಡೆಯಲ್ಲಿ ಹಸೆ ಚಿತ್ತಾರ ಪ್ರದರ್ಶನ ಮಾಡಲಾಗಿದೆ.ರಾಜ್ಯದ ಹಲವಾರು ಹಸೆ ಚಿತ್ತಾರ ಪ್ರಿಯರ ಮನೆಯಲ್ಲಿ, ವಾಣಿಜ್ಯ ಕೇಂದ್ರಗಳಲ್ಲಿ, ಚಿತ್ತಾರವನ್ನು ಬಿಡಿಸಿದ್ದಾರೆ.

ಪ್ರಶಸ್ತಿ–ಪುರಸ್ಕಾರಗಳು

2014 ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.ಕರ್ನಾಟಕ ಲಲಿತ ಕಲಾ ಅಕಾಡೆಮಿ ಗೌರವ ಪ್ರಶಸ್ತಿ 2014ರಲ್ಲಿ

ಲಭಿಸಿದೆ.ಅಶೋಕ ಪೌಂಡೇಶನ್ ಅಂತರಾಷ್ಟ್ರೀಯ ಸಂಸ್ಥೆ 2003ರಲ್ಲಿ ಗೌರವ ಪುರಸ್ಕಾರ ನೀಡಿದೆ.ಭಾರತೀಯ ರೈಲ್ವೆ ಇಲಾಖೆ ಗೌರವ ಪುರಸ್ಕಾರ ನೀಡಿದೆ.ರಾಜ್ಯದ ವಿವಿಧ ಸಂಘ ಸಂಸ್ಥೆಗಳು ಇವರ ಕಲೆಯನ್ನು ಗುರುತಿಸಿ ಗೌರವ ಪುರಸ್ಕಾರ ನೀಡಿವೆ.ರಾಜ್ಯದ ಹಲವಾರು ಪತ್ರಿಕೆಗಳು ಇವರ ಹಸೆ ಚಿತ್ತಾರ ಸೇವೆಯನ್ನು ಕಲೆಯ ಕುರಿತು ಲೇಖನಗಳನ್ನು ಪ್ರಕಟಿಸಿವೆ.ಧೀರ ದೀವರ ಬಳಗ,ದೀವರ ಸಾಂಸ್ಕೃತಿಕ ಕ್ಷೇಮಾಭಿವೃದ್ಧಿ ಸಂಘ ಗೌರವ ಪುರಸ್ಕಾರ ನೀಡಿದೆ.

ಶ್ರೀಮತಿ ಗೌರಿ ಚಂದ್ರಶೇಖರ್ ದಂಪತಿಗಳು ಸಿರಿವಂತೆ

ಶ್ರೀಮತಿ ಗೌರಿ ಚಂದ್ರಶೇಖರ್ ಇವರು ಹಸೆ ಚಿತ್ರಕಲಾವಿದ ಸಾಗರದ ಸಿರಿವಂತೆಯ ಚಂದ್ರಶೇಖರ್ ಅವರ ಹೆಂಡತಿಯಾಗಿದ್ದು ದಂಪತಿಗಳು ಇಡೀ ಜೀವನವನ್ನು ಹಸೆಚಿತ್ರ ಕಲಾಸೇವೆಗೆ ಮುಡಿಪಾಗಿಟ್ಟಿದ್ದಾರೆ. ಇವರು ಗೃಹಿಣಿಯಾಗಿದ್ದು ಪ್ರವೃತ್ತಿಯಾಗಿ ಬುಟ್ಟಿ ಚಿತ್ತಾರ ಬರೆಯುವುದನ್ನು ರೂಢಿಸಿಕೊಂಡು ಮದುವೆಗಳಿಗೆ, ಹಬ್ಬಗಳಿಗೆ ಚಿತ್ತಾರ ಬರೆಯುತ್ತಾರೆ. ಹಸೆ ಚಿತ್ತಾರ ಕಲೆಯನ್ನು ಉದ್ಯಮಶೀಲತೆಯತ್ತ ಕೊಂಡೊಯ್ದ ಚಿತ್ರಸಿರಿ ಚಂದ್ರಶೇಖರ್ ಅವರ ಹೆಂಡತಿಯಾದ ಇವರು ಅವರ ಕಲಾ ಪ್ರಯೋಗಕ್ಕೆ ಇವರು ಸಹ ಜೊತೆಯಾಗಿದ್ದಾರೆ.



ಇವರು ವಿಶೇಷವಾಗಿ ಭತ್ತದ ತೆನೆಗಳಿಂದ ವಿವಿಧ ಆಕಾರದ ತೋರಣಗಳನ್ನು ನೇಯುವಲ್ಲಿ ಸಿದ್ಧಹಸ್ತರು.ಹಸೆತೋರಣ , ಸಿಂಗಾರಿ ತೋರಣ ಸಾದಾ ಸಿಂಗಾರಿ ತೋರಣ, ಗಣೇಶ ಕೃತಿ ತೋರಣ ಪ್ರಕೃತಿ ತೋರಣ

ಗಂಡಬೇರುಂಡ ತೋರಣ ,ಅರಳಿ ಎಲೆ ತೋರಣ ಮನೆ ಮಾದರಿ ತೋರಣ ಮತ್ತಿತರ ವಿವಿಧ ಆಕೃತಿಗಳಲಿ ಇವರು ಬತ್ತದ ತೋರಣವನ್ನು ಮಾಡುತ್ತಾರೆ.

ರಾಷ್ಟ್ರ ಅಂತರಾಷ್ಟ್ರೀಯ ಪ್ರದರ್ಶನ ಮತ್ತು ತರಬೇತಿಗಳು

ಇವರು ರಾಜ್ಯ ಮಟ್ಟದಲ್ಲಿ ,ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ.ಸಾಗರ ಶಿರ್ಸಿ ,ಯಲ್ಲಾಪುರ ,ಬನವಾಸಿ ,ಶಿವಮೊಗ್ಗ ಧರ್ಮಸ್ಥಳ ,ಮೈಸೂರು ,ಬೆಂಗಳೂರು ಮುಂತಾದ ಕಡೆ ಸ್ಥಳೀಯವಾಗಿ ಪ್ರದರ್ಶನ ನೀಡಿದ್ದಾರೆ..ಹೊರರಾಜ್ಯಗಳಾದ ಕಲ್ಕತ್ತಾ ,ಮಧುರೈ. ಹೈದರಾಬಾದ್ ಗಳಲ್ಲಿಯೂ ಸಹ ಪತಿ ಚಂದ್ರಶೇಖರ್ ಅವರ ಜೊತೆಗೂಡಿ ಪ್ರದರ್ಶನ ಮಾಡಿದ್ದಾರೆ.ಅಲ್ಲದೆ 2008ರಲ್ಲಿ ಜಪಾನ್ ದೇಶದಲ್ಲಿ ಒಂದು ವಾರಗಳ ಕಾಲ ಚಿತ್ತಾರ ಮತ್ತು ಭತ್ತದ ಕರಕುಶಲ ಕಲೆಯ ಪ್ರದರ್ಶನವನ್ನು ನೀಡಿದ್ದಾರೆ.2009ರಲ್ಲಿ ದುಬೈನಲ್ಲಿ ಮೂರು ದಿನಗಳ ಕಾಲ ಚಿತ್ತಾರ ಹಾಗೂ ಭತ್ತದ ಕಲಾಕೃತಿ ಪ್ರದರ್ಶನ ಸಹ ಚಂದ್ರಶೇಖರ್ ಅವರ ಜೊತೆಗೂಡಿ ಮಾಡಿದ್ದಾರೆ. ಸ್ಥಳೀಯವಾಗಿ ಸುಮಾರು 30 ಕ್ಕಿಂತ ಹೆಚ್ಚಿನ ಮಹಿಳೆಯರಿಗೆ ವಿವಿಧ ಚಿತ್ರ ಕಲಾಕೃತಿಗಳ ತಯಾರಿಕೆ ಬಗ್ಗೆ ತರಬೇತಿ ನೀಡಿದ್ದಾರೆ.

ಚಿತ್ರಸಿರಿಯ ಚಂದ್ರಶೇಖರ್ .ಎನ್ .ಸಿರಿವಂತೆ



ಚಿತ್ತಾರದಲ್ಲಿ ಚಲನಶೀಲತೆ ಮತ್ತು ಉದ್ಯಮಶೀಲತೆಯನ್ನು ತಂದವರಲ್ಲಿ ಇವರು ಸಹ ಪ್ರಮುಖರು. ಹಸೆ ಚಿತ್ತಾರದ ಸ್ತ್ರೀಯರ ಕಲಾ ಅಭಿವ್ಯಕ್ತಿ ಆದರೂ ಸಹ ಇವರು ಸಹ ಕಲಿತು ರಾಜ್ಯ ಅಂತರ್ ರಾಜ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಿದ್ದಾರೆ. ಚಿತ್ರಸಿರಿ ಎನ್ನುವ ಸಂಸ್ಥೆಯನ್ನು ಕಟ್ಟಿಕೊಂಡು ಹಸೆ ಚಿತ್ತಾರಕ್ಕೆ ಉದ್ಯಮಶೀಲತೆಯನ್ನು ಸಹ ನೀಡಿದ್ದಾರೆ. ಜೊತೆಗೆ ಹಲವಾರು ಕಲಾವಿದರಿಗೆ ತರಬೇತಿ

ನೀಡಿದ್ದಾರೆ. ಚಿತ್ತಾರ ಸಂಶೋಧಕರಿಗೆ ಮಾರ್ಗದರ್ಶನ ನೀಡಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ದೇಸಿ ಹಸೆಚಿತ್ತಾರ ಕಲೆಯ ಕಲಾವಿದರಾಗಿ ಇವರು ಜನಪ್ರಿಯರಾಗಿದ್ದಾರೆ.ಶಿವಮೊಗ್ಗದಿಂದ ಜೋಗದತ್ತ ಹೊರಡುವಾಗ ಬಿ.ಹೆಚ್ ರಸ್ತೆಯ ಮಾರ್ಗ ಮಧ್ಯದಲ್ಲಿ ಸಿರವಂತೆ ಗ್ರಾಮದಲ್ಲಿ ವಾಸವಾಗಿರುವ ಇವರು ಸಹ ಗ್ರಾಮೀಣ ಪ್ರತಿಭೆ. ಇವರು ಹಲವಾರು ಚಿತ್ತಾರ ಕಲಾವಿದರನ್ನು ಬೆಳೆಸಿದ್ದಾರೆ. ಇವರ ಕಲಾಸೇವೆಯ ಕುರಿತು ಹಲವು ಪತ್ರಿಕೆಗಳು ಲೇಖನ ಪ್ರಕಟಿಸಿದೆ. ಚಿತ್ತಾರದಲ್ಲಿ ಹಲವು ರೀತಿಯ ಹೊಸ ಹೊಸ ಚಿತ್ತಾರಗಳನ್ನು ಅನ್ವೇಷಿಸಿರುವ ಇವರು ಸದಾ ಪ್ರಯೋಗಶೀಲರು ಸಹ ಆಗಿರುವುದು ಅವರ ಹೆಚ್ಚುಗಾರಿಕೆ.

ರಾಷ್ಟ್ರ ಮತ್ತು ಅಂತರಾಷ್ಟ್ರಗಳಲ್ಲಿನ ಪ್ರದರ್ಶನ ಮತ್ತು ತರಬೇತಿಗಳು

ರಾಜ್ಯ ಮಟ್ಟದಲ್ಲಿ ಸಿರವಂತೆ ,ಸಾಗರ, ಸಿರ್ಸಿ, ಶಿವಮೊಗ್ಗ ಬೆಂಗಳೂರು– ಮೈಸೂರು ,ಯಲ್ಲಾಪುರ ಜೋಗ ಜಲಪಾತದ ಭಾಗದಲ್ಲಿ ಚಿತ್ತಾರದ ಕುರಿತು ಪ್ರಾತ್ಯಕ್ಷಿಕೆ ನೀಡಿದ್ದಾರೆ .ಪ್ರದರ್ಶನಗಳನ್ನೂ ಏರ್ಪಡಿಸಿದ್ದಾರೆ.ಅಂತರ್ ರಾಜ್ಯ ಮಟ್ಟದಲ್ಲಿಯೂ ಸಹ ಇವರು ಚಿತ್ತಾರ ತರಬೇತಿ ಪ್ರದರ್ಶನ ನಡೆಸಿದ್ದಾರೆ. ಮುಖ್ಯವಾಗಿ ಇವರು ಕೊಲ್ಕತ್ತಾ ಮಧುರೈನಲ್ಲಿ ಚಿತ್ತಾರ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ನೀಡಿದ್ದಾರೆ.ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಸಹ ಇವರು ಪ್ರದರ್ಶನ ಮಾಡಿದ್ದಾರೆ. 2008ರಲ್ಲಿ ಜಪಾನ್ ನಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ಕರ್ನಾಟಕದಿಂದ ಆಹ್ವಾನಿತರಾಗಿ ಆಯ್ಕೆಯಾಗಿ ಚಿತ್ರಕಲಾ ಪ್ರದರ್ಶನವನ್ನು ನೀಡಿ ಚಿತ್ತಾರ ಕುರಿತು ತರಬೇತಿ ನೀಡಿದ್ದಾರೆ.



ಜಪಾನಿನಲ್ಲಿ ಹಸೆಚಿತ್ತಾರ ಪ್ರದರ್ಶನ

ಇವರ ನಾವಿನ್ಯ ಪ್ರಯೋಗಗಳು

ಇವರು ಚಿತ್ತಾರ ಕಲಾವಿದರು ಅಷ್ಟೇ ಅಲ್ಲದೆ ಬತ್ತದ ತೋರಣಗಳ ಕರಕುಶಲ ಕಲಾಕಾರರು ಆಗಿದ್ದಾರೆ. ಹಲವು ಬಗೆಯ ಭತ್ತದ ತೋರಣಗಳನ್ನು ಪರಿಚಯಿಸಿದ್ದಾರೆ.ಹಸೆ ಚಿತ್ತಾರದಲ್ಲಿ ನಾವಿನ್ಯತೆಯನ್ನು ಇವರು ಮೆರೆದಿದ್ದಾರೆ. 416 ಮೂಲೆ ಆರತಿ ಚಿತ್ತಾರ ಆವಿಷ್ಕಾರ ಇವರ ಪ್ರಯೋಗಕ್ಕೆ ಸಾಕ್ಷಿ. ಹಸೆ ಮಂಟಪ ಸಹ ಇವರ ಪ್ರಯೋಗದಲ್ಲಿ ಇನ್ನೊಂದು. ನಶಿಸಿ ಹೋಗುತ್ತಿರುವ ಹಲವು ಹಸೆಚಿತ್ತಾರ ಬಗೆಗಳನ್ನು ಇವರು ಯುವ ಕಲಾವಿದರಿಗೆ ತರಬೇತಿ ನೀಡಿದ್ದಾರೆ.ಹಸೆಚಿತ್ತಾರದ ತೋರಣಗಳು,ಹಾರಗಳು,ಮೊಮೆಂಟೋಗಳನ್ನು ಮಾಡಿದ್ದಾರೆ.

ಇವರು 250 ಅಡಿ ಉದ್ದದವರೆಗೂ ವಿಸ್ತರಿಸಿದ ಭತ್ತದ ತೋರಣಗಳನ್ನು ನಿರ್ಮಾಣ ಮಾಡಿ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ಪ್ರದರ್ಶನ ಮಾಡಿ ರಾಜ್ಯದ ಸಾಹಿತಿಗಳು ಕಲಾವಿದರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.ಸಾಹಿತ್ಯ ವಲಯದಲ್ಲಿ ಹಸೆ ಚಿತ್ತಾರ ಎಂದರೆ ಸಿರಿವಂತೆ ಚಿತ್ರಸಿರಿ ಚಂದ್ರಶೇಖರ್ ಎಂದೇ ಹೆಸರಾಗಿದ್ದಾರೆ.ಮೂರರಿಂದ ಆರು ಇಂಚು ವ್ಯಾಸದ ಭತ್ತದ ಗೂಡಿನ ನಿರ್ಮಾಣವನ್ನು 4 ಅಡಿ ವ್ಯಾಸದ ವರೆಗೆ ವಿಸ್ತರಿಸಿ ಹಲವು ರೀತಿಯ ವಿನ್ಯಾಸಗಳಲ್ಲಿ ನಿರ್ಮಿಸಿದ್ದಾರೆ.ಬತ್ತದ ಕದಿರುಗಳನ್ನು ಉಪಯೋಗಿಸಿ ಹಾರಗಳನ್ನು ತಯಾರಿಸಿ ಸಮಾರಂಭಗಳಿಗೆ ಬಳಕೆ ಮಾಡಲು ಬರುವಂತೆ ವಿನ್ಯಾಸಮಾಡಿ ಮಾಡಿದ್ದು ಇವರ ಮತ್ತೊಂದು ಅನ್ವೇಷಣೆ.ಚಿತ್ತಾರ ಮಾದರಿಯಂತೆ ಕನ್ನಡ ಅಕ್ಷರ ಕಲಿಕೆಗೆ ಸುಲಭವಾಗುವಂತೆ ಕನ್ನಡ ಅಕ್ಷರ ವರ್ಣಮಾಲೆ ಕಲಿಕಾ ಮಾದರಿ ತಯಾರಿಸಿದ್ದಾರೆ.30 ಸಂಕೇತ ಕಾರ್ಯಗಳೊಂದಿಗೆ ಕನ್ನಡ ವರ್ಣಮಾಲೆಯನ್ನು ಸಲುವಾಗಿ ಕಲಿಯುವಂತೆ ಸಾಧ್ಯವಾಗುವ ಅಕ್ಷರ ಆಕಾರ ವಿನ್ಯಾಸ ಮಾಡಿದ್ದಾರೆ. ಇದನ್ನು ಕೆಲವು ಶಿಕ್ಷಣ ತಜ್ಞರು ಸಾಹಿತಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಚಮತ್ ಕೋನದ ಆವಿಷ್ಕಾರ ಇವರ ಮತ್ತೊಂದು ಪ್ರಯೋಗ. ಈ ಮೂಲಕ ಮಕ್ಕಳು ಬೌದ್ಧಿಕ ಕಸರತ್ತು

ನಡೆಸಲು ಅನುಕೂಲಕರ ಆಟಿಕೆಯಾಗಿ ರೂಪಿಸಿದ್ದಾರೆ.9 ತ್ರಿಕೋನ ಮೂಲಕ ಮುನ್ನೂರಕ್ಕೂ ವಿವಿಧ ಆಕೃತಿಗಳನ್ನು ರಚಿಸಬಹುದಾದಂತ ವಿಶಿಷ್ಟ ಆವಿಷ್ಕಾರ ಮಾಡಿದ್ದಾರೆ.ವಿಶಿಷ್ಟ ವಿನ್ಯಾಸದ ಭತ್ತದ ತೋರಣ ಗಿನ್ನಿಸ್ ದಾಖಲೆಗಾಗಿ ತಯಾರಿ ಆಗಿದ್ದು ಇವರು 1111 ಅಡಿ ಉದ್ದದ ಭತ್ತದ ತೋರಣ ನಿರ್ಮಿಸಿದ್ದಾರೆ. ಅದನ್ನು ಗಿನ್ನಿಸ್ ದಾಖಲೆಯಲ್ಲಿ ದಾಖಲಿಸಲು ಸಿದ್ಧತೆ ನಡೆಸಿದ್ದಾರೆ.

ಪುರಸ್ಕಾರಗಳು

ಇವರಿಗೆ ರಾಜ್ಯಾದ್ಯಂತ ಹಲವು ಸಂಘ–ಸಂಸ್ಥೆಗಳು ಇವರ ಕಲಾಸೇವೆಯನ್ನು ಗುರುತಿಸಿ ಪುರಸ್ಕರಿಸಿವೆ. ತಿಮ್ಮಪ್ಪಹೆಗ್ಗಡೆ ಪ್ರತಿಷ್ಠಾನದಿಂದ ಗೌರವ ಪುರಸ್ಕಾರ.ಧರ್ಮಸ್ಥಳ ಸಂಘದಿಂದ ಸನ್ಮಾನ, ಕನ್ನಡ ಸಾಹಿತ್ಯ ಪರಿಷತ್ ಸಾಗರ ಇವರಿಂದ ಗೌರವ ಪುರಸ್ಕಾರ ಹೀಗೆ ಹಲವಾರು ಸಂಘ ಸಂಸ್ಥೆಗಳು ಇವರ ಕಲಾಸೇವೆ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಪುರಸ್ಕಾರ ನೀಡಿವೆ.ರಾಜ್ಯದ ಅಕಾಡೆಮಿಗಳು , ರಾಜ್ಯ ಸರ್ಕಾರಗಳು ಇವರ ಕಲಾಸೇವೆಯನ್ನು ಇನ್ನೂ ಗುರುತಿಸಬೇಕಾಗಿದೆ.

ಶ್ರೀಮತಿ ರಾಧಾ ಸುಳ್ಳೂರು

ಶ್ರೀಮತಿ ರಾಧಾ ಸುಳ್ಳೂರು ಅವರು ಹೊಸ ತಲೆಮಾರಿನ ಹಸೆ ಚಿತ್ತಾರ ಕಲಾವಿದೆಯರಲ್ಲಿ ಪ್ರಮುಖರು.ಇವರು ಬೆಂಗಳೂರು ನಗರ ಭಾಗದಲ್ಲಿ ಹಸೆ ಚಿತ್ತಾರ ಕಲೆಯನ್ನು ಹೆಚ್ಚು ಜನಪ್ರಿಯಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಾಗರ ತಾಲ್ಲೂಕಿನ ಗಡಿಭಾಗದ ಸುಳ್ಳೂರು ಗ್ರಾಮದವರಾದ ಇವರು ಸಹ ಕರ್ನಾಟಕದ ಮಲೆನಾಡಿನ ಪ್ರಮುಖ ಚಿತ್ತಾರ ಕಲಾವಿದರಾಗಿದ್ದು ರಾಜ್ಯಾದ್ಯಾಂತ ಸಾಕಷ್ಟು ಕಡೆ ಹಸೆ ಚಿತ್ತಾರ ಪ್ರದರ್ಶನ ,ತರಭೇತಿಯಲ್ಲಿ ಭಾಗಿಯಾಗಿದ್ದಾರೆ. ರಾಜ್ಯ ಅಂತರ್ ರಾಜ್ಯಗಳಲ್ಲಿಯೂ ತರಬೇತಿ ಪ್ರದರ್ಶನ ನೀಡಿದ್ದಾರೆ. ಸೂಕ್ಷ್ಮ ವಿನ್ಯಾಸಗಳಿಂದ ಗಮನಸೆಳೆದಿದ್ದಾರೆ. ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ. ದೀರ ದೀವರ ಬಳಗ,ಧೀವರ ಸಾಂಸ್ಕೃತಿಕ ಕ್ಷೇಮಾಭಿವೃದ್ಧಿ ಬಳಗ ಗೌರವ ಸನ್ಮಾನ ನೀಡಿದೆ.

ನಾವಿನ್ಯತೆಗಳು, ಪ್ರದರ್ಶನ ಮತ್ತು ಪುರಸ್ಕಾರಗಳು

ಇವರು ವಸ್ತ್ರಗಳು, ಸೀರೆಯ ಮೇಲೆ ಹಸೆಚಿತ್ತಾರ ಬರೆಯುವಲ್ಲಿ ಪ್ರಾವಿಣ್ಯತೆ ಪಡೆದಿದ್ದಾರೆ. ಈಗಾಗಲೇ ಸಾಕಷ್ಟು ಸೀರೆಗಳಿಗೆ ಹಸೆಚಿತ್ತಾರದ ವಿನ್ಯಾಸದಲ್ಲಿ ಹೊಸ ಮೆರಗು ನೀಡಿ ತಮ್ಮದೇ ಆದ ನಾವಿನ್ಯತೆ ಮೆರೆದಿದ್ದಾರೆ. ವ್ಯಾಪಾರ ವಲಯ ಸೃಷ್ಟಿಸಿಕೊಂಡಿದ್ದಾರೆ. ಸಾಕಷ್ಟು ಸೂಕ್ಷ್ಮ ವಿನ್ಯಾಸದ ಗೋಡೆ ಚಿತ್ತಾರ, ಬುಟ್ಟಿ ಚಿತ್ತಾರ ಬಿಡಿಸುತ್ತಾರೆ. ವಿವಿಧ ಅಕಾಡೆಮಿ ವಲಯದಲ್ಲಿ, ಕರಕುಶಲ ಕಲಾ ಪ್ರದರ್ಶನ ಏರ್ಪಡಿಸಿ ಹಸೆಚಿತ್ತಾರ ಕಲೆಗೆ ಜನಪ್ರಿಯತೆ ತಂದುಕೊಂಡುವಲ್ಲಿ ಹಾಗೂ ಆ ಮೂಲಕವೇ ಉದ್ಯಮ ಬದುಕು ಕಟ್ಟಿಕೊಳ್ಳುವಲ್ಲಿಯೂ ಮುನ್ನುಗ್ಗುತ್ತಿದ್ದಾರೆ. ದೀವರ ಸಂಘ ಸಂಸ್ಥೆಗಳು, ಹಲವಾರು ಸಂಘಟನೆಗಳು,ಅಕಾಡೆಮೆಗಳು ಇವರ ಕಲಾ ನಾವಿನ್ಯತೆ, ಸೇವೆ ಗುರುತಿಸಿ ಹಲವಾರು ಅವಕಾಶ ನೀಡಿವೆ. ಪುರಸ್ಕಾರ ನೀಡಿ ಗೌರವಿಸಿವೆ.

ಕರ್ನಾಟಕದ ದೇಶೀ ಚಿತ್ರಕಲೆ ಹಸೆ ಚಿತ್ತಾರ ರವಿರಾಜ್ ಸಾಗರ್

ಶ್ರೀಮತಿ ಕುಸುಮಾ ಅಣ್ಣಪ್ಪ ದಿಗಟೆಕೊಪ್ಪ



ಸಾಗರ ತಾಲ್ಲೂಕಿನ ಕೆಳದಿ ಸಮೀಪದ ದಿಗಟೆಕೊಪ್ಪ ವಾಸಿಯಾದ ಇವರು ಅವರು ಹೊಸ ತಲೆವಾರಿನ ಹಸೆ ಚಿತ್ತಾರ ಕಲಾವಿಧೆಯರಲ್ಲಿ ಪ್ರಮುಖರು. ಇವರು ರಾಜ್ಯದ ವಿವಿಧ ಭಾಗದಲ್ಲಿ ಹಸೆ ಚಿತ್ತಾರ ಕಲೆಯನ್ನು ಹೆಚ್ಚು ಜನಪ್ರಿಯಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರು ಸಹ ಕರ್ನಾಟಕದ ಮಲೆನಾಡು ದೀವರು ಸಮುದಾಯದ ಪ್ರಮುಖ ಚಿತ್ತಾರ ಕಲಾವಿಧರಾಗಿದ್ದು ರಾಜ್ಯಾಧ್ಯಾಂತ ಸಾಕಷ್ಟು ಕಡೆ ಹಸೆ ಚಿತ್ತಾರ ಪ್ರದರ್ಶನ ,ತರಭೇತಿಯಲ್ಲಿ ಭಾಗಿಯಾಗಿದ್ದಾರೆ. ಸಿರಿವಂತೆಯ ಚಿತ್ರಸಿರಿ ಚಂದ್ರಶೇಖರ ಇವರ ಬಳಿ ಹೆಚ್ಚಿನ ತರಬೇತಿ ಪಡೆದ ಇವರು ಬಹಳ ಸೂಕ್ಷ್ಮವಾದ ,ಸೊಗಸಾದ ರೇಖಾ ವಿನ್ಯಾಸದಲ್ಲಿ ಹಸೆ ಚಿತ್ತರ ಬರೆಯುವಲ್ಲಿ ಸಿದ್ದಹಸ್ತರು. ಇವರು ಸಹ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ.

ಪ್ರದರ್ಶನ ಮತ್ತು ಪುರಸ್ಕಾರಗಳು

ಇವರು ಪೇಪರ್ ,ಕಾರ್ಡಬೋರ್ಡ್, ಗೋಡೆ ಮೇಲೆ ಹಸೆಚಿತ್ತಾರ ಬರೆಯುವಲ್ಲಿ ಪ್ರಾವಿಣ್ಯತೆ ಪಡೆದಿದ್ದಾರೆ. ಈಗಾಗಲೇ ಸಾಕಷ್ಟು ರೀತಿಯಲ್ಲಿ ಹಸೆಚಿತ್ತಾರದ ವಿನ್ಯಾಸದಲ್ಲಿ ನಾವಿನ್ಯತೆ ನೀಡಿ ಹೊಸ ಮೆರಗು ನೀಡಿ ತಮ್ಮದೇ ಆದ ಕಲಾಉದ್ಯಮ ವಲಯ ಸೃಷ್ಟಿಸಿಕೊಂಡಿದ್ದಾರೆ. ಸಾಕಷ್ಟು ಸೂಕ್ಷ್ಮ ವಿನ್ಯಾಸದ ಗೋಡೆ ಚಿತ್ತಾರ, ಬುಟ್ಟಿ ಚಿತ್ತಾರ ಬಿಡಿಸುತ್ತಾರೆ. ವಿವಿಧ ಅಕಾಡೆಮಿ ವಲಯದಲ್ಲಿ, ಕರಕುಶಲ ಕಲಾ ಪ್ರದರ್ಶನ ಏರ್ಪಡಿಸಿ ಹಸೆಚಿತ್ತಾರ ಕಲೆಗೆ ಜನಪ್ರಿಯತೆ ತಂದುಕೊಂಡುವಲ್ಲಿ ಹಾಗೂ ಆ ಮೂಲಕವೇ ಉದ್ಯಮ ಬದುಕು

ಕಟ್ಟಿಕೊಳ್ಳುವಲ್ಲಿಯೂ ಮುನ್ನುಗ್ಗುತ್ತಿದ್ದಾರೆ. ದೀವರ ಸಂಘ ಸಂಸ್ಥೆಗಳು, ಹಲವಾರು ಸಂಘಟನೆಗಳು,ಅಕಾಡೆಮೆಗಳು ಇವರ ಕಲಾ ನಾವಿನ್ಯತೆ, ಸೇವೆ ಗುರುತಿಸಿ ಹಲವಾರು ಅವಕಾಶ ನೀಡಿವೆ. ಪುರಸ್ಕಾರ ನೀಡಿ ಗೌರವಿಸಿವೆ.. ದೀರ ದೀವರ ಬಳಗ,ದೀವರ ಸಾಂಸ್ಕೃತಿಕ ಕ್ಷೇಮಾಭಿವೃದ್ಧಿ ಬಳಗ ಗೌರವ ಸನ್ಮಾನ ನೀಡಿದೆ.

ಭರವಸೆಯ ಹೊಸ ತಲೆಮಾರಿನ ಹಸೆ ಚಿತ್ತಾರ ಕಲಾವಿದರು

ಇಂದು ಶಿಕ್ಷಣ ಪಡೆದ ವಿದ್ಯಾವಂತರು,ನೌಕರರೂ ಬಹುತೇಕ ಯುವಕರು ಯುವಕಿಯರು ಇಂದಿನ ಆಧುನಿಕತೆ ಜಾಗತೀಕರಣಕ್ಕೆ ಒಳಗಾಗಿದ್ದರೂ ಸಹ ದೀವರಲ್ಲಿ ಬಹುತೇಕರು ಹಸೆಚಿತ್ತಾರ ಬರೆಯುವ ಪರಂಪರೆ ಉಳಿಸಿಕೊಳ್ಳಲು ಆಸಕ್ತರೂ ಬದ್ದರೂ ಆಗಿ ತೊಡಗಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇನ್ನೇನು ಅಳಿದು ಹೋಗಬಹುದು ಎಂದುಕೊಂಡಿದ್ದ ಹಸೆಚಿತ್ತಾರ ಕಲೆ ಮತ್ತೆ ಹೊಸ ಕಲಾ ವೃಕ್ಷವಾಗಿ ಚಿಗುರೊಡೆದು ಬೆಳೆಯುವ ಭರವಸೆಯನ್ನು ಇಂದಿನ ಯುವ ಕಲಾವಿದರು ತುಂಬುತ್ತಿದ್ದಾರೆ.

ದೀವರು ಸಮುದಾಯ ಹಸೆಚಿತ್ತಾರ ತಮ್ಮ ಸಮುದಾಯದ ಸಾಂಪ್ರದಾಯಿಕ ಹೆಮ್ಮೆಯ ಅಸ್ಮಿತೆ ಎಂದೆ ಅದನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿದೆ. ಅಂದಿನ ತಲೆಮಾರಿಗಿಂತ ಇನ್ನಷ್ಟು ಸಂಕೀರ್ಣ ಸೂಕ್ಷ್ಮ ರೇಖಾ ವಿನ್ಯಾಸದೊಂದಿಗೆ ಇಂದಿನ ಹೊಸ ಪೀಳಿಗೆ ಹಸೆಚಿತ್ತಾರ ಬಿಡಿಸುವಲ್ಲಿ ಆಸಕ್ತಿ ಬೆಳೆಸಿಕೊಂಡು ಹೊಸ ಮಾದರಿ ಪ್ರಯೋಗಕ್ಕೂ ತೊಡಗಿಕೊಂಡಿರುವುದು ಭವಿಷ್ಯದಲ್ಲಿ ಹಸೆಚಿತ್ತಾರ ಹಲವರಿಗೆ ಅನ್ನದ ಕಲೆಯಾಗಿಯೂ ,ಕಲೋದ್ಯಮವಾಗಿಯೂ ಬೆಳೆಯುವ ಭರವಸೆ ಮೂಡಿಸಿದ್ದಾರೆ. ಇಂದು ಆಧುನಿಕ ಬಣ್ಣ ಬಳಕೆ, ಪೇಪರ್, ಕಾರ್ಡಬೋರ್ಡ್, ಬಟ್ಟೆಗಳ ಮೇಲೆ,

ಮರದ ಹಲಗೆಗಳ ಮೇಲೆ ,ಸಿಮೆಂಟ್ ಕಟ್ಟಡಗಳ ಮೇಲೆ, ಗಾಜು ಪ್ಲಾಷ್ಟಿಕ್ ವಸ್ತುಗಳ ಮೇಲೆ ಸಹ ಜಸೆಚಿತ್ತಾರ ಬಿಡಿಸುತ್ತಿದ್ದಾರೆ.

ಈ ನಿಟ್ಟಿನಲ್ಲಿ ಈಗ ಪುರುಷರು ಸ್ತ್ರೀ ಪ್ರಧಾನ ಚಿತ್ತಾರ ಕಲೆಯಾಗಿದ್ದ ಹಸೆಚಿತ್ತಾರ ಕಲೆಯತ್ತ ಆಸಕ್ತಿ ತಳೆದಿರುವುದು ಗಮನಾರ್ಹ ಸಂಗತಿ.ವಿಶ್ವ ಹೆಚ್ಚೆ ,ಅಣ್ಣಪ್ಪದಿಗಟೆಕೊಪ್ಪ ರಾಧಾಕೃಷ್ಣ ಬಂದಗದ್ದೆ ಭರವಸೆ ಮೂಡಿಸಿದ್ದಾರೆ.



ಸರಸ್ವತಿ ಈಶ್ವರ ನಾಯ್ಕ,ತೇಜಸ್ವಿನಿ ಹಸುವಂತೆ, ಉಷಾ ಜಿ.ಎ.ಮಂಡಗಳಲೆ , ಶೃತಿ ಓಂಕಾರಪ್ಪ ವಿನುತಾ ಮಾಗಡಿ , ಸ್ವಾತಿ ಎನ್ ಹೊಳೆಕೊಪ್ಪ. ಕಾವ್ಯ ಕುಗ್ವೆ, ಅಣ್ಣಪ್ಪ ಮೆಳವರಿಗೆ, ದೀನೇಶ್ ಗಡೇಮನೆ, ನನ್ನನ್ನು ಸೇರಿದಂತೆ ಮುಂತಾದವರು ನಾವಿನ್ಯತೆಯೊಂದಿಗೆ ಹಸೆಚಿತ್ತಾರ ಬರೆಯುತ್ತಾ ಹೊಸ ಪ್ರಯೋಗಕ್ಕೂ ಕೈ ಹಾಕಿದ್ದಾರೆ. ಹಲವಾರು ಯುವ ಕಲಾವಿದರಿಗೆ ಅನ್ನದ ಕಲೆಯೂ ಸಹ ಆಗಿದೆ.

ಅಧ್ಯಾಯ –5

ಇತರೆ ದೇಶೀ ಚಿತ್ರ ಕಲೆಗಳು ಮತ್ತು ಹಸೆ ಚಿತ್ತಾರ

ಹಲಿ ಮತ್ತು ಹಸಗರ



ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಸಂಸ್ಕೃತಿಯ ಹಲವು ಸಮುದಾಯಗಳಲ್ಲಿ ಮುಖ್ಯವಾಗಿ ನಾಮಧಾರಿ ದೀವರು ,ಹಾಲಕ್ಕಿ ಒಕ್ಕಲಿಗರು ,ಗಾಮೊಕ್ಕಲಿಗರು ,ಗೊಂಡರು, ಕೆಲವು ಹವ್ಯಕರಲ್ಲಿ ಮತ್ತಿತರರಲ್ಲಿ ಅಲ್ಲಲ್ಲಿ ಒಂದಿಷ್ಟು ಸರಳ ರೇಖಾ ವಿನ್ಯಾಸದಲ್ಲಿ ಹಸೆಚಿತ್ತಾರ ಹೋಲುವ ಸರಳ ಮಾದರಿಯ ರೇಖಾ ವಿನ್ಯಾಸದಲ್ಲಿ ಚಚ್ಚೌಕ ಆಕೃತಿಯೊಳಗೆ ವಿವಿಧ ಚಿತ್ತಾರಗಳನ್ನು ಮದುವೆಗೆ ಗೋಡೆಗಳ ಮೇಲೆ ಬರೆಯುತ್ತಾರೆ.ಅದನ್ನು ಅವರು ಹಸಗರ ,ಹಲಿ ಬರೆಯುವುದು ಶೇಡಿ ಕಲೆ ಎನ್ನುವ ರೂಢಿ ಇದೆ.ಪ್ರಾದೇಶಿಕವಾಗಿ ವಿಬಿನ್ನವಾಗಿ ಕರೆಯುವಿಕೆಯಿದ್ದರೂ ಇವುಗಳಲ್ಲಿ ಕೆಲವು ವಿಭಿನ್ನತೆಗಳ ಜೊತೆಗೆ ಸಾಮ್ಯತೆಗಳಿವೆ.

ಉತ್ತರ ಕನ್ನಡ ಜಿಲ್ಲೆಯ ನಾಮಧಾರಿ ದೀವರು ಸಿದ್ದಾಪುರ ಶಿರಶಿ ಭಾಗದಲ್ಲಿಯವರು ಶಿವಮೊಗ್ಗ ಭಾಗದ ಪ್ರಭಾವದಿಂದ ಮದುವೆಗೆ ಬರೆಯುವ ಚಿತ್ತಾರವನ್ನು ಹಸೆಚಿತ್ತಾರ ಅಂತಲು ,ಕೆಲವರು ಹಸಗರ ಅಂತಲೂ ಕರೆಯವರು. ಉತ್ತರ ಕನ್ನಡ ಜಿಲ್ಲೆಯ ನಾಮಧಾರಿ ದೀವರು ,ಮಡಿವಾಳರು ,ಕರೆಒಕ್ಕಲಿಗರು ಕೆಲವು ತಾಲ್ಲೂಕಿನ ಕುಟುಂಬಗಳಲ್ಲಿ ಸಿದ್ದಾಪುರ ,ಶಿರಶಿ ಭಾಗದ ಕೆಲವರು ಶಿವಮೊಗ್ಗದಲ್ಲಿ ಪ್ರಧಾನವಾಗಿ ವಿಶಿಷ್ಟ ವಿನ್ಯಾಸದಲ್ಲಿ ಹಸೆಚಿತ್ತಾರ ಬರೆಯುವ ದೀವರ ಹಸೆಚಿತ್ತಾರ

ಮಾದರಿಯ ರಚನೆಗಳನ್ನೇ ಬಿಡಿಸುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಇನ್ನಿತರೆ ತಾಲ್ಲೋಕಿನ ಅಂಕೋಲ ,ಕುಮುಟಾ, ಹಳಿಯಾಳ, ಜೊಯೊಡಾ ಹಾಗೂ ಕರಾವಳಿ ತೀರ ಭಾಗದ ಬುಡಕಟ್ಟು ಜನಸಂಸ್ಕೃತಿಯ ಹಾಲಕ್ಕಿಗರು ,ಗೊಂಡರು ಕುಣುಬಿಯರು ಹಲಿ, ಹಸಗರ, ಶೇಡಿ ಎನ್ನುವ ಚಿತ್ತಾರ ಮಾದರಿ ಬರೆಯುವುದು ಗಮನಾರ್ಹ ವಿಷಯವಾಗಿದ್ದು ಶಿವಮೊಗ್ಗದ ಹಸೆಚಿತ್ತಾರಕ್ಕೂ ಕರಾವಳಿ,ಉತ್ತರಕನ್ನಡ ಜಿಲ್ಲೆಯ ಹಲಿ,ಹಸಗರ,ಶೇಡಿ ವಿನ್ಯಾಸಕ್ಕು ಹಲವು ವ್ಯತ್ಯಾಸಗಳಿವೆ. ನಾಮದಾರಿಗಳು, ಹಾಲಕ್ಕಿಗರು, ಗೊಂಡರು,ಕುಣಬಿಯರು ,ಹವ್ಯಕರು ಮತ್ತಿತರ ಕೆಲವು ಬುಡಕಟ್ಟು ಜನಸಮುದಾಯಗಳ ಕೆಲವು ಕುಟುಂಬಗಳು ಸರಳವಾಗಿ ಬಿಳಿ ಮತ್ತು ಕೆಂಪು ಬಣ್ಣದಲ್ಲಿ ಹಲಿ, ಹಸಗರ ,ಶೇಡಿ ಬರೆಯುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಲಿ ,ಶೇಡಿ ಚಿತ್ರ ಮಾದರಿಯಲ್ಲಿ ಗದ್ದೆಗೆ ಚರಗ ಚೆಲ್ಲಲು ಭೂಮಣ್ಣಿ ಬುಟ್ಟಿ ಚಿತ್ತಾರವಿಲ್ಲ. ಮದುವೆಗೆ ,ಕೆಲವು ಹಬ್ಬಗಳಿಗೆ ಶೇಡಿ ಬರೆಯುವುದು ಕಂಡುಬರುತ್ತದೆ.

“ಮದೀಯಾಲೇ ದಿನ ಹೊಯ್ಯೋ ಹಲಿ ಚೆಂದೋ..” ಎಂದು ಹಾಡುತ್ತಾ ಹಸಗರ ಬರೆಯುವ ಹಾಲಕ್ಕಿಗರಲ್ಲಿ ಸರಳ ವಿನ್ಯಾಸದ ಸಾಂಪ್ರದಾಯಿಕ ಚಿತ್ತಾರ ಕಂಡುಬರುತ್ತದೆ. ಅವರು ಬಟ್ಟೆಯ ಚೂರು ,ಅಡಿಕೆ ಸಿಪ್ಪೆಯನ್ನೆ ಕುಂಚವಾಗಿ ಬಳಸಿ ಜೇಡಿ ಬಣ್ಣ, ಕೆಮ್ಮಣ್ಣು ಬಳಸಿ ಹಸಗರ ಬರೆಯುತ್ತಾರೆ.ಶಿವಮೊಗ್ಗ ಭಾಗದ ದೀವರ ಹಸೆಗೋಡೆಯಂತೆ ಮಂಡಿಗೆಗಳು,ದಂಡಿಗೆ, ಕುಂಬ,ಮಾದ್ನ ಕೈ,ಕೋಳಿ, ಶಿವ–ಪಾರ್ವತಿ, ಸೂರ್ಯ ,ಚಂದ್ರ ,ಪಪ್ಪಳಿ,ಚೆಂಡುಹೂಸಾಲು,ಗರಗಸ ಸಾಲು, ಮತ್ತಿತರ ಹೆಚ್ಚಿನ ಮೋಟಿಪ್‌ಗಳನ್ನು ಬರೆಯುವುದಿಲ್ಲ.ಚೌಕ ರಚನೆಯೊಳಗೆ ತೋರಣ,ಬಾಚಣಿಗೆ,ಕಳಸ,ಚೀರಣಿಗೆ,ತೆಂಗಿನಮರ,ಅಳ್ಳಿಮರ ,ಹೂವು ಮತ್ತಿತರ ರಂಗೋಲಿ ಆಕಾರಗಳನ್ನು ಮದುವೆಗಾಗಿ ಗೋಡೆಯ ಮೇಲೆ ಬರೆಯುತ್ತಾರೆ. ಪೂರ್ವಜರು ಹೀಗೆ ಸಂಪ್ರದಾಯ ಮಾಡಿದ್ದನ್ನು ನೋಡಿದ್ದೆವು, ನಾವೂ ಹಾಗೆಯೇ ಮಾಡುತ್ತೇವೆ ಎಂದು ಅವರು ಹೇಳುವರು.

ಪುರಾತನ ಕಾಲದಿಂದಲೂ ವಿಶ್ವದೆಲ್ಲೆಡೆ ಆಯಾ ದೇಶೀಯ ಸಾಂಪ್ರದಾಯಿಕ ಚಿತ್ರಕಲಾ ಮಾದರಿಗಳಿವೆ. ಕರ್ನಾಟಕದಲ್ಲಿ ಹಲವು ಬಗೆಯ ದೇಶೀ ಚಿತ್ರಕಲೆಗಳು ಜನಜೀವನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಹಲವು ಬಗೆಯ ಗೋಡೆಚಿತ್ರಗಳ ಜೊತೆಗೆ ನೆಲಚಿತ್ರಗಳು, ಚರ್ಮದ ಮೇಲೆ ಚಿತ್ತಾರ ಮೂಡಿಸುವ ಹಚ್ಚೆಕಲೆಯಂತಹ ವಿಶಿಷ್ಟ ಚಿತ್ರಕಲೆಯೂ ಕರ್ನಾಟಕದ ಕೆಲವು ಬುಡಕಟ್ಟು ಮಹಿಳೆಯರ ರಕ್ತಗತ ಕಲೆಯಂತಾಗಿತ್ತು. ಇವೆಲ್ಲವುಗಳ ವಿನ್ಯಾಸವೂ ಹಸೆಚಿತ್ತಾರ ವಿನ್ಯಾಸದ ಕೆಲವು ಮೋಟಿಫ್‌ಗಳನ್ನು ಒಳಗೊಂಡಿವೆಯಾದರೂ ಹಸೆಚಿತ್ತಾರ ರಂಗವಲ್ಲಿ (ರಂಗೋಲಿ),ಹಚ್ಚೆಕಲೆ ಮದರಂಗಿ ಕಲೆಯಂತಲ್ಲ.ಹಸೆಚಿತ್ತಾರವು ಪುರಾತನವಾದುದ್ದಾಗಿದೆ.

ರಂಗೋಲಿ ಬಣ್ಣದ ಪುಡಿಗಳನ್ನು ಹಾಸುವ ಮೂಲಕ ಮೂಡಿಸುವ ರೇಖೆಗಳ ವಿನ್ಯಾಸದ ಕಲೆಯಾಗಿದ್ದು ಹಸೆಚಿತ್ತಾರದಂತಹ ಗೋಡೆಚಿತ್ರಗಳಿಗಿಂತ ವಿಭಿನ್ನವಾದುದ್ದಾಗಿದೆ. ಮದರಂಗಿ ಮತ್ತು ಈಗ ಟ್ಯಾಟೂ ಎಂದು ಹೇಳುತ್ತಿರುವ ಹಚ್ಚೆ ಕಲೆಗಳು ನಮ್ಮ ಕರ್ನಾಟಕದಲ್ಲಿ ಪುರಾತನವಾದ ಕಲೆಯಲ್ಲ. ಅದು ಪರ್ಶಿಯನ್ನರ ಆಗಮನದ ನಂತರ ಭಾರತದಲ್ಲಿ ಕಂಡುಬಂದಿದೆ. ಕಾಲಕ್ರಮೇಣ ಕರ್ನಾಟಕದಲ್ಲೂ ಮಹಿಳೆಯರ ನೆಚ್ಚಿನ ಕಲೆಯಾಗಿತ್ತು. ಇಲ್ಲಿನ ಸಂಪ್ರದಾಯದೊಂದಿಗೆ ಬೆರೆತು ಇಲ್ಲಿನ ಜನಪದರ ಕಲೆಯಾಗಿಯೇ ಬೆಳವಣಿಗೆ ಹೊಂದಿದ ಹಚ್ಚೆಕಲೆ,ಮದರಂಗಿ ನಮ್ಮ ನೆಲದ ಕಲೆಯಂತಯೇ ಜನಪ್ರಿಯವಾಗಿ ಬೆಳೆದವಾಗಿವೆ. ಹಸೆಚಿತ್ತಾರ ಕಲೆಯಂತೆಯೇ ಹಲಿ,ಹಸಗರ,ಶೇಡಿ, ರಂಗವಲ್ಲಿ ಮತ್ತಿತರ ಹಲವು ದೇಶೀ ಚಿತ್ರಕಲೆಗಳು ನಮ್ಮಲ್ಲಿ ಈಗಲೂ ಪ್ರಚಲಿತದಲ್ಲಿದ್ದು ಅವುಗಳನ್ನು ಮುಂದೆ ಮತ್ತಷ್ಟು ವಿವರಿಸುವೆ.

ಶೇಡಿ ಕಲೆ


ದೀಪಾವಳಿ ಹಬ್ಬದಲ್ಲಿ ಬಗೆಬಗೆಯ ವಿನ್ಯಾಸದ ಚಿತ್ತಾರ ಬರೆಯಲಾಗುತ್ತದೆ. ಉತ್ತರ ಕನ್ನಡ ಜಿಲ್ಲೆ ಮತ್ತು ಕರಾವಳಿ ತೀರದಲ್ಲಿ , ಕೆಲವು ಮಲೆನಾಡು ಭಾಗದಲ್ಲಿ ಸಾಂಪ್ರದಾಯಿಕ ಶೇಡಿ ಕಲೆ ಕಾಣಬಹುದು. ಶೇಡಿ ಅಂದರೆ ಬಿಳಿ,

ಕೆಂಪು ಮಣ್ಣು. ಕೆಲವು ಕಡೆ ಜೇಡಿ ಮಣ್ಣು ಎಂದೂ ಕರೆಯುತ್ತಾರೆ. ಶೇಡಿ ಕಲೆ ಎಂದರೆ ಬಿಳಿ ಮತ್ತು ಕೆಂಪು ಬಣ್ಣದ ಮಣ್ಣಿನಿಂದ ಬಣ್ಣ ತಾಯಾರಿಸಿಕೊಂಡು ಬರೆಯುವ ಚಿತ್ತಾರ ಮಾದರಿಗಳು.ಬೆಟ್ಟದಲ್ಲಿ ಸಿಗುವ ಬಿಳಿ ,ಕೆಂಪು ಬಣ್ಣದ ಮಣ್ಣನ್ನು ಹಬ್ಬಗಳಿಗಾಗಿಂಯೇ ಗೋಡೆಗಳಿಗೆ ಬಳಿಯುಲು ಸಂಗ್ರಹಿಸಿಟ್ಟುಕೊಳ್ಳುವರು. ಶೇಡಿ ಅಥವಾ ಜೇಡಿ ಬಿಳಿ ಬಣ್ಣದ ಮಣ್ಣಿನ್ನು ಸಂಗ್ರಹಿಸಿ ಹಬ್ಬಗಳಿಗೆ ಗೋಡೆಗಳನ್ನು ಅಲಂಕರಿಸುವುದು ಸಂಪ್ರದಾಯ. ಉತ್ತರ ಕನ್ನಡ ಜಿಲ್ಲೆ,ಕರಾವಳಿ ತೀರ ,ಮಲೆನಾಡು ಭಾಗದಲ್ಲಿ ಈ ಸಂಪ್ರದಾಯಕ್ಕೆ ಶೇಡಿ ಕಲೆ ಎನ್ನುತ್ತಾರೆ. ಶೇಡಿ ಕಲೆ ಹಸೆಚಿತ್ತಾರಗಳಿಗಿಂತ ತುಂಭಾ ಸರಳವಾಗಿದ್ದು ವಿಭಿನ್ನವಾಗಿದೆ. ಕೆಲವು ಕಡೆ ದೀಪಾವಳಿ ಹಬ್ಬದಲ್ಲಿ ಕೊಟ್ಟಿಗೆಯ ಎದುರು ಕೆಮ್ಮಣ್ಣು ಬಳಿದು ಎತ್ತಿನ ಹೆಜ್ಜೆಗಳನ್ನು ಬರೆಯಲಾಗುತ್ತದೆ.ಇದನ್ನು 'ತೂರೆ ಹೆಜ್ಜೆ' ಎನ್ನುತ್ತಾರೆ. (ತೂರೆ ತುರೆ, ತುರು=ಹಸು) ಸರಳ ರೇಖಾ ಮಾದರಿಯ ,ತ್ರಿಭುಜ ಮಾದರಿಯ ವಿವಿಧ ಚಿತ್ತಾರ ಬರೆಯಲಾಗುತ್ತದೆ.ಅಲ್ಲದೆ ಚಿತ್ರದಲ್ಲಿ ತೋರಿಸಿರುವಂತೆ ಅಡಿಕೆ ಹಾಳೆಯಲ್ಲಿ ಮೂರು ಬೆರಳಿನಂತೆ ಕೊಯ್ದು ಕುಂಚದಂತೆ ಬಳಸಿ ವಿವಿಧ ಆಕೃತಿ ಬರೆಯುವ ಶೇಡಿ ಕಲೆಯೂ ಪ್ರಚಲಿತದಲ್ಲಿದೆ. ಹಸೆಚಿತ್ತಾರದಂತೆ ಸಂಕೀರ್ಣ ,ಸೂಕ್ಷ್ಮ ವಿನ್ಯಾಸ ಶೇಡಿ ಕಲೆಯಲ್ಲಿ ಕಂಡುಬರುವುದಿಲ್ಲ.



ಮದುವೆಯ ಶೇಡಿ

ಮದುವೆಯ ಹಲವಾರು ಚಡಂಗಗಳನ್ನು ನಡೆಸುವಾಗ ಮದುಮಕ್ಕಳನ್ನು ಮನೆಯೊಳಗಿನ ಒಂದು ನಿರ್ದಿಷ್ಟ ಸ್ಥಳದಲ್ಲಿ ಕುಳ್ಳಿರಿಸುತ್ತಾರೆ. ಸಾಮಾನ್ಯ ನಡುಮನೆಯಲ್ಲಿಯ ಪೂರ್ವಾಭಿಮುಖವಾಗಿರುವ ಗೋಡೆಯ ಬಳಿ ಶೇಡಿ



ಚಿತ್ತಾರ ಬರೆದು ಈ ಚಿತ್ತಾರ ಸ್ಥಳವನ್ನು ,ಕೆಲವರು ಆ ಚಿತ್ತಾರವನ್ನು ,"ಹಸಗರ" ವೆಂದು ಉತ್ತರ ಕನ್ನಡ ಜಿಲ್ಲಾ ಭಾಗದಲ್ಲಿ ರೂಢಿಗತವಾಗಿ ಕರೆಯುತ್ತಾರೆ.ತಮ್ಮ ಮಕ್ಕಳ ಮದುವೆಯ ಸಂದರ್ಭದಲ್ಲಿ ಮದುವೆಮನೆಗೆ ಮೊಟ್ಟಮೊದಲು ಶೇಡಿ ಬರೆಯುವವಳು ತಾಯಿ, ಹೆಣ್ಣಿನ ಮನೆಯಲ್ಲಿ ಮದುಮಗಳ ತಾಯಿ ಕಳಸದ ಚಿತ್ರವನ್ನೂ, ಗಂಡಿನ ಮನೆಯಲ್ಲಿ ಮದುಮಗನ ತಾಯಿಯೂ ಐಮೂಲೆ ಚಿತ್ರವನ್ನು ಹಸಗರದ ನೆಲಕ್ಕೆ ಬರೆದು "ಮದುವೆಯ ಶೇಡಿ" ಕಾರ್ಯಕ್ಕೆ ಚಾಲನೆ ನೀಡುತ್ತಾಳೆ.

"ಸಗಣೀಯ ಸಾರೀಸೇ ಶೇಡೀಯ ಹಲಿಹೊಯ್ಯೆ

ತಾಯೇ ತಂದಿರಸೇ ತಳಗೀಯಾ । ತೆಂಗೀನಾ

ಕಾಯಾ ತಂದಿರಿಸೇ ತಲದುಪ್ತ " ಎಂದು ಹಾಡುತ್ತಾ

ಹಾಡುಗಾರ್ತಿಯರು ಸೂಚಿಸಿದಂತೆ ತಾಯಿಯು ಮದುಮಗನು ಕುಳಿತುಕೊಳ್ಳುವ ಸ್ಥಳದಲ್ಲಿ ಸೆಗಣಿಯನ್ನು ಸಾರಿಸಿ ಅಲ್ಲಿ ಅಂಕಣ ಐದು ಶೇಡಿಯನ್ನು ಬರೆಯುತ್ತಾಳೆ.

ಕೆಂದೀಯ ಸಗಣೀಯ ಅಂಗೈಲಿ ತಡಕಂಡಿ

ಅಂದಚೆಂದದಲಿ ನೆಲನುದ್ದಿ ।

ಅಂದಚೆಂದದಲಿ ನೆಲನುದ್ದಿ ತಾಯವ್ವ

ಅಂಕಣದ ಶೇಡಿ ಬರದಾಳೆ" ಎಂದು ಹಾಡುವ ಉತ್ತರ ಕನ್ನಡ ಜಿಲ್ಲೆಯ ಭಾಗದ ಜನಪದರ ಸಂಪ್ರದಾಯ ಅತಿ ವಿಶಿಷ್ಟದ್ದು.ಇದು ಬುಡಕಟ್ಟು ಜನಸಂಸ್ಕೃತಿಯಲ್ಲಿ ಕಂಡುಬರುತ್ತದೆ.ಮದುವೆಯ ಶೇಡಿ ಬರೆಯುವ ಕಾರ್ಯವು ಮೌಖಿಕ ಹಾಡಿನಲ್ಲಿರುವ ಮದುವೆ ಶಾಸ್ತ್ರದಂತೆ ಹಾಗೂ ಬಲ್ಲ ಮಹಿಳೆಯ ಆಚರಣಾ ಜ್ಞಾನದ ನೆಲೆಯಲ್ಲಿ ನಡೆಯುತ್ತದೆ. ಈ ಹಾಡಿನ ರೂಪದಲ್ಲಿರುವ ಈ ಶಾಸ್ತ್ರವನ್ನೇ ಆಯಾ ಸಂದರ್ಭದಲ್ಲಿ ಹಾಡುಗಾರ್ತಿಯರು ಹಾಡುಗಳನ್ನು ಹಾಡುತ್ತ ಶಾಸ್ತ್ರವನ್ನು ಆಚರಣೆಯ ರೂಪರೇಷೆಗಳನ್ನು ಸಂಬಂಧಪಟ್ಟವರಿಗೆ ಮುಟ್ಟಿಸುತ್ತಾರೆ.

"ಶೇಡಿ ಬಟ್ಲಾನಾ ರೂಢಿಯಲಿ ತಡಕಂಡೇ

ಮೂಡಣ ದೊಡ್ಡೊಳಗೇ ನೆಡದಾಳೇ

ಮೂಡಣ ದೊಡ್ಡೊಳಗೇ ನೆಡದಾಳೆ ತಾಯವ್ವ

ಮೂಡಣ ಗೋಡಿ ಸೂಸ್ತಾ ತಡದಾಳೇ"

ಮೂಡಣಕ್ಕೆ ಮುಖವಾಗಿರುವ ಗೋಡೆಯ ಮೇಲೆ ಚೌಕ ಅಥವಾ ಆಯತಾಕಾರದ ಕ್ಷೇತ್ರವನ್ನು ಆಯ್ದುಕೊಂಡ ಬಳಿಕ ಅಲ್ಲಿ ನಕ್ಷೆ ತುಂಬುವ ಕೆಲಸ ನಡೆಯುತ್ತದೆ. ಇದನ್ನು ತಾಯಿಯೊಬ್ಬಳೇ ಮಾಡಬೇಕಾಗಿಲ್ಲ. ಕೇರಿಯ ನುರಿತ ಹೆಂಗಸರು ತಾಯಿಯ ಬದಲಿಗೆ ಹಸಗರ (ಹಸೆ) ಗೋಡೆಯ ಶೇಡಿಯ ರಚನೆಗೆ ತೊಡಗುತ್ತಾರೆ. ಹಸಗರ ಗೋಡೆಯನ್ನು ಬರೆಯಲು ಬಲ್ಲ ನುರಿತ ಹೆಂಗಸನ್ನು ಮದುವೆ ಮನೆಯ ಯಜಮಾನಿ ವೀಳ್ಯಕೊಟ್ಟು ಕರೆತರುತ್ತಾಳೆ. ಇವರ ಕಾರ್ಯದಲ್ಲಿ ಮದುವೆ ಮನೆಯಲ್ಲಿಯ ಸೊಸೆಯಂದಿರು ಹೆಣ್ಣುಮಕ್ಕಳು ನೆರವಾಗುತ್ತಾರೆ.

ವರನನ್ನು ಶೇಡಿ ಬರೆಯಲು ಬರುವಂತೆ ಹಾಡುಗಾರ್ತಿಯರು ಹಾಡಿನಲ್ಲಿಯೇ ಕರೆ ನೀಡುತ್ತಾರೆ.ಇದೇ ಹೊತ್ತಿಗೆ ಮದುಮಗಳ ಮನೆಯಲ್ಲಿ ತಾಯಿಯು

ಕಳಸದ ಸೇಡಿ ಬರೆಯುತ್ತಾಳೆ. ಇದಕ್ಕೆ ಮೊದಲು ತಾಯಿಯು ಅಮ್ಮನ ಕಾಯಿತೆ ವೀಳ್ಯವಿಟ್ಟು ಕೈಮುಗಿದು ತನ್ನ **"ಶೇಡಿ"** ಕೆಲಸಕ್ಕೆ ತೊಡಗುತ್ತಾಳೆ.ಮದುವೆ ಮನೆಯಲ್ಲಿಯ ಹಸಗರ ಶೇಡಿಗಳು ಬಹುದೊಡ್ಡವು. ಸಾಮಾನ್ಯವಾಗಿ ಚೌಕಾಕಾರದ ಅಥವಾ ಅಡ್ಡ ಆಯತಾಕಾರದ ಒಂದರಿಂದ ಒಂದೂವರೆ ಮಾರುದ್ದದ ಚೌಕಟ್ಟನ್ನು (ಫ್ರೇಮ್)ಗೋಣಿಯ ದಾರ ಹಾಗು ಬಿಳಿಶೇಡಿ ಪುಡಿ ಸಹಾಯದಿಂದ ಇವರು ತಯಾರಿಸಿಕೊಳ್ಳುತ್ತಾರೆ.

ಒಂದು ಬಟ್ಟೆಯ ತುಂಡಿನ ಸಹಾಯದಿಂದ ಕೆಂಪು ಬಣ್ಣವನ್ನು ಗೋಡೆಗೆ ಬಳಿದು ಬಳಿದ ಗೋಣಿ ದಾರವನ್ನು ಶೇಡಿಯ ಪುಡಿಯಲ್ಲಿ ಹೊರಳಾಡಿಸಿ ಅದರ ಎರಡೂ ತುದಿಗಳನ್ನು ಇಬ್ಬರು ಹಿಡಿದಾಗ ಇನ್ನೊಬ್ಬರು ದಾರವನ್ನು ಬಿಲ್ಲಿನ ಹೆದೆಯನ್ನು ಎಳೆಯುವಂತೆ ಎಳೆದುಬಿಡುತ್ತಾರೆ. ಆಗ ಗೋಡೆಯ ಮೇಲೆ ಬಿಳಿಬಣ್ಣದ ರೇಖೆಯು ಮೂಡುತ್ತದೆ. ಇದೇ ರೀತಿ ತಮಗೆ ಬೇಕಾದಷ್ಟು ಚೌಕಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಇಲ್ಲಿಯ ಪ್ರಥಮ ಗೆರೆಯನ್ನು ಎಳೆಯುವಾಗ ಮದುಮಕ್ಕಳು ತಂತಮ್ಮ ಮನೆಯಲ್ಲಿ ಹಸಗರ ಭಾಗವಹಿಸುತ್ತದೆ. ಶೇಡಿ ಬರೆಯುವರು ಒಬ್ಬಿಬ್ಬರಿಂದ ಬೇಗ ಮುಗಿಯುವ ಕೆಲಸವಲ್ಲ. ಆದ್ದರಿಂದ ಹಾಡುಗಾರ್ತಿಯರು ಮನೆಯ ಸೊಸೆಯರನ್ನು ಹೆಣ್ಣುಮಕ್ಕಳನ್ನು ಹಸಗರದ ಶೇಡಿ ಬರೆಯಲು ಕರೆಯುತ್ತಾರೆ.

"ಹಸಗರ ಬರುವಕೆ ಸೊಸೆದೀರ ಬರವೇಳಿ

ಇಸಳು ಮೂಗುತಿಯ ಮೊಕದೋರು । ತಾಯವ್ವೆಯಾ

ಸೊಸೆದೀರ ಬೇಗೇ ಬರುವೇಳಿ

ಹಸಗರ ಬರುವಕೆ ಮಗಳದೀರ ಬರುವೇಳಿ

ಒಪ್ಪು ಚಿಂತಕದ ಕೊರಳೋಳು । ತಾಯವ್ವೀಯ

ಮಗಳದೀರಾ ಬೇಗೆ ಬರವೇಳಿ

ಹಸಗರ ಅಲಂಕಾರಕ್ಕೆ ಬೇಕಾಗುವ ಚಿಕ್ಕಪುಟ್ಟ ಕೆಲಸವನ್ನು ಸೊಸೆಯಂದಿರು ಹೆಣ್ಣುಮಕ್ಕಳು,ನೆರೆಹೊರೆಯವರು ಪೂರೈಸುತ್ತಾರೆ.

"ಚವುಕನ ತುಂಬಿ ಮಲಕೀನಾ ಕೊರಳೋರೆ

ಸೊಲಿಹಲ್ಲು ಸೊಗೊ ನೆರಿಯೋರೆ । ಕಾಜೀನಾ

ಬಳಿಯೋರೆ ತುಂಬಿ ಚವುಕವ

ಮುತ್ತಿನ ಸಗರವ ಕುಶಲದಿ ಬರೆವರೆ

ಸುತ್ತೇ ಸೂಲ್ಯಮ್ಮನಾ ಪವಳೀಯೇ ।

ಸುತ್ತೇ ಸೂಲ್ಯಮ್ಮನಾ ಪವಳಿ ಮಂಟಪಸಾಲೆ

ಕುಸಲದ್ದಸಗರವ ಬರದಾಕಿ"

"ರಂಗೋಲಿ"ಯೆಂದು ಕರ್ನಾಟಕದಲ್ಲಿ ಗುರುತಿಸಲ್ಪಡುವ ಜನಪದ ಚಿತ್ರಕಲೆಯನ್ನು ಗಾಮೊಕ್ಕಲ ಮಹಿಳೆಯರು ವ್ಯವಹಾರದಲ್ಲಿ ಶೇಡಿ ಬರೆಯುವುದು ಎಂದು ಸಹ ಹೆಸರಿಸುತ್ತಾರೆ. ಕೆಲವೆಡೆ ಹಾಡಿನಲ್ಲಿ ಹಸೆ, ಕಾರಣೆ, ಚಿತ್ತಾರ ಎಂಬ ಶಬ್ದಗಳನ್ನು ಶೇಡಿಗೆ ಪರ್ಯಾಯವಾಗಿ ಬಳಸುವುದೂ ಕಂಡುಬರುತ್ತದೆ. ಇದು ಹಸೆಚಿತ್ತಾರ ಮಾದರಿಯನ್ನು ಕೆಲವೆಡೆ ಹೋಲುತ್ತದೆ.ಆದರೆ ವಿನ್ಯಾಸ ,ಅಂತಃಸತ್ವದಲ್ಲಿ ಸಾಕಷ್ಟು ವಿಭಿನ್ನತೆಗಳಿವೆ. ಮಲೆನಾಡಿನ ಎಲ್ಲೆಡೆ ಇಂತಹ ಹಲವು ಸಾಂಸ್ಕೃತಿಕ ಕಲೆಯ ಕೊಡುಕೊಳ್ಳುವಿಕೆ ಕಂಡುಬರುತ್ತದೆ.

ಮದುವೆ ಮನೆಯ ಶೇಡಿಗಳು

ಪ್ರತಿಯೊಂದು ಶೇಡಿಗಳಲ್ಲಿಯ ಅಲಂಕಾರಗಳು ತಮಗಿಷ್ಟವಾದ ರೀತಿಯಲ್ಲಿ ಬದಲಾಗಬಹುದು. ಹಾಗೂ ಈ ಶೇಡಿಗಳ ವಿಸ್ತಾರವನ್ನು ಚಿಕ್ಕದು, ದೊಡ್ಡದು ಮಾಡಲು ಇವರು ಸ್ವತಂತ್ರರು. ಆದರೆ ಪ್ರತಿಯೊಂದು ಶೇಡಿಯು ತನ್ನದೇ ಆದ ವಿಶಿಷ್ಟ ಲಕ್ಷಣಗಳಿಂದ ಅನನ್ಯತೆಯನ್ನು ಹೊಂದಿರುತ್ತದೆ. ಒಂದು ಹೆಸರಿನ ಶೇಡಿಯನ್ನು ನಾಲ್ಕು ಜನ ಬರೆದರೂ ಅದರ ಅಲಂಕಾರದಲ್ಲಿ ವೈವಿಧ್ಯ ಕಂಡುಬರಬಹುದು. ಆದರೆ ಆ ಹೆಸರಿನ ಆ ಶೇಡಿಯು ತನ್ನ ಕೆಲವು ವಿಶಿಷ್ಟ ಲಕ್ಷಣಗಳಿಂದ ಅದು ಆಯಾ ಹೆಸರಿನ ಶೇಡಿಯೆಂದು ಪ್ರತ್ಯೇಕವಾಗಿ ಗುರುತಿಸಲ್ಪಡುತ್ತದೆ. ಈ ಅಂಶವನ್ನು ಈ ಕೆಳಗೆ ಸ್ಪಷ್ಟಪಡಿಸಲಾಗಿದೆ.

ಪೆಟಗಿ ಶೇಡಿ: ಇದನ್ನು ಹೆಣ್ಣಿನ ಮನೆಯಲ್ಲಿ ಗಂಡಿನ ಮನೆಯವರು ತರುವ ಪೆಟ್ಟಿಗೆಯನ್ನಿರಿಸುವ ಸ್ಥಳದಲ್ಲಿ ಬರೆಯಲಾಗುತ್ತದೆ.ಈ ಶೇಡಿಯನ್ನು ಬೆರಳಿನಿಂದ ಸುತ್ತ ಬೊಟ್ಟುಗಳನ್ನಟ್ಟು ಅಲಂಕರಿಸಲಾಗಿದೆ. ಬೊಟ್ಟುಗಳಿಂದ ಅಲಂಕೃತವಾದ ಈ ಶೇಡಿಯ ನಕ್ಷೆಯನ್ನು ಮಲ್ಲಿಗೆ ದಂಡೆಯೆಂದು ಕರೆಯಲಾಗುತ್ತದೆ. ಮಲ್ಲಿಗೆ ದಂಡೆಯ ಸ್ಥಳದಲ್ಲಿ ಜಾಜಿ ಮೊಗ್ಗೆಯನ್ನೋ ರಚಿಸಬಹುದಾಗಿದೆ. ಗೊಂಬೆ ಚಿತ್ರವನ್ನೂ ರಚಿಸಬಹುದಾಗಿದೆ.

ತಳಕಿನ ಶೇಡಿ: ಇದು ಐದಾರಡಿ ಉದ್ದಗಲವಿರುತ್ತದೆ. ಮದುವೆಯ ಮನೆಯ ಗೋಡಯ ಮೇಲೆ ಎಲ್ಲೆಂದರಲ್ಲಿ ಎದ್ದು ಕಾಣುವ ಬಹು ದೊಡ್ಡ ಶೇಡಿಯಿದು. ಇದು ಗೋಡೆಯ ಅಲಂಕಾರವನ್ನು ಹೆಚ್ಚಿಸಲು ರಚಿತವಾಗುವ ಶೇಡಿಯಾಗಿದೆ. ಇದರ ನಕ್ಷೆಗಳು ಅಲ್ಲಿಂದಿಲ್ಲಿಗೆ ತುಳುಕಿದಂತೆ ಕಾಣುವುದರಿಂದ ಈ ಹೆಸರಿದೆ, ಈ ಶೇಡಿಯಲ್ಲಲಿ ನಾಲ್ಕು ಮೂಲೆಗಳಿಗೆ ನಾಲ್ಕು ತಿರುಗಣಿ ಶೇಡಿಗಳಿವೆ. ಒಲಗಿನ ಅಂಚು, ಹಸೆಶೇಡಿಯಾಗಿದೆ. ಇದರೊಲಗೆ ಸರಫಲಿ ಶೇಡಿಯಿದೆ. ರಾಗಿಯ ಮಸಿಯಿಂದ ಮಾಡಿದ ಕಪ್ಪು ಬಣ್ಣದಿಂದ ಇಲ್ಲಿಯ ಚೌಕಗಳನ್ನು ತುಂಬುತ್ತಾರೆ.

ಚಕ್ರಪಡಿಶೇಡಿ: ಮದುವೆ ಮನೆಯ ಹೊರಗೋಡೆಯ ಮೇಲೆ ಎಲ್ಲೆಂದರಲ್ಲಿ ಬರೆಯಬಹುದು.

ಬಿಡಿ ಚಿತ್ರಗಳು: ಇವುಗಳನ್ನು ಅಲಂಕಾರಕ್ಕಾಗಿ ದೊಡ್ಡ ಶೇಡಿಗೆ ಜೋಡಿಸಲಾಗುತ್ತದೆ.

ಹಲಗೆಶೇಡಿ: ಇದನ್ನು ಮದುಮಗನು ಕುಳಿತುಕೊಳ್ಳುವಲ್ಲಿ ಗೋಡೆಯ ಮೇಲೆ, ನೆಲದ ಕೆಳಗೆ ಎರಡೂ ಕಡೆಗೆ ಬರೆಯುತ್ತಾರೆ.

ಎಂಟು ಮೂಲೆ ಶೇಡಿ: ಇದನ್ನು ಮದುಮಕ್ಕಳ ಪನ್ನೆ ಮಾಡಲು ಬರುವ ಕೆಲಶಿಯು ಕುಳಿತುಕೊಳ್ಳುವಲ್ಲಿಯ ಶೇಡಿಯಾಗಿದೆ.

ಕಳಸರ ಶೇಡಿ: ಹೆಣ್ಣಿನವರು ಹಾಗೂ ಗಂಡಿನವರು ಕಳಸವನ್ನಿಡುವ ಸ್ಥಳದಲ್ಲಿ ಶೇಡಿಯಾಗಿದೆ.

ಗಂಡಿನ ಹಸಗರದ ಶೇಡಿ: ಇದರಲ್ಲಿ ನಡುವೆ ಬಾಸಿಂಗ ತೊಂಡಿಲುಗಳಿರುತ್ತವೆ.ಹೆಣ್ಣಿನ ಹಸಗರದ ಶೇಡಿ: ಇದರಲ್ಲಿ ಒಯ್ಯಣಿಗೆ(ಚೀರಣಿಗೆ) ಬಾಚಣಿಗೆ ಹಾಗೂ ಪೆಟಗಿ ಶೇಡಿಯನ್ನು ಬರೆಯುತ್ತಾರೆ.

ಕಡಕ ಶೇಡಿ: ಮನೆಯ ಅಂಗಳದಲ್ಲಿ ಈ ಶೇಡಿ ಇರುತ್ತದೆ. ಇದನ್ನು ಯಾವುದೇ ಶನಿವಾರ ದಿನ ಕೂಡ ಬರೆಯಬಹುದು. ಕೊನೆಯಲ್ಲಿ ದುಂಡುಮಲ್ಲಿಗೆ ದಂಡೆ, ಸೂಜಮಲ್ಲಿಗೆ ದಂಡೆ ಸರಪಳಿಚೌಕುಗಳು ಕಡಕಿಯ ಅಂಚು, ಸಿಂಗಾರ, ಕಳಸ, ತಿಗಣಿಗಳಿಂದ ಸಿಂಗರಿಸಲಾಗುತ್ತದೆ.

ಕೋಡಿ ಶೇಡಿ: ಇದು ಕೊಡೆಯನ್ನು ಶೇಡಿಯ ಮೂಲಕ ತೋರಿಸುವ ಚಿತ್ರ. ಬಾಗಿಲುತೋರಣ, ಮಲ್ಲಿಗೆ ದಂಡೆ, ಸಿಂಗಾರ, ಮೊಗೆಕಾಯಿಬಾಗ ಹಾಗೂ ರಂಗೋಲಿ ಹೆಸರಿನ ಕೆಲವು ನಕ್ಷೆಗಳನ್ನು ಬಾಗಿಲ ತೋರಣದಲ್ಲಿ ಸೇರಿಸಲಾಗುತ್ತದೆ.

ಹೀಗೆ ಶೇಡಿ ಕಲೆಯ ಸುತ್ತ ಹಲವಾರು ಸಂಪ್ರದಾಯ ನಂಬಿಕೆಗಳು ಸುತ್ತುವರಿದಿವೆ. ಬಹುತೇಕ ಉತ್ತರಕನ್ನಡ ಜಿಲ್ಲೆ ಹಾಗೂ ಕರಾವಳಿ ಭಾಗದಲ್ಲಿ ಶೇಡಿ ಕಲೆ ಪ್ರಮುಖ ಸಾಂಪ್ರದಾಯಿಕ ಚಿತ್ರಕಲೆಯಾಗಿದೆ.

ಹಚ್ಚೆ ಕಲೆ

ಪ್ರಕೃತಿಯ ವಿಸ್ಮಯವನ್ನು ಕಂಡು ಕುತೂಹಲದಿಂದ ಆನಂದದಿಂದ ಅನುಕರಿಸುತ್ತಲೇ ಮಾನವ ಕಂಡುಕೊಂಡ ಮಹತ್ವದ ಜ್ಞಾನವೇ ಕಲೆ. ಕಲೆ ನಲಿವಿಗೂ ನೋವಿಗೂ ಧಿವ್ಯ ಔಷದಿಯಾಗಿದೆ. ಹಚ್ಚೆಯಂತಹ ಕಲೆಯೂ ಸಹ ಮುಖ್ಯವಾಗಿ ಮಹಿಳೆಯರ ಸೌಂದರ್ಯ ಪ್ರಜ್ಞೆಯ ಪ್ರತೀಕವೇ ಆಗಿದೆ.

ಹಚ್ಚೆ , ಹಂಚೆ, ಅಣಚೆ ಮುಂತಾದ ಪ್ರಾದೇಶಿಕ ಭಿನ್ನತೆಯ ಹೆಸರಿನ ಮೂಲಕವೂ ಕರೆಯುವ ರೂಡಿ ಇರುವ ಹಚ್ಚೆ ಕಲೆ 'ಪಚ್ಚೆ'ಎಂಬ ಮೂಲಪದದಿಂದ ಶಬ್ದ ಉತ್ಪತ್ತಿಯಾಗಿದೆ. "ಹಸಿರು ಗಿಡಮೂಲಿಕೆಗಳಿಂದ ತಯಾರಿಸಿದ ರಸ ದೇಹದ ಮೇಲೆ ಹಳದಿಮಿಶ್ರಿತ ಹಸಿರು ರೂಪವನ್ನು ಶಾಶ್ವತವಾಗಿ ಕೊಡುವುದರಿಂದ ಇದಕ್ಕೆ ಹಚ್ಚೆ ಎಂಬಹೆಸರು ಬಂದಿದೆ." (ಉಲ್ಲೇಖ: ಗಿರಿಜನ ಸಂಸ್ಕೃತಿ, ಪುಟ-101) ಮರಾಠಿಯಲ್ಲಿ 'ಗೊಂದನ್', ಉರ್ದುವಿನಲ್ಲಿ'ಗೋದನಾ' ಎಂಬುದಾಗಿ ಕೂಡಾ ಕರೆಯುತ್ತಾರೆ. ಮುತ್ತೈದೆತನ ಸೌಭಾಗ್ಯದ ಸಂಕೇತವಾಗಿ ಹಚ್ಚೆ ಹಾಕಿಸಲಾಗುತ್ತಿತ್ತು. ಬದುಕಿದ್ದಾಗ ಮತ್ತು ಸತ್ತ ನಂತರ ದೇಹದ ಜೊತೆಗೆ ಬರುವುದು ಎಂಬ ನಂಬಿಕೆ ಬಲಗೊಳ್ಳುತ್ತಾ ಹಚ್ಚೆ ಇನ್ನಷ್ಟು ಪ್ರಸಿದ್ದಿಯನ್ನೂ ಪಾವಿತ್ರತೆಯನ್ನೂ ಪಡೆಯಿತು.

ಹಚ್ಚೆ ಹಾಕುವ ಜನಾಂಗಗಳು

ಹಿಂದಿನಿಂದ ರೂಡಿಗತವಾಗಿ ಬಹುತೇಕ ಅಲೆಮಾರಿ ಜನಗಳೇ ಹಚ್ಚೆಕಲೆಯನ್ನು ರಕ್ತಗತ ಕಲೆಯಂತೆ ಪಸರಿಸುತ್ತಾ ಹೊಟ್ಟೆಪಾಡಿನ ವೃತ್ತಿಕಲೆಯಂತೆಯೂ ಬೆಳೆಸಿಕೊಂಡಿದ್ದರು. ಎಲ್ಲರೂ ಹಚ್ಚೆ ಹಾಕಿಸಿಕೊಳ್ಳುವಂತೆ ಊರೂರಿಗೆ ಬಂದು

ನೂರಾರು ಶಾಸ್ತ್ರ ,ಜಾನಪದ ಹಾಡುತ್ತಾ ಹಚ್ಚೆ ಹಾಕಿಸಿಕೊಳ್ಳುವಂತೆ ಮನವೊಲಿಸುತ್ತಿದ್ದರು. ಬಹುತೇಕ ಕೊರಮರು, ಕುಕ್ಕೆ ಕೊರಮರು, ಕರೆಗಾರರು, ಬೆಸ್ತರು, ಬುಳ್ಡೆ ಬೆಸ್ತರು, ಗುಂಡೆ ಬೆಸ್ತರು,ಕೊರವಂಜಿಗಳು, ಬ್ಯಾಡರು, ಒಡ್ಡರು, ಗೊಂಬೆಯಾಟದ ಮರಾಠಿಗಳು, ದೊಂಬರು ಸೇರಿದಂತೆ ಕೆಲವು ಅಲೆಮಾರಿ ಜನಾಂಗದವರು ಹಚ್ಚೆ ಹಾಕುತ್ತಾರೆ.ರಾಜ್ಯದ ಬಹುತೇಕ ಕಡೆ ಹಚ್ಚೆ ಜನಪ್ರಿಯವಾಗಿತ್ತು. ಈಗ ಹೊಸ ತಲೆಮಾರಿನವರು ಈ ಕಲೆಯನ್ನು ನಿರ್ಲಕ್ಷಿಸಿದ್ದಾರೆ.ಆಧುನಿಕ ಟ್ಯಾಟೂ ಜನಪ್ರಿಯವಾಗುತ್ತಿದೆ. (ವಿವರಗಳು– ಡಾ.ಮೋಹನ್ ಚಂದ್ರಗುತ್ತಿ ಅವರ ದೀವರ ಮಕ್ಕಳು ಕೃತಿ)

ಹಚ್ಚೆಯ ಬಣ್ಣ

ಪ್ರಕೃತಿದತ್ತವಾದ ನೈಸರ್ಗಿಕ ಎಲೆಗಳಿಂದಲೇ ಬಣ್ಣ ತಯಾರಿಸಿಕೊಳ್ಳುತ್ತಿದ್ದರು. ಹಂಡೆಗೆ ಹರಳೆಣ್ಣೆ ದೀಪ ಹಿಡಿದು ಅದರ ಕರಿಯನ್ನು ಸಂಗ್ರಹಿಸಿ ಕೊಡಲಾಗುತ್ತಿತ್ತು. ವೀಳ್ಯದೆಲೆಯನ್ನು ಹರಳೆಣ್ಣೆ ದೀಪದಿಂದ ಸುಟ್ಟು ಮೊಲೆಹಾಲನ್ನು ಆ ಕರಿಗೆ ಬೆರೆಸಿ ಕರಿಬಣ್ಣ ಸಿದ್ಧಪಡಿಸುತ್ತಿದ್ದರು. ಅಳಲೆಕಾಯಿ ವೀಳ್ಯದೆಲೆಯನ್ನು ಸುಟ್ಟು ಕರಕುಮಾಡಿ ಅದಕ್ಕೆ ಹರಳೆಣ್ಣೆ ಸೇರಿಸಿ ಬಣ್ಣ ತಯಾರಿಸುತ್ತಾರೆ. ಹಳೆಯ ಪರಂಪರೆಯಲ್ಲಿ ಕಪ್ಪುಮಿಶ್ರಿತಹಸಿರು ಬಣ್ಣದ ಹಚ್ಚೆಯನ್ನು ಉಳಿಸಿಕೊಂಡಿದ್ದಾರೆ. ಇತ್ತೀಚೆಗೆ ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಬಣ್ಣಗಳನ್ನು ಬಳಸುತ್ತಿದ್ದಾರೆ.

ವಿಧಾನ

ಹಚ್ಚೆ ಹಾಕುವವರು ತಮ್ಮಲ್ಲಿರುವ ಹಚ್ಚೆಯ ಹಳೆಯ ಪುಸ್ತಕಗಳನ್ನು ತೆಗೆದು ಅದರಲ್ಲಿರುವ ನಾನಾ ನಮೂನೆಗಳನ್ನು ಹಾಕಿಕೊಳ್ಳುವವರಿಗೆ ತೋರಿಸುತ್ತಾರೆ. ಅನಂತರ ಚೂಪಾಗಿ ಕೆತ್ತಿರುವ ನವಿಲುಗರಿ ಅಥವಾ ಬೆಂಕಿಕಡ್ಡಿಯನ್ನು ಬಣ್ಣದಲ್ಲಿ ಅದ್ದಿ ಬೇಕಾದ ಚಿತ್ರವನ್ನು ಬರೆಯುತ್ತಾರೆ. ಹಚ್ಚೆ ಹೊಯ್ಯಲು ಒಂದೇ ಅಳತೆಯಲ್ಲಿರುವ ಸೂಜಿಗಳ ಸಮೂಹದ ಗಂಟಿನಿಂದ (ದಿಂಡು) ಮಸಿಯಲ್ಲಿ ಅದ್ದಿ ನಕ್ಷೆಹಾಕಿದ ಶರೀರದ ಭಾಗದ ಮೇಲೆ ಚುಚ್ಚುತ್ತಾ

ಹೋಗುತ್ತಾರೆ. ಚುಚ್ಚುವ ಸಮಯದಲ್ಲಿ ಒಸರುವ ರಕ್ತವನ್ನು ಸೀರೆಯ ಸೆರಗಿನಿಂದ ಒರೆಸುತ್ತಿರುತ್ತಾರೆ. ಹಚ್ಚೆ ಹೊಯ್ಯಿಸಿಕೊಳ್ಳುವಾಗ ನೋವಿನ ಅನುಭವವಾಗದಂತೆ ಶಿಶುಪ್ರಾಸಗಳನ್ನು, ಹಾಡುಗಳನ್ನು ಹೇಳುತ್ತಿರುತ್ತಾರೆ. ಹಚ್ಚೆ ಹೊಯ್ಯುವುದು ಮುಗಿದ ಮೇಲೆ ಚೆನ್ನಾಗಿ ತಣ್ಣೀರಿನಿಂದ ತೊಳೆದು ಅದರ ಮೇಲೆ ಮಸಿ ಸವರಲಾಗುತ್ತದೆ.ಹೊಯ್ಯುವ ಪ್ರಕ್ರಿಯೆ ಚಿತ್ರದ ವಿಸ್ತಾರವನ್ನು ಅವಲಂಬಿಸಿ ಒಂದೆರಡು ಗಂಟೆಯವರೆಗೆ ಸಾಗುತ್ತದೆ.ಚಿತ್ರ ಮೂಡದಿದ್ದರೆ ಆ ಭಾಗದಲ್ಲಿ ಮತ್ತೆ ಚುಚ್ಚಲಾಗುತ್ತದೆ. ನೋವನ್ನು ಉಪಶಮನಗೊಳಿಸಲು ಅರಿಶಿನಪುಡಿಯನ್ನು ಕೊಬ್ಬರಿ ಎಣ್ಣೆಗೆ ಬೆರೆಸಿ ಲೇಪಿಸುತ್ತಾರೆ. ಇದು ಗಾಯ ಮಾಯುವವರೆಗೆ ನಡೆಯುತ್ತಿರುತ್ತದೆ.ಹೆಕ್ಕೆಗಟ್ಟಿದ ಚರ್ಮ ಸುಲಿದು ಹೊಸ ಚರ್ಮ ಹುಟ್ಟುವವರೆಗೆ ನಂಜಾಗದಂತೆ ಊಟದ ಪರಿಕ್ರಮ ನಡೆಯುತ್ತದೆ. ಅಂದರೆ ನಂಜಿನ ಯಾವ ಪದಾರ್ಥಗಳನ್ನು ಬಳಸುವಂತಿಲ್ಲ.

ಹಚ್ಚೆ ಹಾಕುವವರಿಗೆ ತಲೆಗೆ ಎಣ್ಣೆ ಹಾಕಿ,ಮಡಿಲಕ್ಕಿ ಹಾಕಿ, ಊಟ ಕೊಟ್ಟು ಹಚ್ಚೆ ಹಾಕಿದವರನ್ನು ಗೌರವದಿಂದ ಕಳಿಸಲಾಗುತ್ತದೆ.. ಕೆಲವರು ಹಚ್ಚೆ ಹಾಕಿಸಿಕೊಳ್ಳುವಾಗ ಎರಡು ಸೇರು ಅಕ್ಕಿಯಿಂದ, ನಾಕು ಗಿದ್ನ ಭತ್ತ ಕೊಟ್ಟಿದ್ದಿದೆ. ಕೆಲವರು ಸೀರೆ ಬಟ್ಟೆ ಕೊಟ್ಟು ಹಾಕಿಸಿಕೊಂಡಿದ್ದಾರೆ. ಹಚ್ಚೆ ಹೊಯ್ದ ನಂತರ ದೃಷ್ಟಿ ತಾಗದಂತೆ ಮೆಣಸಿನಕಾಯಿ ಮತ್ತು ಉಪ್ಪನ್ನು ನಿವಾಳಿಸಿ ಬೆಂಕಿಗೆ ಹಾಕುತ್ತಾರೆ.ಹಚ್ಚೆ ಹಾಕಿಸಿಕೊಳ್ಳುವಾಗ ಬಳಸುವ ಸೂಜಿಗಳು ಸರಿಯಾಗಿರದಿದ್ದರೆ ತುಕ್ಕು ಹತ್ತಿದಂತೆ ಆಗಿದ್ದರೆ ಕೀವು, ನಂಜು ಉಂಟಾಗುವ ಸಂಭವವಿದೆ.

ಸಾಂಪ್ರದಾಯಿಕ ಹಚ್ಚೆಯ ಚಿತ್ರ ವಿನ್ಯಾಸಗಳು

1. ಹುಲಿ 2. ಗೌರಿ ಮುಡಿ 3. ನಿಂಬೆಗೊಂಚಲು 4. ಗಿಂಡಿ 5. ಜೋಗಿಜಡೆ 6. ದುಂಡುಮಲ್ಲಿಗೆ 7. ಸೀತೆಯ ಸೆರಗು 8. ಶಿವನಮುಡಿ 9. ಶಿವನಗುಡಿ 10. ಕಮಲ 11. ತೇರು 12. ಶಿವನ ಬಾಸಿಂಗ 13. ರಾಮನ ತೊಟ್ಟಿಲು 14. ತೊಟ್ಟಿಲು 15, ಗೋದಿಮನೆ 16. ಗೌರಿಕಣ್ಣು 17. ಮುತ್ತಿನ ಮಲಕು 18. ತೋಳು ಚಪ್ಪರ 19. ಮುತ್ತಿನ ಬೊಟ್ಟು 20. ಶಿವನ ಸದರು ಮುಂತಾದವು.

ನಂಬಿಕೆಗಳು

ಹಚ್ಚೆಯಂತಹ ಕಲಾತ್ಮಕ ಅಭಿವ್ಯಕ್ತಿಯ ಸಾಂಪ್ರದಾಯಿಕ ಪ್ರರಿಕ್ರಮದ ಹಿಂದೆ ಜನಾಂಗದ ಹಾಗೂ ಧರ್ಮಗಳ ಗಾಢ ನಂಬಿಕೆ, ಆಲೋಚನಾ ಶಕ್ತಿ ಕೆಲಸ ಮಾಡುತ್ತದೆ. ಸಮುದಾಯವೊಂದರ ಮಾಟ–ಮಂತ್ರ–ತಂತ್ರ ಹಾಗೂ ದೈವತ್ವದಲ್ಲಿ ಇರುವ ನಂಬಿಕೆಗಳು ಹಚ್ಚೆ ಕಲೆಯಲ್ಲಿದೆ. ರಾಜ್ಯದ ಬಹುಭಾಗದಲ್ಲಿ ಹಚ್ಚೆಕಲೆ ಜನಪ್ರಿಯವಾಗಿತ್ತು. ಈಗ ಹಿಂದಿನ ಮಾದರಿಯ ಹಚ್ಚೆಕಲೆ ಕಣ್ಮರೆಯಾಗಿದೆ.ಹಚ್ಚೆಕಲೆ ಕುರಿತಾಗಿ ಇರುವ ಕೆಲವು ನಂಬಿಕೆಗಳು ಕೆಳಗಿನಂತಿವೆ.

1. ದೀವರು ಹೆಣ್ಣು ಮಕ್ಕಳಿಗೆ ಮುತ್ತೈದೆತನದ ಸಂಕೇತ.

2. ಗಂಡ ಸತ್ತಮೇಲೆ ಹಚ್ಚೆ ಹಾಕಿಸಿಕೊಳ್ಳುವಂತಿಲ್ಲ.

3. ಹಚ್ಚೆ ಇಲ್ಲದವರು ಅಕ್ಕಿ ಗಡಿಗೆಯಲ್ಲಿ ಕೈಹಾಕಬಾರದು.

4. ಹಣೆಗೆ ಹಚ್ಚೆ ಹಾಕಿಸಿದರೆ ಪುಣ್ಯ ಬರುತ್ತದೆ.

5. ಬೆಳಿಗ್ಗೆ ಎದ್ದ ಕೂಡಲೆ ಹಚ್ಚೆ ಇಲ್ಲದವಳ ಮುಖ ನೋಡಬಾರದು.

6. ಗಿಂಡಿ (ಚಿತ್ರದ ಮಾದರಿ) ಇಲ್ಲದವಳು ಗಂಡನ ಕೈಗೆ ನೀರು ಕೊಡಬಾರದು.

7. ಹಚ್ಚೆ ಇಲ್ಲದವಳು ಶುಭ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ.

8. ಗರ್ಭಿಣಿ ಸ್ತ್ರೀಯರು ಹಚ್ಚೆ ಹಾಕಿಸಿಕೊಂಡರೆ ಹುಟ್ಟುವ ಮಕ್ಕಳಿಗೆ ಯಾವ ರೋಗವೂ ತಟ್ಟುವುದಿಲ್ಲ.

9.. ಮುಸ್ಲಿಮರ ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಹಚ್ಚೆ ಹಾಕಿಸಿಕೊಳ್ಳುತ್ತಿದ್ದರು.

ಹಚ್ಚೆ ಹಾಕಿಸಿಕೊಂಡವರನ್ನು ಮುಸ್ಲಿಂ ದಾಳಿಕೋರರು ಮುಟ್ಟುತ್ತಿರಲಿಲ್ಲ. (ಉಲ್ಲೇಖ:ಡಾ.ಹೆಚ್ ಎಸ್ ಮೋಹನ್ ಚಂದ್ರಗುತ್ತಿ ಅವರ ದೀವರ ಮಕ್ಕಳು ಕೃತಿ)

ಇಂದು ಬಹುತೇಕ ಕಲೆಗಳು ಆಧುನಿಕತೆ,ಜಾಗತೀಕರಣದ ಪಲ್ಲಟಗಳಿಗೆ ಒಳಗಾಗಿವೆ. ಮಹಿಳೆಯರ ಮೆಚ್ಚಿನ ಸಾಂಪ್ರದಾಯಿಕ ಕಲೆಯಾಗಿದ್ದ ಹಚ್ಚೆಕಲೆ ಇಂದು ಯುವಕರನ್ನು ಅತಿಯಾಗಿ ಆಕರ್ಷಿಸುತ್ತಿದೆ. ಸಿನಿಮಾಗಳಲ್ಲಿ ಜನಪ್ರಿಯ ನಟ ನಟಿಯರು,ಮಾಡೆಲ್ಗಳು ಹಚ್ಚೆ ಕಲೆಯೆ ಮಾದರಿಯೇ ಆಗಿರುವ ಟ್ಯಾಟೂ ಹಾಕಿಸಿಕೊಂಡು ಪ್ರಚಾರವನ್ನೂ ಮಾಡಿದ ಪರಿಣಾಮ ಇಂದು ಹಚ್ಚೆಕಲೆ ಬಹುಬೇಡಿಕೆಯ ಕಲೆಯಾಗಿದೆ.ಹಚ್ಚೆ ಹಾಕಲು ಆಧುನಿಕ ಸಾಮಗ್ರಿಗಳು ಬಂದಿವೆ. ಹೊಸ ಹೊಸ ವಿನ್ಯಾಸದಲ್ಲಿ ಹಚ್ಚೆಹಾಕಲಾಗುತ್ತದೆ.ಪಾಶ್ಚಾತ್ಯ ಶೈಲಿ ಹಚ್ಚೆಯೂ ನಮ್ಮಲ್ಲಿಯೂ ಇಣುಕಿ ಟ್ಯಾಟೂ ಎಂದೇ ವಿಜ್ರಂಭಿಸುತ್ತಿದೆ.ಸಾಂಪ್ರದಾಯಿಕ ಹಚ್ಚೆ ಹಾಕುವವರು ಇಂದು ಕಣ್ಮರೆಯಾಗಿದ್ದಾರೆ. ಹಳ್ಳಿಗಳಲ್ಲಿಯೂ ಇಂದು ಹಚ್ಚೆ ಹಾಕಿಸಿಕೊಳ್ಳುತ್ತಿಲ್ಲ. ಆದರೆ ಟ್ಯಾಟೂ ಹಾಕಿಸಿಕೊಳ್ಳುವಿಕೆ ನಗರದ ಯುವಕ ಯುವತಿಯರಲ್ಲಿ ಹೆಚ್ಚಾಗುತ್ತಿದೆ.

ಹಚ್ಚೆಯ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಾಡಿನ ಉಳಿದೆಲ್ಲ ಪ್ರದೇಶಗಳ ಚಿತ್ರಗಳಿಗಿಂತ ಭಿನ್ನತೆಯನ್ನು ಚಿತ್ರಗಳು ಉಳಿಸಿಕೊಂಡಿವೆ. ಪ್ರಾದೇಶಿಕ ಪ್ರಭಾವಗಳು ಇಲ್ಲಿ ಕಾರ್ಯನಿರ್ವಹಿಸಿ ಈ ರೀತಿಯ ಭಿನ್ನರೂಪತೆಗೆ ಕಾರಣವಾಗಿದೆ.ಉತ್ತರ ಕರ್ನಾಟಕದ ಹಚ್ಚೆಯ ಚಿತ್ತಾರಗಳಲ್ಲಿ ಧಾರ್ಮಿಕ ಪ್ರಭಾವವು ವ್ಯಾಪಕವಾಗಿದ್ದರೆ, ಮಲೆನಾಡಿನ ದೀವರ ಹಚ್ಚೆಯಲ್ಲಿ ನೈಸರ್ಗಿಕ ಚಿತ್ರಗಳು ಹಾಗೂ ಜಾನಪದವಸ್ತುಗಳು ಆಕರಗಳಾಗಿವೆ. ಗೌರಿಮುಡಿ ಹಾಗೂ ಗೌರಿಕಣ್ಣು ಈ ಎರಡು ಚಿತ್ತಾರಗಳಲ್ಲಿ ಕಂಡುಬರುತ್ತದೆ. ಶಿವನ ಮುಡಿ, ಶಿವನ ಗುಡಿ, ಶಿವನಬಾಸಿಂಗ, ಶಿವನ ಸದರು ಈ ರೀತಿಯ ಚಿತ್ತಾರಗಳಲ್ಲಿ ನಾವು ಗಮನಿಸಬಹುದಾದ್ದೆಂದರೆ, ಬುಡಕಟ್ಟುಮೂಲದಿಂದ ಬಂದ ಜನರಿವರೆಂಬುದಲ್ಲದೆ, ಶಿವನ ತಮ್ಮ ಕುಲ ಮೂಲರಕ್ಷಕನೆಂಬ ನಂಬಿಕೆಯೊಂದೇ

ಕೆಲಸ ಮಾಡುತ್ತದೆ. ತೊಂಡೆಚಪ್ಪರ, ಕಮಲದ ಹೂ, ನಿಂಬೆ ಗೊಂಚಲು,ಹುಲಿಯಚಿತ್ತ, ತೇರು, ಕ್ಯಾದಿಗೆ ಹೂ ಮುಂತಾದ ಚಿತ್ರಗಳು ನೈಸರ್ಗಿಕ ನೆಲೆಗಳಿಂದ ಏಕೀಭರಿಸಿದ ಸೃಜನಶೀಲ ಜನಪದರ ಕ್ರಿಯಾಶಿಲ ಮನಸ್ಸೇ ಆಗಿದೆ. ತಮ್ಮ ಗ್ರಹಿಕೆಯ ನೆಲೆಯಲ್ಲಿ ಇಂತಹಚಿತ್ತಾರಗಳನ್ನು ಹೊದ್ದುಕೊಳ್ಳುವ ತೀವ್ರ ತುಡಿತವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪ್ರಕೃತಿಯೊಡನೆ ಸ್ಪರ್ಧಿಸುವ ಸೌಂದರ್ಯದ ಪ್ರಜ್ಞೆ ಗಮನಕ್ಕೆ ಬರುತ್ತದೆ. ಗೋದಿಮಣಿ, ಮುತ್ತಿನ ಮಲಕು, ಮುತ್ತಿನಬೊಟ್ಟು, ದೀಪಾರತಿ, ಆಭರಣಗಳ ಶೈಲಿಯನ್ನು ನೆನಪಿಗೆ ತರುತ್ತದೆ.ಒಟ್ಟಾರೆ ಮನುಷ್ಯ ತನ್ನ ದೈನಂದಿನ ಬದುಕಿನೊಂದಿಗೆ ಸೆಣಸುತ್ತಲೇ ಅದರಿಂದ ಬಿಡುಗಡೆಹೊಂದುವ, ಆ ಮೂಲಕ ನಾವೀನ್ಯತೆಯನ್ನು, ಸೌಂದರ್ಯವನ್ನು ಹೊಂದುವ ಮಿಡಿತವನ್ನು ಇಲ್ಲಿಸ್ಪಷ್ಟವಾಗಿ ಕಾಣಬಹುದು. ಕಾಣದ ವಸ್ತುಗಳೊಂದಿಗೆ ಇಲ್ಲಿ ಅನುಸಂಧಾನವಲ್ಲ ಬದಲಿಗೆ ತಮ್ಮೊಡನೆ ಇರುವ ವಸ್ತುಗಳ ವೈಭವೀಕರಣವೇ ಇಲ್ಲಿ ಪರಿಕರ ಎಂದು ಹಚ್ಚೆಯ ಕುರಿತಾಗಿ ಡಾ. ಮೋಹನ್ ಚಂದ್ರಗುತ್ತಿಯವರು ತಮ್ಮ ಸಂಶೋಧನಾ ಗ್ರಂಥ ದೀವರ ಮಕ್ಕಳು ಕೃತಿಯಲ್ಲಿ ವಿವರವಾಗಿ ದಾಖಲಿಸಿದ್ದಾರೆ.

ಹಸೆಚಿತ್ತಾರಕ್ಕೂ ಹಚ್ಚೆ ಕಲೆಗೂ ಬಹಳ ವ್ಯತ್ಯಾಸಗಳಿವೆ.ಮುಖ್ಯವಾಗಿ ಹಚ್ಚೆ ಚರ್ಮದ ಮೇಲೆ ಬರೆಯುವ ಚಿತ್ರಕಲಾ ಪ್ರಕಾರವಾಗಿದೆ. ಹಸೆ ನೆಲದಮೇಲೆ,ಗೋಡೆ ಮೇಲೆ ಬರೆಯುವ ಆಚರಣೆಗಳ ಸಾಂಪ್ರದಾಯಿಕ ಕಲೆಯಾಗಿದೆ.

ಮದರಂಗಿ

ನೈಸರ್ಗಿಕ ಗಿಡಮೂಲಿಕೆಗಳಿಂದ ಬಣ್ಣಗಳನ್ನು ಮೂಡಿಸಬಹುದು ಎಂದು ಕಂಡುಕೊಂಡ ಮಾನವ ತನ್ನ ಸೌಂಧರ್ಯಪ್ರಜ್ಞೆಯೊಂದಿಗೆ ತನ್ನನ್ನು ತಾನು ಅಲಂಕರಿಸಿಕೊಳ್ಳಲು ಕಂಡುಕೊಂಡ ವಿಶಿಷ್ಟ ಕಲೆಯಲ್ಲಿ ಮದರಂಗಿ ಪ್ರಮುಖವಾದುದು.ಹಚ್ಚೆ ಚರ್ಮದಲ್ಲಿ ಸ್ಥಿರವಾಗಿ ಉಳಿಸಿಕೊಳ್ಳಬಹುದಾದ ಕಲಾತ್ಮಕ ಪ್ರಕಾರವಾದರೆ, ಮದರಂಗಿ ಸ್ವಲ್ಪ ಕಾಲವಿದ್ದು ತಂತಾನೆ ಅಳಿಸುವಂತಹುದು. ಜಗತ್ತಿನಾದ್ಯಂತ ಮದರಂಗಿ ಪ್ರಸಿದ್ಧಗೊಂಡಿದೆಯಾದರೂ ಕರ್ನಾಟಕದ ಮಲೆನಾಡಿನಲ್ಲಿ ಬಳಕೆಯಾಗುವ ಸಂದರ್ಭ ಹಾಗೂ ಸಮಯವನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.ಮದಂರಂಗಿಯನ್ನು ಬಹುತೇಕ ಹಬ್ಬಗಳಿಗೆ,ಮದುವೆ ಸಂಧರ್ಬದಲ್ಲಿ ಹಾಕಿಕೊಳ್ಳುವುದು ರೂಢಿಯಾದರೂ ಹಾಕಿಕೊಳ್ಳುವ ಚಿತ್ರವಿನ್ಯಾಸದಲ್ಲಿ ಪ್ರದೇಶವಾರು ವಿಶಿಷ್ಟತೆಗಳಿವೆ.

ಮಾನವಜೀವಿ ಭೌಗೋಳಿಕವಾಗಿ ಪರಸ್ಪರ ಸಂಪರ್ಕವಿಲ್ಲದಿದ್ದಾಗಲೂ ಪ್ರಪಂಚದಾದ್ಯಂತ ಹಲವು ಬಗೆಯ ಸಾಮ್ಯತೆಗಳನ್ನು ಹುದುಗಿಸಿಕೊಂಡದ್ದು ಹಲವು ಸಂಗತಿಗಳಲ್ಲಿ ಕಂಡುಬರುತ್ತದೆ. ಮದರಂಗಿ ಸಹ ಜಗತ್ತಿನ ಬಹುಭಾಗದಲ್ಲಿದೆ. ಆದರೆ ಕರ್ನಾಟಕದಲ್ಲಿ ತನ್ನದೆ ಆದ ನೆಲಮೂಲದ ವಿಶೇಷತೆಗಳನ್ನು ಒಳಗೊಂಡಿದೆ. ಮದರಂಗಿಯು ಮೂಲತಃ ಪರ್ಶಿಯಾದಿಂದ ಹನ್ನೆರಡನೇ ಶತಮಾನದಲ್ಲಿ ಭಾರತ ಪ್ರವೇಶಿಸಿದೆ ಎನ್ನಲಾಗುತ್ತಿದೆಯಾದರೂ ಮಲೆನಾಡಿನಲ್ಲಿ ಹಲವು ಹಬ್ಬಗಳು ಮದುವೆ ಸಂಭ್ರಮಕ್ಕೆ ಮದರಂಗಿ ಬೇಕೆ ಬೇಕು ಅನ್ನುವಷ್ಟರ ಮಟ್ಟಿಗೆ ಅದು ನಮ್ಮದಾಗಿದೆ. ಮಲೆನಾಡಿನಲ್ಲಿ ಪಂಚಮಿ ಹಬ್ಬಕ್ಕೆ ಮದರಂಗಿ ಇಡುವುದು ಸಂಪ್ರದಾಯ. ಮದುವೆಗೆ ಸಹ ಮದರಂಗಿ ಇಡುವ ಸಂಪ್ರದಾಯವಿದ್ದು ಈಗ ಅದು ಇನ್ನೂ ಹೆಚ್ಚಾಗಿದೆ.ಮದರಂಗಿ ಹಾಕುವಾಗ ಬಗೆಬಗೆಯ ವಿನ್ಯಾಸಗಳು ಕಂಡುಬರುತ್ತವೆ. ಕರ್ನಾಟಕದ ಗ್ರಾಮೀಣ ಭಾಗವನ್ನು ಆಧಾರವಾಗಿಟ್ಟುಕೊಂಡರೆ ಬಹುತೇಕ ಪ್ರಕೃತಿ ಚಿತ್ರಗಳು ಕಂಡುಬರುತ್ತಿದ್ದವು. ಈಗ ಬೇರೆ ಬೇರೆ ರೇಖಾ ವಿನ್ಯಾಸಗಳು,ಬಳ್ಳಿಗಳು,ಮಧುವಣಗಿತ್ತಿಯರ ಅಂಗೈ ಸಿಂಗಾರಕ್ಕಾಗಿ ನಾನಾ

ವಿಧದ ಚಿತ್ತಾರ ಬರೆಯುವುದನ್ನು ಕಾಣಬಹುದು.ರಂಗೋಲಿ ಮಾದರಿ ಚಿತ್ರಗಳೆ ಮದರಂಗಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.ಚರ್ಮದ ಮೇಲೆ ಬರೆಯುವ ಚಿತ್ತಾರವಾಗಿದ್ದು ಒಂದಿಷ್ಟು ಕಾಲದ ನಂತರ ತಂತಾನೆ ಅಳಿಸಿಹೋಗುತ್ತದೆ. ಮುಸ್ಲಿಂ ಹೆಣ್ಣುಮಕ್ಕಳು ಹೆಚ್ಚಾಗಿ ಮದರಂಗಿ ಪ್ರಿಯರಾಗಿದ್ದು ಮೆಹಂದೀ ಎಂದೂ ಕೆಲವರು ಗೋರಂಟಿ ಎಂದೂ ಸಹ ಕರೆಯುವರು. **ಈಗ** ಮಾರುಕಟ್ಟೆಯಲ್ಲಿ ಸಿಗುವ ಮದರಂಗಿಯಿಂದ ಮದುವೆಗೆ ,ಹಬ್ಬಗಳಿಗೆ ಸ್ತ್ರೀಯರು ಕೈತುಂಬ ವಿವಿಧ ವಿನ್ಯಾಸದಲ್ಲಿ ಚಿತ್ತಾರ ಬಿಡಿಸಿಕೊಳ್ಳುವುದು ಕಂಡುಬರುತ್ತದೆ.

ರಂಗವಲ್ಲಿ (ರಂಗೋಲಿ)

ರಂಗವಲ್ಲಿ (ರಂಗೋಲಿ) ಬಣ್ಣದ ಪುಡಿಗಳನ್ನು ನೆಲದ ಮೇಲೆ ಹಾಸುವ ಮೂಲಕ ಮೂಡಿಸುವ ರೇಖೆಗಳ ವಿನ್ಯಾಸದ ಕಲೆಯಾಗಿದ್ದು ಹಸೆಚಿತ್ತಾರದಂತಹ ಗೋಡೆಚಿತ್ರಗಳಿಗಿಂತ ವಿಭಿನ್ನವಾದುದ್ದಾಗಿದೆ. ಚುಕ್ಕೆ ಸಹಿತ ರಂಗವಲ್ಲಿ ,ಚುಕ್ಕೆ ರಹಿತ ರೇಖಾ ವಿನ್ಯಾಸದ ರಂಗವಲ್ಲಿಗಳೂ ಇವೆಯಾದರೂ ಹಸೆ ಚಿತ್ತಾರದಷ್ಟು ಸೂಕ್ಷ್ಮ ವಿನ್ಯಾಸ ಇರುವುದಿಲ್ಲ.ಹಸೆಚಿತ್ತಾರ ದ್ರವರೂಪದ ಬಣ್ಣಗಳ ವಿನ್ಯಾಸವಾದರೆ ರಂಗವಲ್ಲಿ ಪ್ರಧಾನವಾಗಿ ಹಿಂದಿನಿಂದ ಪುಡಿರೂಪದ ಬಣ್ಣಗಳಲಿ ವಿನ್ಯಾಸಮಾಡುವುದಾಗಿದೆ. ರಂಗೋಲಿ ಮತ್ತೆ ಮತ್ತೆ ಅಳಿಸಿ ಬರೆಯುವ ನೆಲಚಿತ್ರವಾಗಿದೆ.ಸೌಂದರ್ಯ ಪ್ರಜ್ಞೆಯಲ್ಲಿ ಬಹಳಷ್ಟು ಮುಂದುವರಿದ ಕರ್ನಾಟಕ ಭೂಭಾಗದಲ್ಲಿ ವಾಸಿಸುವ ಜನಪದರ ಸ್ತ್ರೀಯರು ವಿವಿಧ ಬಗೆಯ ರಂಗವಲ್ಲಿಯನ್ನು ಪ್ರತಿನಿತ್ಯ ಮನೆಯಂಗಳದಲ್ಲಿ ಹಾಕುವ ಸಂಪ್ರದಾಯ ಪಾಲಿಸುತ್ತಾರೆ. ಗ್ರಾಮೀಣ ಭಾಗದಲ್ಲಿ ಈಗಲೂ ರಂಗವಲ್ಲಿ ಮನೆಯಂಗಳದಲ್ಲಿ ಕಡ್ಡಾಯ. ರಂಗವಲ್ಲಿ ಹಾಕಲು ಕಲಿಯುವುದು ಗರತಿಯ ಲಕ್ಷಣ ಎನ್ನುವಷ್ಟರಮಟ್ಟಿಗೆ ಸ್ತ್ರೀಯರು ರಂಗೋಲಿಯನ್ನು ಕರಗತಮಾಡಿಕೊಳ್ಳಲೇಬೇಕಾದ ಪರಂಪರೆ ಈಗಲೂ ಮುಂದುವರಿದಿದೆ. ರಂಗವಲ್ಲಿಯು ಒಂದು ಮನೆಯ ಸಾಮಾಜಿಕ ಸಾಂಪ್ರದಾಯಿಕ ಚಟುವಟಿಕೆಯ ಪ್ರತಿಬಿಂಬ. ಆ ಮನೆಯ ಹೆಣ್ಣುಮಕ್ಕಳ ಸಂಸ್ಕೃತಿಯ ಪ್ರತೀಕ. ಕೇವಲ ಕೌಶಲ್ಯ ಮತ್ತು ಅಲಂಕಾರವೆಂದು

ಮಾತ್ರವೇ ಗ್ರಹಿಸದೆ, ಆ ಮನೆಯ ಗರತಿಯ ಸೃಜನಶೀತೆಯ ರೂಪಕವೂ ಆಗಿದೆ.

ಕಲ್ಲುಪುಡಿ ,ಜೇಡಿಮಣ್ಣು ಬಳಸುವುದು ರೂಡಿ. ಈಗ ಆಧುನಿಕ ಬಣ್ಣಗಳ ಪುಡಿಯನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಈಗ ಪ್ರದೇಶದಿಂದ ಪ್ರದೇಶಕ್ಕೆ ವೈವಿಧ್ಯಮಯ ವಿನ್ಯಾಸದ ರಂಗೋಲಿ ಹಾಕಲಾಗುತ್ತದೆ. ಹಲವು ಕಡೆ ರಂಗೋಲಿ ಸ್ಪರ್ಧೆಗಳನ್ನು ಆಯೋಜಿಸಿ ಪ್ರೋತ್ಸಾಹಿಸುತ್ತಿರುವುದು ಸಹ ಕಂಡುಬರುತ್ತದೆ. ಮೈಸೂರು ದಸರಾ ರಂಗೋಲಿ ಸ್ಪರ್ಧೆ ಬಹಳ ಪ್ರಸಿದ್ಧಿ ಪಡೆದಿತ್ತು. ಕೆಳದಿ ಅರಸರ ಕಾಲದಲ್ಲಿ ಚಂಪಕ ಸರಸಿ ಎಂಬ ಮಹಿಳೆ ತುಂಬಾ ಸುಂದರವಾಗಿ ರಂಗೋಲಿ ಹಾಕುತ್ತಿದ್ದ ಬಗ್ಗೆ ಐತಿಹಾಸಿಕ ದಾಖಲೆಗಳು ಸಿಗುತ್ತವೆ. ರಂಗೋಲಿ ಕಲೆ ನಮ್ಮ ಕರ್ನಾಟಕ ಗ್ರಾಮೀಣ ಭಾಗದಲ್ಲಿ ರಂಗವಲ್ಲಿ ಎಂದೆ ಕರೆಯುವ ರೂಢಿ ಇದ್ದು ಜನಪದರ ಜೀವನ ಸಂಪ್ರದಾಯದೊಂದಿಗೆ ಹಾಸುಹೊಕ್ಕಾಗಿದೆ.

ರಂಗೋಲಿ ಶುಭದ ಸಂಕೇತ. ಮಂಗಳಕರವಾದುದು. ರಂಗೋಲಿ ಹಾಕುವುದರಿಂದ ದೆವ್ವ, ಭೂತಗಳು ಬರುವುದಿಲ್ಲವೆಂಬ ನಂಬಿಕೆ ಸಹ ಕೆಲವರಲ್ಲಿ ಇದೆ. ದಿನಬೆಳಗನ್ನು ಅಂಗಳಕ್ಕೆ ಸ್ವಾಗತಿಸುವ ಅಲಂಕಾರದ ಭಾಗವಾಗಿಯೂ ರಂಗವಲ್ಲಿ ಹಾಕುವ ಸಂಪ್ರದಾಯವಿದೆ. ಸೂರ್ಯ ಹುಟ್ಟುವ ಮೊದಲೇ ನೆಲವನ್ನು ಸಾರಿಸಿ ರಂಗೋಲಿ ಹಾಕುವ ಸಂಪ್ರದಾಯ ಭಾರತದ ಬಹುತೇಕ ಕಡೆ ಇದೆ. ಹಸೆಚಿತ್ತಾರಕ್ಕು ರಂಗೋಲಿಗು ಬಹಳಷ್ಟು ವ್ಯತ್ಯಾಸ ಗಮನಿಸಬಹುದು.ಹಸೆ ಎಂದರೆ ರಂಗೋಲಿಯಲ್ಲ. ರಂಗೋಲಿ ಚುಕ್ಕಿಗಳ ಮೂಲಕ ಜೋಡಿಸುವ ಚಿತ್ರಕಲೆ.ಕೆಲವು ನೇರವಾಗಿ ಬಣ್ಣದ ಪುಡಿಗಳನ್ನು ಹಾಸುವ ರಂಗೋಲಿಗಳೂ ಇವೆ. ಹೆಚ್ಚಾಗಿ ವೃತ್ತಗಳು,ರೇಖೆಗಳ ಬಳಕೆ ಕಂಡುಬರುತ್ತದೆ. ರಂಗೋಲಿಗೆ ಹಸೆಚಿತ್ತಾರ ಕಲೆಗಿರುವ ಸಾಂಪ್ರದಾಯಿಕ ಅಂತಃಸತ್ವವಿಲ್ಲ. ವಿಧಿ ವಿಧಾನಗಳಿಲ್ಲ.ರಂಗೋಲಿ ಸಾಕಷ್ಟು ಆಧುನಿಕ ಬಣ್ಣಗಳನ್ನು ಒಳಗೊಂಡಿದ್ದು ದೇಶದ ಎಲ್ಲೆಡೆ ಕಂಡುಬರುತ್ತದೆ.

ಕಾವಿ ಕಲೆ

ಕಾವಿ ಕಲೆಯು ಗೋವಾದಲ್ಲಿ ಮೊದಲು ಹುಟ್ಟಿಕೊಂಡಿದೆ ಎಂದು ಹೇಳಲಾಗುತ್ತದೆ ಮತ್ತು ಗೋವಾದಿಂದ ಕರಾವಳಿ ಜಿಲ್ಲೆಗಳಿಗೆ ವಲಸೆ ಬಂದ ಸಾರಸ್ವತ ಬ್ರಾಹ್ಮಣ ಸಮುದಾಯ,ವಿಶ್ವಕರ್ಮರ ಮೂಲಕ ಕರಾವಳಿ ಕರ್ನಾಟಕಕ್ಕೆ ಪ್ರವೇಶಿಸಿತು ಎನ್ನಲಾಗುತ್ತಿದೆ.



ಬಹುತೇಕ ಎಲ್ಲ ದೇಶೀ ಕಲೆಗಳಿಗೂ ಒಂದಿಷ್ಟು ಸಾಮ್ಯತೆಗಳು ,ವ್ಯತ್ಯಾಸಗಳನ್ನು ಕಾಣಬಹುದು. ಕಾವಿ ಕಲೆ ,ಹಸೆಚಿತ್ತಾರ ನಡುವೆಯೂ ಸಾಕಷ್ಟು ವ್ಯತ್ಯಾಸಗಳ ನಡುವೆ ಅದು ಜನ ಸಾಮಾನ್ಯರ ಸಾಂಪ್ರದಾಯಿಕ ಕಲೆಯಾಗದೆ ಉತ್ತರಕನ್ನಡ ಜಿಲ್ಲೆ,ಕರಾವಳಿಯ ಕೆಲವು ಮಠ ಮಂದಿರಗಳಲ್ಲಿ ಮಾತ್ರ ಕೆಲವು ಕಾಲಘಟ್ಟದಲ್ಲಿ ಕಂಡುಬಂದಿದೆ.ಮಹಾರಾಷ್ಟ್ರ ಮತ್ತು ಕೇರಳದಲ್ಲೂ ಈ ಬಗೆಯ ಚಿತ್ತಾರ ಕಲೆಯು ದೇವಾಲಯಗಳು,ಮಠಗಳ ಅಲಂಕಾರಕ್ಕೆ ಬಳಸಲಾಗಿದೆ. ಹಸೆಚಿತ್ತಾರಕ್ಕೂ ಕಾವಿ ಕಲೆಗೂ ಸಾಕಷ್ಟು ವ್ಯತ್ಯಾಸಗಳಿವೆ. ಹಸೆಚಿತ್ತಾರದ ಕೆಲವು ಅಂಶಗಳ ಬಳಕೆ ಕಂಡುಬರುತ್ತದೆಯಾದರೂ ಆದಿ ರೇಖಾವಿನ್ಯಾಸಗಳ ಚಿತ್ರಕಲೆಗಳಿಗಿಂತ ವಿನ್ಯಾಸದಲ್ಲಿ ಶಿಲ್ಪಕಲೆಗಳ ಪ್ರಭಾವಳಿಯ ವಿನ್ಯಾಸ ಬದಲಾವಣೆಗಳು ಕಾವಿ ಕಲೆಯಲ್ಲಿ ಕಂಡುಬರುತ್ತವೆ. ಕಾವಿಕಲೆಯಲ್ಲಿ ಮಣ್ಣುಗೆಂಪು ಬಣ್ಣ ಅಥವಾ ಕಾವಿಬಣ್ಣ ಎಂದು ಕರೆಯಲಾಗುವ ಬಣ್ಣವನ್ನೆ ಪ್ರಧಾನವಾಗಿ ಬಳಸುತ್ತಾರೆ. ಹಸೆಚಿತ್ತಾರಕ್ಕೂ ಕಾವಿ ಕಲೆಗೂ ವಿನ್ಯಾಸದಲ್ಲಿ ಸ್ವರೂಪದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಮುಖ್ಯವಾಗಿ ರೇಖಾ ವಿನ್ಯಾಸದ ಜೊತೆಗೆ ಮೂರು ಆಯಾಮಗಳಲ್ಲೂ ಚಿತ್ರ ಬಿಡಿಸುವಿಕೆ ಕೆಲವೆಡೆ ಕಾಣಬಹುದು.

ಪ್ರಮಾಣಬದ್ಧತೆ, ,ಸಾದೃಶ್ಯತೆ ಅನುಸರಿಸುವಲ್ಲಿ ಒಂದಿಷ್ಟು ವ್ಯತ್ಯಾಸ ಕಂಡುಬರುತ್ತದೆ. ಕಾವಿ ಕಲೆಯು ಹೆಚ್ಚಾಗಿ ದೇವಾಲಯಗಳ ಅಲಂಕಾರಕ್ಕೆ ಬಿಡಿಸಿರುವುದು ಕಂಡುಬರುತ್ತೆ. ಆನಂತರ ಮಠಗಳ ಅಲಂಕಾರಕ್ಕೆ, ಗೃಹ ಅಲಂಕಾರಕ್ಕೆ, ಚರ್ಚುಗಳ ಅಲಂಕಾರಕ್ಕೆ ಗೋವಾ ,ಕರ್ನಾಟಕ ,ಕೇರಳದಲ್ಲೂ ಬಳಸಿರುವುದು ಕಂಡುಬರುತ್ತದೆ. ಕೆಲವು ರಾಜಾಶ್ರಯ ಕಾಲದಲ್ಲಿ ದೇವಾಲಯಗಳ ಅಲಂಕಾರಕ್ಕೆ ಕಾವಿ ಕಲೆಯನ್ನು ಪ್ರೋತ್ಸಾಹಿಸಿದ್ದಾರೆ.

ಆದಿಮ ಚಿತ್ರಕಲೆಯಿಂದ ವಿಕಾಸವಾದ ಬುಡಕಟ್ಟು ಜನಸಂಸ್ಕೃತಿಯ ರೇಖಾ ವಿನ್ಯಾಸಗಳ ಚಿತ್ರಕಲೆಯ ಪ್ರಭಾವದಿಂದ ಕಾಲ ಕಾಲಕ್ಕೆ ಪ್ರಾದೇಶಿಕವಾಗಿ ಬೆಳೆದ ದೇಶೀ ಚಿತ್ರಕಲೆಯಲ್ಲಿ ಕಾವಿ ಕಲೆಯೂ ಸಹ ಒಂದಾಗಿದೆ. ಕಾವಿ ಕಲೆಯ ಮೂಲಕ ದೇವಾಲಯಗಳಲ್ಲಿ ದೇವರುಗಳನ್ನು ಚಿತ್ರಿಸಿ ಜನಪ್ರಿಯಗೊಳಿಸಲು ಪ್ರಚುರಪಡಿಸಲಾಗಿದೆ. ಅಂದು ದೇವಾಲಯಗಳನ್ನು ನಿರ್ಮಿಸುವಾಗ ವಾಸ್ತುಶಿಲ್ಪ ತಜ್ಞರು ದೇವರು,ಪುರಾಣಗಳ ಸನ್ನಿವೇಶಗಳನ್ನು ಊಹಿಸಿ ದೇವಾಲಯಗಳಿಗೆ ಶಿಲ್ಪಗಳನ್ನು ಕೆತ್ತುವಾಗ ರೇಖಾ ಚಿತ್ರಗಳ ರೇಖಾನಕ್ಷೆ ಸಿದ್ಧಪಡಿಸಿಕೊಳ್ಳುತಿದ್ದರು. ಆನಂತರ ಅವುಗಳಿಗೆ ಬಣ್ಣಕೊಡುವಿಕೆ ಕಂಡುಕೊಂಡಮೇಲೆ ವಿವಿಧ ರಾಜ್ಯಗಳಲ್ಲಿ ವಿವಿಧ ರೀತಿಯ ಚಿತ್ರಕಲೆಗಳು ಮತ್ತಷ್ಟು ಹೊಸರೂಪದಲ್ಲಿ ಬೆಳವಣಿಗೆಯಾದವು. ಕಾವಿಕಲೆಯೂ ಹಾಗೆಯೇ ಬೆಳೆದು ಒಂದಷ್ಟು ಭಾಗದಲ್ಲಿ ದೇವಾಲಯ ,ಮಠಗಳಲ್ಲಿ ಅಲಂಕಾರಕ್ಕೆ ಬಳಸಲಾಗಿದೆ. ಹಾಗಾಗಿ ಜನಸಮುದಾಯಗಳ ಬಳಕೆಯ ಜನಪ್ರಿಯ ಕಲೆಯಾಗದೆ ದೇವಾಲಯ ,ಮಠಗಳ ಕಲೆಯಾಯಿತು. ಇದನ್ನು ದೇವಾಲಯಗಳ ಅಲಂಕಾರ ಮೂಲದ ಕಲೆ ಎಂದು ಗುರುತಿಸಬಹುದು. ಆದರೆ ಹಸೆಚಿತ್ತಾರ ಜನಸಮುದಾಯಗಳ ಮನೆಮನೆಯ ಸಾಂಪ್ರದಾಯಿಕ ಆಚರಣೆಗಳ ಕಲೆಯಾಗಿದೆ. ಕರ್ನಾಟಕದಲ್ಲಿ ಕರಾವಳಿಭಾಗದಲ್ಲಿ ಹಲಿ,ಹಸಗರ ಎಂದು ಕರೆದರೆ ,ಮಲೆನಾಡಿನ ಶಿವಮೊಗ್ಗದಲ್ಲಿ ಹಸೆಚಿತ್ತಾರ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಗೋಡೆಚಿತ್ರ ಎಂದು ಕರೆಯುತ್ತಾರೆ. ಗೋಡೆಗಳ ಹೊರತಾಗಿ, ಈ ರೇಖಾಚಿತ್ರಗಳನ್ನು ಕಿಟಕಿ ಮತ್ತು ಬಾಗಿಲಿನ ಚೌಕಟ್ಟುಗಳಿಂದ ಕೂಡ ಮಾಡಲಾಗಿದೆ. ಪುರಾಣಗಳಿಂದ ದೃಶ್ಯಗಳನ್ನು

ಸಾಮಾನ್ಯವಾಗಿ ಚಿತ್ರಿಸಿದಾಗ, ಕಲಾವಿದ ಅಲಂಕಾರಕ್ಕಾಗಿ ಪ್ರಕೃತಿ ಮತ್ತು ಜಾನಪದ ಲಕ್ಷಣಗಳನ್ನು ಬಳಸುತ್ತಾನೆ. ಈ ರೇಖಾಚಿತ್ರಗಳು ಹೆಚ್ಚಾಗಿ ಸಾಂಕೇತಿಕವಾಗಿದ್ದರೂ, ಕಲಾವಿದರು ವಿವರಗಳಿಗೆ ಸೂಕ್ಷ್ಮವಾಗಿ ಗಮನ ಹರಿಸುತ್ತಾರೆ. ಮತ್ತು ಕೆಲವರು ರೇಖಾಚಿತ್ರಗಳಿಗೆ ಮೂರು ಆಯಾಮದ ಪರಿಣಾಮವನ್ನು ನೀಡಲು ಪ್ರಯತ್ನಿಸುತ್ತಾರೆ.

ಮೇಲ್ಭಾಗವು ಸಾಮಾನ್ಯವಾಗಿ ಅಲಂಕಾರಿಕ ಮುಕುಟ (ಕಿರೀಟ), ಕಳಸ (ಅಲಂಕಾರಿಕ ಮಡಕೆ), ಅಥವಾ ಗೋಪುರ (ಗುಮ್ಮಟದ ಶಿಖರ) ಕಂಡುಬರುತ್ತದೆ. ಕಲಾವಿದರು ಗೋಡೆಯ ಕನಿಷ್ಠ ಮೂರನೇ ಎರಡರಷ್ಟು ಭಾಗವನ್ನು ಮೋಟಿಫ್‌ನಿಂದ ಮುಚ್ಚಿರುವುದನ್ನು ಖಚಿತಪಡಿಸಿಕೊಳ್ಳುತ್ತಾರೆ. ಚೌಕಟ್ಟಿನ ಒಂದು ಭಾಗವು ದೇವರುಗಳು, ದೇವತೆಗಳು ಮತ್ತು ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣಗಳನ್ನು ಕೂಡ ಕಲಾವಿದ ತನ್ನ ಭಿತ್ತಿಚಿತ್ರಗಳಿಗಾಗಿ ಆರಿಸಿಕೊಂಡಿದ್ದಾನೆ. ದಶಾವತಾರವನ್ನು (ಭಗವಾನ್ ವಿಷ್ಣುವಿನ ಹತ್ತು ಅವತಾರಗಳು) ವೈಷ್ಣವ ದೇವಾಲಯಗಳ ಗೋಡೆಗಳ ಮೇಲೆ ಕಾಣಬಹುದು ಮತ್ತು ಶಿವಪುರಾಣ ವಿಷಯಗಳನ್ನು ಶೈವ ದೇವಾಲಯಗಳ ಗೋಡೆಗಳ ಮೇಲೆ ಬಳಸಲಾಗುತ್ತದೆ. ಕರ್ನಾಟಕದ ಕೊಂಕಣ ಕರಾವಳಿಯ ಕೆಲವು ದೇವಾಲಯಗಳನ್ನು ಕಾವಿ ಚಿತ್ರಕಲೆಯಿಂದ ಅಲಂಕರಿಸಿರುವುದು ಕಂಡುಬರುತ್ತದೆ. ಅಂಕೋಲದ ಲಕ್ಷ್ಮೀ ಮಹಾಮಾಯಾ ದೇವಾಲಯವನ್ನು ಇತ್ತೀಚಿನ ವರ್ಷಗಳಲ್ಲಿ ಕಾವಿ ಕಲೆಯಿಂದ ಅಲಂಕರಿಸಿರುವುದನ್ನು ಉದಾಹರಿಸಬಹುದು.

ಭಾರತದ ಇತರೆ ದೇಶೀ ಚಿತ್ರಕಲೆಗಳು ಮತ್ತು ಹಸೆಚಿತ್ತಾರ

ಭಾರತದ ವಿವಿಧ ರಾಜ್ಯಗಳಲ್ಲಿ ಕಂಡುಬರುವ ಇತರೆ ದೇಶೀಕಲೆಗಳನ್ನು ಗಮನಿಸಿದಾಗ ಅವುಗಳಲ್ಲಿ ಸಹ ಹಸೆಚಿತ್ತಾರದ ಕೆಲವು ಮೋಟಿಪ್‌ಗಳು ಕಂಡುಬರುವುದನ್ನು ಗಮನಿಸಬಹುದು. ಮಹಾರಾಷ್ಟ್ರದ ವರ್ಲಿ ಕಲೆಯು ಹಸೆಚಿತ್ತಾರಕ್ಕೆ ಅತೀ ಸಮೀಪದ ಹೋಲಿಕೆಗಳನ್ನು ಹೊಂದಿದೆ. ಆದರೆ ವೈವಿಧ್ಯಮಯ ವಿಶಿಷ್ಟ ವಿನ್ಯಾಸದ ದೃಷ್ಟಿಯಿಂದ ,ಅಂತಃಸತ್ವದ ದೃಷ್ಟಿಯಿಂದ ಮಲೆನಾಡಿನ ಹಸೆಚಿತ್ತಾರ ಹೆಚ್ಚು ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಒಡಿಸ್ಸಾದ ಸೊರಾ ಕಲೆ ,ಬಿಹಾರದ ಮಧುಬನಿ ಕಲೆ.ರಾಜಸ್ತಾನದ ಮಾಂಡನ, ಗೋವಾದ ಕಾವಿ ಕಲೆ ಹಸೆಚಿತ್ತಾರ ಕಲೆಯನ್ನು ನೆನಪಿಸುತ್ತವೆ. ಅಲ್ಲದೆ ಮಧ್ಯಪ್ರದೇಶ,ತಮಿಳು ನಾಡು ,ಕೇರಳ ಮತ್ತಿತರ ಹಲವು ರಾಜ್ಯಗಳಲ್ಲಿ ಆದಿಮ ಚಿತ್ರಕಲೆಯ ಮುಂದುವರಿದ ವಿನ್ಯಾಸವಾಗಿ ಹಲವಾರು ಬುಡಕಟ್ಟು ಜನಸಂಸ್ಕತಿಯಲ್ಲಿ ಹಲವು ಬಗೆಯ ಸಾಂಪ್ರದಾಯಿಕ ದೇಶೀ ಚಿತ್ತಾರ ಮಾದರಿಗಳಿವೆ.

ವರ್ಲಿ ಜನಾಂಗದ ಮೂಲದೆಂದು ಗುರುತಿಸಲಾಗುತ್ತಿರುವ ಮಹಾರಾಷ್ಟ್ರ ಭಾಗದಲ್ಲಿ ಜನಪ್ರಿಯವಾಗಿರುವ 'ವರ್ಲಿ' ಚಿತ್ರಕಲೆಗೂ ದೀವರ ಹಸೆಚಿತ್ತಾರ ಚಿತ್ರಕಲಾ ಮಾದರಿಗೂ ಕೆಲವು ಹೋಲಿಕೆಗಳು ಕಂಡುಬಂದರೂ ವಿನ್ಯಾಸದಲ್ಲಿ, ಸೌಂಧರ್ಯಪ್ರಜ್ಞೆ, ಆಚರಣೆಗಳ ಮೂಲದ ಪರಂಪರೆಯ ಚಿತ್ತಾರ ಕಲೆಯಾಗಿರುವ ದೀವರು ಸಮುದಾಯದ ಚಿತ್ತಾರ ಕಲೆಯಲ್ಲಿ ಅಂತಸತ್ವದಲ್ಲಿಯೇ ಭಿನ್ನತೆಯಿದೆ. ವಿನ್ಯಾಸದಲ್ಲಿ ಸಾಕಷ್ಟು ವಿಶಿಷ್ಟತೆಯಿದೆ.ನೆಲಮೂಲದ ಪರಂಪರೆಯಲ್ಲಿ ಅನನ್ಯತೆಯಿದೆ. ಮಹಾರಾಷ್ಟ್ರದ ವರ್ಲಿ ಬುಡಕಟ್ಟು ಚಿತ್ರ ಕಲಾ ವಿನ್ಯಾಸದಂತೆ ಕಂಡರೂ ಸಂಕೀರ್ಣ ವಿನ್ಯಾಸ ಮತ್ತು ಸಾಂಪ್ರದಾಯಿಕ ಅಂತಃಸತ್ವದಿಂದ ವಿಶಿಷ್ಟವೆನಿಸುವ ದೀವರ ಚಿತ್ತಾರ ಮಹಾರಾಷ್ಟ್ರದ ವರ್ಲಿ ಜನಾಂಗದವರು ಬಿಡಿಸುತ್ತಿದ್ದ ಈಗ ವರ್ಲಿಕಲೆಯೆಂದೇ ಅಲ್ಲಿನವರು ಕರೆಯುವ ಕಲೆಗಿಂತ ವಿಭಿನ್ನವಾಗಿದೆ. ಸೌಂದರ್ಯ ಪ್ರಜ್ಞೆ ಮತ್ತು ಮದುವೆ ಹಾಗೂ ನಿಸರ್ಗ ಆಚರಣೆಗಳ ಮೂಲದ ಕಲೆಯಾಗಿರುವ ದೀವರ ಚಿತ್ತಾರದ ವಿವಿಧ ಬಗೆಗಳಾದ ಹಸೆಚಿತ್ತಾರ, ಭೂಮಣ್ಣಿ ಬುಟ್ಟಿ ಚಿತ್ತಾರ, ಗೋಡೆ ಚಿತ್ತಾರ ,ಬಾಗಿಲು ಚಿತ್ತಾರ,

ತಿರುಗೆ ಮಣೆ ಚಿತ್ತಾರಗಳು ಸ್ತ್ರೀ ಸೌಂದರ್ಯ ಪ್ರಜ್ಞೆಯ ಕಲೆಯೊಂದಿಗೆ ಫಲವಂತಿಕೆಯ ಆಚರಣೆ, ನಸರ್ಗ ಆರಾಧನೆ, ಜನಪದ ಸಮುದಾಯಿಕತೆಯ ಅಂತ:ಸತ್ವ ಕಂಡುಬರುತ್ತದೆ. ವಿನ್ಯಾಸದಲ್ಲೂ ಹೆಚ್ಚಿನ ಜ್ಯಾಮಿತಿಯ ಅಂಶಗಳು ರೇಖಾ ವಿನ್ಯಾಸ ಕಂಡುಬುರುತ್ತವೆಯಾದ್ದರಿಂದ ಇದು ದೀವರು ಸಮುದಾಯದ ನೆಲಮೂಲದ ಜ್ಞಾನದಿಂದಲೇ ಬೆಳವಣಿಕೆ ಕಂಡ ಚಿತ್ತಾರ ಕಲೆಯೆಂದು ಗುರುತಿಸಬಹುದು.

ದೇಶದ ವಿವಿಧ ರಾಜ್ಯಗಳಲ್ಲಿ ಕಂಡುಬರುವ ಮಂಡಲ ಕಲೆ

ಯಾವುದೇ ಹಬ್ಬದ ಸಂಭ್ರಮಗಳಲ್ಲೂ ಮನೆಯ ಮುಂದೊಂದು ಸುಂದರವಾದ ಬಣ್ಣದ ರಂಗೋಲಿ ಹಾಕುವಿಕೆ, ಚಿತ್ತಾರಗಳು ನಮ್ಮ ಸಂಪ್ರದಾಯ ಮತ್ತು ಅಲಂಕಾರದ ಭಾಗವಾಗಿ ನಮ್ಮನ್ನು ಆಕರ್ಷಿಸುತ್ತದೆ ಮತ್ತು ಮನಸ್ಸಿಗೆ ಮುದವನ್ನು ನೀಡುತ್ತದೆ. ಚಿತ್ರಗಳ ರೂಪದಲ್ಲಿಯೇ ಮನಸ್ಸಿಗೆ ಅದಮ್ಯವಾದ ಶಕ್ತಿಯನ್ನು ತುಂಬುವ,ಆಕರ್ಷಿಸುವ ಆಚರಣೆಗಳ ಮೂಲದ ಆಧ್ಯಾತ್ಮಿಕ ಕಲೆಯೇ ಮಂಡಲ ಕಲೆ ಎಮ್ಮಬಹುದು . ವೇದಗಳ ಪೂರ್ವದಲ್ಲೂ ನಮ್ಮ ಜನಪದರು ತಮ್ಮ ನೆಲಮೂಲದ ಜ್ಞಾನದಿಂದಲೇ ತಮ್ಮದೇ ಆದ ನಂಬಿಕೆಗಳಿಂದ ಸಾಂಪ್ರದಾಯಿಕ ಮಂಡಲಗಳನ್ನು ರಚಿಸುತ್ತಿದ್ದ ಬಗ್ಗೆ ದಾಖಲೆಗಳಿವೆ. ವೇದಗಳ ನಂತರದ ಕಾಲದಲ್ಲಿ ವಿಭಿನ್ನ ವಿನ್ಯಾಸದ ಮಂಡಲಗಳನ್ನು ಕಂಡುಕೊಂಡಿರುವ ಬಗ್ಗೆ ದಾಖಲೆಗಳಿವೆ.ನಮ್ಮ ದೇಶದ ಬಹುತೇಕ ಭಾಗದಲ್ಲಿ ,ವಿವಿಧ ರಾಜ್ಯಗಳಲ್ಲಿ ವಿವಿಧ ಸಮುದಾಯಗಳಲ್ಲಿ, ವಿವಿಧ ವಿನ್ಯಾಸ ,ವಿವಿಧ ನಂಬಿಕೆಗಳೊಂದಿಗೆ ಧಾರ್ಮಿಕ ಆಚರಣೆಗಳಲ್ಲಿ, ಹಬ್ಬಗಳಲ್ಲಿ ಮಂಡಲ ಕಲೆ ಸಾಂಪ್ರದಾಯಿಕ ಭಾಗವಾಗಿ ಕಂಡುಬರುತ್ತದೆ.

ಸಂಸ್ಕೃತದಲ್ಲಿ "ಮಂಡ' ಎಂದರೆ ಅಲಂಕರಿಸುವುದು ಅಥವಾ ಸಿದ್ಧಗೊಳಿಸುವುದು. 'ಲ' ಎಂಬ ಅಂತ್ಯಪ್ರತ್ಯಯದೊಂದಿಗೆ, ಮಂಡಲವೆಂದರೆ ಒಂದು ಪವಿತ್ರವಾದ ವರ್ತುಲ ಅಥವಾ ಕೇಂದ್ರಬಿಂದು ಎಂದು ಅರ್ಥ. ಮಂಡಲ ಒಂದು

ಸಂಕೀರ್ಣವಾದ, ಅಮೂರ್ತವಾದ, ಸಾಮಾನ್ಯವಾಗಿ ವೃತ್ತಾಕಾರದಲ್ಲಿ ರಚಿಸಲ್ಪಡುವ ಚಿತ್ರ. ಮಂಡಲ ನಮ್ಮ ಸುತ್ತಲಿನ ಶಕ್ತಿಯನ್ನು ಹಿಡಿದಿಟ್ಟುಕೊಳ್ಳುವ, ಎಲ್ಲೆಡೆ ತನ್ನಿಂದಲೇ ಹೊರಹೊಮ್ಮಿಸುವ ಒಂದು ಅಗಾಧ ಶಕ್ತಿಯ ವ್ಯೂಹ ಎಂದು ನಂಬಲಾಗಿದೆ.

ಮಂಡಲ ಕಲೆಯ ಮಹತ್ವ ಮತ್ತು ಸ್ವರೂಪ

ಮಂಡಲ ಮುಖ್ಯವಾಗಿ ಹಿಂದೂ ಮತ್ತು ಬೌದ್ಧ ಧರ್ಮಗಳಲ್ಲಿ ಅನಾದಿ ಕಾಲದಿಂದಲೂ ಬಳಸಿಕೊಂಡು ಬಂದಿರುವ ಒಂದು ಶ್ರದ್ಧಾಪೂರ್ವ ಧಾರ್ಮಿಕ ಚಿತ್ರಣ. ಕ್ರಿಶ್ಚಿಯನ್ನರು,ಅಮೆರಿಕನ್ನರಲ್ಲೂ ಕೂಡ ಈ ಕಲೆ ಪೂರ್ವಜರ ಕಾಲದಿಂದಲೂ ಆರಾಧನೆಯ ಬಳಕೆಯಲ್ಲಿತ್ತು. 4ನೇ ಶತಮಾನದಿಂದಲೇ ಟಿಬೆಟ್, ಇಂಡಿಯಾ, ಚೀನಾ, ಜಪಾನ್, ನೇಪಾಳ ಮೊದಲಾಗಿ ಹಲವು ಏಷಿಯಾ ದೇಶಗಳಲ್ಲಿ ಮಂಡಲಗಳ ರಚನೆ ಅಸ್ತಿತ್ವದಲ್ಲಿತ್ತು ಎಂದು ಹಲವು ಮೂಲಗಳಿಂದ ದೊರಕಿದ ಮಾಹಿತಿಯಿದೆ.ಈ ಸಮಸ್ತ ವಿಶ್ವವೇ ಒಂದು ಕೇಂದ್ರೀಕೃತವಾದ ಶಕ್ತಿಯ ಸ್ವರೂಪ ಎಂದು ಮಂಡಲಗಳ ಮೂಲಕ ಪ್ರತಿಬಿಂಬಿಸಲಾಗುತ್ತದೆ. ಇಂಡೋನೇಷ್ಯಾ ಮತ್ತು ಕ್ಯಾಂಬೋಡಿಯಾದಲ್ಲಿ 3–ಡಿ ಮಾದರಿಯ ಸಾವಿರಾರು ವರ್ಷಗಳ ಇತಿಹಾಸವಿರುವ ಬೌದ್ಧ ದೇವಾಲಯಗಳು ಈ ಮಂಡಲಗಳ ಭೌತಿಕ ಅನುಭೂತಿಯನ್ನು ನೀಡುತ್ತದೆ.ಇಲ್ಲಿನ ಪ್ರತಿ ರಚನೆಗೂ ಅದರದ್ದೇ ಉದ್ದೇಶವಿರುತ್ತದೆ. ಹಸೆಚಿತ್ತಾರಕ್ಕು ಮಂಡಲಕ್ಕು ವಿನ್ಯಾಸ ,ಸ್ವರೂಪದಲ್ಲಿ ಬಹಳ ವಿಭಿನ್ನತೆಗಳಿವೆ.

ಮಂಡಲಗಳ ಮೂಲ ಧಾತುಗಳಾದ ಧನಾತ್ಮಕ ಶಕ್ತಿಯ ಕೇಂದ್ರೀಕರಣ ಮತ್ತು ದೇವರುಗಳ ಸ್ಥಳದ ಪಾವಿತ್ರ್ಯತೆಯ ಮನ್ನಣೆ, ನಮ್ಮ ದೇಶದಲ್ಲಿನ ಅನೇಕ ಹಿಂದೂ ಮತ್ತು ಬೌದ್ಧ ದೇವಾಲಯಗಳ ಭಾವಣಿಗಳಲ್ಲಿ ರೂಪಿಸಲ್ಪಟ್ಟ ಕೆತ್ತನೆ ಮತ್ತು ವಾಸ್ತುಶಾಸ್ತ್ರ ಸಹಿತ ಅಲಂಕಾರಗಳಲ್ಲಿಯೂ ಕೂಡ ಕಾಣಬಹುದಾಗಿದೆ.ಜಾತಿ ಮತಗಳ ಹಂಗಿಲ್ಲದೆ, ಸಾಮಾನ್ಯವಾಗಿ ಎಲ್ಲ

ಸಂಸ್ಕೃತಿಗಳಲ್ಲೂ ವೃತ್ತವನ್ನು ಅದ್ಭುತ ಶಕ್ತಿಯ ಸ್ವರೂಪವಾಗಿ ಆರಾಧಿಸಲಾಗುತ್ತದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ರಚಿಸುವ ಕೆಲವು ಸಾಂಪ್ರದಾಯಿಕ ಮಂಡಲಗಳಿಗೆ ಅದರದ್ದೇ ಆದ ರಚನೆಯ ಉದ್ದೇಶವಿರುತ್ತವೆ. ಅದಕ್ಕಾಗಿ ಅಗತ್ಯವಾದ ದಿಕ್ಕು, ಸಾಮಾಗ್ರಿ ಮತ್ತು ನಿಯಮ–ನಿಷ್ಠೆಗಳನ್ನು ಅನುಸರಿಸಬೇಕಾಗುತ್ತದೆ.ಆರಾಧನಾ ಸ್ಥಳವನ್ನು ಜಪ–ಮಂತ್ರಗಳ ಜೊತೆಯಲ್ಲಿ, ಮಂಡಲ ರಚಿಸಿ, ಧ್ಯಾನ ವಾತಾವರಣವನ್ನು ನಿರ್ಮಿಸಲು ಮತ್ತು ದೇವತಾ ಶಕ್ತಿಯನ್ನು ಒಂದೆಡೆ ಆವಾಹಿಸಲೆಂಬ ಕಾರಣಕ್ಕಾಗಿ ಬಳಸುವ ಪ್ರತೀತಿಯಿದೆ. ಈ ಮೂಲಕ ಜನರ ಭೌತಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ಭಾವನಾತ್ಮಕಶಕ್ತಿಗಳ ಒಟ್ಟುಗೂಡುವಿಕೆಯನ್ನು ಸಾಧಿಸುವ ಶಕ್ತಿ ಮಂಡಲಗಳಿಗಿವೆ ಎಂಬುದು ನಮ್ಮ ಪೂರ್ವಜರು ಹಾಗು ಅನೇಕ ಸಾಂಪ್ರದಾಯಿಕ ಮಂಡಲಗಳ ರಚನಕಾರ ಅಂಬೋಣ.

ಸಾವಿರಾರು ವರ್ಷಗಳ ಇತಿಹಾಸವಿರುವ ಮಂಡಲಗಳ ರಚನೆ ಕೇವಲ ಧಾರ್ಮಿಕ ವಸ್ತು ವಿಷಯವಲ್ಲ. ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಸಮಪಾರ್ಶ್ವ ರೇಖಾಚಿತ್ರಗಳನ್ನು ಬಿಡಿಸುವುದು ಮತ್ತು ಬಣ್ಣ ತುಂಬುವ ಕ್ರಿಯೆಯಿಂದ ನಮ್ಮ ದೇಹದಲ್ಲಿ ಮೇಲಾಟಿನ್ ಎಂಬ ಹಾರ್ಮೋನ್‌ಗಳ ಬಿಡುಗಡೆಯಾಗುತ್ತದೆ. ಇದು ನಿದ್ರೆ ಹೆಚ್ಚಿಸಲು ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ಅತ್ಯಂತ ಅನುಕೂಲಕಾರಿ ಎಂಬುದು ಕೆಲವರ ಅಂಬೋಣ. ಬಹುತೇಕ ಎಲ್ಲಾ ಕಲೆಗಳು ಮಾನಸಿಕ ಮುದ ನೀಡುವ ಶಕ್ತಿಹೊಂದಿವೆ. ಕಲೆ ಹುಟ್ಟಿ ಬೆಳೆದದ್ದೇ ಅಂತಹ ಕೆಲವು ಕಾರಣಗಳಿಗಾಗಿ ಎನ್ನಬಹುದು. ವರ್ಣಮಯ ಚಿತ್ರಗಳನ್ನು ಕಣ್ಣಿನಿಂದ ನೋಡುವುದು, ಚಿತ್ರಗಳನ್ನು ತನ್ಮಯತೆಯಿಂದ ಬಿಡಿಸುವುದರ ಮೂಲಕ ಅವುಗಳ ಅನುಭಾವ ಪಡೆಯುವುದು ಇತ್ಯಾದಿ ರೂಡಿಗಳಿಂದ ಮನುಷ್ಯನ ದೇಹದ ಉಲ್ಲಾಸ ಹೆಚ್ಚುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಮಂಡಲ ಚಿತ್ರ ಬರೆಯಲು ಹೆಣ್ಣು ಗಂಡು ಎಂಬ ಬೇಧ ಭಾವವಿಲ್ಲ.ಮಕ್ಕಳು ಹಿರಿಯರು ಎಂಬ ವಯಸ್ಸಿನ ಮಿತಿಯಿಲ್ಲ. ಮನಸ್ಸನ್ನು ತಿಳಿಯಾಗಿಸಲು,

ಮನಸ್ಸಿಗೆ ಕಿರಿಕಿರಿ ಉಂಟಾದಾಗ ಒಂದಷ್ಟು ಚಿತ್ರ ಬರೆದು ಆ ಒತ್ತಡವನ್ನು ಹೊರಹಾಕಲು, ಋಣಾತ್ಮಕ ಆಲೋಚನೆಗಳನ್ನು ದೂರವಾಗಿಸಲು ಮಂಡಲಗಳು ಒಂದು ಉತ್ತಮ ಮಾಧ್ಯಮ. ಮಕ್ಕಳಲ್ಲಿ ಏಕಾಗ್ರತೆ ಹೆಚ್ಚಿಸಲು ಮಂಡಲ ಚಿತ್ರಿಸುವುದು ಅಥವಾ ಬಣ್ಣಗಳಿಂದ ಅಲಂಕರಿಸುವುದು ಒಂದು ಉತ್ತಮ ಹವ್ಯಾಸ. ಇದೇ ಕಾರಣಕ್ಕಾಗಿ ಮಂಡಲಗಳ ರಚನೆ ಮತ್ತು ಬಳಕೆ ವೈದ್ಯಕೀಯ, ಯೋಗಭ್ಯಾಸ ಕ್ಷೇತ್ರಗಳಲ್ಲಿ, ಮಕ್ಕಳ ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಹೆಚ್ಚಿನ ಮನ್ನಣೆ ಪಡೆಯುತ್ತಿವೆ. ಯೋಗ ಶಾಲೆಗಳಲ್ಲಿ ಮನಸ್ಸನ್ನು ಕೇಂದ್ರೀಕೃತಗೊಳಿಸಲು ಮಂಡಲ ಚಿತ್ರಗಳನ್ನು ವೀಕ್ಷಣೆಗೆಂದೇ ಬಳಸುವ ಕ್ರಮ ಈಗೀಗ ಹೆಚ್ಚಾಗುತ್ತಿದೆ.

ಮಂಡಲ ರಚನೆ ಮತ್ತು ಬಳಕೆ

ಕೆಲವು ನಿಯಮ ನಿಷ್ಠೆಗಳಿಂದ ರೂಢಿಗತವಾಗಿರುವ ಸಾಂಪ್ರದಾಯಿಕ, ಆಧ್ಯಾತ್ಮಿಕ ಮಂಡಲಗಳ ಹೊರತಾಗಿ, ಎಂತವರೂ ಕೂಡ ಸಾಮಾನ್ಯ ವರ್ತುಲಾಕಾರದ ಮಂಡಲ ಚಿತ್ರಗಳ ರಚನೆ ಮಾಡಬಹುದು. ಪೆನ್ಸಿಲ್, ಪೆನ್ನು, ಡ್ರಾಯಿಂಗ್, ಕೈವಾರ, ಕೋನಮಾಪಕ, ಕುಂಚ–ಪೇಂಟಿಂಗ್ ಬಣ್ಣಗಳು, ರಂಗೋಲಿ, ಬಣ್ಣದ ಪುಡಿಗಳು ಹೀಗೆ ಹತ್ತು ಹಲವು ಮಾಧ್ಯಮಗಳನ್ನು ಬಳಸಿ ಮಂಡಲ ಚಿತ್ರಗಳನ್ನು ಬರೆಯಬಹುದು.ಅತ್ಯಂತ ಸರಳವಾದ ವರ್ತುಲ, ಚೌಕ, ತ್ರಿಕೋನ ಮಾದರಿಯ ರೇಖಾಚಿತ್ರಗಳಿಂದ ಒಂದೇ ಮಾದರಿಯಲ್ಲಿ ಪ್ರಾರಂಭಿಸಿ ಅಭ್ಯಸಿಸಿದರೆ ಅಥವಾ ಬಣ್ಣಗಳನ್ನು ತುಂಬುವ ರೂಡಿ ಮಾಡಿಕೊಂಡರೆ ಎಂತವರಿಗೂ ಕ್ರಮೇಣ ಮಂಡಲಗಳ ಹುಚ್ಚು ಹಿಡಿಯಲು ಎಷ್ಟು ಸಮಯವೂ ಬೇಕಾಗಿಲ್ಲ.ಮಾನಸಿಕ ನೆಮ್ಮದಿ ಮತ್ತು ಧನಾತ್ಮಕ ಶಕ್ತಿಯ ಮೌಲ್ಯವನ್ನು ಹೊಂದಿರುವ ಈ ಮಂಡಲಗಳಿಗೆ ಅಲಂಕಾರಿಕ ವಸ್ತುಗಳ ನಿರ್ಮಾಣ ಕ್ಷೇತ್ರದಲ್ಲಿ ಎಲ್ಲಿಲ್ಲದ ಬೇಡಿಕೆ. ಆಫೀಸು, ಆಸ್ಪತ್ರೆ, ಹೋಟೆಲು ಮನೆಗಳ ಗೋಡೆಗಳು ಸುಂದರವಾದ ಮಂಡಲಗಳಿಂದ ಅಲಂಕೃತಗೊಳ್ಳುತ್ತಿವೆ.ಇಂದಿನ ಕಲಾವಿದರಿಗೆ ಮಂಡಲ ರಚನೆ ಉದ್ಯೋಗವನ್ನೂ ಸಹ ಸೃಷ್ಟಿಸಿದೆ. ಇಂದಿನ ಮಾರುಕಟ್ಟೆಯ ಹಲವು ಉತ್ಪನ್ನಗಳ ಮೇಲೆ ಮಂಡಲ ಚಿತ್ರಗಳಿರುವುದುನ್ನು ಗಮನಿಸಬಹುದು. ಧಾರ್ಮಿಕ ವಿಧಿ ವಿಧಾನಗಳಾಚೆ

ಕರ್ನಾಟಕದ ದೇಶೀ ಚಿತ್ರಕಲೆ ಹಸೆ ಚಿತ್ತಾರ ರವಿರಾಜ್ ಸಾಗರ್

ಮಂಡಲ ರಚನೆಯ ಮೊಬೈಲ್ ಆಪ್‌ಗಳೂ ಸಹ ಮೊಬೈಲಲ್ಲಿ ಸಿಗುತ್ತಿದ್ದು ಜಾಗತಿಕವಾಗಿ ಮಂಡಲ ರಚನೆ ಬಳಕೆಯಿದೆ.

ರಾಜಸ್ತಾನದ ಮಾಂಡನಾ ಕಲೆ

ವರ್ಲಿಯಂತೆ ಕಂಡುಬರುವ ರಾಜಸ್ತಾನದ ಮಾಂಡನ ಕಲೆಯೂ ಸಹ ಭಾರತದ ಪುರಾತನ ಕಾಲದ ದೇಶಿ ಚಿತ್ರಕಲೆಯಾಗಿದೆ.ಇದು ಸಹ ಮಹಿಳೆಯರು ಹಬ್ಬಗಳಿಗೆ ನೆಲದ ಮೇಲೆ ಮತ್ತು ಗೋಡೆಗಳ ಮೇಲೆ ಬಿಡಿಸುವ ಚಿತ್ರಕಲೆಯಾಗಿದೆ. ಮಂಡಲ ಕಲೆಗಿಂತ ಒಂದಿಷ್ಟು ವಿಭಿನ್ನವಾಗಿದ್ದು ಹಸೆಚಿತ್ತಾರ,ವರ್ಲಿ ಕಲೆಯ ಕೆಲವು ಸಮಾನ ಅಂಶಗಳನ್ನು ಸಹ ಹೊಂದಿದೆ. ಇಲ್ಲಿಯೂ ಮಾಂತ್ರಿಕ ಶಕ್ತಿಯ ನಂಬಿಕೆ , ಸಂಪ್ರದಾಯಿಕ ರೂಢಿ, ಸ್ತ್ರೀ ಅಭಿವ್ಯಕ್ತಿ ಕಂಡುಬರುತ್ತದೆ. ಚೌಕ,ತ್ರಿಭುಜ,ವೃತ್ತಗಳ ಆಕಾರ ಬಳಕೆಯ ರೇಖೆಗಳ ಸಂಯೋಜನೆಯಿದೆ.

ಮಾಂಡನಾ ಎಂದರೆ ಅಲಂಕಾರ ಎನ್ನುವ ಅರ್ಥವಿದೆ.ರಾಜಸ್ತಾನದ ಸ್ತ್ರೀಯರು ಹಬ್ಬಗಳಿಗೆ ಗೋಡೆ, ನೆಲದ ಅಲಂಕಾರಕ್ಕೆ ಕಂಡುಕೊಂಡ ಸಾಂಪ್ರದಾಯಿಕ ಚಿತ್ರಕಲೆಯೇ ಮಾಂಡನಾ ಆಗಿದೆ. ಚೌಕ ,ಚತುರ್ಭೂಜ ಚಿತ್ರಗಳು ಸಮೃದ್ದಿಯ ಸಂಕೇತವಾಗಿದೆ. ದೀಪಾವಳಿ ಹಬ್ಬಕ್ಕೆ ಹೆಚ್ಚಾಗಿ ಈ ಬಗೆಯ ಚಿತ್ತಾರ ಬರೆಯುತ್ತಾರೆ. ವಾಮಾಚಾರ,ಅತೀಂದ್ರಿಯ ಶಕ್ತಿಯ ನಂಬಿಕೆಯ ಸಾಂಪ್ರದಾಯಿಕ ಚಿತ್ತಾರಗಳು ಸಹ ಕಂಡುಬರುತ್ತದೆ.ಹೂ,ಎಲೆಗಳ ಚಿತ್ತಾರವು ಸಾಮಾನ್ಯವಾಗಿ ಕಂಡುಬರುತ್ತದೆ.

ಬಿಹಾರದ ಮಧುಬನಿ ಚಿತ್ರಕಲೆ

ಭಾರತದ ಹಲವೆಡೆ ಕರ್ನಾಟಕ ಹಸೆಚಿತ್ತಾರ ಕಲೆಯಂತೆಯೇ ವಿನ್ಯಾಸದಲ್ಲಿ ಕೆಲವು ಅಂಶಗಳನ್ನು ಹೋಲುವ ಬೇರೆ ಬೇರೆ ದೇಶೀ ಚಿತ್ತಾರ ಕಲಾ ಮಾದರಿಗಳು ಇವೆ.ಅವುಗಳಲ್ಲಿ ಬಿಹಾರದ ಮಧುಬನಿ ಚಿತ್ರಕಲೆ ವಿಶಿಷ್ಟವಾದ್ದಾಗಿದೆ. ಮಧುಬನಿ ಇನ್ನಷ್ಟು ಮುಂದುವರಿದ ವರ್ಣವಿನ್ಯಾಸ ಹೊಂದಿದ್ದು ದಾರ್ಮಿಕ ಆಚರಣೆಯ ಮೂಲದ ಕಲೆಯೇ ಆಗಿದೆ. ಬಿಹಾರದ ಮಿಥಿಳಾ ಕಲೆಯೆಂದೂ ಕರೆಯಲಾಗುವ ಮಧುಬನಿ ವಿನ್ಯಾಸದಲ್ಲಿ ಸಾಕಷ್ಟು ವೈವಿಧ್ಯತೆಯೊಂದಿಗೆ ಆಕರ್ಷಣೆಗೆ ಹೆಚ್ಚಿ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಮದುವೆ ,ಹಬ್ಬಗಳಿಗೆ ಗೃಹ ಅಲಂಕಾರಗಳಿಗೆ ಮಧುಬನಿ ಕಲೆ ಅಲ್ಲಿ ಜನಪ್ರಿಯವಾಗಿತ್ತು. ಕೃಷ್ಣ ರುಕ್ಮಿಣೀ ಅಲ್ಲಿ ಆಕರ್ಷಕ ಕೇಂದ್ರಬಿಂದುವಾದ ಮೇಲೆ ಮತ್ತಷ್ಟು ಜನಪ್ರಿಯತೆ ,ವ್ಯಾಪಕತೆ ಪಡೆದು ಧಾರ್ಮಿಕ ಮಜಲುಗಳನ್ನು ಪಡೆದು ಅಲ್ಲಿನ ಎಲ್ಲ ವರ್ಗಗಳಲ್ಲೂ ಜನಪ್ರಿಯವಾಗಿ ಬೆಳೆಯಿತು. ಆದರೆ ಹಸೆಚಿತ್ತಾರ ಶಿವ ಪಾರ್ವತಿಯನ್ನು ದಂಡಿಗೆಯೊಳಗೆ ಚಿತ್ರಿಸುತ್ತಾ ಬುಡಕಟ್ಟು ಆಚರಣೆ ಸಂಪ್ರದಾಯಗಳ ಭಾಗವಾಗಿಯೇ ಉಳಿದು ಈಗ ಮಲೆನಾಡಿನ ಕೆಲವೇ ಸಮುದಾಯಗಳಲ್ಲಿ ಕಂಡುಬರುವ ಕಲಾಪರಂಪರೆಯಾಗಿ ಉಳಿದಿದೆ. ಮಧುಬನಿಯಲ್ಲಿ ಬರುವ ಚೌಕಟ್ಟು ,(ಪ್ರೇಂ)ನಲ್ಲಿ ಕಂಡುಬರುವ ರೇಖಾವಿನ್ಯಾಸ ,ಜ್ಯಾಮಿತಿಯ ಅಂಶಗಳ ಬಳಕೆ ಹಸೆಚಿತ್ತಾರದಲ್ಲೂ ಇದೆ. ಮದುವೆ ಸಂಪ್ರದಾಯಕ್ಕೆ ಅಲ್ಲಿಯೂ ಸಹ ಮಧುಬನಿ ಚಿತ್ತಾರ ರೂಡಿಯಲ್ಲಿದೆ. ಮಧುಬನಿ ಚಿತ್ತಾರವು ಜಿಯೋಗ್ರಾಫಿಕಲ್ ಇಂಡಿಕೇಶನ್ ಟ್ಯಾಗ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾದ ಸಾಂಪ್ರದಾಯಿಕ ಭಾರತೀಯ ಚಿತ್ರಕಲೆಯಾಗಿದೆ.

ಒರಿಸ್ಸಾದ ಸೊರಾ ಚಿತ್ರಕಲೆ

ಒಡಿಸ್ಸಾದಲ್ಲಿ ಕಂಡುಬರುವ ಸೊರಾ ಚಿತ್ರಕಲೆ ಸಹ ಬುಡಕಟ್ಟು ಚಿತ್ರಕಲಾ ಪರಂಪರೆಯೇ ಆಗಿದ್ದು ವರ್ಲಿ ಚಿತ್ರಕಲಾ ವಿನ್ಯಾಸಕ್ಕೆ ಸಮೀಪದಲ್ಲಿದೆ. ಅಲ್ಲಿಯೂ ಧಾರ್ಮಿಕ ಆಚರಣೆ, ಗೃಹ ಅಲಂಕಾರಕ್ಕೆ ಚಿತ್ರಬರೆಯಲಾಗುತ್ತದೆ.

ವಿನ್ಯಾಸದಲ್ಲಿ ಅಂತಹ ವಿಶಿಷ್ಟತೆ ಸಂಕೀರ್ಣತೆಯೇನು ಕಂಡುಬರುವುದಿಲ್ಲ. (ಚಿತ್ರಗಳಿಗೆ ವಸೀ ನೋಡಿ ಹಸೆಚಿತ್ತಾರ ವೈವಿಧ್ಯತೆ ಅಧ್ಯಾಯ ನೋಡಿ) ಅಲ್ಲದೇ ಮಧ್ಯಪ್ರದೇಶ ,ರಾಜಸ್ತಾನ,ಕೇರಳ,ತಮಿಳುನಾಡು ಮತ್ತಿತರ ಹಲವು ರಾಜ್ಯಗಳ ಕೆಲವು ಭಾಗದಲ್ಲಿ ಸಹ ಆದಿವಾಸಿ ಬುಡಕಟ್ಟುಗಳಲ್ಲಿ ಸರಳವಾಗಿ ರೇಖೆಗಳಲ್ಲಿ ,ತ್ರಿಭುಜಗಳ ಆಕಾರ ಬಳಸಿ ಬಿಡಿಸುವ ಕೆಲವು ಚಿತ್ತಾರ ಮಾದರಿಗಳಿವೆ.

ದೇಶಿ ಚಿತ್ರಕಲೆಗಳು ಮತ್ತು ಸ್ತ್ರೀ ಅಭಿವ್ಯಕ್ತಿ

ನಿಸರ್ಗವೇ ಒಂದು ಜೀವಂತ ಕಲೆಯೆನ್ನಬಹದು. ಬಣ್ಣ ಬಣ್ಣಗಳಿಂದ ಕಂಗೊಳಿಸುವ ಹೂವಿಗೆ ಮಾನವನ ಬಿಡಿಸಿದ ಕೃತಕ ಬಣ್ಣಗಳ ಹೂವಿನ ಚಿತ್ರ ಸಮನಾಗದು. ಜೀವಂತ ರೂಪ ಚಿತ್ರಕಲೆ ನಿಸರ್ಗವೇ ಆಗಿದೆ. ಮಾನವ ಕಂಡುಕೊಂಡ ಚಿತ್ರಕಲೆಗಳೆಲ್ಲವೂ ಮಾನವನ ನಿಸರ್ಗ ಅನುಕರಣೆಯಿಂದ ಹುಟ್ಟಿ ಬೆಳೆದ ವಿಶಿಷ್ಟ ಸೃಜನಶೀಲ ಆವಿಷ್ಕಾರವೇ ಆಗಿದೆ. ಒಂದು ವೈಶಿಷ್ಟತೆಯೆಂದರೆ ದೇಶೀ ಚಿತ್ರಕಲೆಗಳ ಮೂಲವನ್ನು ಅಧ್ಯಯನ ಮಾಡಿದಾಗ ತಿಳಿದು ಬರುವ ಸಂಗತಿಯೆಂದರೆ ಬಹುತೇಕ ದೇಶೀಚಿತ್ರಕಲೆಗಳು ಸ್ತ್ರೀಯರ ಅಭಿವ್ಯಕ್ತಿ ಕಲೆಯಾಗಿದೆ. ಕರ್ನಾಟಕ ನೆಲಮೂಲದ ದೇಶಿ ಚಿತ್ರಕಲೆಗಳೆಂದೆ ಗುರುತಿಸಬಹುದಾದ ಹಸೆಚಿತ್ತಾರ ಸಹ ಪ್ರಧಾನವಾಗಿ ಸ್ತ್ರೀಯರು ಕಂಡುಕೊಂಡ ದೇಶೀ ಚಿತ್ರಕಲೆಯಾಗಿದೆ.ಗೃಹಕಾರ್ಯಗಳಿಗೆ ಸೀಮಿತವಾಗಿದ್ದ ಸ್ತ್ರೀ ತನ್ನ ಏಕತಾನತೆಯನ್ನು ಹೋಗಲಾಡಿಸಿಕೊಳ್ಳಲು ಹಂಬಲಿಸಿಂತೆಲ್ಲ ಜಾನಪದಗಳು, ಚಿತ್ತಾರ ಕಲೆಗಳು ಅವಳ ಅಭಿವ್ಯಕ್ತಿಯಾಗಿಯೇ ಬೆಳೆದಿವೆ.ಸಂಸ್ಕೃತಿ ಸಂಪ್ರದಾಯಗಳ ಹುಟ್ಟುವಿಕೆಯಲ್ಲಿ ಸ್ತ್ರೀ ಪಾತ್ರ ಪ್ರಧಾನವಾದುದು.ಗೃಹಾಲಂಕಾರಕ್ಕೂ ಚಿತ್ತಾರ ಕಂಡುಕೊಂಡ ಸ್ತ್ರೀ ವೈವಿಧ್ಯಮಯ ವಿನ್ಯಾಸಗಳನ್ನು ತನ್ನ ನೆಲಮೂಲದ ಜ್ಞಾನದಿಂದ ಕಲ್ಪನಾಶೀಲತೆಯಿಂದ ಸೃಜಿಸಿದ್ದಾಳೆ.

ಹಸೆಚಿತ್ತಾರದ ಪ್ರತಿ ಎಳೆಗಳ ವಿನ್ಯಾಸವನ್ನೂ ಸ್ತ್ರೀ ನೆಲೆಗಟ್ಟಿನ ಒಳಗಣ್ಣಿನಿಂದ ನೋಡಿದಾಗ ಹಲವಾರು ಅರ್ಥಗಳನ್ನು ಹುದುಗಿಸಿಕೊಂಡದ್ದು ಗಮನಕ್ಕೆ ಬರುತ್ತದೆ. ಹಸೆಚಿತ್ತಾರದ ಮೂಲಾಂಶಗಳಲ್ಲಿ ಏಣಿ,ಬಾಚಣಿಗೆ,ಗೂಡಿನಲ್ಲಿ ಮೊಟ್ಟೆ

ಇಡುತ್ತಿರುವ ಕೋಳಿ, ಸೂರ್ಯ ಚಂದ್ರರನ್ನು,ಶಿವ ಪಾರ್ವತಿಯರನ್ನೂ ಚಿತ್ರಿಸುವಿಕೆಗೆ ಚಿತ್ತಾರಗಿತ್ತಿಯರು ಹಲವಾರು ಅರ್ಥವಿವರಣೆ ನೀಡುತ್ತಾರೆ.

ಹಸೆ, ಹಲಿ,ಹಸಗರ, ಹಚ್ಚೆ, ಎಲ್ಲ ದೇಶೀ ಚಿತ್ರಕಲೆಗಳೆಲ್ಲವುಗಳ ಶಬ್ದೋತ್ಪತ್ತಿ 'ಹ' ಕಾರದಿಂದ ಶುರುವಾಗಿರುವುದು ಮತ್ತೊಂದು ಗಮನಾರ್ಹ ವಿಷಯ. ಹೆಂಗಸರ ಸೌಂಧರ್ಯ ಪ್ರಜ್ಞೆಯಿಂದ ಅರಳಿದ ಕಲೆಯಾದ ಚಿತ್ರಕಲೆಗಳಿಗೆ ಅವರು ನೆಲಮೂಲದಿಂದ ಪಡೆದ ಜ್ಞಾನದೊಂದಿಗೆ ತಮ್ಮದೇ ವಿಶಿಷ್ಟ ಶೈಲಿ ಕಂಡುಕೊಂಡು ತಮ್ಮದೇ ಆದ ನೆಲಮಲದ ಪ್ರಾದೇಶಿಕ ಭಾಷೆಯ ಹೆಸರಿನಿಂದ ಕರೆದಿದ್ದು ಕಂಡುಬರುತ್ತದೆ. ದೀವರು ಹಸೆಚಿತ್ತಾರ ಅಂದರೆ, ಹಾಲಕ್ಕಿ ಒಕ್ಕಲಿಗರು,ಗಾಮೊಕ್ಕಲಿಗರು,ಕರೆಒಕ್ಕಲಿಗರು ಹಲಿ,ಹಸಗರ ಎಂದು ಕರೆಯುತ್ತಾರೆ.ಮಹಾರಾಷ್ಟ್ರದಲ್ಲಿ ಇದೇ ಮಾದರಿ ಕಲೆಯನ್ನು ವರ್ಲಿ ಎಂದು ಕರೆದಿದ್ದಾರೆ. ಅಲ್ಲಿಯೂ ಸಹ ಪ್ರಧಾನವಾಗಿ ಸ್ತ್ರೀಯರೇ ಹೆಚ್ಚಾಗಿ ಚಿತ್ರಬಿಡಿಸುವರು.

ಆಚರಣೆಯ ಮೂಲದ ಕಲೆಗಳಲ್ಲಿ ಸ್ತ್ರೀಯರ ಪಾತ್ರ ಪ್ರಧಾನವಾದ್ದಾಗಿದೆ. ಗೃಹಕಾರ್ಯಗಳಲ್ಲಿ ಮಹಿಳೆಯರದೇ ಪ್ರಮುಖ ಹೊಣೆಗಾರಿಕೆಗಳು ಇರುವುದರಿಂದ ಹಬ್ಬಗಳಲ್ಲಿ ಬಹುತೇಕ ಕೆಲಸಗಳನ್ನು ಮಹಿಳೆಯರೇ ನಿರ್ವಹಿಸುವುದರಿಂದಾಗಿ ಮನೆಯ ಸ್ವಚ್ಚತೆಯ ಕಾರ್ಯದಿಂದ ಅಲಂಕಾರದ ಕಾರ್ಯಗಳೆಲ್ಲವನ್ನೂ ಸ್ತ್ರೀಯರೆ ಹೊಣೆಹೊರುತ್ತಿದ್ದರು.ಮಲೆನಾಡಿನಲ್ಲಿ ನಿಸರ್ಗ ಆರಾಧನೆ ಮೂಲದ ಭೂಮಣ್ಣಿ ಪೂಜೆ, ಮಹಾನವಮಿ,ನಾಗಾರಾಧನೆ,ದೀಪಾವಳಿಗೆ ಮನೆಯ ಗೋಡೆಗಳನ್ನು ಅಲಂಕರಿಸುವ ಶಾಸ್ತ್ರಗಳೆ ಇವೆ. ಮದುವೆ ಶಾಸ್ತ್ರದ ಹಸೆಗೊಡೆ ಅಲಂಕಾರವನ್ನೂ ಸಹ ಶಾಸ್ತ್ರಬದ್ದವಾಗಿಯೇ ಬರೆಯುವ ಚಿತ್ತಾರಗಿತ್ತಿಯರು ತಮ್ಮ ನೆಲಮೂಲದ ಒಳನೋಟಗಳನ್ನು , ದಿನದ ಏಕತಾನತೆಯಿಂದ ಹೊರಬಂದು ಬದುಕನ್ನು ಸಂಭ್ರಮಿಸುವಿಕೆಯನ್ನು ,ಬಯಕೆಗಳನ್ನು, ಲೌಕಿಕ ,ಅಲೌಕಿಕ ಸಂಗತಿಗಳ ನಿಗೂಡತೆಯನ್ನು ಎಳೆಗಳ ಮೂಲಕವೇ ಸಾಂಕೇತಿಸಿ ಚಿತ್ರಿಸಿರುವುದು ವಿವಿಧ ವಿನ್ಯಾಸದ ಹಸೆಚಿತ್ತಾರಗಳಲ್ಲಿ ಕಂಡುಬರುತ್ತದೆ. ಚಕ್ಕಳಮುಕ್ಕಳಿ ಚೆನ್ನಾಣಿ ಹಸೆಚಿತ್ತಾರ ,ತೇರು ಹಸೆಚಿತ್ತಾರಗಳಲ್ಲಿ ಹೆಚ್ಚು ವಿಶಿಷ್ಟ ಸಾಂಕೇತಿಕ ತಾತ್ವಿಕ ಸಂಗತಿಗಳಿವೆ.

ಹಸೆ ಚಿತ್ತಾರ ಮತ್ತು ಸಾಂಪ್ರದಾಯಿಕ ಆಚರಣೆಗಳ

ಅಂತರ್ಗತ ತತ್ವಶಾಸ್ತ್ರ

ಹಸೆಚಿತ್ತಾರ ಕೇವಲ ರೇಖೆ ಮತ್ತು ಬಣ್ಣಗಳ ಸಂಯೋಜನೆಯಲ್ಲ. ಅದು ತನ್ನೊಳಗೆ ಜನಜೀವನ,ನಂಬಿಕೆ ಸಂಪ್ರದಾಯಿಕ ಆಚರಣೆಗಳ ತಾತ್ವಿಕತೆಯನ್ನು ಅಂತರ್ಗತಗೊಳಿಸಲಾಗಿರುವ ಸಾಂಪ್ರದಾಯಿಕ ಚಿತ್ರಕಲೆಯಾಗಿದೆ. ಹಸೆಚಿತ್ತಾರ ಮೇಲ್ನೋಟಕ್ಕೆ ಇತ್ತೀಚಿನ ವಿಕಸಿತ ಚಿತ್ರಕಲೆಗಳ ಮಾದರಿಗಳನ್ನು ಒಳಗೊಳ್ಳದ ಗ್ರಾಮೀಣ ಜನಜೀವನದ ಸಾಂಪ್ರದಾಯಿಕ ಆಚರಣೆಗಳ ಮೂಲದ ಸರಳ ಚಿತ್ತಾರ ಮಾದರಿಯೆಂದುಕೊಳ್ಳುವವರೆ ಬಹಳ.ಹಸೆಚಿತ್ತಾರದ ವಿನ್ಯಾಸಗಳನ್ನು ತೀಕ್ಷ್ಣವಾಗಿ ಪರಿಶೀಲಿಸಿ ಆಚರಣೆಗಳ ಹಿನ್ನಲೆಯ ಒಳಗಣ್ಣಿನಿಂದ ನೋಡಿದಾಗ ಅಲ್ಲಿರುವ ಬುಡಕಟ್ಟು ಮೂಲದ ಜನಜೀವನ ಸಂಸ್ಕೃತಿಯ ಅಂತರ್ಗತ ತಾತ್ವಿಕತೆಯನ್ನು ಗ್ರಹಿಸಬಹುದು. ಅಂತಹ ಸಾಂಪ್ರದಾಯಿಕ ಆಚರಣೆಗಳ ನಂಬಿಕೆಗಳು, ಅಂತಃಸತ್ವ ಇರುವುದರಿಂದಲೇ ಹಸೆಚಿತ್ತಾರ ಇಂದಿನ ಆಧುನಿಕ ಜನಜೀವನಯುಗದಲ್ಲೂ ಕೆಲವು ಸಮುದಾಯಗಳು ತಮ್ಮ ಸಂಪ್ರದಾಯವಾಗಿ ಉಳಿಸಿಕೊಂಡಿವೆ.

ಸೌಂದರ್ಯ ಪ್ರಜ್ಞೆ, ಚಿತ್ರಶಾಸ್ತ್ರ ಪರಿಕಲ್ಪನೆಗಳು ,ಬಣ್ಣಗಳ ಅನ್ವೇಷಣೆ ಬೆಳೆದಂತೆಲ್ಲ ವಿಕಾಸವಾದ ಹಲವಾರು ಶೈಲಿಯ ಚಿತ್ರಕಲೆಗಳ ನಡುವೆಯೂ ಯಾವ ಪ್ರಭಾವಕ್ಕೂ ಒಳಗಾಗದೆ ಹಸೆಚಿತ್ತಾರ ಮೂಲ ರೇಖಾಶೈಲಿಯಲ್ಲೇ ಉಳಿಯಲು ಬಹುಮುಖ್ಯ ಕಾರಣವೇ ಹಸೆಚಿತ್ತಾರದಲ್ಲಿ ಆಚಣೆಗಳ ಮೂಲ ನಂಬಿಕೆಗಳು, ಸಂಪ್ರದಾಯಿಕ ತಾತ್ವಿಕ ಚಿಂತನೆಗಳು ಅಡಕವಾಗಿರುವುದು. ಕರ್ನಾಟಕವಷ್ಟೇ ಅಲ್ಲದೆ ದೇಶದ ಬಹುತೇಕ ರಾಜ್ಯಗಳಲ್ಲಿ ಹಸೆಚಿತ್ತಾರದಂತಹ ರೇಖಾ ಪ್ರಧಾನ ಸಾಂಪ್ರದಾಯಿಕ ಚಿತ್ರಕಲೆಗಳಿವೆ. ಗ್ರಾಮೀಣ ಜನರ ಬದುಕಿನ ಆಚರಣೆಗಳ ಭಾಗವಾಗಿ ಬೇರೂರಿರುವ ಹಸೆಚಿತ್ತಾರ ,ಹಲಿ,ಹಸಗರ ,ಶೇಡಿ ಚಿತ್ತಾರಗಳು ಜನರ ಬದುಕಿನ ಆಚರಣೆ ನಂಬಿಕೆಗಳೊಂದಿಗೆ ಬೆಸೆದುಕೊಳ್ಳುತ್ತಾ ಅಭಿವ್ಯಕ್ತಗೊಂಡಿವೆ.

ಎಳೆಗಳನ್ನು ಹೊಡೆಯುವ ಆರಂಭಿಕ ಶಾಸ್ತ್ರದ ಮೂಲಕ ಆರಂಭವಾಗುವ ಮದುವೆ ಶಾಸ್ತ್ರದ ಹಸೆಗೋಡೆ ಚಿತ್ತಾರವು ಫಲವಂತಿಕೆಯ ಆಚರಣೆಗಳ ತತ್ವಚಿಂತನೆ ಒಳಗೊಂಡಿದೆಯಲ್ಲದೆ ಗಂಡು ಹೆಣ್ಣಿನ ಸಹಸಂಬಂಧಗಳು,ಹೊಂದಾಣಿಕೆ, ಕೌಟುಂಬಿಕ ಬದ್ದತೆ,ನೀತಿ ನಿಯಮಗಳು, ಲೈಂಗಿಕತೆ,ಸಂತಾನೋತ್ಪತ್ತಿ ಬಯಕೆ,ನಿಸರ್ಗದೊಂದಿಗಿನ ಸಹಸಂಬಂಧ,ಧಾರ್ಮಿಕ ನಂಬಿಕೆಗಳ ತಾತ್ವಿಕ ಚಿಂತನೆಗಳು, ಅಮೂರ್ತ ಪರಿಕಲ್ಪನೆಗಳ ಮೂರ್ತ ಅಭಿವ್ಯಕ್ತೀಕರಣ, ಧರ್ಮ ಅರ್ಥ ಕಾಮ ಮೋಕ್ಷಗಳ ತತ್ವಶಾಸ್ತ್ರವೇ ಹಸೆಚಿತ್ತಾರದಲ್ಲಿದೆ. ಮೊದಲ ನೋಟಕ್ಕೆ ಇದನ್ನೆಲ್ಲ ಗ್ರಹಿಸಲು ಆಗದು. ಹಸೆಚಿತ್ತಾರವನ್ನು ಕಡ್ಡಾಯವಾಗಿ ಬಿಡಿಸಿಯೇ ಮದುವೆ ಶಾಸ್ತ್ರ ಮಾಡುವ ಮಲೆನಾಡಿನ ಬುಡಕಟ್ಟು ಜನಸಂಸ್ಕೃತಿಯ ಮದುವೆ ಆಚರಣೆಗಳನ್ನು ,ಪದ್ದತಿಗಳನ್ನು ಪರಿಶೀಲಿಸಿದಾಗ ಮಾತ್ರ ಅವರ ಹಸೆಚಿತ್ತಾರದ ತಾತ್ವಿಕತೆ ಅರ್ಥವಾಗುತ್ತದೆ.

ಗಂಡು ,ಹೆಣ್ಣಿನ ಮನೆಯಲ್ಲಿ ಮದುವೆಯ ಗಂಡು ಹೆಣ್ಣಿನಿಂದಲೇ ಶಾಸ್ತ್ರೋಕ್ತವಾಗಿ ಮೊದಲ ಎಳೆ ಹೊಡೆಸಲಾಗುತ್ತದೆ. ಗಂಡು ಹೆಣ್ಣು ಮದುವೆಯಾಗುವವರೆಗೂ ನೋಡುವಂತಿಲ್ಲ ಎನ್ನುವ ನೈತಿಕ ನಿಯಮ ಪಾಲಿಸಲಾಗುತ್ತಿದ ಆ ಕಾಲದಿಂದ ಪಾಲಿಸಿಕೊಂಡು ಬಂದ ಈ ಎಳೆ ಹೊಡೆಯುವ ಶಾಸ್ತ್ರದಲ್ಲೇ ಮದುವೆಗೆ ವಧುವರರನ್ನು ಮಾನಸಿಕವಾಗಿ ಅಣಿ ಮಾಡುತ್ತಾ ಮದುವೆ ಸಂಭ್ರಮಕ್ಕೆ ತೆರೆದುಕೊಳ್ಳುವಂತೆ ಮಾಡಲಾಗುವ ಮನೋವೈಜ್ಞಾನಿಕತೆ, ತಾತ್ವಿಕತೆಯಿದೆ. ಮೊದಲ ಎಳೆಹೊಡೆದ ನಂತರ ಚಿತ್ತಾರಗಿತ್ತಿಯರು ಮತ್ತೆ ಮತ್ತೆ ಅಳಿಸಿ ಚಿತ್ತಾರ ಬರೆಯಲು ಅವಕಾಶವಿಲ್ಲ. ಇಡೀ ಚಿತ್ತಾರವನ್ನು ಚಿತ್ತಾಗಿತ್ತಿ ತನ್ನೊಳಗೆ ಧ್ಯಾನಿಸಿಕೊಂಡು ತಪ್ಪಾಗದಂತೆ ಯೋಜಿಸಿಕೊಂಡು ಚಿತ್ತಾರ ಬಿಡಿಸಬೇಕೆಂಬ ನಿಯಮವಿದೆ. ಮದುವೆ ಸಂಬಂಧವೆಂಬುದು ಮತ್ತೆ ಮತ್ತೆ ಅಳಿಸಲಾಗದ ,ಬಿಡಿಸಲಾಗದ ಸಂಬಂಧವೆಂಬುದು ಹಸೆಚಿತ್ತಾರಗಿತ್ತಿಯರು ಹಸೆಚಿತ್ತಾರದ ಮೂಲಕ ಸಾರುವ ತಾತ್ವಿಕತೆಯಾಗಿದೆ. ಮದುವೆಗೆ ಹಸೆಗೋಡೆ ಚಿತ್ತಾರವನ್ನು ವಧುವರರ ಹೆತ್ತವರು

ಬಿಡಿಸುವಂತಿಲ್ಲ. ಬೇರೆ ಬೇರೆ ಅಕ್ಕಪಕ್ಕದ ಚಿತ್ತಾರಗಿತ್ತಿಯರನ್ನು ಆಹ್ವಾನಿಸಬೇಕೆಂಬ ನಿಯಮವಿದೆ. ಮದುವೆಯಂತಹ ಮಂಗಳಕಾರ್ಯಕ್ಕೆ ಊರಿನ ಎಲ್ಲ ಸಮುದಾಯಗಳ ಒಳಗೊಳ್ಳುವಿಕೆ ಅತಿ ಮುಖ್ಯ. ಗ್ರಾಮೀಣ ಜನಸಮುದಾಯಗಳು ಸಾಮುದಾಯಿಕತೆಗೆ ಮನ್ನಣೆ ನೀಡುತ್ತಾರೆ. ಮದುವೆಯನ್ನು ಊರಿನ ಹಬ್ಬದಂತೆಯೇ ಎಲ್ಲ ಸೇರಿಕೊಂಡು ಸಂಭ್ರಮಿಸುವರು. ಮದುವೆಯಂದು ರಾತ್ರಿಯಿಡೀ ನಿದ್ದೆಯನ್ನೆ ಮಾಡದೆ ಮದುವೆ ಮೆರವಣಿಗೆ ,ವಿವಿಧ ವಿಧಿ ವಿಧಾನ ,ಸಂಪ್ರದಾಯ ಆಚರಿಸುವರು.

ಹಸೆಗೋಡೆಚಿತ್ತಾರದಲ್ಲಿ ಕಡ್ಡಾಯವಾಗಿ ಮದುವೆಯ ಮೆರವಣಿಗೆ, ದಿಬ್ಬಣದ ಜನರನ್ನು, ಓಲಘದವರನ್ನು ಚಿತ್ರಿಸಲಾಗುತ್ತದೆ. ಮಧುಮಕ್ಕಳನ್ನು ಮೆರವಣಿಗೆ ಮಾಡುವಂತೆಯೂ ಹಸೆಗೋಡೆ ಚಿತ್ತಾರದಲ್ಲಿ ಚಿತ್ರಿಸುತ್ತಾರೆ. ಜೋಡಿ ಎಳೆ, ಬಲಕ್ಕೆ ವಾಲಿದ ರೇಖೆಗಳ ನಿಲಿ ಸಾಲುಗಳು, ಗಂಡೆಳೆ ,ಹೆಣ್ಣೆಳೆಗಳನ್ನು ಸಂಧಿಸುವಂತೆ ಸಾಂಖೇತಿಸುವ ಚಿತ್ರಿಸುವ ನಿಲಿಕೊಚ್ಚುಗಳು, ಜಲ್ಲೆ ಸಾಲುಗಳು,ಪಪ್ಪಳಿ,ಅರೆಪಪ್ಪಳಿಗಳನ್ನು ಚೌಕಗಳ ವಿನ್ಯಾಸದಲ್ಲಿ ಚಿತ್ರಿಸಿ ಅವುಗಳಿಗೆ ತಮ್ಮದೆ ಆದ ಹೆಸರುಗಳನ್ನೂ ಕರೆದಿರುವುದೆಲ್ಲವನ್ನೂ ಪರಿಶೀಲಿಸಿದಾಗ ಆ ಎಲ್ಲಾ ರೇಖೆಗಳ ಹಿಂದೆ ಅದನ್ನು ಸೃಜಿಸಿದ ಚಿತ್ತಾರಗಿತ್ತಿ ಮದುವೆ ಶಾಸ್ತ್ರದ ಕುರಿತಾಗಿ ತನ್ನದೇ ಆದ ತಾತ್ವಿಕ ನಿಲುವುಗಳನ್ನು ರೇಖೆಗಳ ಸಂಯೋಜನೆಯಲ್ಲೆ ಅಭಿವ್ಯಕ್ತ ಪಡಿಸಿದ್ದಾಳೆಂದು ಪುಷ್ಟೀಕರಿಸುತ್ತದೆ. ಹಸೆಗೋಡೆ ಚಿತ್ತಾರವನ್ನು ಈಗಲೂ ಹೆಚ್ಚಾಗಿ ಮದುವೆಯ ಸಂಪ್ರದಾಯವಾಗಿ ಪ್ರಧಾನವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲಿಸುವ ಮಲೆನಾಡಿನ ದೀವರ ಸಮುದಾಯಗಳು , ಹಲಿ ,ಹಸಗರ ಎನ್ನುವ ಹೆಸರಿನಲ್ಲಿ ಬರೆಯುವ ಅಲ್ಲಲಿ ಕಾಣಸಿಗುವ ಹಾಲಕ್ಕಿಗರು,ಕರೆಒಕ್ಕಲಿಗರು,ಮೋಘವೀರರು,ಹಸಲರು,ಮಡಿವಾಳರು,ಕಲೆವೆಡೆ ಹವ್ಯಕರು ಮತ್ತಿತರ ಬುಡಕಟ್ಟು ಜನಸಮುದಾಯಗಳು ಮಲೆನಾಡು ,ಕರಾವಳಿತೀರದಲ್ಲಿ ಸಂಪ್ರದಾಯಬದ್ದ ಹಸೆಗೋಡೆ ಚಿತ್ತಾರ ಬರೆಯುವಿಕೆಯನ್ನು ಉಳಿಸಿಕೊಂಡಿದ್ದಾರೆ.

ಮಹಾರಾಷ್ಟ್ರದ ವರ್ಲೀ ಚಿತ್ತಾರವೂ ಸಹ ಇದೇ ರೀತಿ ಮದುವೆ, ಹಬ್ಬಗಳ ಆಚರಣೆಯ ಸುತ್ತಲೇ ಅಭಿವ್ಯಕ್ತಗೊಂಡು ಬೆಳೆದ ಚಿತ್ತಾರ ಕಲೆಯಾಗಿದೆ. ಚಿತ್ರವೊಂದು ಸಾವಿರ ಪದಗಳಿಗೆ ಸಮ ಎನ್ನುವ ಮಾತಿದೆ. ಹಸೆಚಿತ್ತಾರದಲ್ಲಿಯೂ ಬದುಕಿನ ಸಹಸ್ರಾರು ಮಾತುಗಳಿವೆ. ಅಮೂರ್ತ ಕಲ್ಪನೆಗಳಿವೆ. ಇಂದಿನ ಆಧುನಿಕ ಚಿತ್ರಕಲೆಗಳಿಗೆ ಇಲ್ಲದ ಸಾಂಪ್ರದಾಯಿಕ ಆಚರಣೆಗಳ ತಾತ್ವಿಕತೆ ಹಸೆಚಿತ್ತಾರಕ್ಕಿದೆ. ಇದೇ ಹಸೆಚಿತ್ತಾರದ ಹೆಚ್ಚುಗಾರಿಕೆ.ಮದುವೆ ಹಬ್ಬಗಳ ಸಡಗರ ಸಂಭ್ರಮ,ಬದುಕಿನ ತಾಳ್ಮೆ ರಸಾನುಭವ,ಅಬಿವ್ಯಕ್ತಿ,ಕೌಶಲ,ಸಾಮುದಾಯಿಕತೆಯನ್ನೂ ಸಹ ಹಸೆಚಿತ್ತಾರ ಅಂದಿನಿಂದ ಇಂದಿನವರೆಗೂ ಜನಪದರಿಗೆ ಪಸರಿಸಿದೆ.

ಅಧ್ಯಾಯ : 6

ಹಸೆ ಚಿತ್ತಾರದ ಸವಾಲು ಮತ್ತು ಸಾಧ್ಯತೆಗಳು

ಇಂದು ಜಾಗತೀಕರಣ,ಆಧುನಿಕ ತಂತ್ರಜ್ಞಾನ ಡಿಜಿಟಲ್ ಜನಪದವನ್ನ ಸೃಷ್ಟಿಸುತ್ತಿದ್ದು ವಿಶ್ವವನ್ನೇ ಒಂದು ಪುಟ್ಟ ಡಿಜಿಟಲ್‌ಯುಗದ ಜನಪದವನ್ನಾಗಿಸುವ ಮಟ್ಟಕ್ಕೆ ನಮ್ಮನ್ನು ಆವರಿಸಿದೆ. ಜನಜೀವನ ,ಭಾಷೆ,ಸಾಹಿತ್ಯ, ಕಲೆಯ ಮೇಲೂ ಸಹ ತನ್ನ ಪ್ರಭಾವ ಹೆಚ್ಚಿಸಿಕೊಳ್ಳುತ್ತಲೇ ಸಾಗುತ್ತಿದೆ. ಶಿಷ್ಟ ಚಿತ್ರಕಲೆಗಳೆಲ್ಲ ಡಿಜಿಟಲ್ ರೂಪದಲ್ಲಿ ಹೊಸ ಹೊಸ ರೂಪಾಂತರ ಪಡೆಯುತ್ತಿವೆ. ಗ್ರಾಫಿಕ್ಸ್‌ಲೋಕ ವಿಸ್ತರಿಸಿಕೊಂಡು ಅನಿಮೇಶನ್ ಎಲ್ಲೆಡೆ ಬೆಳೆಯುತ್ತಿದೆ.ಹಾಗಾಗಿ ಮೊದಲೇ ಆಧುನೀಕರಿಂದ ನಿರ್ಲಕ್ಷಿಸಲ್ಪಟ್ಟ ದೇಶೀ ಚಿತ್ರಕಲೆಗಳು ಜನಪ್ರಿಯತೆಯನ್ನು ಕಳೆದುಕೊಳ್ಳುವ ಹಂತದಲ್ಲಿವೆ. ಕಾಂಕ್ರೇಟು ಮನೆಗಳಲ್ಲಿ ನೆಲ ಮತ್ತು ಗೋಡೆಯನ್ನು ಹಲವು ಬಗೆಯ ಗ್ರಾನೈಟ್,ಮಾರ್ಬಲ್ ಮತ್ತಿತರವು ಆವರಿಸುತ್ತಿವೆ. ಹಾಗಾಗಿ ಹಬ್ಬ ಹರಿದಿನಗಳಲ್ಲಿ ಅಲಂಕಾರಕ್ಕೆ ಹಾಗೂ ಸಂಪ್ರದಾಯಕ್ಕೆ ಹಸೆಚಿತ್ತಾರ ಬಿಡಿಸುವುದನ್ನು ಕಡೆಗಣಿಸಲಾಗುತ್ತಿದೆ. ಇಂದಿನ ಹಬ್ಬಗಳಲ್ಲಿ ಅಂದಿನಂತೆ ಹಲವು ದಿನಗಳ ಪೂರ್ವ ತಯಾರಿಯಾಗಲಿ,ಸಾಂಪ್ರದಾಯಿಕತೆಯಾಗಲಿ ಕಣ್ಮರೆಯಾಗುತ್ತಿದ್ದು ಸಾಂಪ್ರದಾಯಿಕ ಚಿತ್ರಕಲೆ ಕಲಿಯುವಿಕೆ, ಬಿಡಿಸುವಿಕೆ ಇತ್ತೀಚಿನ ಯುವಪೀಳಿಗೆಯಲ್ಲಿ ಕಡಿಮೆಯಾಗುತ್ತಿದೆ.

ಬದಲಾದ ಜನಜೀವನ ದೃಷ್ಟಿಕೋನ, ಸಂಪ್ರದಾಯದಿಂದ ನಾನಾ ಬಗೆಯ ಜನಪದರ ಸಂಪ್ರದಾಯಿಕ ದೇಶೀ ಚಿತ್ರಕಲೆಗಳು ಇಂದು ಕಣ್ಮರೆಯಾಗಿವೆ. ಕೆಲವೆಡೆ ಸಾಂಪ್ರದಾಯಿ ಹಸೆಚಿತ್ತಾರದಲ್ಲಿ ದೇಶೀಯತೆಯ ಜೊತೆಗೆ ಶಿಷ್ಟ ಚಿತ್ರಕಲಾಮಾದರಿ ಸಂಮಿಶ್ರ ಮಾಡುವ ಅಪಾಯಕಾರಿ ಬೆಳವಣಿಗೆ ನಡೆದಿರುವುದು ಸಹ ಕಂಡುಬರುತ್ತದೆ. ಹಸೆಚಿತ್ತಾರ ತನ್ನದೇ ದೇಶೀ ಮಾದರಿಯಲ್ಲೇ ಹೊಸತನ್ನು ಕಂಡುಕೊಳ್ಳಬೇಕೆ ಹೊರತು ಶಿಷ್ಟಮಾದರಿ, ವರ್ಣವೈವಿಧ್ಯತೆಯತ್ತ ಸಾಗಿ ತನ್ನ ಹೆಚ್ಚುಗಾರಿಕೆಯನ್ನು ಕಳೆದುಕೊಳ್ಳುವುದು ಸಮಂಜಸವಲ್ಲ.ಸಂಪ್ರದಾಯನಿಷ್ಠ ದೀವರು ತಮ್ಮ ಹಸೆಚಿತ್ತಾರ ಕಲೆಯನ್ನು ತಮ್ಮ ಹೆಮ್ಮೆಯ ಸಂಪ್ರದಾಯವೆಂಬಂತೆ

ಉಳಿಸಿಕೊಂಡುಹೋಗುತ್ತಿದ್ದಾರೆ.ಶಿಕ್ಷಿತ ಕಲಾವಿದರು,ದೀವರ ಸಂಘಟನೆಗಳು ಆ ಬಗ್ಗೆ ಅರಿವು ಮೂಡಿಸುತ್ತಲಿವೆ. ಮಲೆನಾಡಿನ ಸುತ್ತಲಿನ ಕೆಲವರು ಇತರೆ ಸಮುದಾಯಗಳು ಬೇರೆ ಬೇರೆ ರೂಪದಲ್ಲಿ ಸರಳ ವಿನ್ಯಾಸದಲ್ಲಿ ಹಸೆಚಿತ್ತಾರ ಚಿತ್ರಕಲೆಯನ್ನು ಮದುವೆ ಆಚರಣೆ ಸಂಪ್ರದಾಯಕ್ಕೆ ಮಾತ್ರ ಉಳಿಸಿಕೊಂಡಿದ್ದಾರೆ. ಇಂದಿನ ಯುವ ಕಲಾವಿದರು ,ಇಂದಿನ ಗ್ರಾಮೀಣ ಜನರು ತಮ್ಮ ಹಬ್ಬ ಸಂಪ್ರದಾಯಗಳಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳುತ್ತಿದ್ದು ಹಳೆಯ ಸಂಪ್ರದಾಯಗಳನ್ನು ಬಿಡುತ್ತಿದ್ದಾರೆ. ಪ್ರಿಂಟೆಡ್ ಸಾಂಪ್ರದಾಯಿಕ ಚಿತ್ರಕಲಾ ಸ್ಟಿಕರ್ಗಳು ಹಳ್ಳಿಗಳ ಗೋಡೆ ಆವರಿಸುತ್ತಿವೆ. ಇನ್ನು ಹಸೆಚಿತ್ತಾರ ಚಿತ್ರಕಲೆ ಕಲಿತು ಬಿಡಿಸುವವರು ಕಾಣಸಿಗುವುದು ಅಪರೂಪ ಎಂಬಂತಾಗುವ ಸ್ಥಿತಿ ತಲುಪುವ ದಿನಗಳು ದೂರವಿಲ್ಲ. ಆದರೂ ಇಂದು ಹಲವು ಉತ್ಸಾಹಿ ಹಸೆಚಿತ್ತಾರ ಕಲಾವಿಧರು ಹಸೆಚಿತ್ತಾರಕ್ಕೆ ಚಲನಶೀಲತೆ ಉಧ್ಯಮಶೀಲತೆ ನೀಡಿ ರಾಷ್ಟ್ರ ,ಅಂತರಾಷ್ಟ್ರ ಮಟ್ಟದಲ್ಲಿ ಗಮನಸೆಳೆದಿರುವುದರ ಕುರಿತು ಈ ಹಿಂದಿನ ಅಧ್ಯಾಯಗಳಲ್ಲೆ ವಿವರವಾಗಿ ವಿವರಿಸಿದ್ದೇನೆ. ಇಂದಿನ ಯುವ ಪೀಳಿಗೆಯಲ್ಲಿ ಕೆಲವರು ಹಸೆಚಿತ್ತಾರದತ್ತ ಆಸಕ್ತಿ ತೋರುತ್ತಿರುವುದು ಆಶಾದಾಯಕ ಬೆಳವಣಿಗೆ.

ಇಂದು ಕೆಲವೆಡೆ ಹಸೆಚಿತ್ತಾರದ ಮೋಟಿಪ್ ಬಳಸಿ ಗೃಹಲಂಕಾರ ವಿನ್ಯಾಸ ಮಾಡಲಾಗುತ್ತಿದೆ. ಜವಳಿ ಉಧ್ಯಮದಲ್ಲಿ ಬಳಕೆ ಹೆಚ್ಚಾಗುತ್ತಿದೆ. ಹಸೆಚಿತ್ತಾರದ ಸ್ಟಿಕರ್ಗಳು ಮಾರುಕಟ್ಟೆ ಪ್ರವೇಶಿಸಿವೆ. ಹಸೆಚಿತ್ತಾರವನ್ನು ವಿವಿಧ ಮಾಧ್ಯಮಗಳಲ್ಲಿ ಚಿತ್ರಿಸಲಾಗುತ್ತಿದೆ. ಹಸೆಚಿತ್ತಾರದ ಸಾಂಪ್ರದಾಯಿಕತೆ ಜೊತೆ ಹಾಗೂ ಕೆಲವರು ಅದರ ಪರಿಧಿ ಮೀರಿಯೂ ಹೊಸ ಮಾದರಿ ಹಸೆಚಿತ್ತಾರ ಬರೆಯುವಲ್ಲಿ ಪ್ರಯೋಗಶೀಲರಾಗಿದ್ದಾರೆ. ಇದೆಲ್ಲವೂ ಆಯಾ ಕಾಲಕ್ಕೆ ತಕ್ಕಂತೆ ಎಲ್ಲಾ ಕಲೆಗಳಲ್ಲಿಯೂ ನಡೆಯುವ ಪಲ್ಲಟಗಳಂತೆಯೇ ಆಗಿದೆ. ಅಳಿವಿನ ಅಂಚಿಗೆ ಸೇರದೆ ಹೊಸರೂಪಾಂತರ ಪಡೆಯುವ ಸಾಧ್ಯತೆಯೂ ಹಸೆಚಿತ್ತಾರಕ್ಕಿದೆ.ಕೆಲವು ಕಲಾವಿದರು ಸಾಂಪ್ರದಾಯಿಕತೆಯಾಚೆಯ ಆಯಾಮಕ್ಕೆ ವಿಸ್ತರಿಸುವ ಆಶಾಭಾವನೆ ಮೂಡಿಸಿದ್ದಾರೆ. ವಸ್ತ್ರ ಹಸೆಚಿತ್ತಾರ, ಬುಟ್ಟಿ ಚಿತ್ತಾರ,ಗೋಡೆಚಿತ್ತಾರ ಕೆಲವು ಕಲಾವಿದರಿಗೆ ಹೊಟ್ಟೆಪಾಡಿನ

ಕಲೆಯಾಗಿದೆ.ಕೆಲವರು ಹಸೆಚಿತ್ತಾರ ಬಳಸಿಕೊಂಡು ಉದ್ಯಮಶೀಲತೆಯತ್ತ ನೋಟ ಬೀರುತ್ತಿದ್ದಾರೆ.

ಶಿಷ್ಟ ಚಿತ್ರಕಲೆಯಂತೆ ಹಸೆಚಿತ್ತಾರ ಕಲಾದರಿಗೆ ದೇಶ ವಿದೇಶಗಳ ಚಿತ್ರಪ್ರದರ್ಶನಗಳಲ್ಲಿ ಅವಕಾಶ ತೀರಾ ಕಡಿಮೆ. ಇತರೆ ಕಲೆಗಳಿಗೆ ಸರ್ಕಾರಗಳಿಂದ ಸಿಗುವ ಮಾನ್ಯತೆ ಜನಪದರ ದೇಶೀ ಚಿತ್ರಕಲೆಗೆ ಸಿಗುತ್ತಿಲ್ಲ. ಹೀಗೆ ದೇಶೀ ಚಿತ್ರಕಲೆಯು ಇಂದು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ.ಆದಾಗ್ಯೂ ಶಿವಮೊಗ್ಗದ ಕೆಲವು ತಾಲ್ಲೂಕುಗಳಲ್ಲಿ ದೀವರು ಸಮುದಾಯ ಸಂಘಟನೆಗಳು ಪ್ರತೀ ವರ್ಷ ಹಸೆಚಿತ್ತಾರ ಸ್ಪರ್ಧೆ, ತರಬೇತಿ ಆಯೋಜಿಸಿ ಯುವ ಕಲಾವಿದರಿಗೆ ಪ್ರೊತ್ಸಾಹಿಸಲಾಗುತ್ತಿದೆ. ಹಸೆಚಿತ್ತಾರ ಸ್ಪರ್ಧೆಗಳನ್ನು ತಾಲ್ಲೂಕು,ಜಿಲ್ಲಾ ಹಂತದಲ್ಲಿ ,ರಾಜ್ಯಮಟ್ಟದಲ್ಲಿ ಆಯೋಜಿಸುತ್ತಾ ಪ್ರೋತ್ಸಾಹಿಸುತ್ತಾ ಬಂದಿರುವುದು ಆಶಾದಾಯಕ ಬೆಳೆವಣಿಗೆ. ದೀವರ ಯುವ ವೇದಿಕೆ, ದೀವರ ಸಾಂಸ್ಕೃತಿಕ ಸಂಘಟನೆಗಳು, ಕರ್ನಾಟಕ ರಾಜ್ಯ ಹಸೆ ಚಿತ್ತಾರ ಪರಿಷತ್ತು ಈ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಿರುವುದು ಆ ಭಾಗದಲ್ಲಿ ಮುಂದೆಯೂ ಹಸೆಚಿತ್ತಾರವನ್ನು ಜೀವಂತವಾಗಿಟ್ಟು ಬೆಳೆಸುವ ಭರವಸೆ ಮೂಡಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮೆ,ಜಾನಪದ ಅಕಾಡೆಮಿ ,ಕನ್ನಡ ಸಂಸ್ಕೃತಿ ಇಲಾಖೆ ,ರಾಜ್ಯ ಸರ್ಕಾರ ಸಹ ಈ ನಿಟ್ಟಿನಲ್ಲಿ ಇತರೆ ಜಾನಪದ ಕಲೆಗೆ ನೀಡಿದಷ್ಟೇ ಆಧ್ಯತೆ ನೀಡಿದರೆ ಹಸೆಚಿತ್ತಾರದ ಚಲನಶೀಲತೆ ,ಉಧ್ಯಮಶೀಲತೆಗೆ ಮತ್ತಷ್ಟು ಶಕ್ತಿಬರುತ್ತದೆ.ನಮ್ಮ ಪರಂಪರೆಯ ಕರ್ನಾಟಕ ನೆಲಮೂಲದ ಜನಪದರ ಜ್ಞಾನಪರಂಪರೆಯ ಕಲೆಯೂ ಆಗಿರುವ ಹಸೆಚಿತ್ತಾರ ಕಲೆಯ ಮಹತ್ವವನ್ನು ಅರಿತು ಉಳಿಸಿ ಬೆಳೆಸುವ ಇಚ್ಚಾಶಕ್ತಿ ನಮ್ಮೆಲ್ಲರದಾಗಬೇಕು ಎಂಬುದೇ ನನ್ನ ಈ ಸಂಶೋಧನಾ ಕೃತಿಯ ಮಹತ್ವದ ಆಶಯವೂ ಇದೇ ಆಗಿದೆ.

ಜಾಗತೀಕರಣ ಮತ್ತು ಹಸೆಚಿತ್ತಾರ

ಜಾಗತೀಕರಣದ ಗಾಳಿ ಎಲ್ಲೆಡೆ ವೇಗವಾಗಿ ಬೀಸುತ್ತಿದ್ದು ನಮ್ಮ ಹಲವು ಆಚರಣೆ ಸಂಪ್ರದಾಯಗಳು ಮರೆಯಾಗುತ್ತಿವೆ. ಪಾಶ್ಚಾತೀಕರಣ ಜೀವನಶೈಲಿ ಹೆಚ್ಚುತ್ತಿದೆ. ಹಳೆಯ ಕಲೆ ಸಂಪ್ರದಾಯ ಕೇವಲ ಹಳ್ಳಿಗಳಿಗೆ ಸೀಮಿತವಾಗಿವೆ.ಚೌಟರಿಗಳಲ್ಲಿ ಮದುವೆಗಳು ನಡೆಯುವುದರಿಂದ ಮದುವೆಗಳಲ್ಲಿ ಹೆಸೆ ಚಿತ್ತಾರವನ್ನು ಕೆಲವರು ನಿರ್ಲಕ್ಷಿಸುತ್ತಿದ್ದಾರೆ. ಯುವ ಜನತೆ ಜಾನಪದ ಕಲೆ ಸಂಸ್ಕೃತಿಯಿಂದ ದೂರ ಸಾಗುತ್ತಿದೆ. ಆದರೂ ಹಸೆಚಿತ್ತಾರ ಸಂಪ್ರದಾಯ ಮಲೆನಾಡಿನ ಭಾಗದಲ್ಲಿ ಉಳಿದುಕೊಂಡಿರುವುದು ಹಸೆಚಿತ್ತಾರದ ಹೆಚ್ಚುಗಾರಿಕೆಯೇ ಸರಿ.

ಹಸೆಚಿತ್ತಾರಕ್ಕೆ ಇಂದಿನ ಜಾಗತೀಕರಣ ಪೂರಕವಾಗಿಯೂ ಪ್ರಯೋಜನವಾಗಿರುವುದು ಸಹ ನಾವು ಗುರುತಿಸಬಹುದು. ಇಂದು ಹಲವಾರು ಬಾರಿ ಸಾಕಷ್ಟು ದೇಶಗಳಲ್ಲಿ ಕರ್ನಾಟಕದ ಹಸೆಚಿತ್ತಾರ ಪ್ರದಾರ್ಶನವಾಗಿದೆ. ಸಾಕಷ್ಟು ಕಲಾವಿದರು ಹಸೆಚಿತ್ತಾರವನ್ನು ಅಮೇರಿಕಾ ,ಜಪಾನ್ ಆಸ್ಟ್ರೇಲಿಯಾ ಸಿಂಗಾಪೂರದಂತಹ ದೇಶಗಳಲ್ಲಿ ಪ್ರದರ್ಶನ,ತರಬೇತಿನ ನೀಡಿ ಜನಪ್ರಿಯಗೊಳಿಸಿದ್ದಾರೆ. ಹಸೆಚಿತ್ತಾರ ಹಲವರಿಗೆ ಉದ್ಯೋಗ ಸೃಷ್ಟಿಸಿದೆ. ಹಸೆಚಿತ್ತಾರವನ್ನು ಗೃಹಲಂಕಾರಕ್ಕೆ ದೇಶವಿದೇಶಗಳಲ್ಲಿ ಬಳಸುತ್ತಿದ್ದಾರೆ.ಜವಳಿ ಉಧ್ಯಮ ವಲಯ ಹಸೆಚಿತ್ತಾರದ ಮೋಟಿಫ್ಗಳನ್ನು ಬಳಸುತ್ತಿದೆ. ಡಿಜಿಟಲ್ ಹಸೆಚಿತ್ತಾರ ವಿನ್ಯಾಸ ಬೆಳೆಯುತ್ತಿದೆ.ದೇಶ ವಿದೇಶಗಳ ಬುಡಕಟ್ಟು ಚಿತ್ತಾರ ಕಲೆಗಳ ಪರಿಚಯದಿಂದಾಗಿ ಹೊಸ ಹೊಸ ವಿನ್ಯಾಸ ಸಂಯೋಜನೆಯ ಪ್ರಯೋಗಗಳು ಸಹ ನಡೆಯುತ್ತಿವೆ.ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಹಸೆಚಿತ್ತಾರ ಜನಪ್ರಿಯಗೊಂಡಿದ್ದು, ಇಂದಿನ ಜಾಗತೀಕರಣ , ಇಂದಿನ ಆನ್ಲೈನ್ ಸಾಮಾಜಿಕ ತಾಣಗಳ ಮೂಲಕ ಸಾದ್ಯವಾಗಿರುವುದು ಗಮನಾರ್ಹ ಸಂಗತಿಯಾಗಿದೆ.ಜಾಗತೀಕರಣ ಜಗತ್ತನ್ನೇ ಪುಟ್ಟ ಹಳ್ಳಿಯಂತಾಗಿಸಿದ್ದು ಎಲ್ಲ ಸಣ್ಣ ಸಣ್ಣ ಕಲೆಗಳಿಗೂ ಜಗತ್ತಿನ ಗಮನಸೆಳೆಯಲು ಅವಕಾಶಗಳು ಸಹ ತೆರೆದುಕೊಂಡಿದೆ.

ಹಸೆಚಿತ್ತಾರ ಮತ್ತು ಜಿಯೋಗ್ರಾಪಿಕಲ್ ಇಂಡಿಕೇಶನ್ ಟ್ಯಾಗ್ ಮಾನ್ಯತೆ

ಇಂದು ಬಿಹಾರದ ಮಧುಬನಿ ಜನಪದರ ಚಿತ್ತಾರ ಕಲೆಗೆ ಈಗಾಗಲೇ ಜಿಯೋಗ್ರಾಫಿಕಲ್ ಇಂಡಿಕೇಶನ್ ಟ್ಯಾಗ್ ಮಾನ್ಯತೆ ದೊರೆತಿದೆ. ಮಧುಬನಿಗಿಂತ ಪುರಾತನವಾದ ವಿಶಿಷ್ಟ ವಿನ್ಯಾಸದ ಮಲೆನಾಡಿನ ಜನಪದರ ಸಾಂಪ್ರದಾಯಿಕ ಚಿತ್ತಾರ ಕಲೆಯಾದ ಹಸೆಚಿತ್ತಾರ ಈಗ ಗೋಡೆಗಳಿಗೆ ಸೀಮಿತವಾಗದೆ ,ಬಿದಿರಿನ ಬುಟ್ಟಿಗಳಿಗೆ, ಬಾಟಲ್, ಮಡಿಕೆಗಳ ಮೇಲೆ ಚಿತ್ತಾರ ವಿಸ್ತಾರವಾಗಿದೆ. ,ವಸ್ತ್ರ ಚಿತ್ತಾರ, ಪ್ಲೈವುಡ್, ಕಾರ್ಡ ಬೋರ್ಡ , ಮರದ ಹಲಗೆಗಳ ಮೇಲೆ ಚಿತ್ತಾರ ವಿಸ್ತರಿಸಿಕೊಂಡು ಸಂಪ್ರದಾಯದಾಚೆ ತೆರೆದುಕೊಂಡು ಸೌಂದರ್ಯ ಪ್ರಜ್ಞೆಯ ನಾವಿನ್ಯತೆಯತ್ತ ವಿಸ್ತರಿಸಿಕೊಂಡು ಜನಪ್ರಿಯ ಕಲೆಯಾಗಿ ಬೆಳೆಯುತ್ತಿದೆ.

ಜವಳಿ ಉದ್ಯಮದಲ್ಲಿ, ಇನ್ವಿಟೇಶನ್ ಕಾರ್ಡ ಮತ್ತಿತರ ಕಡೆ ಉದ್ಯಮಕ್ಕೆ ಬಳಕೆ ಆಗುತ್ತಿದ್ದು ಕರ್ನಾಟಕ ನೆಲಮೂಲದ ಕಲೆಯಾದ ಹಸೆಚಿತ್ತಾರವನ್ನು ಪುರಾತನ ಕಾಲದಿಂದ ಇಂದಿಗೂ ಮಲೆನಾಡಿನ ದೀವರು ಸಮುದಾಯ ಹಾಗು ಕೆಲವು ಸಮುದಾಯಗಳು ವಿಭಿನ್ನ ವಿನ್ಯಾಸದ ಹಸೆಚಿತ್ತಾರವನ್ನು ವಂಶಪಾರಂಪರಿಕವಾಗಿ ಸಂಪ್ರದಾಯಿಕ ಕಲೆಯಾಗಿ ಕಾಪಾಡಿಕೊಂಡು ಬೆಳೆಸಿಕೊಂಡು ಬಂದಿದೆ. ಹಾಗಾಗಿ ಹಸೆ ಚಿತ್ತಾರಕ್ಕೆ ಜಿಯೋಗ್ರಾಪಿಕಲ್ ಇಂಡಿಕೇಶ್ನ್ ಟ್ಯಾಗ್ ಪಡೆಯುವ ಎಲ್ಲಾ ಅರ್ಹತೆಗಳಿದ್ದು ಅದನ್ನು ಪೋಷಿಸಲು, ಕರ್ನಾಟಕದ ಮಲೆನಾಡಿನ ಅಸ್ಮಿತತೆಯಾಗಿ ಜಾಗತಿಕ ಮನ್ನಣೆ ಪಡೆಯಲು,ಅಗತ್ಯತೆಯೂ ಇದೆ. ಈ ನಿಟ್ಟಿನಲ್ಲಿ ಪ್ರಯತ್ನಶೀಲರಾಗಬೇಕಿದೆ. ದೇಶದ ಇತರೆ ದೇಶೀ ಕಲೆಗೆ ದೊರೆತ ಪ್ರೋತ್ಸಾಹ ಹಸೆ ಚಿತ್ತಾರಕ್ಕೆ ದೊರೆಯುವಂತೆ ಸರ್ಕಾರಗಳ ,ಅಕಾಡೆಮಿಗಳ ಗಮನಸೆಳೆಯಬೇಕಾಗಿದೆ. ದೀವರ ಸಂಘಸಂಸ್ಥೆಗಳು ಈ ಬಗ್ಗೆ ಸರ್ಕಾರವನ್ನು ಹಿಂದೆಯೇ ಮನವಿ ಸಲ್ಲಿಸಿ ಒತ್ತಾಯಿಸಿದ್ದರೂ ಸೂಕ್ತ ಕ್ರಮವಹಿಸದೆ ಇರುವುದರಿಂದ ಇನ್ನೂ ಅಂತಹ ಮನ್ನಣೆ ಸಿಕ್ಕಿಲ್ಲ .ಮುಂದಿನ ದಿನಗಳಲ್ಲಿ ಹಸೆ ಚಿತ್ತಾರ ಕರ್ನಾಟಕದ ನೆಲಮೂಲದ ಅಸ್ಮಿತೆಯ ಚಿತ್ರಕಲೆಯಾಗಿ ಮತ್ತಷ್ಟು ಜನಪ್ರಿಯವಾಗಿ ನಾವಿನ್ಯತೆಯೊಂದಿಗೆ ಮುಂದಿನ ಪೀಳಿಗೆಗೂ ಉಳಿಯಲಿ ಎಂಬುದೇ ಈ ಸಂಶೋಧನಾ ಕೃತಿಯ ಆಶಯ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

1. ಕರ್ನಾಟಕ ಪರಂಪರೆ – ಸಂಪುಟ 01

2. ಭಾರತೀಯ ಚಿತ್ರಕಲೆ –ಶಿವರಾಮ ಕಾರಂತ

3. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ.ಹೆಚ್ ತಿಪ್ಪೇರುದ್ರಸ್ವಾಮಿ

4. ಕರ್ನಾಟಕದ ದೀವರು – ಮಧುಗಣಪತಿ ರಾವ್ ಮಡೆನೂರು

5. ದೀವರ ಸಾಂಸ್ಕೃತಿಕ ಸಂಕಥನ–ಹುಚ್ಚಪ್ಪ ಮಾಸ್ತರ್–ಕರ್ನಾಟಕ ಪುಸ್ತಕ ಪ್ರಾದಿಕಾರ ಪ್ರಕಟಣೆ

6. ಹಳೇಪೈಕ ದೀವರು –ಹುಚ್ಚಪ್ಪ ಮಾಸ್ತರ–ಕರ್ನಾಟಕ ಪುಸ್ತಕ ಪ್ರಾದಿಕಾರ ಪ್ರಕಟಣೆ

7. ಕರ್ನಾಟಕದ ಆದಿಮ ಚಿತ್ರಕಲೆ – ಡಾ.ಮೋಹನ್ .ಆರ್ .ಚಿತ್ರದುರ್ಗ

8. ದೀವರ ಮಕ್ಕಳು – ಡಾ. ಹೆಚ್ ಎಸ್ ಮೋಹನ್ ಚಂದ್ರಗುತ್ತಿ

9. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ – ಡಾ.ಅಂಬಳಿಕೆ ಹಿರಿಯಣ್ಣ

10. **ಲೇಖನಗಳು :** ಡಾ.ಭಾರತಿ ಮರವಂತೆ – ವಿಶ್ವವಾಣಿ ಪತ್ರಿಕೆ ವಿರಾಮ ಸಾಪ್ತಾಹಿಕ –08–07–2018

11. DOCUMENTATION OF WARLI PANTING OF MAHARASHTRA- Documented by Resource Centre for Traditional Paintings.

12. cast and traibe soutern india - edgar thurstan

13. ಸೌಂದರ್ಯ ಸಮೀಕ್ಷೆ – ಜಿ ಎಸ್ ಶಿವರುದ್ರಪ್ಪ

14. ಮಹಿಳಾ ಕರಕುಶಲ ಕಲೆ ಬುಟ್ಟಿ ಚಿತ್ತಾರ–ರವಿರಾಜ್ ಸಾಗರ್ ಲೇಖನಗಳು

15. ಕರ್ನಾಟಕ ಪ್ರಾಗೈತಿಹಾಸಿಕ ಕಲೆ – ಅ.ಸುಂದರ

16. ಜಾನಪದ ಸ್ವರೂಪ –ಡಾ.ಹಾ .ಮಾ ನಾಯಕ

17. ಕಣಜ ವೆಬ್ಸೈಟ್.ಲೇಖನಗಳು.

18. casts and traibes of southern india – edgar thurston

19. Visual World of Warli – e book

20. ಚಿತ್ತಾರ – ಡಾ.ನಾ.ಡಿಸೋಜಾ

21. ನಮ್ಮೂರ ಜಾನಪದ ಅನುಸಂಧಾನ – ರವಿರಾಜ್ ಸಾಗರ್

22. ಕಾವಿ ಕಲೆ – ಡಾ.ಕೃಷ್ಣಾನಂದ ಕಾಮತ್

ಸಂದರ್ಶನ – ಮಾಹಿತಿ ನೀಡಿದವರು – ಮಾರ್ಗದರ್ಶನ

1. ರೇಣುಕ ದ್ಯಾವಪ್ಪ ಮಂಡಗಳಲೆ ಸಾಗರ ತಾ

2. ಚಂದ್ರಶೇಖರ ಸಿರಿವಂತೆ .ಸಾಗರ ತಾ

3. ಗೌರಮ್ಮ ಚಂದ್ರಶೇಖರ ಸಿರಿವಂತೆ.ಸಾಗರ ತಾ

4. ಲಕ್ಷ್ಮಮ್ಮ ಗಡೇಮನೆ .ಸಾಗರ ತಾ

5. ಈಶ್ವರ ನಾಯ್ಕ ಹಸುವಂತೆ .ಸಿದ್ದಾಪುರ ತಾ

6. ಚಂದ್ರಶೇಖರ ಪಡುವಣಿ . ಭಡ್ಕಳ ತಾ

7. ರಾಧಾ ಸುಳ್ಳೂರು .ಸಿದ್ದಾಪುರ ತಾ

8. ಕುಸುಮ ಅಣ್ಣಪ್ಪ .ದಿಗಟೆಕೊಪ್ಪ .ಸಾಗರ ತಾ.

9. ಉಷಾ ಮಂಡಗಳಲೆ.ಸಾಗರ ತಾ

10. ವಿಶ್ವ ಹೆಚ್ಚೆ .ಸೊರಬ ತಾ

11. ರಾಖೀ ಸಾಳಂಕಿ.ವರ್ಲಿ ಕಲಾವಿದರು. ಮಹಾರಾಷ್ಟ್ರ

12. ಸಂಧ್ಯಾ ನಾಯ್ಕ – ಅಂಕೋಲ

13. ಮಧುಗಣಪತಿ ರಾವ್ ಮಡೆನೂರು .ಸಂಶೋಧಕರು. ಶಿವಮೊಗ್ಗ

14, ಬಾಬು ಶಿವ ಪೂಜಾರಿ.ಸಂಶೋಧಕರು. ಮುಂಬೈ

15. ತೇಜಸ್ವಿ ನಾಯ್ಕ .ಐ.ಎ.ಎಸ್. ಮಧ್ಯಪ್ರದೇಶ

16. ಭಾರತಿ ಪೌಲ್ಸೆ .ಅಹಮದಾಬಾದ್

17. ಜಯಾನಂದ ಮಾದರ್. ಕಲಾವಿಧರು.ಬಾಗಲಕೋಟೆ

18. ಕುಮುದಾ ಸುಶೀಲ್.ಶಿವಮೊಗ್ಗ

19. ಡಾ.ಹೆಚ್ ಎಸ್. ಮೋಹನ್ ಚಂದ್ರಗುತ್ತಿ

20. ಡಾ.ನಾ.ಡಿಸೋಜಾ.ಸಾಗರ

21. ಎಸ್. ಮಾಲತಿ ಸಾಗರ

22.. ಡಾ.ಅಮರೇಶ ಯತಗಲ್.ರಾಯಚೂರು

ಕೃತಿಯಲ್ಲಿ ಬಳಕೆ ಆಗಿರುವ ವಿಶೇಷ ಪದಗಳ ಅರ್ಥ

ಅರೆಪಪ್ಪಳಿ : ಒಂದು ಚೌಕದ ಅರ್ಧಭಾಗವನ್ನು ಲಂಭಕೋನ ತ್ರಿಭುಜಾಕೃತಿಯಲ್ಲಿ ಬಣ್ಣ ಹಚ್ಚಿದ ಆಕೃತಿ

ಅಂಡಿಗೆ : ಸುರುಳಿಯಾಕಾರದಲ್ಲಿ ಸಾಗುವ ಚೌಕಗಳ ಸಾಲುಗಳು

ಕಾವಿ ಕಲೆ : ಮಠ,ಮಂದಿರಗಳಲ್ಲಿ ಕಂಡುಬರುವ ಕಾವಿ ಬಣ್ಣದಲ್ಲಿ ಪುರಾಣ ಪ್ರಸಿದ್ದ ದೇವರುಗಳನ್ನು ಚಿತ್ರಿಸುವ ಚಿತ್ರಕಲೆ

ಗುರಿಗೆ ಬೀಜ : ಮಲೆನಾಡಿನ ಗುರಿಗೆ ಮರದಲ್ಲಿ ಕಂಡುಬರುವ ಹಳದಿ ಬಣ್ಣದ ಎಣ್ಣೆಬೀಜ

ಚಿತ್ತಾರಗಿತ್ತಿ : ಹಸೆಚಿತ್ತಾರ ಬಿಡಿಸುವ ಕಲಾವಿದೆ

ತಿರುಗೆ ಮಣೆ : ಚಿತ್ತಾರಗಳನ್ನು ಕೆತ್ತಿರುವ ಮರದ ಮಣೆ

ದಂಡಿಗೆ : ಪಲ್ಲಕ್ಕಿ (ದೇವರನ್ನು ಮೆರವಣಿಗೆ ಮಾಡುವ ಮರದ ಆಸನ)

ದೀವರು : ವೀರರು,ಬೇಟೆಗಾರರು,ದ್ವೀಪವಾಸಿಗಳು,ಕರ್ನಾಟಕದ ಮಲೆನಾಡಿನಲ್ಲಿ ಮಾತ್ರ ಕಂಡುಬರುವ ಒಂದು ಜನ ಸಮುದಾಯ,ರಾಜಪ್ರಭುತ್ವ ಕಾಲದಲ್ಲಿ ಸೈನಿಕದಳದಲ್ಲಿ ಕೆಲಸ ಮಾಡುತ್ತಿದ್ದ ವೀರರ ಒಂದು ಪಂಗಡ .

ಮುಂಡಿಗೆ ; ಮಲೆನಾಡಿನ ಮನೆಗಳ ನಡುಮನೆಯಲ್ಲಿ ಕಂಡುಬರುವ ಮರದ ದಿಮ್ಮಿಗಳ ಚೌಕ ಕಂಬಗಳು (ಪಿಲ್ಲರ್)

ರಂಗವಲ್ಲಿ : ರಂಗೋಲಿ

ಶೇಡಿ : ಜೇಡಿ, ಬಿಳಿ ಜೇಡಿ ಮಣ್ಣಿನಿಂದ ಬರೆಯುವ ಒಂದು ಬಗೆಯ ಚಿತ್ರಕಲೆ

ಹಸೆ –ಚಿತ್ತಾರ, ಚಾಪೆ, ಕಲೆ.

ಹಲಿ : ಕರಾವಳಿ ತೀರ, ಉತ್ತರಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಹಸೆಚಿತ್ರ ಮಾದರಿ ಹೋಲುವ ಒಂದು ಬಗೆಯ ಚಿತ್ರಕಲೆ

ಹಸಗರ : ಹಸಲರು, ಗಾಮೊಕ್ಕಲಿಗರು, ಮತ್ತಿತರರು ಮದುವೆಗೆ ಬರೆಯುವ ಹಸೆಚಿತ್ರ ಮಾದರಿ ಹೋಲುವ ಚಿತ್ರಕಲೆ,ಉತ್ತರಕನ್ನಡ ಜಿಲ್ಲೆ ,ಕರಾವಳಿ ತೀರದ ಬುಡಕಟ್ಟು ಚಿತ್ರಕಲೆ.

ಹಸೆ ಚಿತ್ತಾರ ,ಬುಟ್ಟಿ ಚಿತ್ತಾರಗಳ ಕುರಿತು ಹೆಚ್ಚಿನ ಮಾಹಿತಿಗೆ ಕೆಳಗಿನ ಕ್ಯೂ ಆರ್ ಕೋಡ್ ಬಳಸಿ ನನ್ನ ಸಾಕ್ಷ್ಯ ಚಿತ್ರಗಳನ್ನು ವೀಕ್ಷಿಸಿ.

ಕ್ಷೇತ್ರಕಾರ್ಯಕ್ಕಾಗಿ ಬೇಟಿ ನೀಡಿದ ಸ್ಥಳಗಳು ಸಂಧರ್ಶನಗಳು



ಅಜಂತಾ ,ಎಲ್ಲೋರಾ, ಮಹಾರಾಷ್ಟ್ರ ಕ್ಷೇತ್ರ ಕಾರ್ಯ



ಮಾನ್ವಿಯ ಮಲ್ಲಿಕಾರ್ಜುನ ಬೆಟ್ಟದ ಗುಹೆಯ ಬಂಡೆಚಿತ್ರಗಳ ಅಧ್ಯಯನ





ಅಂತರಾಷ್ಟ್ರೀಯ ಹಸೆಚಿತ್ತಾರ ಕಲಾವಿದ ಈಶ್ವರ ನಾಯ್ಕ ಹಾಗೂ ಚಂದ್ರಶೇಖರ ಸಿರಿವಂತೆ ಅವರ ಸಂದರ್ಶನಗಳು